ಕುಕ್ಕಲನಾಡು

(ಶಾಸನಗಳು ಮತ್ತು ದೇವಾಲಯಗಳ ಹಿನ್ನೆಲೆಯಲ್ಲಿ ಅಧ್ಯಯನ)

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ನಿರಂಜನ ರಾ.ನ.

ಮಾರ್ಗದರ್ಶಕರು

ಡಾ. ದೇವರಕೊಂಡಾರೆಡ್ಡಿ

ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ಕುಕ್ಕಲನಾಡು

(ಶಾಸನಗಳು ಮತ್ತು ದೇವಾಲಯಗಳ ಹಿನ್ನೆಲೆಯಲ್ಲಿ ಅಧ್ಯಯನ)

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ನಿರಂಜನ ರಾ.ನ.

ಮಾರ್ಗದರ್ಶಕರು

ಡಾ.ದೇವರಕೊಂಡಾರೆಡ್ಡಿ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ದೃಢೀಕರಣ ಪತ್ರ

ನಿರಂಜನ ರಾ.ನ. ಅವರು ಕುಕ್ಕಲನಾಡು(ಶಾಸನಗಳು ಮತ್ತು ದೇವಾಲಯಗಳ ಹಿನ್ನೆಲೆಯಲ್ಲಿ ಅಧ್ಯಯನ)ಎಂಬ ಶೀರ್ಷಿಕೆಯ ಸಂಶೋಧನ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಇವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ದೇವರಕೊಂಡಾರೆಡ್ಡಿ)
ನಿವೃತ್ತ ಪ್ರಾಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೦೪-೧೨-೨೦೦೬

ಪ್ರಮಾಣ ಪತ್ರ

ಕುಕ್ಕಲನಾಡು(ಶಾಸನಗಳು ಮತ್ತು ದೇವಾಲಯಗಳ ಹಿನ್ನೆಲೆಯಲ್ಲಿ ಅಧ್ಯಯನ) ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಡಾ.ದೇವರ ಕೊಂಡಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ನಿರಂಜನ ರಾ.ನ.)
ಸಂಶೋಧಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೦೪-೧೨-೨೦೦೬.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಮಹತ್ವ

೧.೪. ಇದುವರೆಗಿನ ಅಧ್ಯಯನ

೧.೫. ಅಧ್ಯಯನದ ವಿಧಾನ

೧.೬. ಅಧ್ಯಯನದ ಸ್ವರೂಪ

೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಯಾವುದೇ ಒಂದು ಪ್ರದೇಶದ ಸಾಂಸ್ಕೃತಿಕ ಮಹತ್ವವನ್ನು ತಿಳಿಯುವಲ್ಲಿ ಅಲ್ಲಿನ ಶಾಸನ ಮತ್ತು ದೇವಾಲಯಗಳು ಅಮೂಲ್ಯ ಆಕರಗಳಾಗುತ್ತವೆ. ಅವು ಪ್ರಾಚೀನ ಬದುಕಿನ ಸಮಸ್ತ ಸಂವೇದನೆಗಳ ಪ್ರಾಮಾಣಿಕ ಧ್ವನಿಗಳು. ನಮ್ಮ ನಾಡಿನ ಜನಜೀವನವು ಶಾಸನಗಳಲ್ಲಿ ಅಭಿವ್ಯಕ್ತಿಗೊಂಡಿರುವಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತವಾಗಿಲ್ಲ. ಅವು ಐತಿಹಾಸಿಕ ಸಂಶೋಧನಾ ಅಧ್ಯಯನದ ಪ್ರತಿ ಹಂತದಲ್ಲೂ ಅಧಿಕೃತ ಭೂಮಿಕೆಗಳಾಗಿವೆ.

ಸಾಹಿತ್ಯಕ್ಕೆ ಸಾಹಿತ್ಯ, ಧರ್ಮಕ್ಕೆ ಧರ್ಮ, ಇತಿಹಾಸಕ್ಕೆ ಇತಿಹಾಸವೆನಿಸಿದ ಶಾಸನಗಳು ಮತ್ತು ದೇವಾಲಯಗಳು ಪ್ರಾಚೀನ ಕರ್ನಾಟಕದ ಸಾಹಿತ್ಯ, ಧರ್ಮ ಮತ್ತು ಸಮಾಜಗಳಿಗೆ ಹಿಡಿದ ಶಿಲಾದರ್ಪಣಗಳೆನಿಸಿವೆ. ಸಾಹಿತ್ಯ ಗ್ರಂಥಗಳಿಂದ ನಮ್ಮ ನಾಡಿನ ಜನರ ಆಚಾರ, ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯವಿದ್ದರೂ ಶಾಸನಗಳು ಮತ್ತು ದೇವಾಲಯಗಳ ಅಭ್ಯಾಸದಿಂದ ಅವುಗಳ ಬಗೆಗೆ ಹೆಚ್ಚಿನ ಸಂಗತಿಗಳು ಗೊತ್ತಾಗುವವು. ಏಕೆಂದರೆ ಸಾಹಿತ್ಯ ಗ್ರಂಥಗಳಲ್ಲಿ ಅವುಗಳ ಗ್ರಂಥಕರ್ತರು ಒಂದು ದೇಶದ ಚರಿತ್ರೆಯನ್ನೋ, ಧಾರ್ಮಿಕ ಜೀವನವನ್ನೋ, ರೀತಿ ನೀತಿಗಳನ್ನೋ ಚಿತ್ರಿಸಿರುತ್ತಾರೆ. ಆದರೆ ಶಾಸನಗಳು ಮತ್ತು ದೇವಾಲಯಗಳಿಂದ ನಮಗೆ ಆಯಾ ಪ್ರದೇಶಗಳಲ್ಲಿ ಆಳಿದ ರಾಜರ ಚರಿತ್ರೆ, ರಾಜಕೀಯ ವ್ಯವಸ್ಥೆ, ಸಾಮಾಜಿಕ ಜೀವನ, ಧಾರ್ಮಿಕ ಕಲ್ಪನೆ, ವಿದ್ಯಾಭ್ಯಾಸದ ಮಟ್ಟ, ವ್ಯಾಪಾರ ಪದ್ಧತಿ, ಭೌಗೋಳಿಕ ಎಲ್ಲೆ ಮುಂತಾದವುಗಳು ತಿಳಿಯುವವು.

ಕರ್ನಾಟಕದ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಬೃಹತ್ ಸಾಮ್ರಾಜ್ಯಗಳ ಮೇಲೆ ಅನೇಕ ಸಂಶೋಧನೆಗಳು ನಡೆದು, ಚಿಕ್ಕಪುಟ್ಟ ಅರಸು ಮನೆತನಗಳನ್ನು ಕಡೆಗಣಿಸಲಾಗಿದೆ ಎಂಬುದು ತಿಳಿಯುತ್ತದೆ. ಈ ಅರಸರ ನಿಷ್ಠೆಯೇ ದೊಡ್ಡ ಸಾಮ್ರಾಜ್ಯಗಳ ಬೆಳವಣಿಗೆ ಮತ್ತು ಉಳಿವಿಗೆ ಕಾರಣ ಎನ್ನಬಹುದು. ಇಂತಹ ಅರಸರ ಬಗೆಗೆ ಸಾಕಷ್ಟು ಸಂಶೋಧನೆಗಳು ನಡೆಯಬೇಕಾಗಿದೆ. ಇವರ ಅಧ್ಯಯನ ಸಮಗ್ರವಾಗಿ ರಚನೆಗೊಳ್ಳದ ಹೊರತು ನಮ್ಮ ನಾಡಿನ ಇತಿಹಾಸ ಎಂದಿಗೂ ಪೂರ್ಣವಾಗಲಾರದು. ಈ ಚಿಕ್ಕಪುಟ್ಟ ರಾಜರು ಸಮಾಜಕ್ಕೆ ಅವಿಸ್ಮರಣೀಯವಾದ ಕಾಣಿಕೆ ನೀಡಿದ್ದಾರೆ.

[illegible]

[illegible]

[illegible]

[illegible]

ಇವರಿಗೆ ಜನ ಸಮುದಾಯದ ನೇರ ಸಂಪರ್ಕವಿರುತ್ತಿತ್ತು. ಇವರು ಜನಜೀವನದ ಆಗು ಹೋಗುಗಳಲ್ಲಿ ಗಣನೀಯವಾದ ಪಾತ್ರವನ್ನು ವಹಿಸುತ್ತಿದ್ದರು. ಇಂತಹ ಚಿಕ್ಕಪುಟ್ಟ ಅರಸರು ಆಳ್ವಿಕೆ ಮಾಡಿದ ಕುಕ್ಕಲನಾಡನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಇತಿಹಾಸದ ಅಧ್ಯಯನದಲ್ಲಿ ಪ್ರಧಾನ ರಾಜಮನೆತನಗಳ ಅಧ್ಯಯನವು ಒಂದು ಮುಖವಾದರೆ, ಚಿಕ್ಕಪುಟ್ಟ ಅರಸು ಮನೆತನಗಳ, ಪಾಳೆಪಟ್ಟುಗಳ, ಸ್ಥಳೀಯ ಮುಖಂಡರ ಆಳ್ವಿಕೆಯ ಅಧ್ಯಯನವು ಇನ್ನೊಂದು ಮುಖವಾಗಿರುತ್ತದೆ. ಒಂದು ಪ್ರಾದೇಶಿಕ ಇತಿಹಾಸದ ಅಖಂಡತೆಯು ಅದರ ಜೀವದ್ರವ್ಯವಾದ ಸಾಂಸ್ಕೃತಿಕ ಅನನ್ಯತೆಯಲ್ಲಿ ಕೇಂದ್ರಿತವಾಗಿದೆ. ಪ್ರಾದೇಶಿಕ ಇತಿಹಾಸ ಹಾಗೂ ಸಂಸ್ಕೃತಿಗಳು ಪರಸ್ಪರ ಪೂರಕ ನೆಲೆಯಲ್ಲಿರುವುದರಿಂದ ಒಂದು ಪ್ರದೇಶದ ಇತಿಹಾಸದ ಅಧ್ಯಯನವು ಅದರ ಸಾಂಸ್ಕೃತಿಕ ಪರಂಪರೆಯ ಅಧ್ಯಯನವಾಗಿದೆ.

೧.೧. ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಒಂದು ನಾಡನ್ನು ಕುರಿತ ಅಧ್ಯಯನವಾದರೂ ಕೂಡ ಇದನ್ನು ಮುಖ್ಯವಾಗಿ ಪ್ರಾದೇಶಿಕ ಚೌಕಟ್ಟಿನಲ್ಲಿ ಶಾಸನಗಳು ಮತ್ತು ದೇವಾಲಯಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಸಂಸ್ಕೃತಿಯ ಹಿರಿಮೆಯನ್ನು ಹೊತ್ತುನಿಂತ ಹಲವು ಪ್ರಮುಖ ಆಡಳಿತ ವಿಭಾಗಗಳಲ್ಲಿ 'ಕುಕ್ಕಲನಾಡು' ಒಂದು.

ಬೆಂಗಳೂರು ನಗರಕ್ಕೆ ಸುಮಾರು ೨೫-೩೫ ಕಿ.ಮೀ ವಾಯವ್ಯ ಹಾಗೂ ಪಶ್ಚಿಮಕ್ಕೆ ಹೆಸರುಘಟ್ಟಕೆರೆ, ದಕ್ಷಿಣಕ್ಕೆ ಮಂಚನಬೆಲೆ ಕಣಿವೆಯ ನಡುವೆ ಹರಿಯುವ ಅರ್ಕಾವತಿ ನದಿಯ ಇಕ್ಕೆಲಗಳ ಪ್ರದೇಶವೇ 'ಕುಕ್ಕಲನಾಡು' ಎನಿಸಿಕೊಂಡಿದ್ದಿತು. ಈ ನಾಡಿನ ಪ್ರಾಚೀನತೆ, ಭೌಗೋಳಿಕ ವ್ಯಾಪ್ತಿ, ಪದನಿಷ್ಪತ್ತಿ, ರಾಜಕೀಯ ಇತಿಹಾಸ, ಧಾರ್ಮಿಕ ಇತಿಹಾಸ, ಆರ್ಥಿಕ ಇತಿಹಾಸ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು, ಶಾಸನ ಮತ್ತು ದೇವಾಲಯಗಳ ಹಿನ್ನೆಲೆಯಲ್ಲಿ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಇತಿಹಾಸ ದಲ್ಲಿ ಈ ನಾಡು ವಹಿಸಿದ ಪಾತ್ರದ ಮೇಲೆ ಬೆಳಕು ಚೆಲ್ಲುವುದು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಈ ನಾಡಿನ ಕಾಲಾವಧಿ ಕ್ರಿ.ಶ.೮ನೇ ಶತಮಾನದಿಂದ ಕ್ರಿ.ಶ.೧೮ನೇ ಶತಮಾನದವರೆಗೆ. ಈ ಕಾಲಾವಧಿಯಲ್ಲಿ ಈ ನಾಡಿನಲ್ಲಿ ನಿರ್ಮಿಸಲಾದ ದೇವಾಲಯಗಳು ಮತ್ತು ಶಾಸನಗಳ ಆಧಾರದ ಹಿನ್ನೆಲೆಯಲ್ಲಿ ಈ ನಾಡನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಕುಕ್ಕಲನಾಡಿನಲ್ಲಿ ದೊರೆತ ಲಿಖಿತ ದಾಖಲೆಗಳಲೆಲ್ಲ ಕ್ರಿ.ಶ.೭೫೦ರ ಗಂಗದೊರೆ ಶ್ರೀಪುರುಷನ ಶಾಸನಗಳು ಅತ್ಯಂತ ಪ್ರಾಚೀನವಾದವು. ಇವುಗಳಲ್ಲಿ ಈ ನಾಡು-ಕುಕ್ಕಲನಾಡು-ಕುಕ್ಕನರೆನಾಡು, ಕುಕ್ಕರಪಾಟಿಕ್ಕಾರೆನಾಡು ಎಂದು ಉಲ್ಲೇಖಿತವಾಗಿದೆ. ಈ ನಾಡು ಕ್ರಿ.ಶ.೧೧ನೇ ಶತಮಾನದ ಆದಿಭಾಗದಲ್ಲಿ ಚೋಳರ ದಾಳಿಗೆ ಸಿಕ್ಕಿ 'ಕುಕ್ಕನೂರುನಾಡು'(ಕುಕ್ಕನ್ನೂರ್ನಾಡು) ಎಂದು ಕರೆಯಿಸಿಕೊಂಡಿದ್ದಿತು. ಹೊಯ್ಸಳರು ಕ್ರಿ.ಶ.೧೧೧೬ರ ನಂತರ ಈ ಪ್ರದೇಶದ ಮೇಲೆ ತಮ್ಮ ಆಳ್ವಿಕೆಯನ್ನು ಆರಂಭಿಸಿದರು. ಆಗ ಈ ನಾಡಿಗೆ 'ಕುಕ್ಕಲನಾಡು' ಎಂದು ಹೆಸರು ಹೆಚ್ಚು ಪ್ರಚಲಿತವಾಗಿತ್ತು. ವಿಜಯನಗರದ ಅರಸರ ಕಾಲದಲ್ಲಿ, ಯಲಹಂಕನಾಡ ಪ್ರಭುಗಳ ಕಾಲದಲ್ಲೂ ಈ ನಾಡನ್ನು 'ಕುಕ್ಕಲನಾಡು' ಎಂದೇ ಕರೆಯುತ್ತಿದ್ದರು.

ಈ ನಾಡನ್ನು ಪ್ರಸ್ತಾಪಿಸುವ ಶಾಸನಗಳು ದೊರೆತ ಸ್ಥಳಗಳನ್ನು ಮತ್ತು ಶಾಸನೋಕ್ತ ಸ್ಥಳಗಳನ್ನು ನಕ್ಷೆಯ ಮೇಲೆ ಗುರುತಿಸಿದರೆ ಬೆಂಗಳೂರು ಉತ್ತರ ತಾಲ್ಲೂಕಿನ ಪಶ್ಚಿಮ ಭಾಗ, ನೆಲಮಂಗಲ ತಾಲ್ಲೂಕು, ಮಾಗಡಿ ತಾಲ್ಲೂಕುಗಳ ಪೂರ್ವಭಾಗ, ರಾಮನಗರ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕುಗಳ ಉತ್ತರ ದಿಸೆಯ ಭಾಗಗಳನ್ನೊಳಗೊಂಡ ಪ್ರದೇಶ 'ಕುಕ್ಕಲನಾಡಾ'ಗಿದ್ದಿತೆಂದು ತಿಳಿಯುತ್ತದೆ.

ವ್ಯಾಪ್ತಿಯಲ್ಲಿ ಕಿರಿದಾದರೂ ಕುಕ್ಕಲನಾಡನ್ನು ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರ ಮಾಂಡಲೀಕರು ಆಳ್ವಿಕೆ ಮಾಡುತ್ತಿದ್ದರು. ಕುಕ್ಕಲನಾಡು ಮೊದಲು ಗಂಗರ ವಶದಲ್ಲಿದ್ದು ನಂತರ ಚೋಳರ ವಶವಾಗಿ ಹೋಗಿತ್ತು. ಆಗ ಸ್ಥಳೀಯ ಆಡಳಿತಗಾರರಾಗಿದ್ದ ನಾಡಗೌಡರು ಮುಂತಾದವರು ಅನಿವಾರ್ಯವಾಗಿ ಚೋಳರ ಅಧೀನರಾಗಿ ಅವರ ಬಿರುದಾವಳಿಗಳನ್ನು ಸೇರಿಸಿಕೊಂಡು ಆಳ್ವಿಕೆ ನಡೆಸಿದ್ದಾರೆ. ಉದಾ: ಕುಕ್ಕನೂರ ನಾಡಗಾವುಂಡನ ಮಗ ರಟ್ಟಕುಳಕಾಲ ಚೋಳಗಾವುಂಡ, ಬಾಣಾಪುರದ ವಿಕ್ರಮ ಚೋಳಗಾವುಂಡ, ಆಲೂರ ಚೋಳಗಾವುಂಡ, ಪಟ್ಟಂದೂರ ಉತ್ತಮ ಚೋಳಗಾವುಂಡ, ಬಾಳೆಯವಾಡಿಯ ಮುಮ್ಮಡಿ ಚೋಳಗಾವುಂಡ ಮುಂತಾದವರು. ಇದೇ ಸಂದರ್ಭದಲ್ಲಿ ಗಂಗರ ಸೇನೆಯಲ್ಲಿದ್ದ ಅನೇಕ ಅಧಿಕಾರಿಗಳು ಮಲೆನಾಡಿನಲ್ಲಿ ತಲೆಯೆತ್ತ ತೊಡಗಿದ್ದ ಹೊಯ್ಸಳರೊಂದಿಗೆ ಸೇರಿಕೊಂಡು ಚೋಳರನ್ನು ಗಂಗವಾಡಿ ಪ್ರದೇಶದಿಂದ ಓಡಿಸಲು ಪ್ರಯತ್ನಗಳನ್ನು ನಡೆಸುತ್ತಲೇ ಇದ್ದರು.

ಕ್ರಿ.ಶ.೧೧೦೦ರ ನಂತರದಲ್ಲಿ ಹೆಚ್ಚು ಪ್ರಬಲರಾಗತೊಡಗಿದ ಹೊಯ್ಸಳರು ಕ್ರಿ.ಶ.೧೧೧೬ರಲ್ಲಿ ಗಂಗರ ಪ್ರಾಚೀನ ರಾಜಧಾನಿ ತಲಕಾಡಿನಿಂದ ಚೋಳರನ್ನು ಓಡಿಸಿ ಗಂಗವಾಡಿ ೯೬,೦೦೦ ಪ್ರದೇಶವನ್ನು ವಶಪಡಿಸಿಕೊಂಡರು. ಆಗ ಕುಕ್ಕಲನಾಡು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತು. ಕ್ರಿ.ಶ.೧೩೨೫ರಲ್ಲಿ ಶ್ರೀ ಮನ್ಮಹಾನಾಯಕಚಾರ್ಯ ಮೇದಿನಿ ಮನ್ನೆಯರ ಗಂಡ ಉಪ್ಪೂರ ಬೊಮ್ಮನಾಯಕನು ಕುಕ್ಕಲನಾಡನ್ನು ಆಳುತ್ತಿದ್ದ. ಕ್ರಿ.ಶ.೧೩೩೩ ರಿಂದ ೧೩೪೦ರ ಅವಧಿಯ ಹಲವು ಶಾಸನಗಳಲ್ಲಿ ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಮಹಾಸಾಮಂತಾಧಿ ಪತಿಗಳಾಗಿ ನರಲೋಕಗಂಡ ಮಯಿಲೆಯ ನಾಯಕ ಮತ್ತು ಆತನ ಸಹೋದರರು ಹೆಚ್ಚು ಮಾನ್ಯತೆಯನ್ನು ಪಡೆದಿದ್ದರು. ಕಿತ್ತನೆಲ್ಲಿಯ ದೊಡ್ಡನಗೌಡನ ವಂಶೀಯರು ಸಹ

ಕ್ರಿ.ಶ.೧೩೨೫ರಲ್ಲಿ ಕುಕ್ಕಲನಾಡಿನ ನಾಡಪ್ರಭುಗಳಾಗಿದ್ದರು. ಹಾಗೆಯೇ ಕ್ರಿ.ಶ.೧೩೪೦ರ ಹರಿಯಪ್ಪ ಒಡೆಯನ ಶಾಸನಗಳಿಂದ ವಿಜಯನಗರದ ಅರಸರು ಕುಕ್ಕಲನಾಡಿನಲ್ಲಿ ಆಡಳಿತ ಮಾಡಿದ್ದಾರೆ ಎಂದು ತಿಳಿಯುತ್ತದೆ. ಜೊತೆಗೆ ಹೊಯ್ಸಳರು ಮತ್ತು ನಾಡಪ್ರಭುಗಳು ವಿಜಯನಗರ ಅರಸರ ಸಾಮಂತರಾಗಿ ಆಡಳಿತ ನಡೆಸಿರುವುದು ಕಂಡುಬರುತ್ತದೆ. ವಿಜಯನಗರದ ಅರಸು ಮೊದಲನೆಯ ದೇವರಾಯನ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ.೧೪೧೫) ನಾಡುಗಳ ಆಡಳಿತ ಹೆಚ್ಚು ಕೇಂದ್ರೀಕರಣವಾದಂತೆ ತೋರುತ್ತದೆ. ಸ್ಥಳೀಯ ನಾಡ ಪ್ರಭುಗಳೇ ಹೆಚ್ಚು ಆಳ್ವಿಕೆ ನಡೆಸಿದ್ದಾರೆ. ಮುಂದೆ ಈ ಪ್ರದೇಶ ವಿಭಜಿಸಲ್ಪಟ್ಟು (ಕ್ರಿ.ಶ.೧೪೫೯ರ ಸುಮಾರಿಗೆ), ಸರಿ ಸುಮಾರು ಹಿಂದಿನ ಬೆಂಗಳೂರು ಉತ್ತರ ತಾಲ್ಲೂಕಿನ ಪ್ರದೇಶ ಮತ್ತು ಮಾಗಡಿ ತಾಲ್ಲೂಕಿನ ಕೆಲ ಪ್ರದೇಶಗಳು ಯಲಹಂಕನಾಡ ಪ್ರಭುಗಳಾದ ಕೆಂಪೇಗೌಡನ ವಂಶೀಯರ ಆಳ್ವಿಕೆಗೆ ಒಳಪಟ್ಟು, ಆ ನಂತರ ಕ್ರಿ.ಶ.೧೮ನೇ ಶತಮಾನದಲ್ಲಿ ಮೈಸೂರು ಸಂಸ್ಥಾನದಲ್ಲಿ ವಿಲೀನವಾಯಿತು.

ಕರ್ನಾಟಕದಲ್ಲಿ ಬಹುಪ್ರಾಚೀನ ಕಾಲದಿಂದಲೂ ಅನೇಕ ಮತಶ್ರದ್ಧೆಗಳು ತಲೆಯೆತ್ತುತ್ತಾ ಬಂದಿವೆ. ಅಂತಹ ಮತಾಚಾರಗಳಲ್ಲಿ ಶೈವಧರ್ಮದ ಅಂಶಗಳನ್ನು ಪ್ರಧಾನವಾಗಿ ಪಡೆದಿರುವ 'ನಾಥಸಿದ್ಧರ' ಪಂಥವೂ ಒಂದು. ಇಂಥ ನಾಥಪಂಥವು ಈ ಪ್ರದೇಶದಲ್ಲಿತ್ತೆಂದು ತಿಳಿಯುತ್ತದೆ. ನಾಥಪಂಥದ ಬಗ್ಗೆ ಬೆಳಕು ಬೀರುವ ಮೌನಿನಾಥ ಮುನಿಯ ಗುರುಪರಂಪರೆಯ ಬಗ್ಗೆ ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಇದರ ಜೊತೆಗೆ ಈ ಪ್ರದೇಶದಲ್ಲಿ ಜೈನ, ಶೈವ, ವೈಷ್ಣವ ಮತ್ತು ವೀರಶೈವ ಮತಗಳಿದ್ದವು ಎಂದು ಶಾಸನಗಳಿಂದ ತಿಳಿಯುತ್ತದೆ. ಇದಕ್ಕೆ ಪುಷ್ಠಿ ಎಂಬಂತೆ ಕುಕ್ಕಲನಾಡಿನ ಪ್ರದೇಶದಲ್ಲಿ ಈ ಎಲ್ಲಾ ಧರ್ಮಗಳಿಗೆ ಸೇರಿದ ಅನೇಕ ಪ್ರಾಚೀನ ದೇವಾಲಯಗಳು ಕಂಡುಬಂದಿವೆ. ಉದಾ: ಮಾಗಡಿ ತಾಲ್ಲೂಕಿನ ಹೂಜಿಗೆರೆ(ಹೂಜಿಗಲ್)ಯಲ್ಲಿ ಚಂದ್ರಸೇನ ಸೂರಿಗಳ ಗುಡ್ಡನ ನಿಸಧಿ, ಐಗಂಡಪುರದ ಧರ್ಮೇಶ್ವರ ದೇವಾಲಯ, ಬಿನ್ನಮಂಗಲದ ಮುಕ್ತಿನಾಥೇಶ್ವರ ದೇವಾಲಯ, ಕನ್ನೆಲ್ಲಿಯ ಚೆನ್ನಿಗರಾಯ ದೇವಾಲಯ, ದೊಡ್ಡಬೊಮ್ಮಸಂದ್ರದ ಗೋಪಾಲಸ್ವಾಮಿ ದೇವಾಲಯ, ಕಿತ್ತನೆಲ್ಲಿಯ ಸೋಮೇಶ್ವರ ಮತ್ತು ವೀರಭದ್ರದೇವಾಲಯಗಳು, ತೋಟಗೆರೆಯ ಅರ್ಜುನ ದೇವಾಲಯ, ಹೆಸರಘಟ್ಟದ ಚಂದ್ರಮೌಳೇಶ್ವರ ದೇವಾಲಯ, ಅನೇಕ ಪ್ರಾಚೀನ ಬಸವಣ್ಣನ ಗುಡಿಗಳು ಈ ಪ್ರದೇಶದಲ್ಲಿ ಕಂಡುಬಂದಿವೆ.

ಪ್ರಾಚೀನ ಕರ್ನಾಟಕದ ಜನಜೀವನದಲ್ಲಿ ತ್ಯಾಗ, ಶೌರ್ಯ ಮತ್ತು ಶೀಲಗಳೇ ಹಾಸು ಹೊಕ್ಕಾಗಿದ್ದವು. ಅಂತಹ ಪರಿಸರದಲ್ಲಿ ಹುಟ್ಟಿ ಬೆಳೆದ ರಾಜರು, ಸಾಮಂತರು ಮುಂತಾದವರಲ್ಲದೆ ನಾಡ ಪ್ರಭುಗಳಂತಹ ಕೆಳಸ್ತರದ ಆಡಳಿತಗಾರರೂ ಕೂಡ ಅನೇಕ ಜನೋಪಯೋಗಿ ಕಾರ್ಯಗಳನ್ನು ಧರ್ಮಶ್ರದ್ಧೆಯಿಂದ ಕೈಗೊಂಡಿದ್ದರು ಎಂಬುದು ಶಾಸನಗಳಿಂದ ತಿಳಿಯುತ್ತದೆ.

ಈ ನಾಡಿನಲ್ಲಿ ಸ್ತ್ರೀಯರಿಗೆ ಉತ್ತಮ ಸ್ಥಾನವಿತ್ತೆಂದು ಕ್ರಿ.ಶ.೧೩೪೦ರ ಬೈಚಗುಪ್ಪೆ ಗ್ರಾಮದ ಶಾಸನದಿಂದಲೂ, ಈ ಪ್ರದೇಶದಲ್ಲಿ ವ್ಯಾಪಾರ ವಹಿವಾಟು ಚೆನ್ನಾಗಿ ನಡೆಯುತ್ತಿತ್ತು ಎಂಬುದಕ್ಕೆ ಹಲರು ಗುಂಪಿಗೆ ಸೇರಿದ ವರ್ತಕರ ಬಗ್ಗೆ ಕ್ರಿ.ಶ.೧೩೩೦ರ ಕಿತ್ತನೆಲ್ಲಿ ಗ್ರಾಮದ ಶಾಸನಗಳಿಂದ ತಿಳಿದುಬರುತ್ತದೆ.

ಮಹಾಮಾತ್ರ ಜವರ್ಮ್ಮಯನಮಗ ಶಾಸನಚಕ್ರವರ್ತಿ ಪುಣ್ಯಸರ್ಮ್ಮ, ಕೇಶವದೇವ, ನಾಡ ಸೇನಬೋವ ಕೇಶವ ದೇವನ ಮಕ್ಕಳು ಅನಂತಣ್ಣ, ಸೇನಬೋವ ಲಿಂಗಣ್ಣ, ಸೇನಬೋವ ಜಕ್ಕಣ್ಣ, ಮುಂತಾದವರು ಈ ನಾಡಿನ ಶಾಸನಗಳ ಪಾಠರಚರಾಗಿದ್ದರು ಆಮ್ಬಿ ಆಚಾರಿ ಮಗನ್ನಾಗನ್, ಚಿನೋಜ, ಮರೋಜ, ಸಿದ್ದೇಶ್ವರಾಚಾರಿ, ವಾಮಚಾರಿ ಎಂಬುವವರು ಶಾಸನ ಬರಹ ಹಾಗೂ ಕಂಡರಣೆಕಾರರಾಗಿದ್ದರು ಎಂಬ ಅಂಶ ಇಲ್ಲಿನ ಶಾಸನಗಳಿಂದ ವೇದ್ಯವಾಗುತ್ತದೆ.

ಹೀಗೆ ಒಂದು ಚಿಕ್ಕ ಪ್ರದೇಶವು ಮೂಲತಃ ನೈಸರ್ಗಿಕ ಕಾರಣದಿಂದ ಪ್ರತ್ಯೇಕವಾಗಿ ಗುರುತಿಸಲ್ಪಟ್ಟಿದ್ದರೂ ಕಾಲಾಂತರದಲ್ಲಿ ಒಂದು ಪ್ರಾದೇಶಿಕ ವಿಭಾಗವಾಗಿ, ಆಡಳಿತ ಘಟಕವಾಗಿ, ತನ್ನ ತನವನ್ನೂ ಉಳಿಸಿಕೊಂಡಿದ್ದಿತು. ವಿಜಯನಗರ ಅರಸರ ಪೂರ್ವಾರ್ಧದವರೆಗೂ ಸಾಕಷ್ಟು ಸ್ವಾಯತ್ತತೆಯನ್ನು ಪಡೆದಿತ್ತು. ನಂತರ ಯಲಹಂಕ ನಾಡಪ್ರಭುಗಳ ಆಳ್ವಿಕೆಗೂ ಒಳಪಟ್ಟಿತ್ತು. ಅನೇಕ ದೇವಾಲಯ, ಕೆರೆ, ಕಟ್ಟೆ, ಬಾವಿ, ಕಾಲುವೆಗಳ ರಚನೆ, ಇತ್ಯಾದಿ ಎಷ್ಟೋ ಜನೋಪಯೋಗಿ ಕಾರ್ಯಗಳು ಈ ಪ್ರದೇಶದಲ್ಲಿ ನಡೆದವು.

೧.೩. ಅಧ್ಯಯನದ ಮಹತ್ವ

ಕುಕ್ಕಲನಾಡಿನ ಅಧ್ಯಯನದ ಮಹತ್ವವೆಂದರೆ

೧. ಇಲ್ಲಿನ ಶಾಸನಗಳು ಮತ್ತು ದೇವಾಲಯಗಳ ಆಧಾರದ ಹಿನ್ನೆಲೆಯಲ್ಲಿ ಕುಕ್ಕಲನಾಡಿನ ಇತಿಹಾಸ ಮತ್ತು ಪುರಾತನ ಸಂಸ್ಕೃತಿಯ ಬಗ್ಗೆ ತಿಳಿಯುವುದು. ೨. ಈ ನಾಡಿನ ಭೌಗೋಳಿಕ ಅಂಶಗಳನ್ನು ಗುರುತಿಸಿ, ಅಲ್ಲಿನ ವೈಶಿಷ್ಟ್ಯತೆಗಳನ್ನು ವಿಶ್ಲೇಷಿಸುವುದು. ೩. ಕುಕ್ಕಲನಾಡಿನ ಪ್ರದೇಶವನ್ನು ಆಳ್ವಿಕೆ ಮಾಡಿದ ರಾಜಮನೆತನಗಳ ಬಗ್ಗೆ ಹಾಗೂ ಅವರ ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಬಗ್ಗೆ ಅರಿತುಕೊಳ್ಳುವುದು. ೪. ಈ ಪ್ರದೇಶದ ಧಾರ್ಮಿಕ ಅಂಶಗಳ ಮಹತ್ವವನ್ನು ಗುರುತಿಸುವುದು. ೫. ಈ ನಾಡಿನ ಶಾಸನಗಳು ಮತ್ತು ದೇವಾಲಯಗಳನ್ನು ಒಂದೆಡೆ ದಾಖಲಿಸುವುದು. ೬. ಕುಕ್ಕಲನಾಡಿನ ಅಧ್ಯಯನವು ಆ ಪ್ರದೇಶದ ಅಂದಿನ ಆದರ್ಶಗಳು, ಮೌಲ್ಯಗಳು, ಜನಜೀವನ, ನಂಬಿಕೆ, ಆಚಾರ ವಿಚಾರಗಳನ್ನು ತಿಳಿಯಲು ಸಹಕಾರಿಯಾಗಿದೆ. ೭. ಈ ನಾಡಿನ ಅಧ್ಯಯನದಿಂದ ಒಂದು ನಿರ್ದಿಷ್ಟವಾದ ಪ್ರದೇಶದ ಇತಿಹಾಸಕ್ಕೆ ಚಿಕ್ಕ ಪುಟ್ಟ ಅರಸು ಮನೆತನಗಳ, ನಾಡುಗಳ, ಪಾಳೆಪಟ್ಟುಗಳ, ಸ್ಥಳೀಯ ಮುಖಂಡರ ಆಳ್ವಿಕೆಯು, ಸಾಮ್ರಾಟ ಅರಸುಮನೆತನಗಳ ಆಳ್ವಿಕೆಯಷ್ಟೇ ಹೆಚ್ಚು ಮಹತ್ವದ್ದಾಗಿದೆ

ಎಂಬುದನ್ನು ವಿಶ್ಲೇಷಿಸಬಹುದು. ಹೀಗೆ ಈ ನಾಡಿನ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಿ, ವಿಶ್ಲೇಷಿಸುವುದೇ ಈ ಅಧ್ಯಯನದ ಮಹತ್ವವಾಗಿದೆ.

೧.೪. ಇದುವರೆಗಿನ ಅಧ್ಯಯನ

ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳನ್ನು ಕುರಿತು ಕೆಲವಾರು ಅಧ್ಯಯನಗಳು ನಡೆದಿದ್ದರೂ ಕುಕ್ಕಲನಾಡನ್ನು ಕುರಿತು ಇಲ್ಲಿಯವರೆವಿಗೂ ವ್ಯವಸ್ಥಿತ ಮತ್ತು ಸಮಗ್ರ ಅಧ್ಯಯನ ನಡೆದಿಲ್ಲ.

ಪ್ರಮುಖ ರಾಜಮನೆತನಗಳ ಬಗ್ಗೆ, ನಾಡು ನುಡಿ, ಸಂಸ್ಕೃತಿಗಳ ಬಗ್ಗೆ ಈಗಾಗಲೇ ಹಲವಾರು ಪ್ರಕಟಣೆಗಳೂ ಹೊರಬಂದಿವೆ. ಆದರೆ ಪ್ರಾದೇಶಿಕ ಅಧ್ಯಯನಗಳು ಇತರೆ ಅಧ್ಯಯನಗಳಿಗಿಂತಲೂ ಕಡಿಮೆಯೇ ಎಂದು ಹೇಳಬೇಕು. ಅದರಲ್ಲೂ ಹೆಚ್ಚಾಗಿ ಆಕರ ಸಾಮಗ್ರಿ ದೊರಕದಿರುವ ನಾಡುಗಳ ಬಗ್ಗೆ ಅಧ್ಯಯನದ ಪ್ರಯತ್ನಗಳು ಹೆಚ್ಚಿಗೆ ನಡೆದಿಲ್ಲ. ಲಭ್ಯವಿರುವ ಆಕರಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡು ಕ್ಷೇತ್ರಕಾರ್ಯವನ್ನು ಮಾಡಿದಲ್ಲಿ ಇನ್ನೂ ಹಲವಾರು ನಾಡುಗಳ ಇತಿಹಾಸ ಬೆಳಕು ಕಾಣುತ್ತದೆ.

ಕುಕ್ಕಲನಾಡನ್ನು ಕುರಿತು ಇದುವರೆವಿಗೂ ಡಾ.ಪಿ.ವಿ.ಕೃಷ್ಣಮೂರ್ತಿಯವರು ಒಂದು ಲೇಖನವನ್ನು ಬರೆದಿದ್ದು(ಕುಕ್ಕಲನಾಡು, ಇತಿಹಾಸ ದರ್ಶನ, ಸಂ.೭, ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೨), ಬಿಟ್ಟರೆ ಬೇರೆ ಯಾರು ಇದರ ಬಗ್ಗೆ ಅಧ್ಯಯನ ಮಾಡಿಲ್ಲ. ಆದರೆ ಡಾ.ಡಿ.ವಿ.ಪರಮಶಿವಮೂರ್ತಿ ಅವರು ತಮ್ಮ ಸಂಪಾದಕತ್ವದ 'ಪ್ರೌಢದೇವರಾಯನ ಶಾಸನಗಳು' ಎನ್ನುವ ಪುಸ್ತಕದಲ್ಲಿ ಕುಕ್ಕಲನಾಡನ್ನು ಉಲ್ಲೇಖಿಸಿದ್ದಾರೆ. ಇವುಗಳನ್ನು ಬಿಟ್ಟರೆ ಈ ನಾಡನ್ನು ಸೇರಿಸಿಕೊಂಡು ವಿಶಾಲ ವ್ಯಾಪ್ತಿಯನ್ನೇ ಹೊಂದಿ ಕೆಲವು ಅಧ್ಯಯನಗಳಾಗಿವೆ. ಡಾ.ಎಂ.ಚಿದಾನಂದಮೂರ್ತಿ ಅವರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎನ್ನುವ ಕೃತಿಯಲ್ಲಿ ಕರ್ನಾಟಕದ ಸಂಸ್ಕೃತಿ ಮತ್ತು ಇತಿಹಾಸವನ್ನು ಕ್ರಿ.ಶ.೪೫೦ ರಿಂದ ಕ್ರಿ.ಶ.೧೧೫೦ರ ಅವಧಿಯ ಕನ್ನಡ ಶಾಸನಗಳನ್ನು ಆಧರಿಸಿ ವಿವರಿಸಿದ್ದಾರೆ. 'ಕರ್ನಾಟಕದ ವೀರಗಲ್ಲು' ಎಂಬ ಕೃತಿಯಲ್ಲಿ ಡಾ.ಆರ್.ಶೇಷಶಾಸ್ತ್ರಿ ಅವರು ಕರ್ನಾಟಕ ವೀರಗಲ್ಲುಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ (ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪). ಡಾ.ದೇವರಕೊಂಡಾರೆಡ್ಡಿ ಅವರು ತಮ್ಮ 'ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ ಎಂಬ ಸಂಶೋಧನಾ ಕೃತಿಯಲ್ಲಿ ಗಂಗರ ದೇವಾಲಯಗಳ ಬಗ್ಗೆ ವಿವಿಧ ದೃಷ್ಟಿಕೋನಗಳಿಂದ ಚರ್ಚಿಸಿದ್ದಾರೆ (ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೪). ರಂ.ಶ್ರೀ.ಮುಗಳಿ ಅವರು ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಎಂಬ ಕೃತಿಯಲ್ಲಿ ಕರ್ನಾಟಕದ ಸಂಸ್ಕೃತಿಯ ಬಗ್ಗೆ ವಿವರಿಸಿದ್ದಾರೆ. ಡಾ.ಬಿ.ಆರ್.ಹಿರೇಮಠರವರು 'ಶಾಸನಗಳಲ್ಲಿ ಕರ್ನಾಟಕದ

ವರ್ತಕರು' ಎಂಬ ಕೃತಿಯಲ್ಲಿ ಪ್ರಾಚೀನ ಕರ್ನಾಟಕದ ವರ್ತಕರ ಬಗ್ಗೆ ಶಾಸನಗಳ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. (ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೯). ಎಲಿಗಾರ ಚನ್ನಕ್ಕ ಅವರು 'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ' ಎಂಬ ಕೃತಿಯಲ್ಲಿ ಪ್ರಾಚೀನ ಕರ್ನಾಟಕದ ಸ್ತ್ರೀಯರ ಸ್ಥಾನಮಾನಗಳನ್ನು ಕುರಿತು ಶಾಸನಗಳ ಆಧಾರದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. (ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦.) ಡಾ.ಎಂ.ವಿ.ವಸು ಅವರ ಕೃತಿ 'ದಕ್ಷಿಣ ಕರ್ನಾಟಕದ ಅರಸುಮನೆತನಗಳು' ಎಂಬುದರಲ್ಲಿ ದಕ್ಷಿಣ ಕರ್ನಾಟಕದ ಅರಸು ಮನೆತನಗಳ ಬಗ್ಗೆ ವಿವಿಧ ಲೇಖನಗಳಿವೆ. ಡಾ.ವಿ.ಪರಮಶಿವಮೂರ್ತಿಯವರು 'ಕನ್ನಡ ಶಾಸನಶಿಲ್ಪ' ಕೃತಿಯಲ್ಲಿ ಕರ್ನಾಟಕದ ಶಾಸನಶಿಲ್ಪಗಳ ಬಗ್ಗೆ ವಿವರಿಸಿದ್ದಾರೆ. (ಕನ್ನಡ ಶಾಸನಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.) ಬೆಂಗಳೂರು ದರ್ಶನ ಸಂ-೧ರಲ್ಲಿ ವಿವಿಧ ಲೇಖಕರು ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳ ಬಗ್ಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಸುಂದರರಾವ್ ಬ.ನ. ಅವರು 'ಬೆಂಗಳೂರಿನ ಇತಿಹಾಸ' ಎಂಬ ಕೃತಿಯಲ್ಲಿ ಬೆಂಗಳೂರಿನ ಇತಿಹಾಸದ ಬಗ್ಗೆ ಚರ್ಚಿಸಿದ್ದಾರೆ. ಮುನಿರಾಜಪ್ಪ ಅವರು 'ಮಾಗಡಿ ಸೀಮೆಯ ಇತಿಹಾಸ-ಸಂಸ್ಕೃತಿ' ಕೃತಿಯಲ್ಲಿ ಮಾಗಡಿ ಮತ್ತು ಅದರ ಸಾಂಸ್ಕೃತಿಕ ಅಂಶಗಳ ಬಗ್ಗೆ ತಿಳಿಸಿದ್ದಾರೆ.

ಇವುಗಳಲ್ಲದೆ ಕರ್ನಾಟಕದಲ್ಲಿ ವಿವಿಧ ನಾಡುಗಳ ಅಧ್ಯಯನವನ್ನು ಕುರಿತು ಅನೇಕ ಸಂಶೋಧನೆಗಳಾಗಿವೆ. ಅವುಗಳಲ್ಲಿ ಕೆಲವು ಈ ರೀತಿ ಇವೆ. ಗುರುವ ಆರ್.ಎನ್. ಅವರು 'ತರ್ದವಾಡಿನಾಡು' ಎನ್ನುವ ತಮ್ಮ ಕಿರು ಪುಸ್ತಕದಲ್ಲಿ ಈ ನಾಡಿನ ಸಾಂಸ್ಕೃತಿಕ ಅಂಶಗಳ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದಾರೆ (ಗುರುವ ಆರ್.ಎನ್., ತರ್ದವಾಡಿನಾಡು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬). ಇದೇ ನಾಡಿನ ಬಗ್ಗೆ ಡಾ.ಎಸ್.ಕೆ.ಕೊಪ್ಪಾ ಅವರು 'ತರ್ದವಾಡಿನಾಡು : ಒಂದು ಅಧ್ಯಯನ' ಎಂಬ ಸಂಶೋಧನಾ ಪ್ರಬಂಧವನ್ನು ರಚಿಸಿದ್ದಾರೆ (ಡಾ.ಎಸ್.ಕೆ.ಕೊಪ್ಪಾ, ತರ್ದವಾಡಿನಾಡು : ಒಂದು ಅಧ್ಯಯನ, ಪ್ರತಿಭಾ ಪ್ರಕಾಶನ, ಇಂಡಿ, ೧೯೯೦). ಡಾ.ಧನವಂತ ಹಾಜವಗೋಳ ಅವರು 'ಮುಳುಗುಂದನಾಡು : ಒಂದು ಅಧ್ಯಯನ' ಎಂಬ ಸಂಶೋಧನಾ ಕೃತಿಯಲ್ಲಿ ಆ ನಾಡಿನ ಸಂಸ್ಕೃತಿಯ ಬಗ್ಗೆ ಚರ್ಚಿಸಿದ್ದಾರೆ. (ಮುಳುಗುಂದನಾಡು : ಒಂದು ಅಧ್ಯಯನ, ಮಹಾದೇವಿ ಪ್ರಕಾಶನ, ಧಾರವಾಡ, ೨೦೦೪). ಇದೇ ನಾಡಿನ ಬಗ್ಗೆ ಡಾ.ಶ್ರೀನಿವಾಸ ರಿತ್ತಿ ಅವರು ಒಂದು ಕೃತಿಯನ್ನು ರಚಿಸಿದ್ದಾರೆ (ಡಾ.ಶ್ರೀನಿವಾಸ ರಿತ್ತಿ, ಮುಳುಗುಂದನಾಡು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬). 'ಎಡದೊರೆನಾಡು' ಎಂಬ ಒಂದು ಕಿರು ಪುಸ್ತಕವು ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಇದರ ಲೇಖಕರು ಚನ್ನಬಸವ ಹಿರೇಮಠ ಅವರು. 'ತುಳುನಾಡು'

ಎಂಬ ಕೃತಿಯಲ್ಲಿ ಲಕ್ಷ್ಮೀನಾರಾಯಣ ಭಟ್ ಅವರು ತುಳುನಾಡಿನ ಬಗ್ಗೆ ತಿಳಿಸಿದ್ದಾರೆ. 'ಹುಲುಕಡಿನಾಡು' ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಎಂ.ಫಿಲ್.ಸಂಶೋಧನಾ ಪ್ರಬಂಧವನ್ನು ಕೆ.ಮುನಿರಾಜು ಅವರು ರಚಿಸಿದ್ದಾರೆ(ಕನ್ನಡ ವಿಶ್ವವಿದ್ಯಾಲಯದ ಅಪ್ರಕಟಿತ ಎಂ.ಫಿಲ್.ನಿಬಂಧ, ೨೦೦೨). ಇದರಲ್ಲಿ ಅವರು ಹುಲುಕಡಿನಾಡಿನ ಸಾಂಸ್ಕೃತಿಕ ಮಹತ್ವವನ್ನು ಕುರಿತು ಚರ್ಚಿಸಿದ್ದಾರೆ. ಇವುಗಳ ಜೊತೆಗೆ ಪಿ.ವಿ.ಕೃಷ್ಣಮೂರ್ತಿ, ಕೆ.ಜಗನ್ನಾಥಶಾಸ್ತ್ರಿ, ಜೆ.ಟಿ.ಜಯರಾಮಯ್ಯ, ಎಲ್.ವಿ.ಪಾಟೀಲ ಮತ್ತು ಸಿ.ಎಸ್.ವಾಸುದೇವನ್ ಅವರು ವಿವಿಧ ನಾಡುಗಳನ್ನು ಕುರಿತು ಲೇಖನಗಳನ್ನು ಇತಿಹಾಸದರ್ಶನ ಸಂಪುಟ ೧ ರಿಂದ ೨೨ರವರೆಗಿನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಹಾಗೆಯೇ ಡಾ.ಎಂ.ಎಂ.ಕಲಬುರ್ಗಿ ಅವರು ವಿವಿಧ ನಾಡುಗಳ ಅಧ್ಯಯನಗಳನ್ನು ಕುರಿತು ಬಂದಿರುವ ಅಧ್ಯಯನಗಳನ್ನು 'ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಸಂಪುಟ-೧' ಎಂಬ ಕೃತಿಯಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ (ಕಲಬುರ್ಗಿ ಎಂ.ಎಂ., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಸಂಪುಟ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯). ಈ ಅಧ್ಯಯನಗಳ ಜೊತೆಗೆ ಸ್ಥಳೀಯ ಚರಿತ್ರೆಯ ಬಗ್ಗೆ ಅರಸರು, ನಾಯಕರು ಪ್ರದೇಶಗಳ ಬಗ್ಗೆ ಕೆಲವಾರು ಅಧ್ಯಯನಗಳು ನಡೆದಿವೆ. ಮತ್ತು ಹಲವಾರು ಅಧ್ಯಯನಗಳು ನಡೆಯುತ್ತಿವೆ. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ-೯ ರಲ್ಲಿ (ಬಿ.ಎಲ್.ರೈಸ್ ಸಂಪಾದನೆ) ಕುಕ್ಕಲನಾಡನ್ನು ಹೆಸರಿಸುವ ೩೦ ಕ್ಕೂ ಅಧಿಕ ಶಾಸನಗಳು ದೊರಕಿವೆ. ಇವುಗಳ ಬಗ್ಗೆ ಎಪಿಗ್ರಾಫಿಯ ಸಂಪುಟದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಡಾ.ಎಚ್.ಎಸ್. ಗೋಪಾಲ್‌ರಾವ್ ಸಹ ಈ ನಾಡಿಗೆ ಸಂಬಂಧಿಸಿದ ಒಂದು ಶಾಸನವನ್ನು ಪ್ರಕಟಿಸಿದ್ದಾರೆ (ಬೈಲಕೋನೇನಹಳ್ಳಿ ಶಾಸನ, ಶಾಸನ ಸಂಕಲನ, ಅಳಿಲು ಸೇವಾಸಂಸ್ಥೆ, ಬೆಂಗಳೂರು, ೨೦೦೧). ಇವುಗಳಲ್ಲದೆ ಮತ್ತೆಲ್ಲಿಯೂ ಈ ನಾಡನ್ನು ಕುರಿತು ಸಮಗ್ರ ಅಧ್ಯಯನ ನಡೆದಿಲ್ಲ. ಕುಕ್ಕಲನಾಡು ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದ್ದು, ವ್ಯಾಪಕ ಸಮೀಕ್ಷೆ ನಡೆಯಬೇಕಿದೆ. ಇತರೆ ಆಡಳಿತ ವಿಭಾಗಗಳಿಗೆ ಹೋಲಿಸಿದರೆ ಈ ನಾಡು ಸ್ವಲ್ಪಮಟ್ಟಿಗೆ ಭಿನ್ನವಾಗಿದೆ. ಈ ವಿಭಿನ್ನತೆಯ ಕಾರಣಗಳನ್ನು ಹುಡುಕುವ ಅಗತ್ಯವಿದೆ ಹಾಗೂ ಈ ನಾಡು ಕಾಲದಿಂದ ಕಾಲಕ್ಕೆ ಹೇಗೆ ಬೆಳವಣಿಗೆಯಾಯಿತು ಎಂಬುದನ್ನು ವಿಶ್ಲೇಷಿಸಬೇಕಿದೆ. ಈ ಎಲ್ಲಾ ಅಂಶಗಳನ್ನು ಈಡೇರಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

೧.೫. ಅಧ್ಯಯನದ ವಿಧಾನ

ಕುಕ್ಕಲನಾಡಿನ ಶಾಸನಗಳು ಮತ್ತು ಸ್ಮಾರಕಗಳು ಒದಗಿಸುವ ಮಾಹಿತಿಯನ್ನು ಅಧ್ಯಯನ ಮಾಡಿ, ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಪಟ್ಟಿಕೆಗಳನ್ನು ತಯಾರಿಸಿಕೊಳ್ಳಲಾಯಿತು. ಶಾಸನ ಸ್ವರೂಪ, ಕಾಲ, ಸ್ಥಳ, ಅರಸರ ಮಾಹಿತಿಯೊಂದಿಗೆ, ಅವು ಒಳಗೊಂಡ ವಿಷಯಗಳನ್ನು (ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ವಿಷಯಗಳನ್ನು) ಪ್ರತ್ಯೇಕವಾದ ಪಟ್ಟಿಕೆಗಳಲ್ಲಿ ದಾಖಲಿಸಿಕೊಳ್ಳಲಾಯಿತು. ಕ್ಷೇತ್ರ

ಕಾರ್ಯದ ಮೂಲಕ ಕಂಡುಕೊಂಡ, ಶಾಸನಗಳು, ದೇವಾಲಯಗಳ ಅಧ್ಯಯನದೊಂದಿಗೆ ಅವುಗಳ ಭಾವಚಿತ್ರಗಳ ಸಹಾಯದಿಂದ ಸಂಗ್ರಹಿಸಿದ ವಿಷಯಗಳನ್ನೂ ಪಟ್ಟಿಕೆಗಳಲ್ಲಿ ದಾಖಲಿಸಿಕೊಳ್ಳಲಾಯಿತು.

ಹೀಗೆ ಶಾಸನಗಳು ಮತ್ತು ಸ್ಮಾರಕಗಳ ಅಧ್ಯಯನದಿಂದ ಪಟ್ಟಿಕೆಗಳಲ್ಲಿ ಸಂಗ್ರಹಿಸಿದ ವಿಷಯಗಳನ್ನೆಲ್ಲ ಆಯಾ ವಿಭಾಗಕ್ಕನುಸಾರವಾಗಿ ಕಾಲಕ್ರಮದಲ್ಲಿ ಹೊಂದಿಸಿಕೊಳ್ಳಲಾಯಿತು. ಅವುಗಳಿಂದ ಈ ನಾಡನ್ನಾಳಿದ ಅರಸರ ಬಗ್ಗೆ ಮತ್ತು ಅಂದಿನ ಜನಸಾಮಾನ್ಯರ ಬದುಕನ್ನು ತಿಳಿಯಲು ಹಾಗೂ ಅವರೆಲ್ಲರ ಸಾಂಸ್ಕೃತಿಕ ನೆಲೆಗಳನ್ನರಿಯಲು ಸಾಧ್ಯವಾಯಿತು.

ಈ ಮಾದರಿಯಲ್ಲಿ ಬಂದ ಸಂಶೋಧನ ಮಹಾಪ್ರಬಂಧ ಹಾಗೂ ಇತರ ಗ್ರಂಥಗಳಿಂದ ಸಂಗ್ರಹಿಸಲಾದ ಪೂರಕ ಮಾಹಿತಿಯನ್ನು ಸಂದರ್ಭಕ್ಕನುಸಾರವಾಗಿ ಸೇರಿಸಿಕೊಳ್ಳಲಾಗಿದೆ. ಹೀಗೆ ಮೂಲ ಆಕರಗಳಿಗೆ ಪೂರಕ ಸಾಮಗ್ರಿಯನ್ನು ಸೇರಿಸಿ ಈ ಮಹಾಪ್ರಬಂಧವನ್ನು ರಚಿಸಲಾಗಿದೆ.

೧.೬. ಅಧ್ಯಯನದ ಸ್ವರೂಪ

ಈ ಮಹಾಪ್ರಬಂಧದಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ ಎಂದಿದ್ದು, ಇದರಲ್ಲಿ ಆಕರ ಸಾಮಗ್ರಿ ಮತ್ತು ಅಧ್ಯಯನ ಕ್ರಮವನ್ನು ಸ್ಪಷ್ಟಪಡಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಕುಕ್ಕಲನಾಡಿನ ಪದನಿಷ್ಪತ್ತಿ, ಭೌಗೋಳಿಕ ಹಿನ್ನೆಲೆ ಮತ್ತು ಐತಿಹಾಸಿಕ ಹಿನ್ನೆಲೆ, ಕುಕ್ಕಲನಾಡಿನ ಸ್ಥಳನಾಮಗಳ ಬಗ್ಗೆಯೂ ಪರಿಚಯಿಸಲಾಗಿದೆ. ಮೂರನೆಯ ಅಧ್ಯಾಯ ಕುಕ್ಕಲನಾಡಿನ ರಾಜಕೀಯ ವ್ಯವಸ್ಥೆ ಇದರಲ್ಲಿ ಕುಕ್ಕಲನಾಡನ್ನು ಆಳ್ವಿಕೆ ಮಾಡಿದ ಅರಸು ಮನೆತನಗಳಾದ ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು ಇವರ ಮಹಾಮಂಡಳೇಶ್ವರರು, ಗಾವುಂಡರು, ನಾಯಕರು, ನಾಡಗೌಡರುಗಳ ಆಡಳಿತದ ಬಗ್ಗೆ ಇಲ್ಲಿ ದಾಖಲಿಸಲಾಗಿದೆ.

ಈ ಪ್ರಬಂಧದ ನಾಲ್ಕನೆಯ ಅಧ್ಯಾಯ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ, ಇದರಲ್ಲಿ ಅಂದಿನ ಜನರ ಜೀವನ ವಿಧಾನಗಳ ವಿವಿಧ ಆಯಾಮಗಳನ್ನು ದಾಖಲಿಸಿ, ಅವರ ಸಾಂಸ್ಕೃತಿಕ ಹಿರಿಮೆಯನ್ನು ಸಾದರಪಡಿಸಲಾಗಿದೆ. ಈ ಸಾಮಾಜಿಕ ಜೀವನದ ನೆಮ್ಮದಿಗೆ ಕಾರಣವಾದ ಆರ್ಥಿಕ ವ್ಯವಸ್ಥೆಯನ್ನು ಸಹ ಇದೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಜೀವನದ ಜೊತೆಗೆ ಕುಕ್ಕಲನಾಡಿನ ವ್ಯಕ್ತಿನಾಮಗಳು, ಅಲ್ಲಿನ ಶಾಸನಕವಿಗಳು ಮತ್ತು ಲಿಪಿಕಾರರನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದರಲ್ಲಿ ಇಲ್ಲಿನ ಜೈನ, ಶೈವ, ನಾಥಪಂಥ, ವೈಷ್ಣವ ಮತ್ತು ವೀರಶೈವ ಮತಗಳ ಅಧ್ಯಯನದ ಮೂಲಕ ಈ ನಾಡಿನಲ್ಲಿದ್ದ ಧರ್ಮದ ಬಗ್ಗೆಯೂ ತಿಳಿಸಲಾಗಿದೆ. ಈ ಪ್ರದೇಶದಲ್ಲಿದ್ದ ನಾಥಮುನಿ ಪರಂಪರೆಯ ಬಗ್ಗೆ ವಿಶ್ಲೇಷಿಸಲಾಗಿದೆ.

ಧಾರ್ಮಿಕ ಜೀವನದ ಪ್ರತೀಕವಾಗಿರುವ ಈ ನಾಡಿನ ದೇವಾಲಯಗಳು ಮತ್ತು ಶಿಲ್ಪಗಳ ಬಗ್ಗೆ ವಿವರವಾದ ಅಧ್ಯಯನ ಆರನೇ ಅಧ್ಯಾಯದಲ್ಲಿದೆ. ಇದರಲ್ಲಿ ಕರ್ನಾಟಕದ ಶಿಲ್ಪಕಲೆಯಲ್ಲಿ ವಹಿಸಿದ ಪಾತ್ರದ ಬಗ್ಗೆ ವಿವರಿಸಲಾಗಿದೆ.

ಏಳನೇ ಅಧ್ಯಾಯನದಲ್ಲಿ ಸಮಾರೋಪವಿದೆ. ಈ ಮೇಲೆ ಹೇಳಿದ ಆರು ಅಧ್ಯಾಯಗಳಲ್ಲಿ ಕಂಡುಕೊಂಡ ಸಂಶೋಧನೆಯ ಫಲಶ್ರುತಿಗಳನ್ನು ಈ ಅಧ್ಯಾಯದಲ್ಲಿ ಸಾರರೂಪದಲ್ಲಿ ಕೊಟ್ಟು, ಮುಂದೆ ಕೈಗೊಳ್ಳಬಹುದಾದ ಅಧ್ಯಯನದ ಸೂಚನೆಯನ್ನು ಕೊಡಲಾಗಿದೆ. ಕೊನೆಯಲ್ಲಿ ಅನುಬಂಧವಿದ್ದು, ಇದರಲ್ಲಿ ಕುಕ್ಕಲನಾಡಿನ ನಕ್ಷೆ ಇದೆ. ದೇವಾಲಯಗಳು, ಶಿಲ್ಪಗಳು ಮತ್ತು ಶಾಸನಗಳ ಛಾಯಾ ಚಿತ್ರಗಳಿವೆ. ಈ ನಾಡಿನ ದೇವಾಲಯಗಳ ತಲವಿನ್ಯಾಸದ ಚಿತ್ರಗಳಿವೆ. ದೇವಾಲಯಗಳು, ಶಾಸನಕವಿಗಳು ಮತ್ತು ಲಿಪಿಕಾರರ ಪಟ್ಟಿಗಳನ್ನು ಕೊಡಲಾಗಿದೆ. ಇವುಗಳಲ್ಲದೆ ಕೊನೆಯಲ್ಲಿ ಈ ಅಧ್ಯಯನಕ್ಕೆ ಸಹಾಯಕವಾದ ಆಕರ ಗ್ರಂಥಗಳ ಪಟ್ಟಿಯಿದೆ. ಹೀಗೆ ಒಟ್ಟು ಏಳು ಅಧ್ಯಾಯಗಳಲ್ಲಿ ಈ ಮಹಾಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಾಯ ೨

ಕುಕ್ಕಲನಾಡಿನ ಇತಿಹಾಸ

೨.೧. 'ಕುಕ್ಕಲ' ಪದನಿಷ್ಪತ್ತಿ

೨.೨. ಕುಕ್ಕಲನಾಡಿನ ಸ್ಥಳನಾಮಗಳು

೨.೩. ಭೌಗೋಳಿಕ ಹಿನ್ನೆಲೆ

೨.೪. ಐತಿಹಾಸಿಕ ಹಿನ್ನೆಲೆ (ಪ್ರಾಗೈತಿಹಾಸ)

೨

ಕುಕ್ಕಲನಾಡಿನ ಇತಿಹಾಸ

ಕನ್ನಡ ನಾಡು ತನ್ನದೇ ಆದ ಒಂದು ಸಂಸ್ಕೃತಿಯ ಪರಂಪರೆ, ಹಿರಿಮೆಯನ್ನು ಹೊಂದಿದೆ. ಇಂತಹ ಸಂಸ್ಕೃತಿಯು ಆಯಾ ಕಾಲ, ದೇಶ, ಭಾಷೆ, ಪ್ರದೇಶದ ಮೇಲೆ ತನ್ನ ಪ್ರಭಾವ ಬೀರಿದೆ. ಈ ಹಿನ್ನೆಲೆಯಲ್ಲಿ ವಿಭಿನ್ನ ಚಿಕ್ಕ ಚಿಕ್ಕ ಆಡಳಿತ ವಿಭಾಗಗಳಾಗಿದ್ದ ಯಲಹಂಕನಾಡು, ಕಿಟಲೆನಾಡು, ಸೆಣ್ಣೆನಾಡು, ಮಣ್ಣೆನಾಡು, ಹುಲುಕಡಿನಾಡು, ಕರಿಕನಾಡು, ಕುಕ್ಕಲನಾಡು, ಕೋಳಾಲನಾಡು, ಕೈವಾರನಾಡು, ಕಾಡನೂರು ೭೦, ಸಿಗಲ್ ನಾಡು, ಪುನ್ನಾಡು, ಹೊಮ್ಮಳಿಗೆನಾಡು, ಮೊರಸುನಾಡುಗಳಲ್ಲಿ ಮಾಂಡಲೀಕರು, ಸಾಮಂತರು, ಪ್ರಭುಗಳು, ನಾಯಕರು, ಅರಸರುಗಳ ಅಧೀನದಲ್ಲಿ ಆಳಿ ಅಳಿದಿದ್ದಾರೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಕೆಲವು ಪ್ರದೇಶಗಳನ್ನೊಳಗೊಂಡ ಪ್ರಾಚೀನ ಆಡಳಿತ ವಿಭಾಗಗಳಲ್ಲಿ ಚಿಕ್ಕ ನಾಡಾದ ಕುಕ್ಕಲನಾಡು ಸಹ ಒಂದು. ಈ ನಾಡಿನ ಬಗ್ಗೆ ತಿಳಿಯುವ ಮೊದಲು 'ಕುಕ್ಕಲ' ಪದದ ನಿಷ್ಪತ್ತಿಯ ಬಗ್ಗೆ ಅರಿಯೋಣ.

೨.೧. 'ಕುಕ್ಕಲ'ಪದ ನಿಷ್ಪತ್ತಿ

ಯಾವುದೇ ಒಂದು ಪ್ರಾಚೀನ ಆಡಳಿತ ವಿಭಾಗಕ್ಕೆ ಹೆಸರು ಬರಲು ಪ್ರಧಾನವಾಗಿ ಆ ಪ್ರದೇಶದ ನೈಸರ್ಗಿಕ ವೈಶಿಷ್ಟ್ಯವೇ ಕಾರಣವಾಗಿರುತ್ತದೆ.[೧] ಪ್ರಸ್ತುತ 'ಕುಕ್ಕಲ' ಎಂಬ ಪದವನ್ನು ಬಿಡಿಸಿ ಬರೆದಾಗ ಕುಕ್ಕು + ಅಲ ಎಂದಾಗುತ್ತದೆ. ಈ ಪದಗಳಿಗೆ ವಿವಿಧ ಅರ್ಥಗಳಿವೆ. ಇವುಗಳ ಬಗ್ಗೆ ವಿವಿಧ ಆಧಾರಗಳ ಹಿನ್ನೆಲೆಯಲ್ಲಿ ಚರ್ಚಿಸೋಣ.

ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿರುವ ಕನ್ನಡ ನಿಘಂಟುವಿನಲ್ಲಿ "ಕುಕ್ಕು" ಎಂದರೆ ರಾಶೀಯಾಗಿ ಬರು, ಗುಂಪಾಗಿರಬರು ಎಂಬರ್ಥಗಳಿವೆ.[೨] 'ಅಲ' ಎಂದರೆ ಅರಿದಲ, ಹರಿತಾಲ, ಚೇಳಿನ ಕೊಂಡಿಯಲ್ಲಿರುವ ಮುಳ್ಳು ಎಂಬರ್ಥವಿದೆ.[೩]

ಕಿಟ್ಟೆಲ್ ರವರ ಕನ್ನಡ ಇಂಗ್ಲೀಷ್ ನಿಘಂಟುವಿನಲ್ಲಿ 'ಕುಕ್ಕು' ಎಂದರೆ ಕುಲುಕು, ಕೊಕ್ಕು(a paddy bird) ಎಂಬ ಅರ್ಥಗಳಿವೆ.[೪] 'ಅಲ' ಎಂದರೆ ಸ್ಥಳ, ದಿಕ್ಕು ಎಂಬರ್ಥವಿದೆ.[೫]

ತುಳು ನಿಘಂಟುವಿನಲ್ಲಿ 'ಕುಕ್ಕು' ಎಂದರೆ ಮಾವು, ಮಾವಿನ ಕಾಯಿ, ಮಾವಿನ ಹಣ್ಣು ಎಂಬರ್ಥಗಳಿವೆ.[೬] 'ಅಲ' ಎಂದರೆ ವಾಲು, ಬಾಗು, ವಾಲುತ್ತಾ ಮುಂದೆ ಹೋಗುವುದು ಎಂದರ್ಥಗಳಿವೆ.[೭]

'A Dravidian Etimological Dictionary'ಯಲ್ಲಿ 'ಕುಕ್ಕು' ಎನ್ನುವುದಕ್ಕೆ ತಮಿಳಿನಲ್ಲಿ ಕಾಲು ಮಡಿಚಿ (ಕುಕ್ಕರ ಕಾಲಲ್ಲಿ) ಕುಳಿತುಕೊಳ್ಳುವುದು (to sit on one's legs = ಒಂದೇ ಕಾಲಿನಲ್ಲಿ ಕುಳಿತು ಕೊಳ್ಳುವುದು) ಎಂಬರ್ಥವಿದೆ.[೮] ತೆಲುಗಿನಲ್ಲಿ stuff cram = ಅತಿಯಾಗಿ ತಿನ್ನು-ತುರುಕು ಎಂಬ ಅರ್ಥವಿದೆ.[೯] ಮಲೆಯಾಳಂನಲ್ಲಿ 'ಕುಕ್ಕು' ಎಂದರೆ To be hot = ಕುದಿಯುವುದು ಎಂದರ್ಥವಿದೆ.[೧೦]

'ಅಲ' ಎಂದರೆ ತಮಿಳಿನಲ್ಲಿ 'ಆಲದ ಮರ' ಎಂದರ್ಥವಿದೆ.[೧೧] ಮಲಯಾಳಂ ಭಾಷೆಯಲ್ಲಿ darkness, night (ಕತ್ತಲು, ರಾತ್ರಿ) ಎಂಬರ್ಥಗಳಿವೆ.[೧೨] 'ಆಲ ಎಂದರೆ Sugarmill water (ಸಕ್ಕರೆ ಕಾರ್ಖಾನೆ, ನೀರು) ಎಂಬರ್ಥಗಳಿವೆ.[೧೩] ಜೊತೆಗೆ ಡಾ.ಪಿ.ವಿ.ಕೃಷ್ಣಮೂರ್ತಿಯವರು 'ಕುಕ್ಕಲ' ಪದದ ನಿಷ್ಪತ್ತಿಯ ಬಗ್ಗೆ ಈ ರೀತಿ ಹೇಳಿದ್ದಾರೆ. 'ಕುಕ್ಕಲ' ಎಂಬುದು ಕುಕ್+ಆಲ ಎಂಬ ಎರಡು ಪದಗಳನ್ನೊಳಗೊಂಡಿದೆ. ಕುಕ್ಕ್ ಎಂಬುದು ಪರ್ವತದ ತುದಿ, ಶಿಖರ, ಕೊಂಕು, ಅಂಕು, ಡೊಂಕು ಎಂದು ಅಭಿಪ್ರಾಯಪಡುತ್ತಾರೆ.[೧೪] 'ಅಲ' ಎಂಬುದು ತಗ್ಗಾದ ಸ್ಥಳದಲ್ಲಿ ನೀರು ನಿಂತಿರುವ ಜಾಗ. ನದಿಯ ಮುಖಜಭೂಮಿ ಎಂದು ಅರ್ಥೈಸಿದ್ದಾರೆ.[೧೫] ಅಂದ ಮೇಲೆ ಅರ್ಕಾವತಿ ನದಿಗೆ ನೀರೊದಗಿಸುವ ಅಂಕು-ಡೊಂಕಾದ ಹಳ್ಳ-ಕೊಳ್ಳಗಳ ಸಮೂಹವನ್ನು ಇದು ನಿರ್ದೇಶಿಸುತ್ತದೆ. ಮಳೆಯ ನೀರಿನಿಂದ ಉಂಟಾಗುವ ಹಳ್ಳ-ಕೊಳ್ಳಗಳನ್ನು ಇಂದಿಗೂ ನಾವು 'ಕೊರಕು'ಗಳೆಂದೇ ಕರೆಯುತ್ತೇವೆ. ಅಂತೆಯೇ 'ಕುಕ್ಕಲನಾಡು' ತನ್ನ ನೈಜ ಭೌಗೋಳಿಕ ವೈಲಕ್ಷಣಗಳನ್ನು ಅನುಸರಿಸಿಯೇ ಹೆಸರನ್ನು ಪಡೆದಿರುವುದು ತಿಳಿಯುತ್ತದೆ.[೧೬]

ನಿಘಂಟುಗಳ ಅರ್ಥ, ವಿದ್ವಾಂಸರ ಅಭಿಪ್ರಾಯ ಜೊತೆಗೆ ಕ್ಷೇತ್ರಕಾರ್ಯದ ಮೂಲಕ ಕುಕ್ಕಲನಾಡಿನ ಪ್ರದೇಶವನ್ನು ಪರಿಶೀಲಿಸಿದಾಗ ನನಗೆ ತಿಳಿದು ಬಂದುದ್ದೇನೆಂದರೆ...

೧. ಅಂಕು ಡೊಂಕಾದ ವಿಸ್ತಾರವಾದ ಸ್ಥಳದಲ್ಲಿ ಗುಂಪು ಗುಂಪಾಗಿ ಮಾವನ್ನು ಬೆಳೆಯುತ್ತಿದ್ದ ಪ್ರದೇಶ ಎಂದು ಗುರ್ತಿಸಬಹುದು. ಇಂದಿಗೂ ಸಹ ಈ ಪ್ರದೇಶದಲ್ಲಿ ಮಾವಿನ ತೋಪುಗಳನ್ನು ಕಾಣಬಹುದಾಗಿದೆ.

೨. ಬೆಟ್ಟ ಗುಡ್ಡಗಳ ನಡುವಿನ ಅಂಕು ಡೊಂಕಾದ, ವಿಸ್ತಾರ(ವಿಶಾಲ)ವಾದ ಸ್ಥಳದಲ್ಲಿ ನೀರಿರುವ ಪ್ರದೇಶ ಫಲವತ್ತಾದ ಭೂಮಿ. (ನದಿಯ ಮುಖಜಭೂಮಿ) ಎಂದರ್ಥ. ಈ ಪ್ರದೇಶವು ಸುತ್ತಲು ಚಿಕ್ಕ, ಚಿಕ್ಕ, ಬೆಟ್ಟಗುಡ್ಡಗಳಿಂದ ಕೂಡಿದುದಾಗಿದೆ. ಈ ಪ್ರದೇಶದ ಪ್ರತಿ ಊರು(ಗ್ರಾಮ)ಗಳಲ್ಲೂ, ಕೆರೆ,


ಕಟ್ಟೆಗಳು, ಹಳ್ಳ-ಕೊಳ್ಳಗಳಿವೆ. ಅರ್ಕಾವತಿ ನದಿಯೂ ಹರಿಯುತ್ತದೆ. ಇಂತಹ ಅರ್ಥಗಳ ಹಿನ್ನೆಲೆಯಲ್ಲಿನ ಊರುಗಳೆಂದರೆ ಕುಕ್ಕನಹಳ್ಳಿ, ಕುಕ್ಕಲಹಳ್ಳಿ (ಬೆಂಗಳೂರು ಜಿಲ್ಲೆ), ಕುಕ್ಕರಹಳ್ಳಿ (ಮೈಸೂರು ಜಿಲ್ಲೆ), ಕುಕ್ಕನೂರು(ಕೊಪ್ಪಳ ಜಿಲ್ಲೆ), ಕುಕ್ಕೆ ಸುಬ್ರಹ್ಮಣ್ಯ ಮುಂತಾದವು.

ಕುಕ್ಕಲನಾಡನ್ನು ಅಲ್ಲಿನ ಶಾಸನಗಳು ವಿವಿಧ ರೀತಿಯಲ್ಲಿ ಕುಕ್ಕರ ಪಾಟಿಕ್ಕಾಜೆನಾಡು, ಕುಕ್ಕನರೆನಾಡು, ಕುಕ್ಕನೂರ್ನಾಡು, ಕುಕ್ಕಲನಾಡು ಎಂದು ಹೆಸರಿಸಿವೆ. ಕ್ರಿ.ಶ.೭೫೦ರ ಬೆಂಗಳೂರಿನ ದಾಸರಹಳ್ಳಿ ಗ್ರಾಮದ ಶಾಸನವು ಕುಕ್ಕಲನಾಡನ್ನು 'ಕುಕ್ಕರಪಾಟಿಕ್ಕಾಜೆನಾಡಿಯರ್' ಎಂದು ಹೆಸರಿಸುತ್ತದೆ.[೧೭] ನೆಲಮಂಗಲ ತಾಲ್ಲೂಕಿನ ತೋಟಗೆರೆ ಗ್ರಾಮದ ಕ್ರಿ.ಶ.೭೫೦ರ ಶಾಸನದಲ್ಲಿ ಕುಕ್ಕಲನಾಡನ್ನು 'ಕುಕ್ಕನರೆನಾಡು' ಎಂದು ಕರೆಯಲಾಗಿದೆ.[೧೮] ಹಾಗೆಯೇ ಕ್ರಿ.ಶ.೧೦೨೯ರ ನೆಲಮಂಗಲ ತಾಲ್ಲೂಕಿನ ಸೋಲದೇವನ ಹಳ್ಳಿ ಗ್ರಾಮದ ಶಾಸನವು ಕುಕ್ಕಲನಾಡನ್ನು 'ಕುಕ್ಕನೂರ್ನ್ನಾಡ' ಎಂದು ಉಲ್ಲೇಖಿಸುತ್ತದೆ.[೧೯] ಅದೇ ತಾಲ್ಲೂಕಿನ ಐಗಂಡಪುರದ ತಮಿಳು ಶಾಸನವು ಸಹ ಈ ನಾಡನ್ನು 'ಕುಕ್ಕನೂರ್ನ್ನಾಡು' ಎಂದು ತಿಳಿಸುತ್ತದೆ. ಇನ್ನೂ ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳೆಲ್ಲ "ಕುಕ್ಕಲನಾಡು" ಎಂದೇ ಉಲ್ಲೇಖಿಸುತ್ತವೆ.

"ಕುಕ್ಕರಪಾಟಿಕ್ಕಾಜೆನಾಡು" ಇಲ್ಲಿ ಪಾಟು>ಪಾಟಿ>ಪಾಡಿ>ಹಾಡಿಯಾಗಿರಬೇಕು ಪಾಳು>ಪಾಳಿ ಎಂದರೆ 'ವಿಭಾಗ' ಎಂದರ್ಥ. ಪಾಟು ಎಂದರೆ ಗ್ರಾಮ-ಹಳ್ಳಿ ಎಂದು ಹೇಳಬಹುದು.[೨೦] ಪಾಟು>ಪಾಡು>ಹಾಡು>ಹಾಡಿ> ಆಡಿ ಎಂದಾಗುತ್ತದೆ ಎಂದು ಶಂಬಾಜೋಷಿಯವರು ಅಭಿಪ್ರಾಯಪಡುತ್ತಾರೆ.[೨೧] ಪಟ್ಟಿ>ವಾಡಿ>ಪಳ್ಳಿ>ಹಳ್ಳಿ>ವಲ್ಲಿ ಎಂದು ಬದಲಾಗುತ್ತದೆ ಎಂದು ತಿಳಿಸಿದ್ದಾರೆ.[೨೨] ಹಳ್ಳಿ, ಹಾಡಿ ಇವು ಗ್ರಾಮವಾಚಿ ಮತ್ತು ಜನಾಂಗವಾಚಿ ನೆಲೆಗಳೆಂದು ಶಂಬಾರವರು ಗುರುತಿಸಿದ್ದಾರೆ.[೨೩] ಹಾಡಿ ಬುಡಕಟ್ಟು ಜನಾಂಗದವರು ವಾಸಿಸುವ ಸ್ಥಳದ ಹೆಸರು (ಗಮನಿಸಿ : ಮಾಸ್ತಿಯವರ 'ಕಾಕನಕೋಟೆ' ನಾಟಕ). ಪಾಡಿ, ವಾಡಿ ಎಂದರೆ ವಾಸಸ್ಥಳ ಎಂದರ್ಥ. ಅಂದರೆ ಪ್ರಾಚೀನ ಕಾಲದಿಂದ ಜನರು ವಾಸವಿದ್ದ ಸ್ಥಳ ಎಂದು ತೀರ್ಮಾನಕ್ಕೆ ಬರಬಹುದಾಗಿದೆ. ಪಟ್ಟಿ, ಪಾಡಿ, ಹಾಡಿ, ಹಳ್ಳಿ ಮೂಲದಲ್ಲಿ ಇವೆಲ್ಲವೂ ಒಂದೇ.[೨೪] ಕುಕ್ಕರ>ಕುಕ್ಕನ>ಕುಕ್ಕಲ ಎಂದು ದಂತ್ಯದಲ್ಲಿ ಬದಲಾವಣೆ ಆಗಿ ಈ ಮೂರರ ನಡುವೆ ಉಚ್ಚಾರ ವ್ಯತ್ಯಾಸವಾಗಿದೆ. ಕುಕ್ಕರ>ಕುಕ್ಕನ>ಕುಕ್ಕ>ಕೊಕ್ಕಲು>ಕೊರಕಲು ಎಂಬ ಅರ್ಥ ಪಡೆಯುತ್ತದೆ. ಮುಂದೆ ಆಯಾ ಕಾಲಕ್ಕೆ ಬದಲಾದ ಉಚ್ಚಾರಗಳೊಂದಿಗೆ ಕೊರಕಲುಗಳಿಂದ ಕೂಡಿದ ಅಂಕು ಡೊಂಕಾದ ಚಿಕ್ಕ, ಚಿಕ್ಕ, ಬೆಟ್ಟ, ಗುಡ್ಡಗಳಿರುವ ವಿಶಾಲವಾದ ನೀರಿರುವ ಸ್ಥಳದಲ್ಲಿ ಅನೇಕ ಗ್ರಾಮ, ಹಳ್ಳಿಗಳಿರುವ ಪ್ರದೇಶ ಎನ್ನಬಹುದು. ಈ ಪ್ರದೇಶವನ್ನು ಅನೇಕ ನಾಯಕರು, ಪ್ರಭುಗಳು, ಗೌಡರು, ಅಧಿಕಾರಿಗಳು ಆಳ್ವಿಕೆ ಮಾಡಿದ್ದಾರೆ ಹಾಗೂ ತಮ್ಮ ಆಡಳಿತದ ಅವಧಿಯಲ್ಲಿ ವಿವಿಧ ಹೆಸರುಗಳಿಂದ ಕರೆದುಕೊಂಡಿದ್ದಾರೆ. ಉದಾ. ಕುಕ್ಕನರೆನಾಡು, ಕುಕ್ಕನೂರ್ನಾಡು, ಕುಕ್ಕಲನಾಡು ಇದಕ್ಕೇ ಹೆಚ್ಚಿನ ಪ್ರಾಮುಖ್ಯತೆ ನೀಡಬಹುದು. ಈ ನಾಡೇ ಮುಂದೆ 'ಕುಕ್ಕಲನಾಡು' ಎಂದು ಪ್ರಸಿದ್ಧಿ ಪಡೆಯಿತು ಎನ್ನಬಹುದು.

೨.೨. ಕುಕ್ಕಲನಾಡಿನ ಸ್ಥಳನಾಮಗಳು

ಇಂದು ಭಾಷೆ-ಸಂಸ್ಕೃತಿಗಳ ಸೂಕ್ತ ಅಭ್ಯಾಸಕ್ಕೆ ಬಳಸಲಾಗಿರುವ ಅನೇಕ ವಿಷಯ-ವಿಧಾನಗಳಲ್ಲಿ ನಾಮಗಳ ಅಧ್ಯಯನವೂ ಒಂದು. ನಾಮಗಳ ಅಧ್ಯಯನವು ನಾಮವಿಜ್ಞಾನ(Onamastics) ಎಂಬ ಹೊಸ ಅಧ್ಯಾಯವನ್ನೇ ತೆರದಿದ್ದು, ಅದು ಇಂದು ದೊಡ್ಡ ಶಾಖೆಯಾಗಿ ಬೆಳೆದಿದೆ.



ಯಾವುದೇ ಭಾಷೆ ಒಂದು ಕಾಲದ ಜೀವನದ ನಿರ್ದಿಷ್ಟ ಸಂದರ್ಭದಲ್ಲಿ ರೂಪು ಪಡೆದಿರುವುದರಿಂದ ಗ್ರಾಮನಾಮಗಳು ಅಲ್ಲಿ ನೆಲೆನಿಂತ ಜನ ಇಲ್ಲವೆ ಮತ್ತಿತರ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದಿರುತ್ತವೆ. “Place names give valuable testimony of extinct language” ಎನ್ನುತ್ತಾನೆ ಬ್ಲೂಮ್‌ಫೀಲ್ಡ್.[೨೭a] ಸ್ಥಳನಾಮಗಳಲ್ಲಿ ಬಹುಪಾಲು ಅರ್ಥಗರ್ಭಿತವಾದವುಗಳಾಗಿರುತ್ತವೆ. ಒಂದು ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರ, ಗಿಡ, ಕೋಟೆ, ದೇವಾಲಯ ಮುಂತಾದವು ಆ ಪ್ರದೇಶದ ಚರಿತ್ರೆಯನ್ನು ಹೇಳಲು ಹೇಗೆ ಸಹಾಯಕವಾಗುತ್ತವೆಯೋ, ಹಾಗೆಯೇ ಅಲ್ಲಿನ ಸ್ಥಳನಾಮಗಳ ಚರಿತ್ರೆಗೆ ಪೂರಕವಾಗುವ ಅನೇಕ ಮಾಹಿತಿಗಳನ್ನು ಒದಗಿಸುತ್ತವೆ. ಆದುದರಿಂದ ಸಾಮಾನ್ಯ ನಾಮಗಳಿಗೆ ಕೊಡಬೇಕಾದ ಪ್ರಧಾನ್ಯಕ್ಕಿಂತ ಹೆಚ್ಚು ಪ್ರಾಧಾನ್ಯ ಕೊಡಬೇಕಾಗಿದೆ. ನಮ್ಮ ಪೂರ್ವಿಕರ ವಿದ್ಯಾಸಂಪನ್ನತೆ, ಸೌಂದರ್ಯಪ್ರಜ್ಞೆ, ಧಾರ್ಮಿಕ ದೃಷ್ಟಿ, ಮೂಢನಂಬಿಕೆ, ಆಳರಸರ ಅಥವಾ ಮೂಲ ನಿವಾಸಿಗಳ ಬಗೆಗೆ ಮಹತ್ವದ ವಿಚಾರಗಳು, ಅಂದಿನ ಜನರ ವೃತ್ತಿ, ನೈಸರ್ಗಿಕ ಸಂಪತ್ತು, ಭಾಷೆ, ಮಾನವ ಶಾಸ್ತ್ರ ಮುಂತಾದ ಅನೇಕ ವಿಷಯಗಳನ್ನು ಗರ್ಭದಲ್ಲಿಡಗಿಸಿಕೊಂಡಿರುವ ಅನುಲ್ಲೇಖಿತ ಗ್ರಂಥಗಳಾಗಿವೆ. ಈ ಸ್ಥಳನಾಮಗಳು. ಈ ಮಹತ್ವದ ಗುಣದಿಂದಲೇ ಸ್ಥಳನಾಮಗಳ ಅಧ್ಯಯನ ಇಂದು ಹೆಚ್ಚು ಉಪಯುಕ್ತವೆನಿಸಿದೆ.

ಅಮೇರಿಕಾದ ಎಫ್.ವಿ. ಎಗ್ಲಿ ಮತ್ತು ಡಾ.ಫ್ರಾಂಜ್ ಬೋಸ್ ರವರು ಸ್ಥಳನಾಮಗಳಲ್ಲಿ ಆಯಾ ಕಾಲದ ಜನರ ಮನೋಧರ್ಮ, ಜನಜೀವನದ ಸಾಂಸ್ಕೃತಿಕ ವಿಕಾಸ ಮತ್ತು ಆಯಾ ಪ್ರದೇಶಗಳ ಭಾಷಾ

ಇತಿಮಿತಿಗಳು ಮುದ್ರೆಗೊಂಡಿರುವುದನ್ನು ಸಾದರಪಡಿಸಿ,[೨೮] ಸ್ಥಳನಾಮಗಳ ಅಧ್ಯಯನದ ಮೂಲಕ ಪುರಾತನ ಸಂಸ್ಕೃತಿಯ ಬಗ್ಗೆ ಮಹತ್ವದ ಮಾಹಿತಿಯನ್ನು ತಿಳಿಸಿದ್ದಾರೆ. ಸ್ಥಳನಾಮಗಳಿಂದ ಮನುಕುಲದ ವಿಕಾಸದ ಘಟ್ಟಗಳನ್ನು ಗುರುತಿಸಬಹುದೆನ್ನುತ್ತಾರೆ ಶಂಬಾಜೋಶಿ.[೨೯] ಸ್ಥಳನಾಮಗಳು ಇತಿಹಾಸ ಮತ್ತು ಪ್ರಾಗೈತಿಹಾಸಿಕ ಮಾನವಶಾಸ್ತ್ರ ವಿವರಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುತ್ತವೆ ಎಂದು ಡಾ.ದೇ.ಜವರೇಗೌಡರು ಅಭಿಪ್ರಾಯಪಟ್ಟಿದ್ದಾರೆ.[೩೦] ಯಾವುದೇ ಲಿಖಿತ ದಾಖಲೆ ಇಲ್ಲದಿದ್ದರೂ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಿದು ಬರುವ ಸಂಸ್ಕೃತಿ ವಾಹಕಗಳು ಸ್ಥಳನಾಮಗಳೆಂದು ಚಾರ್ಜ್‌ಸ್ಟಿವರ್ಟ್ ಗುರುತಿಸುತ್ತಾರೆ.[೩೧] ಸ್ಥಳನಾಮಗಳು ಭಾಷಾವಿಜ್ಞಾನಕ್ಕೆ ಅವಶ್ಯಕವಾದ ಪೂರಕ ಮಾಹಿತಿಗಳನ್ನು ನೀಡುತ್ತವೆ. ಪ್ರಾಗೈತಿಹಾಸಿಕ, ಐತಿಹಾಸಿಕ ದಾಖಲೆಗಳಲ್ಲಿ ಸಿಗದಿರುವ ವಿವರಗಳು ಸ್ಥಳನಾಮಗಳಲ್ಲಿ ದೊರೆಯುತ್ತವೆ ಎಂದು ವ್ಯಾನ್ ರೈಟ್ ವ್ಯಾಖ್ಯಾನಿಸಿದ್ದಾರೆ.[೩೨] ಇದರಿಂದ ಇಂದು ವಿವಿಧ ರಾಷ್ಟ್ರಗಳಲ್ಲಿ ಚರಿತ್ರೆ ಹಾಗೂ ಕೋಶಗಳನ್ನು ಅತ್ಯಂತ ವೈಜ್ಞಾನಿಕವಾಗಿ ಪುನರ್ನಿರ್ಮಿಸುವಾಗ ಸ್ಥಳನಾಮಗಳನ್ನು ಮುಖ್ಯ ಆಧಾರವನ್ನಾಗಿ ಬಳಸಿಕೊಳ್ಳಲಾಗುತ್ತಿದೆ.[೩೩] ಸ್ಥಳನಾಮಗಳಲ್ಲಿ ದೊರೆಯುವ ವಿವಿಧ ರೂಪಗಳನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿದಾಗ, ಭಾಷೆಯಲ್ಲಿ ಸಿಗುವ ವಿವಿಧ ಬದಲಾವಣೆಗಳು, ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ವಿವರಗಳು, ದೊರೆಯುತ್ತವೆ. ಅರ್ಥ ಅಸ್ಪಷ್ಟತೆ ಹೊಂದಿರುವ ಸ್ಥಳನಾಮಗಳ ಸೂಕ್ಷ್ಮ ಪರಿಶೀಲನೆಯಿಂದ ಹೊಸ ಹೊಸ ವಿಷಯಗಳು ಹೊರಬೀಳುವ ಸಾಧ್ಯತೆ ಇರುತ್ತದೆ.

ಕರ್ನಾಟಕದಲ್ಲಿ ಸ್ಥಳನಾಮಗಳ ಅಧ್ಯಯನ ಈಚೆಗೆ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ. ಆದರೂ "ಅತಿ ಪರಿಚಯಾತ್ ಅವಜ್ಞಾ" ಎನ್ನುವ ಮಾತು ಸ್ಥಳನಾಮಗಳ ವಿಷಯದಲ್ಲಿ ಸತ್ಯವಾಗಿದೆ. ದಿನನಿತ್ಯ ಕಣ್ಣಿಗೆ ಕಾಣುವ ಸ್ಥಳಗಳು, ಮಾತುಮಾತಿಗೆ ಕಿವಿಗೆ ಬೀಳುವ ಅವುಗಳ ಹೆಸರುಗಳು ನಮ್ಮ ನಾಡಿನ ಅನೇಕ ವಿಷಯಗಳನ್ನು ಗರ್ಭದಲ್ಲಿರಿಸಿಕೊಂಡ ಮಹತ್ವದ ಸಾಧನೆಗಳೆಂಬುದು ಬಹುಜನಕ್ಕೆ ಗೊತ್ತಿಲ್ಲ. ಅದಕ್ಕೆ ಕಾರಣ ಕಾಲಕಾಲಕ್ಕೆ ಬದಲಾದ ಭಾಷಿಕ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಗಳು.

ಭಾಷಿಕ ಪ್ರಕ್ರಿಯೆಯಲ್ಲಿ ಪ>ಹ, ಱ>ರ ಸಾದೃಶ್ಯಲೋಪ, ವ-ಮ-ಹ-ಪ-ಬ ಭೇದ, ಸ>ಚ ಸಮರೂಪಧಾರಣೆ, ಕಕಾರ, ತಾಲವ್ಯೀಕರಣ, ಇ>ಎ, ಉ>ಒ ಗಳ ವ್ಯತ್ಯಾಸದಿಂದ ಸ್ಥಳನಾಮಗಳು ತಾವಾಗಿಯೇ ಸಹಜವಾಗಿ ಬದಲುಗೊಳ್ಳುತ್ತವೆ. ಆದರೆ ಸಾಂಸ್ಕೃತಿಕ ಪ್ರಕ್ರಿಯೆಯಲ್ಲಿ ಯಾವುದೋ ಸಾಂಸ್ಕೃತಿಕ ಕಾರಣಗಳಿಗಾಗಿ ಸಾರ್ವಜನಿಕ ಆಸಕ್ತಿಯ ಸ್ಥಳನಾಮಗಳನ್ನು ಅಲ್ಲಿನ ಜನ ಬದಲು ಮಾಡಿರುವುದು ಎದ್ದು ಕಾಣುತ್ತದೆ. ಈ ಕಾರ್ಯದಲ್ಲಿ ಆಯಾ ಸ್ಥಳದ ಪಂಡಿತ ಪಾಮರರಿಬ್ಬರೂ ಭಾಗಿಯಾದುದರಿಂದ ಅವರ ನಿಷ್ಪತ್ತಿಯನ್ನು ಕೆಮ್ತೂರು ರಘುಪತಿ ಭಟ್ಟರು "ವಿದ್ವಜ್ಜನ ನಿರುಕ್ತಿ,

ಜನಪದ ನಿರುಕ್ತಿ'' ಎಂದು ಕರೆದರೆ.[೩೪] ಎಂ.ಎಂ. ಕಲಬುರ್ಗಿಯವರು ''ಪಂಡಿತ ನಿಷ್ಪತ್ತಿ, ಪಾಮರ ನಿಷ್ಪತ್ತಿ'' ಎಂದಿದ್ದಾರೆ.[೩೫] ಆಯಾ ಪ್ರದೇಶಗಳ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರಣಗಳಿಂದಾಗಿ ಸ್ಥಳನಾಮಗಳನ್ನು ಮಾರ್ಪಾಡುಗೊಳಿಸುವಲ್ಲಿ ಉದ್ದೇಶಿತ ಮತ್ತು ಅನುದ್ದೇಶಿತ ಧೋರಣೆಗಳು ಎದ್ದು ಕಾಣುತ್ತವೆ. ಉದ್ದೇಶಿತ ಧೋರಣೆಯಲ್ಲಿ ದೇಶಿ ಶಬ್ದಗಳನ್ನು ಸಂಸ್ಕೃತೀಕರಣಗೊಳಿಸಿ ಜನಪ್ರಿಯವಾಗುವಂತೆ ಮಾಡುವುದು ಕಂಡುಬಂದರೆ, ಅನುದ್ದೇಶಿತ ದೋರಣೆಯಲ್ಲಿ ಸ್ಥಳನಾಮಕೂಡ ಜನರ ಸೌಲಭ್ಯಕ್ಕೆ ತಕ್ಕಂದ ಭಾಷಿಕವಾಗಿ ತನ್ನಿಂದ ತಾನೇ ಬಲಗೊಳ್ಳುತ್ತಾ ಹೋಗುತ್ತದೆ. ಇದರಿಂದಾಗಿ ಸ್ಥಳನಾಮಗಳ ಶಬ್ದಾರ್ಥಗಳಲ್ಲಿ ಬದಲಾವಣೆ ಹಾಗೂ ಶಬ್ದರೂಪಗಳಲ್ಲಿ ಬದಲಾವಣೆ ಅನಿವಾರ್ಯ ವಾಗುತ್ತದೆ.[೩೬]

ಸಾಮಾನ್ಯವಾಗಿ ಸ್ಥಳನಾಮಗಳು ಕೂಡುನುಡಿಗಳು ಇಲ್ಲವೆ ಸಮಸ್ತಪದಗಳಾಗಿರುತ್ತವೆ. ದ್ರಾವಿಡ ಮೂಲದ ಕನ್ನಡ ಸ್ಥಳನಾಮಗಳು ಹೆಚ್ಚಾಗಿ ಎರಡು ಆಕೃತಿಮಗಳನ್ನು ಪಡೆದಿರುತ್ತದೆ. ಇದರಲ್ಲಿ ಪೂರ್ವಭಾಗವು ವಿಶಿಷ್ಟವಾದ ನಿರ್ದಿಷ್ಟ ಲಕ್ಷಣವನ್ನು ಸೂಚಿಸುವುದರಿಂದ 'ನಿರ್ದಿಷ್ಟ ಆಕೃತಿಮ'ವೆಂದೂ ಉತ್ತರ ಭಾಗವು ಹೆಸರಿನ ಸಾಮಾನ್ಯ ವರ್ಗವನ್ನು ಪ್ರತಿನಿಧಿಸುವುದರಿಂದ ಅದನ್ನು 'ವಾರ್ಗಿಕ ಆಕೃತಿಮ'ವೆಂದು ಕರೆಯಲಾಗುತ್ತದೆ.[೩೭]

ಕನ್ನಡದಲ್ಲಿ ಎರಡಕ್ಕಿಂತ ಹೆಚ್ಚು ಆಕೃತಿಮಗಳಿರುವ ಹೆಸರುಗಳು ಇವೆಯಾದರೂ ಅವುಗಳ ಸಂಖ್ಯೆ ಬಹಳ ಕಡಿಮೆ. ಇನ್ನೂ ಸ್ಥಳನಾಮಗಳಲ್ಲಿ ಬರುವ ನಿರ್ದಿಷ್ಟಗಳನ್ನು ಪಟ್ಟಿ ಮಾಡುವುದು ಕಷ್ಟವಾದರೂ ಗ್ರಾಮಗಳಿಗೆ ಹೆಸರಿಡುತ್ತ ಬಂದ ಇತಿಹಾಸದಲ್ಲಿ ಸಾಮಾನ್ಯವಾಗಿ ಪ್ರಕೃತಿ ನಾಮಸೂಚಿ, ಆಮೇಲೆ ಜನಾಂಗಸೂಚಿ, ಇನ್ನೂ ಆಮೇಲೆ ವ್ಯಕ್ತಿನಾಮ ಸೂಚಿ ಧೋರಣೆಗಳು ಕಂಡುಬರುತ್ತವೆ.[೩೮]

ಆದರೆ ವಾರ್ಗಿಕ ಅಕೃತಿಮಗಳ ಸಂಖ್ಯೆ ಸೀಮಿತವಾಗಿರುವುದರಿಂದ ಅವುಗಳ ಪಟ್ಟಿ ಸುಲಭ-ಸಾಧ್ಯ (ವಿವರಗಳಿಗೆ ನೋಡಿ : ಚಿದಾನಂದಮೂರ್ತಿ ಎಂ., ಕರ್ನಾಟಕ ಸ್ಥಳನಾಮಗಳು, ವಾಗಾರ್ಥ, ಪು.೧೫ ರಿಂದ ೨೦; ಕೆಮ್ಮೂರು ರಘುಪತಿಭಟ್ಟ, ತುಳುನಾಡಿನ ಸ್ಥಳನಾಮಗಳು, ಪು.೨೯-೩೫; ಕಲಬುರ್ಗಿ ಎಂ.ಎಂ., ಕನ್ನಡ ನಾಮವಿಜ್ಞಾನ, ಪು.೬೮-೭೪). ಪ್ರಸ್ತುತ ಕುಕ್ಕಲನಾಡಿನ ಶಾಸನಗಳಲ್ಲಿ ಬಳಕೆಗೊಂಡಿರುವ ಮತ್ತು ಕುಕ್ಕಲನಾಡಿನ ಪ್ರದೇಶದ ಸ್ಥಳನಾಮಗಳ ವಾರ್ಗಿಕ ಆವರ್ತನೆಯನ್ನು ಗಮನಿಸೋಣ.

ಊರು

ಮಾನವನು ನೆಲೆಯೂರಿದ ಸ್ಥಳ ಊರು. ಇದು ಅಚ್ಚ ದ್ರಾವಿಡ ಪದ. ದಕ್ಷಿಣ ದ್ರಾವಿಡ ಮತ್ತು ಪ್ರಾಕೃತ ಭಾಷೆಗಳನ್ನೊಳಗೊಂಡು, ಇತರ ದ್ರಾವಿಡ ಭಾಷೆಗಳಾದ ಕೊಂಡ, ತೋಡ, ಕೊಡಗು, ಕೊಲಾಮಿ, ನಾಯ್ಕಿಗಳಲ್ಲೂ ವ್ಯಾಪಕವಾಗಿ ಬಳಕೆಯಾಗಿದೆ.[೩೯]

ಊರ್ ಸ್ಥಳನಾಮವಾರ್ಗಿಕ. ದಕ್ಷಿಣ ಭಾರತವನ್ನು ಮೀರಿ ಹೊರದೇಶದವರೆಗೂ ವ್ಯಾಪಿಸಿರುವುದು ತಿಳಿದುಬರುತ್ತದೆ.[೩೯a] ಊರು ಕೊನೆಯಲ್ಲಿ ಬರುವ ಕೆಲವು ಹೆಸರುಗಳಾದರೂ ಮೂಲತಃ 'ಪುರ'ದಿಂದ ಕೊನೆಯಾಗುತ್ತಿದ್ದವೆಂಬುದಕ್ಕೆ ಶಾಸನಾಧಾರಗಳಿವೆ.[೪೦] ಜನ ವಾಸಮಾಡುವ ಸ್ಥಳ, An inhabited place, a village, a town, a city.[೪೧]

ತುಳುನಾಡಿನ ಸ್ಥಳನಾಮಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ ಕೆಮ್ತೂರು ರಘುಪತಿ ಭಟ್ಟರು 'ಊರು' ಎಂಬ ಪದ ಅಥವಾ ಅದರ ಭಿನ್ನ, ಭಿನ್ನ ಸಾಧಿತ ರೂಪಗಳು ಜಲಸಂಬಂಧಿಯಾಗಿರುವುದಕ್ಕ ದೃಷ್ಟಾಂತಗಳಿರುವುದನ್ನು ತೋರಿಸಿದ್ದಾರೆ.[೪೨] 'ಊರು' ದ್ರಾವಿಡ ಮೂಲದ 'ಇರ್' ಅಥವಾ 'ಉರ್' ದಿಂದ ಬಂದಿದ್ದು, ಅದರರ್ಥ ಇರುವಿಕೆ, ನೆಲಸುವಿಕೆ ಎಂದಾಗುತ್ತದೆ.[೪೩] ಕುಕ್ಕಲನಾಡಿನ ಸ್ಥಳನಾಮಗಳಲ್ಲಿ 'ಊರು' ವಸತಿವಾಚಿ ವಾರ್ಗಿಕವಾಗಿದೆ.

೧. ಕಲ್ಲೂರು(EC-IX, ಮಾಗಡಿ, ೧೫, ಕ್ರಿ.ಶ.೧೩೧೫)
೨. ಬೆಂಗಳೂರು
೩. ಅತ್ತಿಗುಂಟೂರು(EC-IX, Nl, ೩೩, ಕ್ರಿ.ಶ.೭೫೦)
೪. ನಕ್ಕೂರು(EC-IX, Nl, ೦೩, ಕ್ರಿ.ಶ.೧೧೧೦)

ಪಟ್ಟಣ

ನಗರದ ಜನಸಾಂದ್ರತೆಗಿಂತಲೂ ಕಡಿಮೆ ಜನಸಾಂದ್ರತೆ ಇರುವ ವ್ಯವಸ್ಥಿತವಾದ ವಸತಿ ಪ್ರದೇಶ. ಎಲ್ಲಾ ವರ್ಗದ ಜಾತಿಯ ಜನಗಳು ವಾಸಿಸುವ ವಾಣಿಜ್ಯ ಕೇಂದ್ರವಾಗಿದೆ. ಸಣ್ಣನಗರ, ಪುರ[೪೪] ಸಂಸ್ಕೃತದ 'ಪಟ್ಟನಮ್ ' ಬಹುಶಃ ದ್ರಾವಿಡ ಮೂಲದ ಪಟ್ಟಿ, ಹಟ್ಟಿ, ಇಂದ ಬಂದಿರಬಹುದು ಎಂದು ರಾಬರ್ಟ್ ಕಾಲ್ಡ್‌ವೆಲ್ ಗುರುತಿಸುತ್ತಾರೆ.[೪೫] ಪಾಡು, ಪಾಡಿ, ಪಟ್ಟಿ, ಪಟ್ಟು, ಪಟ್ಟಣ ಆಗಿರಬೇಕು ಎಂದು ಶಂಬಾಜೋಶಿ ಹೇಳುತ್ತಾರೆ.[೪೬] ಇದು ವಾಸ್ತವ್ಯವಾಚಿ ವಾರ್ಗಿಕವಾಗಿದೆ. ಕುಕ್ಕಲನಾಡಿನ ಪ್ರದೇಶದಲ್ಲಿ ಕಾಣಬರುವ ಈ ವಾರ್ಗಿಕದ ಸ್ಥಳನಾಮವೆಂದರೆ

೧. ಚನ್ನಪಟ್ಟಣ

ಪುರ

ಜನಪ್ರಿಯ, ಸ್ಥಳನಾಮ, ವಾರ್ಗಿಕವಾಗಿ ಭಾರತದುದ್ದಕ್ಕೂ ಬಳಕೆಗೊಂಡ 'ಪುರ', 'ಪುರಿ', ದ್ರಾವಿಡ ಸ್ಥಳನಾಮ ವಾರ್ಗಿಕ 'ಊರು'ದ ಪರ್ಯಾಯ ಪದವಾಗಿ ಕೆಲವೆಡೆ ಕಾಣಿಸಿಕೊಂಡಿದೆ. ಅವರ, ವರ, ಪಾರ, ಪುರ ಮುಂತಾದ ವಾರ್ಗಿಕಗಳು ಪರ್ಯಾಯ ಘಟಕಗಳಾಗಿ ಬಳಕೆಯಾಗಿವೆ.[೪೭] ಪಟ್ಟಣದಂತ

'ಪುರ'ವು ಜನಸಾಂದ್ರತೆ ಹೊಂದಿರುವ ಪ್ರದೇಶವಾಗಿದೆ. ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ 'ಪುರ' 'ಪಟ್ಟಣ' ಎನ್ನುವ ಅರ್ಥದಲ್ಲಿ ಬಳಕೆಗೊಂಡಿದ್ದು, ಅದು ಕ್ರಿ.ಶ.೨ನೇ ಶತಮಾನದಷ್ಟು ಹಿಂದಿನಿಂದಲೇ ಕಾಣಿಸಿಕೊಂಡಿದೆ.[೪೮] ಹಿಂದೆ ಬ್ರಾಹ್ಮಣರು ಹೆಚ್ಚು ವಾಸಿಸುತ್ತಿದ್ದ ಸ್ಥಳವಾಗಿದ್ದಿತು. (ನಗರ, ಪಟ್ಟಣ, a city, big town) ಕುಕ್ಕಲನಾಡಿನ ಪ್ರದೇಶದಲ್ಲಿ ಕಂಡುಬರುವ ಈ ವರ್ಗಿಕದ ಸ್ಥಳನಾಮಗಳು ಹೀಗಿವೆ.

೧. ದೊಡ್ಡಬಳ್ಳಾಪುರ

೨. ಐಗಂಡಪುರ

೩. ದಾಸನಪುರ

೪. ತಿರುಮಲಪುರ

೫. ಯಶವಂತಪುರ

೬. ರಾಮನಾಥಪುರ (E-IX, Bn, ೧೨೩, ಕ್ರಿ.ಶ.೧೪೯೫)

೭. ರಾಮಾಪುರ (E-IX, ಮಾಗಡಿ, ೭೪, ಕ್ರಿ.ಶ.೧೫೪೭)

೮. ಬಾಣಪುರ (E-IX, Nl, ೦೧, ಕ್ರಿ.ಶ.೧೦೨೯)

೯. ಗೊಂಗಡಿಪುರ(ತಿಮ್ಮಣ್ಣರಾಜಪುರ) (E-IX, Bn, ೧೨೩, ಕ್ರಿ.ಶ.೧೪೯೫)

ಹಳ್ಳಿ

ದ್ರಾವಿಡ ಮೂಲದ ಪಳ್ಳಿ ಸ್ಥಳನಾಮ ವಾಗಿರಕ, ದಕ್ಷಿಣ ಭಾರತದ ಸ್ಥಳನಾಮಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ರಾಬರ್ಟ್ ಕಾಲ್ಡ್‌ವೆಲ್‌ರ ಪ್ರಕಾರ ಈ ಪಳ್ಳಿ ಪಳ್ಳದಿಂದ ಬಂದಿದ್ದು, ಅದು ತಮಿಳುನಾಡಿನ ವ್ಯವಸಾಯಗಾರ ಜನಾಂಗದ ಹೆಸರು ಸೂಚಿಯಾಗಿದೆ.[೫೦] ಇತರ ದ್ರಾವಿಡ, ಭಾಷೆಗಳಾದ ಕನ್ನಡ, ಮಲೆಯಾಳಂ, ತೆಲುಗು, ತುಳುಗಳಲ್ಲಿ 'ಪಳ್ಳಿ' ಎಂಬ ಶಬ್ದ ರೂಪವೇ ಸಮಾನವಾಗಿ ಬಳಕೆಯಾಗಿದ್ದು ತೆಲುಗಿನಲ್ಲಿ 'ಪಲ್ಲಿ' ಎಂದು ಬಳಸುತ್ತಾರೆ. ಅದಕ್ಕೆ ಸಣ್ಣ ಊರು, ಗುಡಿಸಲು, ಬೌದ್ಧ-ಜೈನ ದೇವಾಲಯ ಸ್ಥಳ ಮುಂತಾದ ಅರ್ಥಗಳನ್ನು ಕೊಡಲಾಗಿದೆ.[೫೧] ಕಿಟ್ಟೆಲ್‌ರು ಪಳ್ಳಿ, ಪಳ್ಳಗಳನ್ನು ಪಟ್ಟ ಮೂಲದಿಂದ ತೆಗೆದುಕೊಂಡಿದ್ದು. ಕೆಳಗೆ ಬೀಳು, ಕೆಳಗೆ ಹೋಗು ಎಂಬರ್ಥ ನೀಡಿದ್ದಾರೆ.[೫೨] ಪಳ್ಳ ಎಂದದ ತಗ್ಗು, ಆಳ, ತೊರೆ ಎಂಬರ್ಥವಿರುವುದರಿಂದ ಹಳ್ಳಿ, ತಗ್ಗು ಅಥವಾ ತೊರೆ ಆಶ್ರಯದಲ್ಲಿರುವ ಊರು ಎನ್ನಬಹುದು. 'ಹಳ್ಳಿ' ವಾಸ್ತವ್ಯವಾಚಿ ವರ್ಗಿಕವಾಗಿದೆ. ಕುಕ್ಕಲನಾಡಿನ ಪ್ರದೇಶದಲ್ಲಿ ಕಂಡುಬರುವ ಈ ವರ್ಗಿಕದ ಸ್ಥಳನಾಮಗಳೆಂದರೆ.

೧. ಕುಕ್ಕನಹಳ್ಳಿ

೨. ಕುಕ್ಕಲಹಳ್ಳಿ

ಏರಿ

ನೀರು ನಿಲ್ಲಿಸಲು ಕಟ್ಟಿದ ಕೃತಕ ತಡೆ. ಎತ್ತರದ ಭೂಪ್ರದೇಶ. ನೀರು ನಿಂತಿರುವ ಭಾಗದ ಹಿನ್ನೀರಿನ ಎತ್ತರದ ಭೂ ಭಾಗ. ಜಲವಾಚಿ ಸೂಚಕ ಪದವಾಗಿದ್ದು, ಕೆರೆ-ಕುಂಟೆ ನೀರು ನಿಲ್ಲಿಸಲು ಸಹಾಯಕವಾದ ಎತ್ತರದ ಭೂಪ್ರದೇಶ.

೧. ಕೆಂಗೇರಿ

ಕುಂಟೆ

ಜಲವಾಚಿ ಪದ, ನೀರಕುಣಿ, ಕೊಳ[೫೫], ಚಿಕ್ಕಕೆರೆ, ವಕ್ರಾಣಿ, ಬಯಲು ಭೂಮಿಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕ> ಗ ಬದಲಾವಣೆಯಿಂದ ಗುಂಟೆ-ಗುಂಟ ಎಂದು ಬಳಕೆಯಾಗುತ್ತದೆ. ನೀರಿನ ಸಂಗ್ರಹ ಮಾಡಿರುವ ಪ್ರದೇಶವಾಗಿದ್ದು, ಪೂರ್ವ ಘಟಕದ 'ನಿರ್ದಿಷ್ಟ'ದ ಜೊತೆಗೆ 'ವಾರ್ಗಿಕ'ವಾಗಿ ಬಳಕೆಯಾಗುತ್ತದೆ.

೧. ಅರಿಶಿನ ಕುಂಟೆ

ಕುಪ್ಪೆ

ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ ಎತ್ತರವಾದ ಸ್ಥಳ, ರಾಶಿ ಎಂಬ ಅರ್ಥಗಳಿವೆ.[೫೬] ಕ>ಗ ಬದಲಾವಣೆಯಿಂದ ಗುಪ್ಪೆ-ಗುಪ್ಪ ಎಂದು ಬಳಕೆಯಾಗುತ್ತದೆ. ಇದು ಗುಂಪು ಅಥವಾ ರಾಶಿಯನ್ನು ಸೂಚಿಸುವ ವಾರ್ಗಿಕವಾಗಿದೆ. ಕೊಪ್ಪ > ಕುಪ್ಪೆ ಆಗಿರುವ ಸಾಧ್ಯತೆ ಇದೆ. 'ಕುಪ್ಪ' 'ಗುಪ್ಪೆ' 'ಕುಪ್ಪಿ' 'ಗುಪ್ಪಿ' ಆಗಿ ಉತ್ತರ ಪದದಲ್ಲಿ ಬಳಕೆಯಾಗುತ್ತದೆ.

೧. ಬೈಚಗುಪ್ಪೆ (EC-IX, ಮಾಗಡಿ, ೮೧, ಕ್ರಿ.ಶ.೧೩೪೦)

ಕೊಪ್ಪ

ಹಲವಾರು ಜನರು ಗುಂಪಾಗಿ ವಾಸಿಸುವ ಕೇರಿ ಅಥವಾ ಸಣ್ಣಹಳ್ಳಿ, ಕೊಪ್ಪಲು - ರಾತ್ರಿವೇಳೆ ಸಾಕುಪ್ರಾಣಿಗಳನ್ನು ಕೂಡಿ ಹಾಕುವ ಸ್ಥಳವಾಗಿದೆ.

೧. ಸೊಂಡೆಕೊಪ್ಪ

ಘಟ್ಟ

ಬೆಟ್ಟ, ಗುಡ್ಡ, ಎತ್ತರದ ಭೂಪ್ರದೇಶ ಸೂಚಿಸುವ ಪದವಾಗಿದೆ. ನಿರ್ದಿಷ್ಟಗಡಿ ಅಥವಾ ಎಲ್ಲೆಯನ್ನು ಸೂಚಿಸುವ ವಾರ್ಗಿಕವಾಗಿದೆ.

೧. ಹೆಸರುಘಟ್ಟ

೨. ರಾಜಘಟ್ಟ

೩. ಮುದುಗಟ್ಟ (EC-IX, ಮಾಗಡಿ, ೭೪, ಕ್ರಿ.ಶ.೧೫೪೭)

ದುರ್ಗ

'ಕೋಟೆ' ಪದಕ್ಕೆ ಸಂವಾದಿಯಾಗಿ ಬಳಕೆಯಾಗಿದೆ. ನಿರ್ಮಾಣವಾಚಿಯಾಗಿದ್ದು, ಸಂಸ್ಕೃತ ಪದವಾಗಿದೆ. ರಕ್ಷಣೆಗಾಗಿ ಕಟ್ಟಿಕೊಂಡಿರುವ ಅಗಲವಾದ ಗೋಡೆಯ ಪ್ರದೇಶ(ಬೆಟ್ಟ-ಗುಡ್ಡಗಳ ಪ್ರದೇಶ). ಪ್ರಾಕೃತಿಕವಾಗಿಯೂ ಈ ರೀತಿಯ ಲಕ್ಷಣ ಹೊಂದಿರಬಹುದು.

೧. ಸಾವನದುರ್ಗ

ವಾಡಿ

ವಾಡೆ-ವಾಡ, ವಾಡ-ವಾಡಿ ಆಗಿದೆ. ಆವಾರ ಚಿಕ್ಕಕಾಡು, ಹಾಡಿ, ಊರಿನ ಒಂದು ಭಾಗ, ಹಾಡ್ಯ (ಕುರುಚಲು ಕಾಡಿನ ಪ್ರದೇಶ), ವಾಡಿ ಮತ್ತು ಹಾಡಿಗಳು ಪ್ರಾಚೀನ ಕಾಲದ ವಾಸ್ತವ್ಯ ಸೂಚಿ ನೆಲೆಗಳೆಂದು ಶಂಬಾಜೋಶಿಯವರು ಅಭಿಪ್ರಾಯಪಟ್ಟಿದ್ದಾರೆ. ಬಿಡಾರ, ವಾಸಸ್ಥಳ, ಸೈನ್ಯದ ಬೀಡು, ಧಾನ್ಯ ಬೆಳೆಯುವ ಸ್ಥಳವೆಂದೂ ಅರ್ಥ ನೀಡುತ್ತದೆ.

೧. ಬಾಣಸವಾಡಿ (ನೆಲಮಂಗಲ ತಾ.)

೨. ಬಾಣವಾಡಿ (EC-IX, ಮಾಗಡಿ, ೭೪, ಕ್ರಿ.ಶ.೧೫೪೭)

೩. ಕನಸವಾಡಿ

ಮಂಗಲ

ಬ್ರಾಹ್ಮಣರ ನೆಲೆಯನ್ನು ಸೂಚಿಸುತ್ತದೆ. 'ಅಗ್ರಹಾರ'ಗಳನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ಮಾಡುತ್ತಿದ್ದ ಸಂಪ್ರದಾಯವಿತ್ತು. ನೀರಾವರಿಗೆ ಅನುಕೂಲಕರವಾದ ವ್ಯವಸಾಯ ಭೂಪ್ರದೇಶ, ಪಲ್ಲವರ ಆಡಳಿತ ಕಾಲದಲ್ಲಿ ಬಳಕೆಗೆ ಬಂದ ವಾರ್ಗಿಕವಾಗಿದೆ.

೧. ನೆಲಮಂಗಲ

೨. ಬಿನ್ನಮಂಗಲ (EC-IX, Nl, ೦೩, ಕ್ರಿ.ಶ.೧೧೧೦)

೩. ಜಲ್ಲಿಮಂಗಲ (EC-IX, Bn, ೧೨೩, ಕ್ರಿ.ಶ.೧೪೯೫)

ಸಮುದ್ರ-ಸಂದ್ರ

ಸಾಗರ ಪರ್ಯಾಯ ವಾರ್ಗಿಕ ಜಲವಾಚಿ ಸಂಸ್ಕೃತಪದ ಘಟಕವಾಗಿದೆ. ಎಲ್ಲಾ ಸಂದರ್ಭಗಳಲ್ಲಿಯೂ ವಾಚ್ಯಾರ್ಥದಲ್ಲಿ ಇದರ ಬಳಕೆಯಾಗಿರುವುದಿಲ್ಲ. ಕೆರೆ, ಕುಂಟೆ ಮುಂತಾದವನ್ನೇ ಉತ್ಪ್ರೇಕ್ಷೆ ಮಾಡಿ ಸಮುದ್ರ, ಸಾಗರ ಎಂಬ ಪದಗಳ ಬಳಕೆಯಾಗಿರುವ ಸಾಧ್ಯತೆ ಇದೆ. 'ಸಂದ್ರ' ವಾರ್ಗಿಕವು 'ಸಮುದ್ರ' ಪದಕ್ಕೆ ಸಂವಾದಿಯಾಗಿರುವ ಸಂಕ್ಷಿಪ್ತ ರೂಪವಾಗಿದೆ. The sea, The ocean[೫೭].

೧. ನಾಗಸಂದ್ರ

೨. ರಾಮಸಂದ್ರ (ರಾಮಸಮುದ್ರ) (EC-IX, Bn, ೧೧೧, ಕ್ರಿ.ಶ.೧೩೪೦)

೩. ಮಲ್ಲಸಂದ್ರ

ಇ-ಎ

ಬದ್ಧರೂಪದಲ್ಲಿ ಕಾಣಿಸಿಕೊಳ್ಳುವ ಸ್ಥಳನಾಮಗಳ ಅಂತ್ಯದ ಸ್ಥಳವಾಚಕಗಳ ಮೂಲ ನಿರ್ಧರಿಸುವುದು ಸದ್ಯಕ್ಕೆ ಕಷ್ಟಕರವಾಗಿದೆ. ಆರ್.ಸಿ.ಹಿರೇಮಠರು ಗ್ರಾಮ>ಗಾಮ>ಗಾವೆ>ಗಾವ>ಗಾ>ಗೆ>ಗಿ ಆಗಿದೆಯೆಂದಿದ್ದಾರೆ.[೫೮] ಆದರೆ ಇಂಥ ಸ್ಥಳವಾಚಕ ಹೆಸರುಗಳನ್ನು ಕೆಯ್ (ಕೈ) ನಿಂದ ಸಾಧಿಸಿ ತೋರಿಸಬಹುದಾದ ಸಾಧ್ಯತೆಯನ್ನು ಚಿದಾನಂದ ಮೂರ್ತಿ ಗುರುತಿಸಿ ಪ್ರಶ್ನಿಸಿದ್ದಾರೆ.[೫೯] ಇಂಥ ಸ್ಥಳನಾಮಗಳು ಕುಕ್ಕಲನಾಡಿನ ಪ್ರದೇಶದಲ್ಲೂ ಕಂಡುಬರುತ್ತವೆ.

೧. ಮಾಗಡಿ

೨. ಮಧುರೆ

೩. ಕನ್ನೆಲ್ಲಿ(EC-IX, Bn, ೧೨೨, ಕ್ರಿ.ಶ.೧೪೦೮)

೪. ಮಂಚನಬೆಲೆ

ಸಾಮಾನ್ಯವಾಗಿ ಸ್ಥಳನಾಮಗಳಲ್ಲಿ ಎರಡು ಆಕೃತಿಮಗಳಿರುವುದಾದರೂ ಕೆಲವೊಮ್ಮೆ ಎರಡಕ್ಕಿಂತ ಹೆಚ್ಚು ಆಕೃತಿಮಾಗಳುಳ್ಳ ಅಥವಾ ಒಂದೇ ಆಕೃತಿಮಾ ಸ್ಥಳನಾಮಗಳು ಕಾಣದೊರೆಯುತ್ತವೆ.

ಎರಡು ಅಥವಾ ಎರಡಕ್ಕಿಂತ ಹೆಚ್ಚು ಆಕೃತಿಮಾಗಳುಳ್ಳ ಕೆಲವು ಸ್ಥಳನಾಮಗಳು ಆಯಾ ಸ್ಥಳ ವೈಶಿಷ್ಟ್ಯದ ವಿವರಣಾತ್ಮಕ ಗುಣವನ್ನು ಪಡೆದಿರುವುದರಿಂದ ಅಲ್ಲಿನ ಸಮಸ್ತ ಪದದಲ್ಲಿ ಸಂಬಂಧವಾಚಕ ಮಧ್ಯ ಪ್ರತ್ಯಯಗಳು ಅಪರೂಪವಾಗಿ ನುಸುಳುವುದನ್ನು ಕೆಮ್ತೂರು ರಘುಪತಿಭಟ್ಟರು ಗುರುತಿಸಿದ್ದಾರೆ. ಇಂಥ ಪ್ರತ್ಯಯಗಳು ಸಾಮಾನ್ಯವಾಗಿ ಸಂಬಂಧಕಾರಕ(ಷಷ್ಠಿ ವಿಭಕ್ತಿ ಪ್ರತ್ಯಯ)ವಾಗಿರುತ್ತವೆ.

೧. ತಿಪ್ಪಗೊಂಡ + ನ + ಹಳ್ಳಿ > ತಿಪ್ಪಗೊಂಡನಹಳ್ಳಿ

೨. ದಾಸ + ನ + ಪುರ > ದಾಸನಪುರ

೩. ಸೋಲದೇವ + ನ + ಹಳ್ಳಿ > ಸೋಲದೇವನಹಳ್ಳಿ

೪. ಹುರುಳಿಚಿಕ್ಕ + ನ + ಹಳ್ಳಿ > ಹುರುಳಿಚಿಕ್ಕನಹಳ್ಳಿ

೫. ಬೈಲಕೋನಯ್ಯ + ನ + ಹಳ್ಳಿ > ಬೈಲಕೋನೇನಹಳ್ಳಿ

೬. ವಸಂತ + ನ + ಹಳ್ಳಿ > ವಸಂತನಹಳ್ಳಿ

೭. ಕೆಂಪ ಬಸವಯ್ಯ + ನ + ಹಳ್ಳಿ > ಕೆಂಪಬಸವಯ್ಯನಹಳ್ಳಿ

ಈ ಮೊದಲಾದ ಸ್ಥಳನಾಮಗಳಲ್ಲಿ 'ನ' ಎಂಬುದು 'ಅವನ' ಎಂಬುದರ ರೂಪ. ಷಷ್ಠಿ ವಿಭಕ್ತಿ ಪ್ರತ್ಯಯ. ಹೀಗಾಗಿ ಇಲ್ಲಿ ಅವನಿಗೆ ಸಂಬಂಧಿಸಿದ ಎಂಬರ್ಥವಿದೆ. ಹೀಗೆ ಒಂದೇ ಆಕೃತಿಮಾವುಳ್ಳ (ಕೇವಲ ನಿರ್ದಿಷ್ಟ ಇಲ್ಲವೆ ವಾರ್ಗಿಕ) ಸ್ಥಳನಾಮಗಳು ಸ್ವತಂತ್ರವಾಗಿ ಕಾಣಿಸಿಕೊಳ್ಳುವುದು ಅಪರೂಪ. ಕುಕ್ಕಲನಾಡಿನ ಪ್ರದೇಶದಲ್ಲಿ ಕಂಡುಬರುವ ಒಂದೇ ಆಕೃತಿಮಾದ ಸ್ಥಳನಾಮಗಳೆಂದರೆ

೧. ಮಧುರೆ

೨. ಮಂಠಾಳು

ಸ್ಥಳನಾಮಗಳ ಅಧ್ಯಯನ ಹೆಚ್ಚು ಫಲಪ್ರದವಾಗಬೇಕಾದರೆ ಬಹುಶಾಸ್ತ್ರೀಯ, ವಿಧಾನವನ್ನು ಅನುಸರಿಸಬೇಕಾಗುತ್ತದೆ. ಈ ದಿಶೆಯಲ್ಲಿ ಸ್ಥಳ ಸಮೀಕ್ಷೆ, ಪ್ರಾದೇಶಿಕ ಭಾಷಾ ವ್ಯತ್ಯಾಸ, ಸಾಂಸ್ಕೃತಿಕ, ಸಾಮಾಜಿಕ, ಮಾನವಶಾಸ್ತ್ರದ ಹಿನ್ನೆಲೆ, ಭೂವಿವರ, ಶಾಸನಗಳು, ಜಾನಪದ ಇವೆಲ್ಲವುಗಳ ಸಂಯೋಜಿತ ಅಧ್ಯಯನ ನಡೆಯಬೇಕಾಗಿದೆ. ಇಂಥ ಅಧ್ಯಯನಗಳಿಂದ ಸ್ಥಳನಾಮಗಳ ಅಭ್ಯಾಸ ಹೆಚ್ಚು ಫಲಪ್ರದವಾಗುತ್ತದೆ.

೨.೩. ಭೌಗೋಳಿಕ ಹಿನ್ನೆಲೆ

ಪ್ರತಿಯೊಂದು ಜನಾಂಗದ ಜೀವನವೂ ಆಯಾ ಭೌಗೋಳಿಕ ಪರಿಸರದ ಹಿನ್ನಲೆಗಳಾದ ಬೆಟ್ಟ, ಗುಡ್ಡ, ನದಿ, ತೊರೆ ಮೊದಲಾದ ನೈಸರ್ಗಿಕ ಸಂಪತ್ತನ್ನು ಅವಲಂಬಿಸಿರುತ್ತದೆ. ಆಡಳಿತ ಸೌಕರ್ಯಕ್ಕಾಗಿ ಪ್ರಾದೇಶಿಕ ವಿಭಾಗಗಳನ್ನು ಮಾಡುವಾಗ ಪ್ರಾಚೀನ ಕಾಲದಿಂದ ಇಂದಿನವರೆಗೂ ಈ ನೈಸರ್ಗಿಕ ಅಂಶಗಳನ್ನವಲಂಬಿಸಿರುವುದು ತಿಳಿದುಬರುತ್ತದೆ. ಅಂತೆಯೇ ಭೂಗೋಳ ಮತ್ತು ಇತಿಹಾಸದಲ್ಲಿ ಪ್ರಥಮ ಪ್ರಾಶಸ್ತ್ಯ ಯಾವುದಕ್ಕೆ ಎಂಬ ಪ್ರಶ್ನೆ ಬಂದಾಗ ಕಾಂಟ್ "Geography lies at the basis of history" ಎನ್ನುತ್ತಾನೆ.[೬೦]

ಇತಿಹಾಸ ಪೂರ್ವಕಾಲದಲ್ಲಿ ಮಾನವನ ವಾಸಸ್ಥಾನಕ್ಕೆ ಭೌಗೋಳಿಕ ಅಂಶಗಳು ಮುಖ್ಯ ಕಾರಣಗಳಾಗಿದ್ದವು. ಈ ಕಾಲದಲ್ಲಿ ಮಾನವನು ನದಿ, ತೊರೆ, ಹಳ್ಳಗಳ ಅಕ್ಕಪಕ್ಕದಲ್ಲಿ ಬೆಟ್ಟ, ಗುಡ್ಡ, ಅರಣ್ಯ ಪ್ರದೇಶಗಳಲ್ಲಿ ವಾಸವಾಗಿದ್ದನು. ಇತಿಹಾಸ ಕಾಲದಲ್ಲಿ ಅನೇಕ ರಾಜಮನೆತನಗಳು, ಹುಟ್ಟಿಕೊಂಡು, ಕಾಲ ಕ್ರಮೇಣ ಅಧಿಕಾರಕ್ಕೆ ಬಂದ ಚಕ್ರವರ್ತಿಗಳು ಇಂತಹ ಪ್ರದೇಶದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಇತಿಹಾಸ ಪೂರ್ವ ಹಾಗೂ ಇತಿಹಾಸ ಕಾಲದಲ್ಲಿ ಮಾನವನ ಸಂಸ್ಕೃತಿಯು ಹುಲುಸಾಗಿ ಬೆಳೆದು ಬರಲು ಇಂತಹ ಭೌಗೋಳಿಕ ಅನುಕೂಲತೆಗಳೇ ಕಾರಣವಾದುವು.

ಭೌಗೋಳಿಕತೆಯು ಒಂದು ಪ್ರದೇಶದ ಸಂಸ್ಕೃತಿಯು ಮೈದಾಳುವಲ್ಲಿ ನೇರವಾಗಿ ಕಾರಣವಾಗುತ್ತದೆ. ನಾವು ಅಧ್ಯಯನಕ್ಕಾಗಿ ಆಯ್ದುಕೊಂಡ ಪ್ರದೇಶದ ಮತ್ತು ಪರಿಸರದ ಭೌಗೋಳಿಕ ಹಿನ್ನೆಲೆಯನ್ನು ಅರಿಯುವುದು ಅತ್ಯಂತ ಅವಶ್ಯಕ. ಇಲ್ಲಿ ಕಂಡುಬರುವ ವಾಯುಗುಣ, ಉಷ್ಣಾಂಶ, ಮಳೆ, ಭೌತಿಕ ಲಕ್ಷಣಗಳು, ಪ್ರಾದೇಶಿಕವಾದ ಮೇರೆಗಳು ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ಅರಿಯದಿದ್ದರೆ ಒಂದು ಪ್ರಧಾನವಾದ ನೆಲೆಯನ್ನು ಉಪೇಕ್ಷಿಸಿದಂತಾಗುತ್ತದೆ. ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳು ಹಾಗೂ ಪರಂಪರೆ ಒಂದಕ್ಕೊಂದು ಪೂರಕವಾಗಿರುತ್ತದೆ. ಇವುಗಳ ಪ್ರಭಾವವೇ ಭೌಗೋಳಿಕ ವೈಶಿಷ್ಟ್ಯತೆಯಾಗಿದೆ. ಹೀಗೆ ಒಂದು ನಾಡಿನ (ಕುಕ್ಕಲನಾಡಿನ) ಇತಿಹಾಸದ ಅಧ್ಯಯನಕ್ಕೆ ಒತ್ತುಕೊಡುವ ಮೊದಲು ಇದರ ಮೇಲ್ಮೈ ಲಕ್ಷಣವನ್ನು ಅರಿಯುವುದು ಅಷ್ಟೆ ಅವಶ್ಯಕ.

ಕುಕ್ಕಲನಾಡು ಎಂದು ಗುರ್ತಿಸುವ ಪೂರ್ವಕ್ಕೆ ಪ್ರಾಚೀನ ಕಾಲದ ಸಣ್ಣೆನಾಡು ಅಥವಾ ಮಧ್ಯಕಾಲೀನ ಅವಧಿಯ ಎಲಹಕ್ಕನಾಡು, ಪಶ್ಚಿಮಕ್ಕೆ ಕಿಟಿಲೆ ಮತ್ತು ಮಣ್ಣೆನಾಡುಗಳು, ಉತ್ತರಕ್ಕೆ ಹುಲುಕಡಿನಾಡು, ಕಾಡನೂರು ೭೦, ಪುನ್ನಾಡ ೭೦, ದಕ್ಷಿಣಕ್ಕೆ ಕರಿಕನಾಡು, ಹೊಮ್ಮಳಿಗೆ ನಾಡುಗಳು ಮೇರೆಗಳಾಗಿದ್ದವು. ಇವುಗಳ ಮಧ್ಯೆ ಈ ನಾಡು ತನ್ನದೇ ಆದ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಂಡಿದೆ.

ಕುಕ್ಕಲನಾಡಿನ ಪ್ರದೇಶವು ತನ್ನದೇ ಆದ ವಿಶೇಷ ಭೌಗೋಳಿಕ ಸಂಪತ್ತು ಮತ್ತು ಪ್ರಾಕೃತಿಕ ಸೌಂದರ್ಯ, ಹಿತಕರ ವಾತಾವರಣ, ಹವಾಗುಣವನ್ನು ಹೊಂದಿದೆ. ಈ ನಾಡು ಕರ್ನಾಟಕದಲ್ಲಿ ೧೩° ೧೮' ರಿಂದ ೧೨° ೫೨' ರವರೆಗೆ ಅಕ್ಷಾಂಶ ಮತ್ತು ೭೬° ೧೬' ರಿಂದ ೭೬° ೨೬' ರವರೆಗಿನ ರೇಖಾಂಶಗಳಿಂದ ಕೂಡಿದೆ.[೬೧]

ವಾಯುಗುಣ ಮತ್ತು ಮಳೆ

ಕುಕ್ಕಲನಾಡಿನ ಹವಮಾನವು ಉಷ್ಣಾಂಶ ಮತ್ತು ತೇವಾಂಶದಿಂದ ಕೂಡಿದ್ದು, ನವೆಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳವರೆಗೆ ತಂಪಾದ ಹವೆ ಇರುತ್ತದೆ. ಮಾರ್ಚ್‌ನಿಂದ ಮೇ ತಿಂಗಳಿನವರೆಗೆ ಉಷ್ಣಾಂಶದಿಂದ ಕೂಡಿರುತ್ತದೆ. ಜೂನ್ ತಿಂಗಳಿನಿಂದ ಮಳೆಗಾಲ ಪ್ರಾರಂಭವಾಗಿ ಅಕ್ಟೋಬರ್

ತಿಂಗಳಿನವರೆಗೂ ಇರುತ್ತದೆ. ಈ ಕಾಲದ ಮಳೆಯ ಪ್ರಮಾಣ ೬೩೮.೯ ಮಿ.ಮಿ. ಇಲ್ಲಿನ ವಾರ್ಷಿ ಮಳೆಯ ಪ್ರಮಾಣ ೮೮೮.೫ ಮಿ.ಮಿ. ಹಾಗೂ ಉಷ್ಣತೆ ಚಳಿಗಾಲದಲ್ಲಿ ೧೭.೨°c ರಿಂದ ೨೯.೭°c ಯವರೆಗೆ, ಬೇಸಿಗೆಯಲ್ಲಿ ೧೯°c ಯಿಂದ ೩೨.೭°c ಯವರೆಗೆ, ಮಳೆಗಾಲದಲ್ಲಿ ೧೯.೭°c ಯಿಂದ ೨೭.೫° ಸೆಲ್ಸಿಯಸ್ ಉಷ್ಣಾಂಶದಿಂದ ಕೂಡಿರುತ್ತದೆ.[೨]

ಬೆಟ್ಟಗಳು

ಕುಕ್ಕಲನಾಡಿನ ಸುತ್ತಮುತ್ತಲು ನಂದಿದುರ್ಗ, ಸಾವನದುರ್ಗ, ಶಿವಗಂಗೆ, ದೇವರಾಯನ ದುರ್ಗ, ರಾಯದುರ್ಗ ಬೆಟ್ಟ, ಸಿದ್ದೇಶ್ವರ ಬೆಟ್ಟ, ಮಾಗಡಿ ಬೆಟ್ಟಗಳಿವೆ. ಜೊತೆಗೆ ಇಲ್ಲಿನ ಪರಿಸರದ ಇತರ ಚಿಕ್ಕಚಿಕ್ಕ ಬೆಟ್ಟ ಗುಡ್ಡಗಳು ಇಲ್ಲಿನ ಸೌಂದರ್ಯಕ್ಕೆ ಪ್ರತೀಕವಾಗಿದೆ.

ನಂದಿದುರ್ಗ : ನಂದಿ ಬೆಟ್ಟವು ಕುಕ್ಕಲನಾಡಿನ ಉತ್ತರಕ್ಕಿದೆ. ಇದು ಬೆಂಗಳೂರಿನಿಂದ ೬೦ ಕಿ.ಮೀ. ದೂರದಲ್ಲಿದೆ. ಇದು ಪ್ರಸಿದ್ಧ ಗಿರಿಧಾಮ ಮತ್ತು ಐತಿಹಾಸಿಕ ಸ್ಥಳ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ಕಸಬೆಯಿಂದ ನೈರುತ್ಯಕ್ಕೆ ೮ ಕಿ.ಮೀ. ದೂರದಲ್ಲಿದೆ. ಇದು ಸಮುದ್ರ ಮಟ್ಟದಿಂದ ೧,೪೭೮ ಮೀಟರ್ ಎತ್ತರವಿದೆ. ಇಲ್ಲಿ ಪಾಲಾರ್, ಚಿತ್ರಾವತಿ, ಅರ್ಕಾವತಿ, ಪಾಪಘ್ನಿ, ಉತ್ತರ ಮತ್ತು ದಕ್ಷಿಣ ಪಿನಾಕಿನಿ ನದಿಗಳು ಈ ಬೆಟ್ಟದಿಂದ ಉಗಮಿಸುತ್ತವೆ. ಪಕ್ಕದ ಬೆಟ್ಟಗಳೊಡನೆ ಹೊಂದಿಕೊಂಡಂತೆ ಇರುವ ಪಶ್ಚಿಮ ಭಾಗವನ್ನು ಬಿಟ್ಟು ಇತರೆಡೆ ಬಹು ಕಡಿದಾದ ಪಾರ್ಶ್ವಗಳಿರುವ ಈ ಬೆಟ್ಟ ನೆಲದಿಂದ ಮೇಲೆದ್ದ ಬೃಹತ್ ಬಂಡೆಯಂತೆ ಕಾಣುತ್ತದೆ. ಬೆಟ್ಟದ ಮೇಲೆ ಟಿಪ್ಪುಡ್ರಾಫ್, ಹೈದರ್‌ಡ್ರಾಫ್‌ಗಳಿವೆ(ಟಿಪ್ಪು ಡ್ರಾಫ್-ಟಿಪ್ಪು ಸೆರೆಹಿಡಿದ ಶತ್ರುಗಳನ್ನು ಕೆಳಕ್ಕೆ ತಳ್ಳುತ್ತಿದ್ದ ಎಂದು ಹೇಳುವ ಸ್ಥಳ). ದುರ್ಗದ ವಾಯವ್ಯದಲ್ಲಿ ಬಸವನ ಕಣಿವೆ ಇದೆ. ಇಲ್ಲಿ ಒಂದು ದೊಡ್ಡ ಬಸವನ ವಿಗ್ರಹವಿದೆ. ಬೆಟ್ಟದ ಮೇಲೆ ಬಂದಾಗ ಮೊದಲು ಕಾಣಸಿಗುವುದು ಅಮೃತ ಸರೋವರವೆಂಬ ಕೊಳ. ಇದು ಚೌಚೌಕಾರವಾಗಿದೆ. ಇಲ್ಲಿ ಊಟೆಯೊಂದು ಇರುವ ಕಾರಣ ಇಲ್ಲಿ ಸದಾ ನಿರು ಇರುವುದು. ಇಲ್ಲಿ ಅಂತರಗಂಗೆ-ಪಾತಾಳಗಂಗೆ ಎಂಬ ಇನ್ನೆರಡು ಕೊಳಗಳು ಇವೆ. ಇಲ್ಲಿನ ಚಬೂತರ ಎಂಬ ಕಟ್ಟೆಯನ್ನು ಟಿಪ್ಪು ಪ್ರಾರ್ಥನೆ ಮಾಡಲು ಉಪಯೋಗಿಸುತ್ತಿದ್ದನಂತೆ, ಅನತಿ ದೂರದಲ್ಲಿ ಟಿಪ್ಪು ತಂಗುತ್ತಿದ್ದನೆನ್ನಲಾದ 'ಟಿಪ್ಪು ಲಾಡ್ಜ್' ಇದೆ. ಅಲ್ಲದೆ ಸುತ್ತ-ಮುತ್ತಲಿನಲ್ಲಿ ಪ್ರಾಚೀನ ಕಾಲದ ಕೋಟೆ-ಕೊತ್ತಲಗಳ ಅವಶೇಷಗಳಿವೆ.

ಬೆಟ್ಟದ ಮೇಲೆ ಯೋಗನಂದೀಶ್ವರ ದೇವಾಲಯವಿದೆ. ಇಲ್ಲಿ ಶಿವನು ಯೋಗ ದೀಕ್ಷೆಯಲ್ಲಿರುವುದರಿಂದ ಉತ್ಸವಗಳು ನಡೆಯುವುದಿಲ್ಲ. ಉತ್ಸವ ಮೂರ್ತಿಯು ಇಲ್ಲ. ಗರ್ಭಗುಡಿ, ಸುಕನಾಸಿ, ನವರಂಗ ಮತ್ತು ಕಲ್ಯಾಣ ಮಂಟಪಗಳನ್ನೊಳಗೊಂಡ ಈ ದೇವಾಲಯವನ್ನು ಚೋಳರ ಕಾಲದಲ್ಲಿ ಕಟ್ಟಲಾಯಿತೆಂದು ಹೇಳುತ್ತಾರಾದರೂ ಇದಕ್ಕೆ ಸಾಕಷ್ಟು ಆಧಾರಗಳಿಲ್ಲ. ಸುಕನಾಸಿಯ ಬಾಗಿಲುವಾಡದಲ್ಲಿ

ಅನೇಕ ಚಿತ್ರಗಳನ್ನು ಕೆತ್ತಿದೆ. ಎರಡು ಪಕ್ಕೆಲಗಳಲ್ಲಿ ೫ ಅಡಿ ಎತ್ತರದ ಲೋಹದ ದ್ವಾರಪಾಲಕರ ವಿಗ್ರಹಗಳಿವೆ. ಇವು ವಿಜಯನಗರದ ಕೃಷ್ಣದೇವರಾಯನ ಕಾಣಿಕೆ. ನವರಂಗದ ಉತ್ತರದ ಬಾಗಿಲಿನ ಮುಂದೆ ಕಲ್ಯಾಣ ಮಂಟಪ, ಸುಕನಾಸಿಯ, ದಕ್ಷಿಣಕ್ಕೆ ಇನ್ನೊಂದು ಮಂಟಪವಿದೆ. ಇದರಲ್ಲಿ ಲಿಂಗೋದ್ಭವ ಮೂರ್ತಿ, ಗಜಸಂಹಾರ ಮೂರ್ತಿ, ದುರ್ಗ, ಮಹಿಷಾಸುರ ಮರ್ದಿನಿ, ನಾಟ್ಯಗಣಪತಿ ಮುಂತಾದ ವಿಗ್ರಹಗಳಿವೆ. ಸಮ ಪ್ರಮಾಣದ ಆಕರ್ಷಕ ಮೂರ್ತಿಗಳಿವು. ಇಲ್ಲಿನ ದೇವಿಯ ಗುಡಿಯಲ್ಲಿ ಕಾಣುವುದು ಮುಕ್ತಾಂಬೆಯ ವಿಗ್ರಹ. ಈ ಬೆಟ್ಟದ ಮೇಲೆ ತಪಸ್ಸು ಮಾಡಿ ಮುಕ್ತಿ ಪಡೆದಳಾದ ಕಾರಣ ಈ ಹೆಸರು ಎಂಬುದು ಸಾಂಪ್ರದಾಯಿಕ ಕಥೆ.

ನಂದಿದುರ್ಗ ಗಂಗರ ಕಾಲದಿಂದಲೂ ಪ್ರಸಿದ್ಧವಾಗಿದೆ. ಗಂಗರನ್ನು ಶಾಸನಗಳಲ್ಲಿ ನಂದಗಿರಿ ನಾಥರೆಂದೇ ಕರೆಯಲಾಗಿದೆ. ಆದರೆ ಆ ಕಾಲದ ಅವರ ಶಾಸನಗಳಾವುವು ಇಲ್ಲಿ ಸಿಕ್ಕಿಲ್ಲದಿರುವುದು ಆಶ್ಚರ್ಯಕರ. ನಂದಿಗ್ರಾಮದಲ್ಲಿ ದೊರೆತ ತಾಮ್ರಶಾಸನದಲ್ಲಿ ನಂದಗಿರಿಯಲ್ಲಿಯ ಮಠದ ಸ್ಥಾನಾಧಿಪತಿ ಯಾದ ಕಾಳಾಮುಖಿಗುರು ಈಶ್ವರದಾಸ ದಾನವನ್ನು ಸ್ವೀಕರಿಸಿದನೆಂದಿದೆ. ಆದ್ದರಿಂದ ಕಾಳಮುಖರಿಗೆ ಇದು ಪವಿತ್ರವಾದ ಸ್ಥಳವಾಗಿತ್ತೆನ್ನಬಹುದು. ಜೈನ ಮತಾವಲಂಬಿಗಳಾದ ಗಂಗರ ಕಾಲದಲ್ಲು ಇದು ಆನಂದಗಿರಿ ಎನಿಸಿಕೊಂಡಿತ್ತೆಂದೂ, ವೃಷಭ ತೀರ್ಥಕರರ ಹೆಸರಿನಿಂದ 'ವೃಷಭ ಪರ್ವತ' ಎಂಬ ಹೆಸರನ್ನು ಪಡೆದಿತ್ತೆಂದೂ ಪ್ರತೀತಿಗಳಿವೆ. ಸ್ಥಳಪುರಾಣಗಳಲ್ಲಿ ಈ ಪರ್ವತವನ್ನು ಶೃಂಗೀ ಪರ್ವತ, ಕೂಷ್ಮಾಂಡ ಪರ್ವತವೆಂದು ಕರೆಯಲಾಗಿದೆ. ಕೂಷ್ಮಾಂಡ ಋಷಿ ಇಲ್ಲಿ ನೆಲೆಸಿದ್ದು ಶಿವನನ್ನು ಪೂಜಿಸುತ್ತಿದ್ದನೆಂಬ ನಂಬಿಕೆ ಇಲ್ಲಿ ಪ್ರಚಲಿತದಲ್ಲಿದೆ. ಯೋಗ ನಂದೀಶ್ವರ ದೇವಾಲಯದಲ್ಲಿರುವ ಹಲವಾರು ವಿಗ್ರಹಗಳಲ್ಲಿ ಒಂದನ್ನು ಕೂಷ್ಮಾಂಡ ಋಷಿಯೆಂದು ತೋರಿಸಿ ಹೇಳುತ್ತಾರೆ.[೬೩]

ನಂದಿದುರ್ಗದ ಕೋಟೆಯನ್ನು ಚಿಕ್ಕ ಬಳ್ಳಾಪುರದ ಪಾಳೆಯಗಾರನಾಗಿದ್ದ ಚಿಕ್ಕ ಬೈರೇಗೌಡನ ಮಗ ಮರಿಗೌಡ ಕಟ್ಟಿಸಿದ. ಶಿವಾಜಿಯ ಮಗ ಸಾಂಬಾಜಿಯ ಆಳ್ವಿಕೆಯಲ್ಲಿ ರಘುನಾಥ ಪಾಂಡೆಯ ಅಣತಿಯಂತೆ ಬಾಲ್ಕದ ಕೃಷ್ಣ ದುರ್ಗದ ಮೇಲ್ವಿಚಾರಣೆ ವಹಿಸಿಕೊಂಡ. ಟಿಪ್ಪು ಸುಲ್ತಾನ ಇಲ್ಲಿನ ಕೋಟೆ ಕೊತ್ತಲುಗಳನ್ನು ಮತ್ತಷ್ಟು ಬಲ ಪಡಿಸಿದ. ೧೭೯೧ರಲ್ಲಿ ಈ ದುರ್ಗವನ್ನು ಬ್ರಿಟೀಷರು ಆಕ್ರಮಿಸಿದರು. ಇದರ ನೆನಪಿಗಾಗಿ ಎಂಬಂತೆ, ಕೋಟೆಯನ್ನು ಆಕ್ರಮಿಸಲು ಅವರು ಸಾಧಿಸಿದ ಒಂದು ಬಿರುಕಿನ ಬಳಿ ೧೦ನೇ ಅಕ್ಟೋಬರ್ ೧೭೯೧ BREACH ಎಂದು ಬರೆಯಲಾಗಿದೆ. ಕೋಟೆಯ ಒಳಗಡೆ ಕುದರೆಯ ಲಾಯಗಳ, ಮದ್ದುಗುಂಡುಗಳ ಉಗ್ರಾಣಗಳಿವೆ.

ತಂಪುಹವೆ, ಸುತ್ತಲ ಅರಣ್ಯಭರಿತ ಸುಂದರ ಪ್ರಕೃತಿ, ಚಾರಿತ್ರಿಕ ಸ್ಮಾರಕಗಳಿಂದ ನಂದಿದುರ್ಗ ಶೋಭಿಸುತ್ತವೆ. ವರ್ಷಪೂರ್ತಿ ಇಲ್ಲಿನ ಹವೆ, ಹಿತಕರವಾಗಿರುತ್ತದೆ. ಈ ಬೆಟ್ಟದ ಮೇಲಿನ ಉಷ್ಣಾಂಶ

ಸು.೫೫೦ ಮೀಟರ್ ಕೆಳಗಿರುವ ಸುತ್ತಲ ಬಯಲು ಪ್ರದೇಶಕ್ಕಿಂತ ಯಾವಾಗಲೂ ಸು.೧೦° ಸೆಂ. ನಷ್ಟು ಕಡಿಮೆ ಇರುತ್ತದೆ. ಇಲ್ಲಿನ ಅತಿ ಗರಿಷ್ಠ ಮತ್ತು ಕನಿಷ್ಠ ಉಷ್ಣಾಂಶ ಕ್ರಮವಾಗಿ ಬೇಸಿಗೆಯಲ್ಲಿ ೨೯° ಸೆಂ.-೨೩° ಸೆಂ. ಮತ್ತು ಚಳಿಗಾಲದಲ್ಲಿ ೨೧° ಸೆಂ.-೧೧° ಸೆಂ. ಅನೇಕ ಬಗೆಯ ಅರಣ್ಯ ಉತ್ಪನ್ನಗಳು ಈ ಬೆಟ್ಟದಲ್ಲಿ ಸಿಗುತ್ತವೆ. ಇದು ಒಂದು ಪ್ರವಾಸಿ ತಾಣವು ಹೌದು.

ಸಾವನದುರ್ಗ : ಸಾವನದುರ್ಗ ಮಾಗಡಿ ಇಂದ ಆಗ್ನೇಯಕ್ಕೆ ೧೨ ಕಿ.ಮೀ. ದೂರದಲ್ಲಿರುವ ಇತಿಹಾಸ ಪ್ರಸಿದ್ಧ ಸ್ಥಳ ಹಾಗೂ ಬೆಟ್ಟ. ಈ ಬೆಟ್ಟಕ್ಕೆ ಮಾಗಡಿ ಬೆಟ್ಟವೆಂದೂ, ಕೃಷ್ಣರಾಜಗಿರಿ ಎಂದೂ ಹೆಸರುಗಳಿವೆ. ಹೊಯ್ಸಳರ ಕಾಲದಲ್ಲಿ ಇದೊಂದು ಪ್ರಸಿದ್ಧ ಸ್ಥಳವಾಗಿತ್ತು, ಆಗ ಇದನ್ನು ಸಾಮಂತದುರ್ಗವೆಂದು ಕರೆಯುತ್ತಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. ಕ್ರಿ.ಶ.೧೧೫೦ರ ವೇಳೆಗೆ ಸಾವನದುರ್ಗಕ್ಕೆ ಪಶ್ಚಿಮದಲ್ಲಿ ಒಂದು ನಗರವಿದ್ದುದರ ಬಗೆಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ಅಚ್ಯುತ ದೇವರಾಯನ ಕಾಲದಲ್ಲಿ (೧೫೪೩ರಲ್ಲಿ) ಸಾಮಂತರಾಯನೆಂಬ ಸಾಮಂತ ಮಾಗಡಿ ಪ್ರಾಂತ್ಯವನ್ನು ಆಳುತ್ತಿದ್ದು ಅವನ ಹೆಸರಿನಲ್ಲಿ ಈ ದುರ್ಗಕ್ಕೆ ಸಾಮಂತದುರ್ಗವೆಂಬ ಹೆಸರು ಬಂದಂತೆ ತಿಳಿಯುತ್ತದೆ. ಬೆಟ್ಟದ ತಪ್ಪಲಿನಲ್ಲಿ ವೀರಭದ್ರ ಮತ್ತು ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯಗಳಿವೆ. ವೀರಭದ್ರದೇವಾಲಯ ದ್ರಾವಿಡ ಸಂಪ್ರದಾಯಕ್ಕೆ ಸೇರಿದ ವಿಶಾಲವಾದ ಕಟ್ಟಡವಾಗಿದ್ದು, ಪೂರ್ವಾಭಿಮುಖವಾಗಿದೆ. ನರಸಿಂಹಸ್ವಾಮಿ ದೇವಾಲಯ ಪ್ರಾಚೀನವಾದುದು. ಇದರಲ್ಲಿರುವ ವಿಗ್ರಹವನ್ನು ಹುಟ್ಟುಬಂಡೆಯಲ್ಲಿ ಕೆತ್ತಲಾಗಿದೆ. ಸಾವನ ದುರ್ಗದ ಬಳಿ ಬೃಹತ್ ಶಿಲಾಸಂಸ್ಕೃತಿಯ ಸಮಾಧಿಗಳಿವೆ. ಸಾವನದುರ್ಗ ಪ್ರದೇಶವು ಹಚ್ಚಹಸಿರಿನಿಂದ ಕೂಡಿದೆ, ಸಾವನ ದುರ್ಗಬೆಟ್ಟದಲ್ಲಿ ಎರಡು ಬೆಟ್ಟಗಳಿದ್ದು, ಒಂದನ್ನು ಬಿಳಿ ಬಿಟ್ಟವೆಂದೂ, ಇನ್ನೊಂದನ್ನು ಕರಿಬೆಟ್ಟವೆಂದೂ ಕರೆಯುತ್ತಾರೆ. ಇವುಗಳ ಜೊತೆಗೆ ಆ ಪ್ರದೇಶದ ಸುತ್ತಮುತ್ತಲಿನ ಅಲ್ಲಲ್ಲಿ ಚಿಕ್ಕ ಚಿಕ್ಕ ಬೆಟ್ಟ ಗುಡ್ಡಗಳು. ಅಲ್ಲಿನ ಸಾಂಸ್ಕೃತಿಕ ಪರಿಸರದ ಅಧ್ಯಯನಕ್ಕೆ ಹೆಚ್ಚಿನ ಸಹಕಾರಿಯಾಗಿವೆ.

ನದಿ, ಕೆರೆ, ಕಟ್ಟೆಗಳು : ಕುಕ್ಕಲನಾಡಿನ ಪ್ರದೇಶದ ಪೂರ್ವಕ್ಕೆ ನಂದಿದುರ್ಗದಲ್ಲಿ ಹುಟ್ಟುವ ಕಾವೇರಿಯ ಉಪನದಿ ಅರ್ಕಾವತಿ ನದಿಯೂ ಈ ನಾಡಿನಲ್ಲಿ ಹರಿದು ಕೃಷಿ ಮತ್ತು ಕುಡಿಯುವ ನೀರಿಗೆ ಸಹಾಯಕವಾಗಿದೆ. ಜೊತೆಗೆ ಹೆಸರುಘಟ್ಟ ಕೆರೆ, ತಿಪ್ಪಗೊಂಡನಹಳ್ಳಿ ಜಲಾಶಯ, ಮಂಚನಬೆಲೆ ಜಲಾಶಯಗಳು, ಮಧುರೆಕೆರೆ, ಬಾಣವಾಡಿ ಕೆರೆ, ತಾವರೆಕೆರೆ, ಕಿತ್ತನೆಲ್ಲಿ, ಬೈಲಕೋನೇನಹಳ್ಳಿ ಕೆರೆಗಳು ಮುಂತಾದ ಚಿಕ್ಕ, ಚಿಕ್ಕ ಕೆರೆ, ಕಟ್ಟೆ, ಹಳ್ಳ, ಕೊಳ್ಳಗಳು ಕೃಷಿ (ನೀರಾವರಿ)ಗೆ ಮತ್ತು ಕುಡಿಯುವ ನೀರಿಗೆ ಇಂದಿಗೂ ಜೀವನಾಧಾರವಾಗಿವೆ.

ವ್ಯವಸಾಯ : ಈ ನಾಡಿನ ಪರಿಸರ ಸುತ್ತ-ಮುತ್ತ ಕೆಂಪುಮಣ್ಣು, ಕಪ್ಪುಮಣ್ಣು, ಮರಳುಮಣ್ಣು ಎಂಬ ಮೂರುವಿಧಗಳಿಂದ ಕೂಡಿದೆ. ಇಲ್ಲಿನ ಜನರ ಮುಖ್ಯ ಕಸುಬು ವ್ಯವಸಾಯ. ಈ ಭೂಪ್ರದೇಶವು

ಪರಿಳಿತಗಳಿಂದ ಕೂಡಿದ್ದು, ಹಿಂಗಾರು ಮತ್ತು ಮುಂಗಾರು ಮಳೆಗಳು ಚೆನ್ನಾಗಿ ಬೀಳುತ್ತವೆ. ಈ ಪ್ರದೇಶದಲ್ಲಿ ರಾಗಿ, ಭತ್ತ, ಜೋಳ, ಕಡ್ಲೆಕಾಯಿ, ತೆಂಗು, ಸಪೋಟ, ದ್ರಾಕ್ಷಿ, ಬಾಳೆಹಣ್ಣು ಮತ್ತು ಮಾವು ಬೆಳೆಯುತ್ತಾರೆ. ಹೆಚ್ಚಿನ ಬೆಳೆಗಳಿಗೆ ಮಳೆಯೇ ಆಧಾರ. ಚಿಕ್ಕ-ಪುಟ್ಟ ಕೆರೆಗಳು, ಬಾವಿಗಳು, ಕೊಳವೆ ಬಾವಿಗಳ ಮೂಲಕ ನೀರನ್ನು ಬಳಸಿಕೊಳ್ಳುತ್ತಾರೆ ಇವು ಇಲ್ಲಿನ ಜನ ಸಮುದಾಯಗಳಿಗೆ ವರದಾನವಾಗಿವೆ.

ಪ್ರಾಣಿ ಸಂಪತ್ತು ಮತ್ತು ಅರಣ್ಯ ಸಂಪತ್ತು: ಈ ಪ್ರದೇಶದ ಕಾಡು-ಅರಣ್ಯಗಳಲ್ಲಿ ಕೋತಿಗಳು (ಮಂಗಗಳು), ಕಾಡೆಮ್ಮೆ, ಆನೆ, ಜಿಂಕೆ, ಕರಡಿ, ಉರಗಗಳು, ಬಾವಲಿಗಳು, ಚಿಗರೆಗಳು ಕಂಡುಬರುತ್ತವೆ. ಜೊತೆಗೆ ಅನೇಕ ಬಗೆಯ ಪಕ್ಷಿಗಳೂ ಕಂಡುಬರುತ್ತವೆ. ಇಲ್ಲಿನ ಜನರು ವಾಣಿಜ್ಯ ಉದ್ದೇಶಕ್ಕಾಗಿ ಕೋಳಿ ಸಾಕಾಣಿಕೆ, ಹಂದಿ ಸಾಕಾಣೆ, ಮೊಲಸಾಕಾಣೆ, ಮೀನು ಸಾಕಾಣೆ ಮಾಡುತ್ತಾರೆ.

ಈ ಪ್ರದೇಶದ ಕಾಡುಗಳಲ್ಲಿ-ಅರಣ್ಯಗಳಲ್ಲಿ ಹೆಚ್ಚಾಗಿ ಗಂಧದ ಮರಗಳು, ಆಲದ ಮರಗಳು, ಹಲಸು, ಅರಳಿ, ಬೇವು, ನೇರಳೆ ಮರಗಳು, ಸೀತಾಫಲದ ಗಿಡಗಳು ಕಂಡುಬರುತ್ತದೆ. ಹಾಗೆಯೇ ನೀಲಗಿರಿ, ತೇಗ, ಬೀಟೆ ಹೀಗೆ ಅನೇಕ ಬಗೆಯ ಔಷಧೀಯ ಸಸ್ಯಗಳು, ಕುರುಚಲು ಗಿಡಗಳು ಇವೆ.

ಖನಿಜ ಸಂಪತ್ತು : ಕುಕ್ಕಲನಾಡಿನ ಪ್ರದೇಶದಲ್ಲಿ ಸಾಕಷ್ಟು ಖನಿಜ ನಿಕ್ಷೇಪಗಳಿವೆ. ಪಾವನದುರ್ಗದ ಸುತ್ತ-ಮುತ್ತಲಿನ ಪ್ರದೇಶಗಳು ಗ್ರಾನೈಟ್ ಶಿಲೆಗಳಿಗೆ ಹೆಸರಾಗಿದ್ದು, ಶಿಲಾ ರಚನೆಗಳು ಭಿನ್ನವಾಗಿದೆ. ಅಲ್ಲಲ್ಲಿ ತಿಳಿಬೂದು ಬಣ್ಣದ ಶೀಲೆಗಳಿಂದ ಹಾಗೂ ವಿವಿಧ ರಂಗಿನ ಶಿಲಾ ಸಮುದಾಯಗಳನ್ನು ಕಾಣಬಹುದು. ಗೊಲ್ಲಳ್ಳಿ, ತೋಟಗೆರೆ ಪ್ರದೇಶದಲ್ಲಿ ಚೈನಾಕ್ಲೇ ನಿಕ್ಷೇಪ ದೊರೆಯುತ್ತದೆ. ನೆಲಮಂಗಲ, ಕಿತ್ತನೆಲ್ಲಿ, ಬೈಲಕೋನೇನಹಳ್ಳಿ, ಬಾಣವಾಡಿ, ಮಾಗಡಿ ಪ್ರದೇಶದಲ್ಲಿ ಕೋಡುಗಲ್ಲುಗಳು ದೊರೆಯುತ್ತವೆ. ಈ ಕುಕ್ಕಲನಾಡಿನ ಪ್ರದೇಶದ ಹಳ್ಳಿಗಳಲ್ಲಿ ಅನೇಕ ಬಗೆಯ ಕಲ್ಲುಗಳು ಪತ್ತೆಯಾಗಿವೆ.

೨.೪. ಐತಿಹಾಸಿಕ ಹಿನ್ನೆಲೆ

ಪ್ರಾಗಿತಿಹಾಸ

ಬಹುಪ್ರಾಚೀನ ಕಾಲದಲ್ಲಿದ್ದ ಜನ ಬಹುಮಟ್ಟಿಗೆ ನಿಸರ್ಗಾವಲಂಬಿಗಳಾಗಿ ಪ್ರಾಣಿಗಳನ್ನು ಬೇಟೆಯಾಡಿಕೊಂಡು ಅಲೆಮಾರಿಗಳಾಗಿ ಜೀವನ ಸಾಗಿಸುತ್ತಿದ್ದರು. ಈ ರೀತಿಯಲ್ಲಿ ಸಹಸ್ರಾರು ವರ್ಷಗಳು ಕಳೆದ ಮೇಲೆ ಅವರು ವ್ಯವಸಾಯ ಮತ್ತು ಪಶುಪಾಲನೆಗಳ ಮೂಲಕ ಆಹಾರ ಉತ್ಪಾದನೆಯಲ್ಲಿ ತೊಡಗಿ, ಗ್ರಾಮಗಳನ್ನು ಸ್ಥಾಪಿಸಿಕೊಂಡು ಒಂದೆಡೆ ನೆಲೆ ನಿಲ್ಲುವಂತಾದರು. ಕಾಲಕ್ರಮೇಣ ಇಂದು ನಾಗರಿಕತೆಯ ಭಾಗವಾ ಕಂಡುಬರುವ ಅನೇಕ ಸಾಂಸ್ಕೃತಿಕ ಅಂಶಗಳು ರೂಢಿಗೆ ಬರಲಾರಂಭವಾದುವು. ಈ ಸಾಂಸ್ಕೃತಿಕ ವಿಕಸನದಲ್ಲಿ ಬರವಣಿಗೆಯ ಕಲೆಯ ಆವಿಷ್ಕಾರ ಒಂದು ಮುಖ್ಯ ಘಟ್ಟ. ಯಾವುದೇ

ದೇಶದ ಇತಿಹಾಸದಲ್ಲಿ ಸುಮಾರು ಆ ಘಟ್ಟದಾರಭ್ಯ ಐತಿಹಾಸಿಕ ಆಗು-ಹೋಗುಗಳನ್ನು ತಿಳಿಯಲು ಲಿಖಿತ ದಾಖಲೆಗಳು ದೊರೆಯಲಾರಂಭಿಸುತ್ತವೆ. ಯಾವ ಕಾಲದಿಂದ ಈ ರೀತಿಯ ದಾಖಲೆಗಳು ದೊರಕಲಾರಂಭವಾಗುತ್ತವೆಯೋ ಅಂದಿನಿಂದ ಈಚಿನ ಕಾಲವನ್ನು ಐತಿಹಾಸಿಕಯುಗವೆಂದು ಅದಕ್ಕೆ ಹಿಂದಿನ ಕಾಲವನ್ನು ಪ್ರಾಗೈತಿಹಾಸಿಕಯುಗವೆಂದೂ ವಿಂಗಡಿಸಿಕೊಳ್ಳುವುದು ರೂಢಿ. ಅಂದರೆ, ಪ್ರಾಚೀನ ಮಾನವನ ಆಗು ಹೋಗುಗಳ ಪುನಾರಚನೆಗೆ ಲಿಖಿತ ಆಧಾರವನ್ನು ಮಾತ್ರ ಅವಲಂಬಿಸಿ ಯಾವ ಕಾಲದ ವಸ್ತುಸ್ಥಿತಿಗಳನ್ನು ತಿಳಿಯಬೇಕಾಗುತ್ತದೋ ಅದನ್ನು ಪ್ರಾಗೈತಿಹಾಸಿಕಯುಗವೆಂದು ಕರೆಯಬಹುದು. ಆ ಯುಗದ ಅಧ್ಯಯನವೇ ಪ್ರಾಗಿತಿಹಾಸ.[೬೪]

ಯಾವುದೇ ಒಂದು ಪ್ರದೇಶದ ಸಂಸ್ಕೃತಿ, ಅನಾದಿಕಾಲದ ಭೂವಿನ್ಯಾಸ ಮತ್ತು ಜೀವ ವಿನ್ಯಾಸದ ಉದಯದೊಂದಿಗೆ ಪ್ರಾರಂಭವಾಗುತ್ತದೆ. ಡಾರ್ವಿನ್‌ನ 'ವಿಕಾಸವಾದ' ಸಿದ್ಧಾಂತದೊಂದಿಗೆ ಸಂಸ್ಕೃತಿ ತನ್ನ ಬೆಳವಣಿಗೆಯನ್ನು ಕಂಡುಕೊಂಡಿದೆ. ಪ್ರಕೃತಿಯ ಜೀವ ವಿನ್ಯಾಸದೊಂದಿಗೆ ಕುಕ್ಕಲನಾಡಿನ ಪ್ರದೇಶದ ಸಂಸ್ಕೃತಿಯ ಬಗ್ಗೆ ತಿಳಿಯಬಹುದು. ಮಾನವ ಹುಟ್ಟಿನಿಂದಲೂ ಕಾಲದಿಂದ ಕಾಲಕ್ಕೆ ಬದಲಾವಣೆಗಳಿಗೆ ಪ್ರಯತ್ನಿಸುತ್ತಿದ್ದಾನೆ. ಅವನ ಬದುಕಿನ ಅನೇಕ ಗುರುತುಗಳು ದಾಖಲೆಗಳ ಮೂಲಕ ಅರ್ಥೈಸಬಹುದಾಗಿದೆ. ಈ ಪ್ರಜ್ಞೆಯಿಂದ ನಮಗೊಂದು ಇತಿಹಾಸವಿದೆ ಎನ್ನುವ ಅರಿವು ವಿಕಾಸವಾಯಿತು.

ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ಮುಖ್ಯ ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯದು ಅಕ್ಷರ ಜ್ಞಾನವಿಲ್ಲದ ಹಂತ. ಅಥವಾ ಪ್ರಾಗೈತಿಹಾಸ ಅಥವಾ ಪೂರ್ವೇತಿಹಾಸ. ಅಂದರೆ ಮಾನವನು ಅಲೆಮಾರಿತನದಿಂದ ಒಂದು ಕಡೆ ನೆಲೆನಿಂತದ್ದು. ಇದನ್ನು ಪ್ರಾಗೈತಿಹಾಸಿಕ ಕಾಲಘಟ್ಟ ಸಂಸ್ಕೃತಿ ಎಂದು ಗುರುತಿಸಬಹುದು. ಎರಡನೆಯದು ಅಕ್ಷರಜ್ಞಾನವಿದ್ದ ಹಂತ ಅಥವಾ ರಾಜ ಮಹಾರಾಜರ ಕಾಲ ಅಥವಾ ಇತಿಹಾಸ ಕಾಲವೆಂದು ಹೇಳಬಹುದು. ಇವುಗಳಲ್ಲಿ ಪ್ರಾಗೈತಿಹಾಸಿಕ ಕಾಲಮಾನ ಸುದೀರ್ಘವಾಗಿದ್ದು, ಇಂದಿಗೆ ಸುಮಾರು ೫ ಲಕ್ಷ ವರ್ಷಗಳಿಂದ ಕ್ರಿಸ್ತಶಕದ ಆರಂಭದವರೆಗೂ ಅದು ರೂಢಿಯಲ್ಲಿತ್ತೆಂದು ತಿಳಿಯುತ್ತದೆ. ಈ ಕಾಲಮಾನವನ್ನು ಆಗ ನಿತ್ಯ ಬಳಕೆಯಲ್ಲಿದ್ದ ವಸ್ತುವಿನ ಆಧಾರದಿಂದ ಶಿಲಾಯುಗ ಸಂಸ್ಕೃತಿ ಮತ್ತು ಲೋಹಯುಗ ಸಂಸ್ಕೃತಿ ಎಂದು ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ. ಶಿಲಾಯುಗ ಸಂಸ್ಕೃತಿಯ ಹಂತವನ್ನು ಅವಶೇಷ ಹಾಗೂ ಅವುಗಳ ಬೆಳವಣಿಗೆ ಮತ್ತು ಕುಶಲತೆಯನ್ನನುಸರಿಸಿ ಹಳೆಯ ಶಿಲಾಯುಗ ಸಂಸ್ಕೃತಿ, ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ಮತ್ತು ನೂತನ ಶಿಲಾಯುಗ ಸಂಸ್ಕೃತಿ ಎಂದು ವಿಂಗಡಿಸಿದ್ದಾರೆ.[೬೫] ಅಧ್ಯಯನದ ತೀವ್ರತೆ ಹಾಗೂ ಪ್ರತಿಯೊಂದು ಹಂತಗಳಲ್ಲಿ ಬದಲಾವಣೆಗಳನ್ನು ಗುರುತಿಸಿ. ಹೊಸ ಹೊಸ ವಿಷಯಗಳ ಬಗೆಗೆ ತಿಳಿಯಲು ಸಾಧ್ಯವಾಗಿದೆ. ಹಾಗೆಯೇ ಹಳೆಯ ಶಿಲಾಯುಗವನ್ನು ಮೂರು ಉಪಗುಂಪುಗಳಾಗಿ ವಿಭಾಗಿಸಿ, ಆದಿ ಹಳೆಯ ಶಿಲಾಯುಗ

ಸಂಸ್ಕೃತಿ, ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿ ಮತ್ತು ಅಂತ್ಯ ಹಳೆಯ ಶಿಲಾಯುಗ ಸಂಸ್ಕೃತಿ ಎಂದು ವಿಭಾಗಿಸಲಾಗಿದೆ.

ಲೋಹಯುಗ

ಈ ಸಂಸ್ಕೃತಿಯ ಆರಂಭದಲ್ಲಿ ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯೂ ಇದ್ದುದ್ದು ತಿಳಿಯುತ್ತದೆ. ಹಾಗಾಗಿ ಮೊದಲ ಹಂತವನ್ನು ಶಿಲಾ-ತಾಮ್ರಯುಗ ಸಂಸ್ಕೃತಿ ಎಂದು ನಂತರದ ಹಂತದಲ್ಲಿ ಕಬ್ಬಿಣವನ್ನು ಎಲ್ಲಾ ಕಾರ್ಯಗಳಿಗೂ ಬಳಸುವುದರ ಜೊತೆಗೆ ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ರೂಪಿಸಿದ್ದು, ಈ ಹಂತವನ್ನು ಕಬ್ಬಿಣಯುಗದ ಬೃಹತ್ ಶಿಲಾಗೋರಿ ಸಂಸ್ಕೃತಿ ಎಂದು ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ. ಈ ಹಂತಗಳಲ್ಲಿ ಮಾನವನು ನಾಗರಿಕನಾಗಿ ತನ್ನ ಸಂಸ್ಕೃತಿಯನ್ನು ರೂಪಿಸಿಕೊಂಡನು.

ಆದಿ ಹಳೆಯ ಶಿಲಾಯುಗ ಸಂಸ್ಕೃತಿ

ಭಾರತದಲ್ಲಿ ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ೧೮೬೩ರಲ್ಲಿ ಬೆಳಕು ಕಂಡಿವೆ. ಇದೇ ಸಮಯದಲ್ಲಿ ಕರ್ನಾಟಕದ ಮಲಾಪ್ರಭನದಿ ಕೊಳ್ಳದಲ್ಲಿಯೂ ಈ ಸಂಸ್ಕೃತಿಯ ಹಂತವಿದ್ದುದು ತಿಳಿಯುತ್ತದೆ. ದಕ್ಷಿಣ ಕರ್ನಾಟಕದ ಕಿಬ್ಬನಹಳ್ಳಿ, ನಿಟ್ಟೂರು, ಹುಣಸಗಿಗಳಲ್ಲಿ ಈ ನೆಲೆ ಕಂಡುಬಂದಿದೆ. ಈ ಯುಗದ ಉಪಕರಣಗಳೆಂದರೆ ಕೈಗೊಡಲಿ, ಮಚ್ಚುಗತ್ತಿ, ಸೀಳುಗತ್ತಿ, ಹರೆಗತ್ತಿ ಮುಂತಾದವು. ಇವು ಫ್ರಾನ್ಸ್ ದೇಶದ ಸೈಂಟ್ ಅಶ್ಯೂಲ್ ಎಂಬಲ್ಲಿಯ ಉಪಕರಣಗಳನ್ನು ಹೋಲುತ್ತವೆ. ಹಿಡಿಕೆಯ ಭಾಗ ದಪ್ಪವಾಗಿದ್ದು, ಅಲಗಿನ ಭಾಗ ಮೊನಚಾಗಿರುತ್ತದೆ. ಎರಡೂ ಭಾಗಗಳಲ್ಲಿಯೂ ಚಕ್ಕೆಗಳನ್ನು ತೆಗೆದಿದ್ದು ಅಂಜೂರಾ ಕೃತಿಯಲ್ಲಿರುತ್ತವೆ. ಕೆಲವು ಕೈಗೊಡಲಿಗಳು ಅಂಡಾಕಾರ, ಬದಾಮಾಕಾರ, ತ್ರಿಕೋನಕಾರ, ಈಟಿಯ ಮೊನೆಯಾಕಾರ, ಮಾನವನ ಹೃದಯಾಕಾರಗಳಲ್ಲಿಯೂ ಕಂಡುಬಂದಿವೆ. ಕೆಲವು ಅಗಲವಾಗಿದ್ದು, ಕೊಯ್ಯುವ ಅಥವಾ ಕತ್ತರಿಸುವ ಅಂಚುಗಳನ್ನು ಹೊಂದಿರುತ್ತದೆ. ಇವುಗಳಲ್ಲಿನ ಎಲ್ಲಾ ಅಂಶಗಳನ್ನು ವೈಜ್ಞಾನಿಕ ತಂತ್ರಗಳಿಂದ ಪರಿಶೀಲಿಸಿ ಇದರ ಕಾಲವನ್ನು ಇಂದಿಗೆ ಒಂದು ಲಕ್ಷದಿಂದ ನಾಲ್ಕು ಲಕ್ಷ ವರ್ಷಗಳಷ್ಟು ಪೂರ್ವದಲ್ಲಿಯೇ ಇದ್ದಿತೆಂದು ತಿಳಿಯಲಾಗಿದೆ.[೬೭]

ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿ

ಭಾರತದಲ್ಲಿ ಈ ಸಂಸ್ಕೃತಿಯ ಇರುವಿಕೆಯನ್ನು ನಿರ್ದಿಷ್ಟವಾಗಿ ನಿರ್ಧರಿಸಿದಂತೆಯೇ ಕರ್ನಾಟಕದಲ್ಲಿಯೂ ಈ ಹಂತದ ಹಲವು ನೆಲೆಗಳು ಶೋಧಿತವಾಗಿವೆ. ಘಟಪ್ರಭಾ, ಮಲಪ್ರಭಾ, ಕೃಷ್ಣಾನದಿಗಳ ಕೆಳಭಾಗ, ಸುರಪುರ ನದಿ ಸಂಗಮಗಳಲ್ಲಿ ಈ ನೆಲೆಯನ್ನು ಗುರುತಿಸಲಾಗಿದೆ. ಮಂಜರಾ,

ಕಾರಾಂಜಾಕೊಳ್ಳ ಡೋಣಿಹಳ್ಳ, ಮಲೆನಾಡು ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿ ಶಿಂಷಾ, ಪೆನ್ನಾರ್ ನದಿ ಪಾತ್ರದಲ್ಲಿ ಕಂಡುಬಂದಿವೆ. ಉಪಕರಣಗಳ ಜೊತೆಯಲ್ಲಿ ಹಲವು ಪ್ರಾಣಿಗಳ ಪಳೆಯುಳಿಕೆಗಳು ಕೆಲವು ಕಡೆ ದೊರೆತಿವೆ. ಇವು ಕಾಲನಿರ್ಣಯಕ್ಕೆ ಸಹಾಯಕವಾಗಿವೆ. ಈ ಪ್ರದೇಶಗಳಲ್ಲಿ ಈ ಸಂಸ್ಕೃತಿಯ ಪ್ರಾಚೀನ ಸಂಪ್ರದಾಯದ ಕೈಗೊಡಲಿ, ಮಚ್ಚುಗತ್ತಿ, ಹರೆಗತ್ತಿ, ಕಡಿಗತ್ತಿ, ಮೊದಲಾದ ಉಪಕರಣಗಳು ದೊರೆತಿವೆ. ಇವುಗಳನ್ನು ತಾಂತ್ರಿಕ ನೈಪುಣ್ಯತೆಯಿಂದ ಸಿದ್ಧಪಡಿಸಿರುವುದು ತಿಳಿಯುತ್ತದೆ. ಈ ಸಂಸ್ಕೃತಿಯ ವೈಜ್ಞಾನಿಕ ಕಾಲ ನಿರ್ಣಯವಾದ ರೇಡಿಯೋ ಕಾರ್ಬನ್‌ನ ಅನ್ವಯದಂತೆ ಇಂದಿಗೆ ಸುಮಾರು ೧೦,೦೦೦ ದಿಂದ ೪೦,೦೦೦ ವರ್ಷಗಳಷ್ಟು ಪೂರ್ವದಲ್ಲಿತ್ತೆಂದು ತರ್ಕಿಸಲಾಗಿದೆ.

ಅಂತ್ಯ ಹಳೆಯ ಶಿಲಾಯುಗ

ಹಳೆಯ ಶಿಲಾಯುಗ ಸಂಸ್ಕೃತಿಯ ಕೊನೆಯ ಹಂತವೇ ಅಂತ್ಯ ಹಳೆಯ ಶಿಲಾಯುಗ. ಈ ನೆಲೆಯ ಸಂಸ್ಕೃತಿ ಕರ್ನಾಟಕದಲ್ಲಿ ಮುಖ್ಯವಾಗಿ ಮಾಂಜ್ರಾ, ಕೃಷ್ಣಾ, ತುಂಗಾ, ಶಿಂಷಾ ಹಾಗೂ ಚೆನ್ನಾರ್ ನದಿ ಕೊಳ್ಳಗಳಲ್ಲಿ ಕಂಡುಬರುತ್ತವೆ. ನೇಳ ಅಲುಗುಗಳು ಹರೆಯುವ ವಿವಿಧ ಮಾದರಿಗಳು, ಮೊನೆ ಹೊಂದಿರುವ ಮಾದರಿಗಳು, ಚೂರಿ ತರಹದ ಚಕ್ಕೆ, ಕೊರೆಯುಳಿ, ಕೊರೆಗ ಮಾದಲಾದ ವಿವಿಧ ಮಾದರಿಯು ಈ ಹಂತದ ವೈಶಿಷ್ಟ್ಯ ಉಪಕರಣಗಳಾಗಿವೆ. ಇವುಗಳಲ್ಲದೆ ಎಲುಬು, ದಂತ ಮತ್ತು ಜಿಂಕೆಯ ಕವಲು ಕೊಂಬುಗಳನ್ನು ಉಪಕರಣಗಳಾಗಿ ಬಳಸುತ್ತಿದ್ದುದು ಕಂಡುಬಂದಿದೆ.

ಈ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿ ಇಂಗಾಲ ೧೪ ಪರೀಕ್ಷೆಯಂತೆ ಈ ಹಂತದ ಕಾಲಮಾನವು ಇಂದಿಗೆ ಸು.೧೦,೦೦೦ ವರ್ಷಗಳಿಗೆ ೧೫,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿತೆಂದು ತಿಳಿಯುತ್ತದೆ.[೬೯]

ಸೂಕ್ಷ್ಮಶಿಲಾಯುಗ ಸಂಸ್ಕೃತಿ

ಕರ್ನಾಟಕದಲ್ಲಿ ಸೂಕ್ಷ್ಮ ಶಿಲಾಯುಗದ ನಿವೇಶನಗಳು ೧೯೩೯ರ ವೇಳೆಗೆ ಬೆಳಕಿಗೆ ಬಂದರೂ ಸಹ, ಅಲ್ಲಿ ದೊರೆತ ಉಪಕರಣಗಳ ವೈಜ್ಞಾನಿಕ ಅಧ್ಯಯನ ಪ್ರಾರಂಭವಾದುದು ೧೯೫೦ರ ನಂತರ ಈ ಸಂಸ್ಕೃತಿಯ ನೆಲೆಗಳೆಂದರೆ ಬೆಂಗಳೂರು, ಚಿತ್ರದುರ್ಗ ಜಿಲ್ಲೆ, ಕೃಷ್ಣಾನದಿಪಾತ್ರ, ಬೀದರ ಜಿಲ್ಲೆ, ಮಲೆನಾಡು ಮತ್ತು ಅರೆಮಲೆನಾಡು, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಶಿಂಷಾ ಮತ್ತು ಪೆನ್ನಾರ್ ನದಿಯ ಪಾತ್ರ ಮುಂತಾದ ಪ್ರದೇಶಗಳು.

ಈ ಸಂಸ್ಕೃತಿಯ ನೆಲೆಗಳ ಅಧ್ಯಯನವು ಆಗಿನ ಜನರ ಆಹಾರಪದ್ಧತಿ, ವಸತಿಕ್ರಮ, ಶವಸಂಸ್ಕಾರ ಪದ್ಧತಿ ಮುಂತಾದ ಪ್ರಮುಖ ಅಂಶಗಳ ಬಗೆಗೆ ಮಾಹಿತಿಯನ್ನು ಒದಗಿಸುತ್ತದೆ. ಜೊತೆಗೆ ಆ ಕಾಲದ

ಬಂಡೆಯ ಮೇಲಿನ ವರ್ಣಚಿತ್ರಗಳು ಇವರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಪದ್ಧತಿ ಹಾಗೂ ಈ ನಂಬಿಕೆಗಳ ಬಗೆಗೆ, ಕಲೆಗಾರಿಕೆಯ ಬಗೆಗೆ ತಿಳಿಯುತ್ತದೆ.

ಈ ಸಂಸ್ಕೃತಿಯ ಹಂತವು ಮಾನವನು ಅಲೆಮಾರಿ ಜೀವನದಿಂದ ಒಂದೆಡೆ ನೆಲೆನಿಂತು, ಬೇಟೆ, ಮೀನುಗಾರಿಕೆ, ಆಹಾರ ಸಂಗ್ರಹಣೆಯ ಜೊತೆಗೆ ಆಹಾರ ಉತ್ಪಾದನೆ ಆರಂಭಿಸಿದುದೂ ಆಗಿರುವುದರಿಂದ ಈ ಕಾಲಮಾನವು ಸ್ಥಿತ್ಯಂತರದ ಹಂತವಾಗಿದೆ. ಈ ಸಂಸ್ಕೃತಿಯು ಹಿಂದಿನ ಸಂಸ್ಕೃತಿಗಳ ಕಾಲವ್ಯಾಪ್ತಿಗಿಂತ ತೀರಾ ಕಡಿಮೆಯಿದೆ.

ಈ ಹಂತದ ಉಪಕರಣಗಳೆಂದರೆ ನೀಳಚಕ್ಕೆ, ಹೆರೆಚಕ್ಕೆ, ಮೊನೆಗಳು, ಬಾಣದಮೊನೆ, ಕೊರೆಗ, ಕೊರೆಯುಳಿ, ಅರ್ಧಚಂದ್ರಾಕೃತಿ ದಬ್ಬಳ ಮುಂತಾದವು ವಿವಿಧ ಗಾತ್ರಗಳಲ್ಲಿದ್ದವು. ಈ ಕಾಲದ ವರ್ಣಚಿತ್ರಗಳು ಹಲವು ನೆಲೆಗಳಲ್ಲಿ ಕಂಡುಬಂದಿವೆ.[೨೧]

ಒಟ್ಟಿನಲ್ಲಿ ಈ ವಿವಿಧ ಹಂತಗಳ ಅಧ್ಯಯನದ ಇಣುಕು ನೋಟವು ತಿಳಿಯಪಡಿಸುವಂತೆ ಅಲೆಮಾರಿ ಹಂತದ ಮಾನವನ ಜೀವನ ಕ್ರಮವು ಕಾಲಕ್ರಮೇಣ ಸಹಬಾಳ್ವೆಗೆ ಎಡೆಮಾಡಿಕೊಟ್ಟಿತು. ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಹಂತದಲ್ಲಿ ಜನರು ಪರಸ್ಪರ ತಿಳುವಳಿಕೆಯಿಂದ ವ್ಯವಸ್ಥಿತ ಸಮಾಜವನ್ನು ರೂಪಿಸತೊಡಗಿದರು. ಈ ಸಂಸ್ಕೃತಿಯು ಇಂದಿಗೆ ಸುಮಾರು ೨೫೦೦ ವರ್ಷಗಳಿಂದ ೧೦,೦೦೦ ವರ್ಷಗಳಷ್ಟು ಹಿಂದೆಯೇ ಇತ್ತೆಂದು ತಿಳಿಯುತ್ತದೆ.[೨೨]

ನೂತನ ಶಿಲಾಯುಗ ಸಂಸ್ಕೃತಿ

ಕರ್ನಾಟಕದಲ್ಲಿನ ನೂತನ ಶಿಲಾಯುಗಕ್ಕೆ ಸಂಬಂಧಿಸಿದ ನೆಲೆಗಳೆಂದರೆ ಮೈಸೂರು, ಮಂಡ್ಯ, ಕೃಷ್ಣಾನದಿ, ಮಲಪ್ರಭಾನದಿ ಮತ್ತು ಭೀಮಾನದಿ ಕಣಿವೆಗಳು. 'ತುಂಗಾಭದ್ರಾನದಿಯ ಕೆಳದಂಡೆ' ಹಾಸನ ಜಿಲ್ಲೆ, ಕೋಲಾರಜಿಲ್ಲೆ, ಪೆನ್ನಾರ್ ನದಿಯ ಪಾತ್ರ, ಮಲೆನಾಡು, ಅರೆಮಲೆನಾಡು, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಬೆಂಗಳೂರು ಜಿಲ್ಲೆ ಮುಂತಾದವುಗಳು.

ಈ ನಿವೇಶನಗಳ ಅಧ್ಯಯನದಿಂದ ಕರ್ನಾಟಕದಲ್ಲಿ ಈ ಸಂಸ್ಕೃತಿಯು ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ತಿಳಿಯುತ್ತದೆ. ಇಲ್ಲಿ ಮುಖ್ಯ ಅವಶೇಷಗಳಾದ ಶಿಲೋಪಕರಣಗಳು, ಮಣ್ಣಿನ ಪಾತ್ರೆಗಳು, ಶವಸಂಸ್ಕಾರ ಪದ್ಧತಿ, ಕಲೆಗಾರಿಕೆ ತಿಳಿದುಬರುತ್ತದೆ. ಇಲ್ಲಿನ ಆಯುಧಗಳು ವೈವಿಧ್ಯತೆಯಿಂದ ಕೂಡಿದವುಗಳಾಗಿದ್ದವು. ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಕೆತ್ತುಳಿ, ಉಜ್ಜುಗ ಅಥವಾ ಅರೆಯುವ ಕಲ್ಲು, ಕವಣೆಕಲ್ಲು ವಿವಿಧ ಚಕ್ಕೆಕಲ್ಲುಗಳು ಮತ್ತು ಉಂಗುರಕಲ್ಲು ಮೊದಲಾದವು.

ಇಲ್ಲಿ ಮಣ್ಣಿನ ಮಡಕೆಗಳು, ಮಡಿಕೆಗಳನ್ನು ತಯಾರಿಸುವ ಚಕ್ರ, ಬಟ್ಟಲುಗಳು, ಬೋಗುಣಿ, ಮುಚ್ಚಳ, ಹೂಜಿಗಳು ತಳದಲ್ಲಿ ರಂಧ್ರವುಳ್ಳ ಪಾತ್ರೆಗಳು, ಅಲಂಕಾರಿಕ ಪಾತ್ರೆಗಳು ಕಂಡುಬಂದಿವೆ.

ಇವುಗಳ ಜೊತೆಗೆ ಈ ಸಂಸ್ಕೃತಿಯ ಜನರು ವಾಸ್ತವ್ಯದ ನೆಲೆಗಳನ್ನು ನಿರ್ಮಿಸಿದಕೊಂಡಿದ್ದರು. ಪ್ರಾಣಿಸಾಕಾಣೆ ಕಲೆಯ ಪ್ರದರ್ಶನ, ಧಾರ್ಮಿಕ ನಂಬಿಕೆ, ಶವಸಂಸ್ಕಾರ ಪದ್ಧತಿಗಳನ್ನು ರೂಢಿಸಿಕೊಂಡು ಸುಸಂಸ್ಕೃತ ಜೀವನ ಕ್ರಮವನ್ನು ನಡೆಸಿರುವ ಜನರಾಗಿದ್ದರು. ಇವರ ಕಾಲ ವೈಜ್ಞಾನಿಕ ಅನ್ವಯದಂತೆ

ಮೊದಲ ಹಂತ ಕ್ರಿ.ಪೂ.೨೦೦೦-೧೮೦೦

ಎರಡನೇ ಹಂತ ಕ್ರಿ.ಪೂ.೧೮೦೦-೧೪೦೦

ಮೂರನೇ ಹಂತ ಕ್ರಿ.ಪೂ.೧೪೦೦-೧೦೦೦ ರವರೆಗೆ ಇದ್ದಿತೆಂದು ಬೆಳೆಯಲಾಗಿದೆ.[೨೩]

ಶಿಲಾ-ತಾಮ್ರಯುಗ ಸಂಸ್ಕೃತಿ

ನೂತನ ಶಿಲಾಯುಗ ಸಂಸ್ಕೃತಿಯು ನಂತರ ವಿಕಸನಗೊಂಡ ಹಂತವಿದು. ತಾಮ್ರದ ಅದುರಿನ ಜ್ಞಾನ, ಲೋಹವಾಗಿ ಪರಿವರ್ತನೆ, ನೀಳಚೊಕ್ಕೆಗಳ ಉಪಯೋಗ, ಶಿಲೆಗೆ ಬದಲಾಗಿ ಲೋಹದ ಆಯುಧಗಳ ಬಳಕೆ, ಸುಟ್ಟಮಣ್ಣಿನ ಪಾತ್ರೆಗಳ ಬಳಕೆ, ಸುಧಾರಿಸಿದ ಬೇಸಾಯ ಪದ್ಧತಿ ಮೊದಲಾದ ಮುಖ್ಯ ಲಕ್ಷಣಗಳನ್ನು ಗುರುತಿಸಿಕೊಂಡ ಹಂತವಿದು.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಸುಧಾರಿತ ಮಣ್ಣಿನ ಪಾತ್ರೆಗಳ ಬಳಕೆ. ಅಲ್ಪ ಪ್ರಮಾಣದ ಲೋಹದ ಬಳಕೆ ಜೊತೆಗೆ ಶಿಲೋಪಕರಣಗಳನ್ನು ಬಳಸಿಕೊಂಡಿದ್ದುದು ತಿಳಿಯುತ್ತದೆ. ಭೀಮಾ, ಕೃಷ್ಣಾನದಿಯ ಪಾತ್ರ, ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ಈ ಸಂಸ್ಕೃತಿಯನ್ನು ಗುರುತಿಸಬಹುದು.

ಈ ಸಂಸ್ಕತಿಯಲ್ಲಿಯೂ ಶಿಲೋಪಕರಣಗಳು ಇದ್ದವೆಂದು ತಿಳಿಯುತ್ತದೆ. ಮಡಕೆಯ ಮಾದರಿಯು ವಿಶಿಷ್ಟವಾಗಿದ್ದುದು ತಿಳಿದುಬರುತ್ತದೆ. ವರ್ಣಮಯ ರೇಖಾ ಚಿತ್ರಗಳಿಂದ ಕೂಡಿದ ಪಾತ್ರೆಗಳು ಕಂಡುಬಂದಿವೆ. ಕೆಲವು ಕಡೆ ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ಈ ರೀತಿಯ ಪಾತ್ರೆಗಳನ್ನು ಜೋರ್ವೆ ಮತ್ತು ಸಾವಳದ ಮಡಕೆಯ ಮಾದರಿಗಳೆಂದು ಗುರುತಿಸಲಾಗಿದೆ.

ಶಿಲಾ-ತಾಮ್ರಯುಗದ ಜನರು ಸೌಂದರ್ಯ ಪ್ರಜ್ಞೆಯುಳ್ಳವರಾಗಿದ್ದರೆಂದು, ಮಣ್ಣಿನ ಬೊಂಬೆ, ಅನೇಕ ವರ್ಣಚಿತ್ರಗಳು ರಾಯಚೂರು, ಬಳ್ಳಾರಿ, ಚಿತ್ರದುರ್ಗ ಪ್ರದೇಶದಲ್ಲಿನ ಬಂಡೆಗಳ ಮೇಲಿನ ಚಿತ್ರಗಳಿಂದ ತಿಳಿಯಬಹುದಾಗಿದೆ.

ಈ ಸಂಸ್ಕೃತಿಯ ಕಾಲಮಾನವನ್ನು ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ರೀತಿಯ ಕಾಲಮಾನದಲ್ಲಿ ವಿಂಗಡಿಸಲಾಗಿದೆ. ಅದರಂತೆ ಕೃಷ್ಣಾಮೇಲ್ದಂಡೆಯ ಶಿಲಾ-ತಾಮ್ರಯುಗ ಸಂಸ್ಕೃತಿಯು ಸುಮಾರು ಕ್ರಿ.ಶ.೨೩೦೦-೧೦೦೦ ಎಂದು ತಿಳಿಯಲಾಗಿದೆ. ಭೀಮಾ ಮತ್ತು ಕೃಷ್ಣಾ, ತುಂಗಭದ್ರಾ ಪ್ರದೇಶಕ್ಕೆ ಪ್ರಸರಿಸಿದ ಜೋರ್ವೆ ಮಾದರಿಯ ಕಪ್ಪು ವರ್ಣ ಚಿತ್ರ ತುಮತ್ ಪಾತ್ರೆಗಳುಳ್ಳ ಶಿಲಾ-ತಾಮ್ರಯುಗ ಸಂಸ್ಕೃತಿಯ ಕಾಲಮಾನವು ಸುಮಾರು ಕ್ರಿ.ಪೂ.೧೩೦೦-೮೦೦ ಎಂದು ಗುರುತಿಸಲಾಗಿದೆ.[೨೪]

ಕಬ್ಬಿಣ ಯುಗದ ಬೃಹತ್ ಶಿಲಾಯುಗ ಸಂಸ್ಕೃತಿ

ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಕುತೂಹಲಕರವಾದ ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು 'ಬೃಹತ್ ಶಿಲಾಯುಗ ಸಂಸ್ಕೃತಿ' ಎಂದು ಕರೆಯಲಾಗುತ್ತಿದೆ. ಜೊತೆಗೆ, ಈ ಹಂತದಲ್ಲಿ ಕಬ್ಬಿಣದ ಬಳಕೆಯು ಇದ್ದುದರಿಂದ ಇದು ಕಬ್ಬಿಣಯುಗದ ಬೃಹತ್ ಶಿಲಾಯುಗ ಸಂಸ್ಕೃತಿ ಎಂದೆನಿಸಿಕೊಂಡಿತು. ಇಲ್ಲಿ ಕಲ್ಲುಗೋರಿಗಳನ್ನು ಕಾಣಬಹುದು.

ಕರ್ನಾಟಕದಲ್ಲಿ ಈ ಸಂಸ್ಕೃತಿಯ ನೆಲೆಗಳು ಉತ್ತರ ಕರ್ನಾಟಕದ ಜಿಲ್ಲೆಗಳಾದ ಗದಗ, ಬಳ್ಳಾರಿ, ರಾಯಚೂರು, ಧಾರವಾಡ, ಗುಲ್ಬರ್ಗಾಗಳಲ್ಲಿ, ದಕ್ಷಿಣ ಕರ್ನಾಟಕದ ಬೆಂಗಳೂರು, ಹಾಸನ, ಕೋಲಾರ, ಮೈಸೂರು, ತುಮಕೂರು, ಚಿತ್ರದುರ್ಗಗಳಲ್ಲಿ ಕಂಡುಬಂದಿವೆ.

ಈ ಪ್ರದೇಶದಲ್ಲಿ ಕಲ್ಗೋರಿಯ ವಿವಿಧ ರೂಪಗಳು ಕಂಡುಬಂದಿವೆ.[೭೫]

೧. ಕೋಣೆಕಲ್ಗೋರಿ - ಹಾದಿಕೋಣೆ, ಕಂಟಿಕೋಣೆ, ಆಯಾತಾಕಾರದ ಅಂತರ್ಗತ ಶವಪೆಟ್ಟಿಗೆ.

೨. ಕೋಣೆಯಾಕೃತಿಯಲ್ಲಿಲ್ಲದ ಕಲ್ಗೋರಿ - ಕಲ್ಲುಗುಪ್ಪೆ, ಕುಣಿದಫನ, ಶಿಲಾವೃತ್ತ, ಶವಕುಳಿ, ದಫನ ದಿನ್ನೆ, ಅಸ್ತಿಪಾತ್ರೆ ದಫನ.

೩. ಸಮಾಧಿ ಪ್ರಕ್ರಿಯೆಗೆ ಸಂಬಂಧಪಡದ ನಿಲಸುಗಲ್ಲು ಮುಂತಾದವುಗಳು.

ಕರ್ನಾಟಕದಲ್ಲಿ ಅತಿ ಹೆಚ್ಚು ಸಂಖ್ಯೆಯ ನೆಲೆಗಳು ಈ ಸಾಂಸ್ಕೃತಿಕ ಹಂತಕ್ಕೆ ಸೇರಿದವುಗಳಾಗಿವೆ. ಈ ಸಂಸ್ಕೃತಿಯಲ್ಲಿ ಕಬ್ಬಿಣದ ಜೊತೆಗೆ ಕಪ್ಪು-ಕೆಂಪು ವರ್ಣದ ಮಡಕೆಗಳ ಉಪಯೋಗವಿದ್ದುದು ತಿಳಿಯುತ್ತದೆ.[೭೭]

ಈ ಸಂಸ್ಕೃತಿಯ ಕಾಲಮಾನವು ಉತ್ತರ ಕರ್ನಾಟಕಕ್ಕೆ ಕ್ರಿ.ಪೂ.೧೨೦೦-೧೦೦೦ದ ಸುಮಾರಿಗೆ ಆರಂಭವಾಗಿ ಕ್ರಿ.ಪೂ.೩-೨ನೇ ಶತಮಾನದವರೆಗೆ ಪ್ರವರ್ಧಮಾನದಲ್ಲಿದ್ದಿತ್ತೆಂದು ತಿಳಿಯುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಈ ಸಂಸ್ಕೃತಿಯು ಕ್ರಿ.ಪೂ.೧೨೦೦-೨೫೦೦ರವರೆಗೆ ಇತ್ತೆಂದು ತಿಳಿಯುತ್ತದೆ.[೭೬]

ಇತಿಹಾಸ ಆರಂಭಕಾಲ

ಮಾನವನು ಜೀವನದ ಸಂಸ್ಕೃತಿಗಳ ಹಂತದಿಂದ ಲಿಪಿಯು ಬಳಕೆಗೆ ಬಂದ ಹಂತವನ್ನು ಇತಿಹಾಸ ಆರಂಭಕಾಲವೆಂದು ಗುರುತಿಸಬಹುದಾಗಿದೆ. ಕರ್ನಾಟಕದಲ್ಲಿ ದೊರೆತಿರುವ ಶಿಲಾಲಿಪಿಗಳು ಹಾಗೂ ವಸ್ತುಗಳ ಅವಶೇಷಗಳು, ನಾಣ್ಯಗಳು, ಶಿಲ್ಪಗಳು, ವಾಸ್ತುಶೈಲಿ, ಶಾಸನಗಳು ಇಲ್ಲಿ, ಈ ಸಂಸ್ಕೃತಿಯ ಇರುವಿಕೆಯನ್ನು ದೃಢಪಡಿಸಿವೆ.

ಕರ್ನಾಟಕದ ಸ್ಥಳಗಳಾದ ಬ್ರಹ್ಮಗಿರಿ, ಚಂದ್ರವಳ್ಳಿ, ಮಸ್ಕಿ, ಪಿಕ್ಲಿಹಾಳ, ಸಂಗನಕಲ್ಲು, ಬನವಾಸಿ, ಟಿ.ನರಸೀಪುರ, ಬನಹಳ್ಳಿ, ಸನ್ನತಿ ಮುಂತಾದವುಗಳಲ್ಲಿ ನಡೆದಿರುವ ಉತ್ಖನನಗಳಿಂದ ಇದರ ಬಗ್ಗೆ ಮಾಹಿತಿಯನ್ನು ಪಡೆಯಬಹುದು.[೨೨]

ಇಲ್ಲಿನ ಮಣ್ಣಿನ ಪಾತ್ರೆಗಳು, ಕೆಂಪು ಹೊಳ ಪುಳ್ಳ ಮೃತ್ ಪಾತ್ರೆಗಳು, ಅರೆಟೈನ್ ಮಾದರಿಯ ಮದ್ಯದ ಜಾಡಿಗಳು, ನಕ್ಷಾಂಕಿತ ಪಾತ್ರೆಗಳು, ಕೆಂಪು ಬಣ್ಣದ ಪಾತ್ರೆಗಳು, ಬಿಳಿವರ್ಣ ಚಿತ್ರಗಳುಳ್ಳ ಮಡಕೆ ಭಾಗಗಳು ಕಂಡುಬಂದಿವೆ. ಇವು ದೊರಕುವ ಸಾಂದ್ರತೆಯನ್ನನುಸರಿಸಿ ಇಂತಹ ನಿವೇಶನಗಳು ಪಟ್ಟಣಗಳೇ ಅಥವಾ ಗ್ರಾಮೀಣ ನೆಲೆಗಳೇ ಎಂಬುದನ್ನು ನಿರ್ಧರಿಸಬಹುದಾಗಿದೆ. ಈ ಹಂತವು ಕರ್ನಾಟಕದಲ್ಲಿ ಕ್ರಿ.ಶ. ೧ ರಿಂದ ೩ನೇ ಶತಮಾನವೆಂದು ನಿರ್ಧರಿಸಲಾಗಿದೆ.

೨.೪.೧. ಕುಕ್ಕಲನಾಡಿನ ಪ್ರದೇಶದಲ್ಲಿ ಕಂಡುಬರುವ ಪುರಾತತ್ವ ನೆಲೆಗಳು

ಒಂದು ನಾಡಿನ ಇತಿಹಾಸ ಪೂರ್ವದ ಚರಿತ್ರೆಯನ್ನು ತಿಳಿದುಕೊಳ್ಳಬೇಕಾದರೆ ಪುರಾತತ್ವ ಶಾಸ್ತ್ರದ ಮೊರೆ ಹೋಗಬೇಕಾಗುತ್ತದೆ. ಅದೇ ರೀತಿ ಕುಕ್ಕಲನಾಡಿನ ಚರಿತ್ರೆಗೆ ಸಹಾಯವಾದ ಅಲ್ಲಿನ ಪುರಾತತ್ವ ನೆಲೆಗಳ ಬಗ್ಗೆ ತಿಳಿಯೋಣ. ಈ ಪ್ರದೇಶದಲ್ಲಿ ಹಳೆಶಿಲಾಯುಗ, ನವಶಿಲಾಯುಗ, ಸೂಕ್ಷ್ಮಶಿಲಾಯುಗ, ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ. ಅವುಗಳೆಂದರೆ

ಮೈಲನಹಳ್ಳಿ

ಬೃಹತ್ ಶಿಲಾಯುಗ : ಈ ಸಂಸ್ಕೃತಿಯ ಗೋರಿ ನೆಲೆಯಿದು. ೧೯ ಕೋಣೆಗಳೂ, ೧೨ ಹಾದಿಕೋಣೆ ಗೋರಿಗಳು ದೊರೆತಿವೆ. ನಾಲ್ಕು ಗೋರಿಗಳನ್ನು ಅಗೆಯಲಾಗಿದ್ದು, ಮಡಕೆಗಳಲ್ಲಿ ರಾಗಿ ಮತ್ತು ಮೂಳೆಗಳು ಇದ್ದಿತ್ತೆಂದು ತಿಳಿದುಬಂದಿದೆ.[೨೩]

ಬಂಡೆಚಿಕ್ಕನಹಳ್ಳಿ

ಬೃಹತ್ ಶಿಲಾಯುಗ : ಈ ಸಂಸ್ಕೃತಿಯ ಗೋರಿ ನೆಲೆಯಿದು. ಗುಡ್ಡದ ಸಮೀಪ ೭೫ ಸಮಾಧಿಗಳು ದೊರೆತಿವೆ. ಹಳ್ಳಿಯ ಸುತ್ತಮುತ್ತಲಿನ ಹೊಲಗಳಲ್ಲಿ ಶಿಲಾವೃತ್ತಗಳಿವೆ. ಸ್ಥಳೀಯರು 'ಪಾಂಡವರಗುಡಿ' ಎಂದು ಕರೆಯುತ್ತಾರೆ.[೨೪]

ರೈಲ್ವೆಗೊಲ್ಲಹಳ್ಳಿ

ಬೃಹತ್ ಶಿಲಾಯುಗ : ಈ ಸಂಸ್ಕೃತಿಯಗೋರಿ ನೆಲೆ ಇದು ಶಿಲಾಗೋರಿಗಳು ದೊರೆತಿವೆ.

ಸೋಲದೇವನಹಳ್ಳಿ

ಬೃಹತ್ ಶಿಲಾಯುಗ : ಈ ಸಂಸ್ಕೃತಿಯ ಗೋರಿಗಳ ನೆಲೆಯಿದು. ಇಲ್ಲಿ ಶಿಲಾಗೋರಿಗಳು ದೊರೆತಿವೆ.

ಶ್ರೀನಿವಾಸಪುರ

ಬೃಹತ್ ಶಿಲಾಯುಗ : ಈ ಸಂಸ್ಕೃತಿಯ ಗೋರಿ ನೆಲೆಯಿದು. ೫ ಶಿಲಾವೃತ್ತಗೋರಿಗಳು ದೊರೆತಿವೆ.[೮೦]

ಬಾಣವಾಡಿ

ಬೃಹತ್ ಶಿಲಾಯುಗ : ಈ ಸಂಸ್ಕೃತಿಯ ಗೋರಿ ನೆಲೆಯಿದು. ದೊಡ್ಡಗಾತ್ರದ ನಾಲ್ಕು ಕಾಲುಗಳುಳ್ಳ ಸುಟ್ಟ ಮಣ್ಣಿನ ಮಡಕೆ ದೊರೆತಿದೆ (Sheshadri M., Stone using cultures of pre and proto historic, Mysore, London, 1956, Pp.60.

ಸಾವನದುರ್ಗ

ನೂತನಶಿಲಾಯುಗ : ಈ ಸಂಸ್ಕೃತಿಯ ಉಜ್ಜಿ ನಯಗೊಳಿಸಿದ ಕೊಡಲಿ ಉಪಕರಣಗಳು ದೊರೆತಿವೆ.

ಬೃಹತ್ ಶಿಲಾಯುಗ : ಈ ಸಂಸ್ಕೃತಿಯ ಗೋರಿ ನೆಲೆ ಇದು. ಶಿಲಾವೃತ್ತಗಳು, ಮಡಕೆ ಹಾಗೂ ಕಬ್ಬಿಣದ ವಸ್ತುಗಳು ದೊರೆತಿವೆ.[೮೧]

ಹೂಜಿಗಲ್ಲು

ಬೃಹತ್ ಶಿಲಾಯುಗ : ಈ ಸಂಸ್ಕೃತಿಯ ಗೋರಿ ನೆಲೆಯಿದು. ಕಲ್ಗೋರಿಗಳಿವೆ. ಇವುಗಳನ್ನು 'ಪಾಂಡವರ ಕಲ್ಲು' ಎಂದು ಕರೆಯುತ್ತಾರೆ. ಮೂರು ಕಡೆಗಳಲ್ಲಿ ಸುಮಾರು ೭೦ ಕ್ಕೂ ಹೆಚ್ಚು ಶಿಲಾಗೋರಿಗಳು ದೊರೆತಿವೆ. ಗುಡ್ಡದ ಪೂರ್ವದಲ್ಲಿ ಕಲ್ಲು ಚಪ್ಪಡಿ ಶಿಲಾವೃತ್ತಗಳಿರುವ ಗೋರಿಗಳಿವೆ. ಕೆಲವಕ್ಕೆ ಎರಡು ವೃತ್ತಗಳೂ ಇವೆ. ಹೂಜಿಗಲ್ಲಿನ ದಕ್ಷಿಣಕ್ಕೆ ೧೦ಕ್ಕೂ ಹೆಚ್ಚು ಗೋರಿಗಳಿವೆ. ೧ ಅಥವಾ ೨ ವೃತ್ತಗಳಿವೆ. ಚಪ್ಪಡಿಯಿಂದ ರೂಪಿಸಲಾಗಿದೆ. ಭರ್ಜಿ ಉಪಕರಣ ಕಬ್ಬಿಣದ ಚೂರು, ಮಡಕೆ ಭಾಗಗಳು ದೊರೆತಿವೆ. ಪಶ್ಚಿಮದಲ್ಲಿ ೨೦ ಗೋರಿಗಳಿವೆ.[೮೨]

ರಾಜಘಟ್ಟ

ಬೃಹತ್ ಶಿಲಾಯುಗ : ಈ ಸಂಸ್ಕೃತಿಯ ಗೋರಿ ನೆಲೆಯಿದು. ಸಮೀಪದಲ್ಲಿ ೪-೬ ಶಿಲಾವೃತ್ತಗಳು ದೊರೆತಿವೆ. ಇತಿಹಾಸ ಆರಂಭಯುಗ : ಈ ಹಂತದ ಅವಶೇಷಗಳು ದೊರೆತಿವೆ. ಇಟ್ಟಿಗೆ ಅವಶೇಷ

ಮಡಕೆ ಭಾಗಗಳು ದೊರೆತಿವೆ. ಇದೇ ಪ್ರದೇಶದಲ್ಲಿ ಬೌದ್ಧ ಸ್ತೂಪಕೃತಿಗಳು ದೊರಕಿದ್ದು, ಬ್ರಾಹ್ಮಿ ಲಿಪಿಯಲ್ಲಿ ಬರಹವು ದೊರೆತಿದೆ.[೮೩]

ಹೀಗೆ ಕುಕ್ಕಲನಾಡಿನ ಪ್ರದೇಶದಲ್ಲಿ ಅನೇಕ ಪುರಾತತ್ವ ನೆಲೆಗಳು ಕಂಡುಬಂದಿವೆ. ಇವು ಇತಿಹಾಸ ಪುನಾರಚನೆಗೆ ಸಹಾಯವಾಗಿವೆ.

೨.೪.೨. ಶಾಸನಗಳಲ್ಲಿ ಕುಕ್ಕಲನಾಡು

ಕುಕ್ಕಲನಾಡನ್ನು ಶಾಸನಗಳಲ್ಲಿ ವಿವಿಧ ಹೆಸರುಗಳಿಂದ ಉಲ್ಲೇಖಿಸಲಾಗಿದೆ. ಕ್ರಿ.ಶ.ಸುಮಾರು ೭೫೦ರ ಗಂಗರ ಶ್ರೀಪುರುಷನ ಶಾಸನಗಳಲ್ಲಿ 'ಕುಕ್ಕನರೆನಾಡು', 'ಕುಕ್ಕರಪಾಟಿಕ್ಕಾಜೆನಾಡು' ಎಂದು ಉಲ್ಲೇಖಿತವಾಗಿದೆ. ಈ ನಾಡು ಕ್ರಿ.ಶ.೧೧ನೇ ಶತಮಾನದ ಆದಿ ಭಾಗದಲ್ಲಿ ಚೋಳರ ದಾಳಿಗಳಿಗೆ ಗುರಿಯಾಗಿ 'ಕುಕ್ಕನೂರ್ನಾಡು' ಎಂದು ಕರೆಯಿಸಿಕೊಂಡಿದ್ದಿತು. ಹೊಯ್ಸಳರು ಕ್ರಿ.ಶ.೧೧೧೬ರ ನಂತರ ಈ ಪ್ರದೇಶದ ಮೇಲೆ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರು. ಆಗ ಈ ನಾಡಿಗೆ 'ಕುಕ್ಕಲನಾಡು' (ತುಮಕೂರು ಜಿಲ್ಲೆಯ, ತಿಪಟೂರು ತಾಲ್ಲೂಕಿನ ವೀರರಾಜೇಂದ್ರ ಕುಕ್ಕಲನಾಡು ಎಂದು ಉಲ್ಲೇಖವಿದೆ. ಬೆಂಗಳೂರು ಜಿಲ್ಲೆಯ ಕುಕ್ಕಲನಾಡಿಗೂ ಇದಕ್ಕೂ ಸಂಬಂಧವಿಲ್ಲ.) ಎಂದು ಹೆಸರು ಹೆಚ್ಚು ಪ್ರಚಲಿತವಾಗಿ ಮುಂದೆ ವಿಜಯನಗರದ ಆಳ್ವಿಕೆಯ ಕಾಲದವರೆವಿಗೂ ಉಳಿದಿತ್ತು. ಪ್ರಾಯಶಃ ಈ ಹೆಸರೇ ಚೋಳರ ಆಳ್ವಿಕೆಗೆ ಪೂರ್ವದಿಂದಲೂ ಜನ ಬಳಕೆಯಲ್ಲಿದ್ದುದೆಂದು ತೋರುತ್ತದೆ. ಒಟ್ಟಾರೆ ಕುಕ್ಕನರೆನಾಡು> ಕುಕ್ಕನೂರುನಾಡು> ಕುಕ್ಕಲನಾಡು ಎಂಬ ಅಂಕಿತಗಳಿಂದ ಕ್ರಿ.ಶ.೮ನೇ ಶತಮಾನದಿಂದ ಕ್ರಿ.ಶ.೧೮ನೇ ಶತಮಾನದವರೆಗೂ ಈ ನಾಡು ಅಸ್ತಿತ್ವವನ್ನು ಪಡೆದಿತ್ತು.[೮೪]

ಪ್ರಸ್ತುತ ಕುಕ್ಕಲನಾಡಿನ ಜೊತೆಗೆ ಇದರ ಸುತ್ತಲಿನ ಪರಿಸರದ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿರುವುದರಿಂದ ಒಟ್ಟಾರೆ ಐತಿಹಾಸಿಕ ಹಿನ್ನೆಲೆಯ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ. ಕರ್ನಾಟಕವನ್ನು ಆಳಿದ ಗಂಗರಿಂದ ಹಿಡಿದು ವಿಜಯನಗರದ ಅರಸರವರೆಗಿನ ಕಾಲಾವಧಿಯಲ್ಲಿ ಪ್ರಚಲಿತವಿದ್ದ ಬಹಳಷ್ಟು ಆಡಳಿತ ಅರಸರ ವಿಭಾಗಗಳನ್ನು ರಾಷ್ಟ್ರ, ವಿಷಯ, ನಾಡು, ದೇಶ, ಮಂಡಲ ಮುಂತಾದ ಪದಗಳಿಂದ ಕರೆಯಲಾಗುತ್ತಿತ್ತು. ವಿಭಾಗ ದೊಡ್ಡದಿದ್ದರೆ ಅದನ್ನು ಉಪವಿಭಾಗ ಮಾಡಲಾಗುತ್ತಿತ್ತು. ಶಾತವಾಹನರ ಕಾಲದಲ್ಲಿ ಭಕ್ತ, ರಟ್ಟ ಎಂಬ ಉತ್ತರದ ಪದಗಳನ್ನು ಬಳಸಲಾಗಿದೆ. ಕದಂಬರ ಕಾಲದಲ್ಲಿ ವಿಷಯ, ಮಂಡಲ, ರಾಷ್ಟ್ರ ಎಂಬ ಪದಗಳು ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಭೋಗ, ರಾಷ್ಟ್ರಕೂಟರ ಕಾಲದಿಂದ ನಾಡು, ನಾಟ್ಟು, ಪಾಡಿ, ಮಂಡಲ, ಜನಪದಭೋಗ, ಪದಗಳು ಬಳಕೆಗೊಂಡಿವೆ. ಕಲಚೂರಿ, ಯಾದವ ಮತ್ತು ಹೊಯ್ಸಳರವರೆಗೆ ಮುಂದುವರಿದು ರಾಜ್ಯ, ವೇಂಠ, ಪಳಿತ, ಚಾವಡಿ, ಸಾಗಣೆ, ಸೀಮೆ ಪದಗಳು ಸಿಗುತ್ತವೆ. ಮರಾಠರ ಕಾಲದಲ್ಲಿ ಮಹಲು ಮುಂತಾದ

ಪದಗಳು ಬಳಕೆಗೊಂಡಿವೆ.[೪೫] ವಿಜಯನಗರ ಕಾಲಕ್ಕೆ ಆಡಳಿತ ವಿಭಾಗಗಳು ಶಾಸನಗಳಲ್ಲಿ ಉಲ್ಲೇಖಿಗೊಂಡಂತೆ ರಾಜ್ಯದ ಬದಲು ಸೀಮೆ, ಸ್ಥಳ, ವಳಿತ, ವೇಂಠೆ ಎಂಬ ಪದಗಳನ್ನು ಉಪಯೋಗಿಸಲಾಗಿದೆ. ವಿಜಯನಗರ ಕಾಲದ ಆಡಳಿತ ವಿಭಾಗಗಳ ಹಂತಗಳನ್ನು ಒಟ್ಟಾರೆಯಾಗಿ ದೇಶ, ಚಾವಡಿ, ಮಾಗಣಿ, ಸ್ಥಳ, ಗ್ರಾಮ ಎಂಬುದಾಗಿ ಗುರುತಿಸಲಾಗಿದೆ. ಇವುಗಳ ಜೊತೆಗೆ ಪಟ್ಟಣ, ಅಗ್ರಹಾರ, ಸ್ಥಳಗಳು ಪ್ರತ್ಯೇಕ ಸ್ವಾಯತ್ತ ಘಟಕಗಳಾಗಿದ್ದವು.

ಪ್ರಸ್ತುತ ಕುಕ್ಕಲನಾಡು ಮತ್ತು ಪರಿಸರದ ಸುತ್ತಮುತ್ತಲಿನ ಗ್ರಾಮಗಳು ಗಂಗರ ಕಾಲದಿಂದ ವಿಜಯನಗರದ ಕಾಲದ ಅರಸರ ಆಳ್ವಿಕೆಗೆ ಒಳಪಟ್ಟಿದ್ದವು. ವಿಜಯನಗರ ಅರಸರ ಕಾಲದಲ್ಲಿ ಹೊಸದಾಗಿ ಸೇರ್ಪಡೆಯಾದ ನಾಡುಗಳೆಲ್ಲವೂ 'ಸೀಮೆ' ಎಂಬ ಪ್ರತ್ಯಯವನ್ನು ಪಡೆದಿವೆ. 'ಸೀಮೆ' ಎಂಬುದು ವಿಜಯನಗರ ಕಾಲದಲ್ಲಿ ಒಂದು ಆಡಳಿತದ ವಿಭಾಗವಾಗಿರ ಬಹುದು ಎಂದು ಅರ್ಥೈಸಬಹುದು. ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಹಿಂದೆ ಇದ್ದ 'ನಾಡು' ಎಂಬ ವಾಚಕಕ್ಕೆ 'ಸೀಮೆ' 'ನಾಡು' ಎಂಬ ಪದಗಳು ಬಳಕೆಗೆ ಬಂದಿರಬಹುದು. ಈ ಹಿನ್ನೆಲೆಯಲ್ಲಿ ಸೀಮೆ ಮತ್ತು ನಾಡು ಎಂಬ ಪದ ಪ್ರಯೋಗ ಆಡಳಿತ ವಿಭಾಗಗಳನ್ನು ಸೂಚಿಸುತ್ತದೆ. ಈ ಹಿನ್ನೆಲೆಯ ದೃಷ್ಟಿಯಿಂದ 'ಕುಕ್ಕಲನಾಡು' ಸಹ ಐತಿಹಾಸಿಕ ಮಹತ್ವವನ್ನು ಪಡೆದಿದೆ.

ಕುಕ್ಕಲನಾಡನ್ನು ಕುರಿತು ಪ್ರಸ್ತಾಪಿಸುವ ಪ್ರಾಚೀನ ಶಾಸನವೆಂದರೆ, ಬೆಂಗಳೂರಿನ ದಾಸರಹಳ್ಳಿ ಗ್ರಾಮದ ಕ್ರಿ.ಶ.ಸು.೭೫೦ರ ಗಂಗದೊರೆ ಶ್ರೀಪುರುಷನ ಶಾಸನ

೧. ಸ್ವಸ್ತಿ ಶ್ರೀಮತ್ ಶ್ರೀಪುರುಷ ಮಹಾರಾಜಂ ಪೃಥುವೀರಾ
ಜ್ಯಂಗೆಯ್ಯೆವೋಲೆತ್ತಾಳ್ವೊರೆನ್ನ ಕರಿಕನಾಡ
ಬಿದಿರ್ಕ್ಕಲ್ಲಾಳ್ದ ಕುಕ್ಕರ ಪಾಟಿಕ್ಕಾಚೆನಾಡಿಯರ್ ತುರಿದು
ಪಡೆಯುಳವರಷ್ಟಬಲವನ್ನ ಎಱಿದು ಬಿಱ್ದು
ಶ್ರೀ ಅಮ್ಬಿ ಆಚಾರಿಯರ ಮಗನ್ನಾಗನ್ ಮಡಿದ[೪೬]

ಎಂದು ತಿಳಿಸುತ್ತದೆ. ಇಲ್ಲಿ ಕುಕ್ಕಲನಾಡಿನ ಪ್ರಾಚೀನ ಹೆಸರು 'ಕುಕ್ಕರಪಾಟಿಕಾಚೆನಾಡು' ಎಂದು ಬಳಕೆಗೊಂಡಿರುವುದು ತಿಳಿದುಬರುತ್ತದೆ.

೨. ನೆಲಮಂಗಲ ತಾಲ್ಲೂಕಿನ ತೋಟಗೆರೆ ಗ್ರಾಮದ ಕ್ರಿ.ಶ.೭೫೦ರ ಶಾಸನದಲ್ಲಿ ಕುಕ್ಕಲನಾಡನ್ನು 'ಕುಕ್ಕನರೆನಾಡು' ಎಂದು ಉಲ್ಲೇಖಿಸಿರುವುದು ಕಂಡುಬರುತ್ತದೆ.

ಸ್ವಸ್ತಿಶ್ರೀ ಕಲಿವೊಲೆತ್ತಳ್ವೊರ ಕುಕ್ಕನರೆನಾಡಳೆಡೆ
ಲೆತ್ತಳ್ವೊರ ಉರಾಳ[೪೭]

....

೩. ಕ್ರಿ.ಶ.೧೦೨೯ರ ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಶಾಸನದಲ್ಲಿ ಕುಕ್ಕಲನಾಡನ್ನು ಚೋಳರು 'ಕುಕ್ಕನೂರ್ನ್ನಾಡು' ಎಂದು ಕರೆದಿದ್ದಾರೆ.

....

ದೀವಿಗೆಗನ್ನಡಿಗವಟುಯಾದ ವಿಕ್ರಮಚೋಳ

ಮಣ್ಣಲದ ಕುಕ್ಕನೂರ್ನ್ನಾಡನಾಟ್ಗಾವುಣ್ಡಂ......

ಎಂಬ ಉಲ್ಲೇಖವಿದೆ.[೮೭a]

ಐಗಂಡಪುರದ ಕ್ರಿ.ಶ.೧೦೩೩ರ ತಮಿಳು ಶಾಸನದಲ್ಲೂ ಸಹ ಕುಕ್ಕನೂರ್ನ್ನಾಡು(Kukkanur-nadu) ಎಂಬ ಉಲ್ಲೇಖವಿದೆ.

೪. ಕ್ರಿ.ಶ.೧೧೧೦ರ ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲದ ತಮಿಳು ಶಾಸನವು ಕುಕ್ಕಲನಾಡನ್ನು 'ಕುಕ್ಕನೂರ್ ನಾಡು' (Kukkanur-nadu) ಎಂದು ತಿಳಿಸಿದೆ.[೮೯]

೫. ಬೆಂಗಳೂರು ಜಿಲ್ಲೆ ನೆಲಮಂಗಲ ತಾಲ್ಲೂಕಿನ ಬೈಲಕೋನೇನಹಳ್ಳಿಯ ಶಾಸನದಲ್ಲಿ ಕುಕ್ಕಲನಾಡನ್ನು ಆಳ್ವಿಕೆ ಮಾಡುತ್ತಿದ್ದ ಹಾಗೂ ದಾನ ನೀಡಿದ ವಿವರಗಳಿವೆ. ಇದರ ಕಾಲ ಕ್ರಿ.ಶ.೧೩೨೯.

ಇದು ದಾನ ಶಾಸನ - ಶಾಸನದ ಪ್ರಕಾರ ದಾನ ಮಾಡಲು ಬಿನ್ನವಿಸಿದವರು ಬೊಂಮಯ ನಾಯಕ. ಹನುಗೂರ ಮಲಯಪ್ಪ, ಗೋಪಗವಿಡ, ಬೋಕಣ ಮತ್ತಿತರರು. ದಾನ ನೀಡಿದವನು ವೀರಯ, ದಾನ ಪಡೆದವರು ಕಿತ್ತನೆಲೆಯ ದೊಡನ ಗಉಡರ ಮಕ್ಕಳು ಗಉಡಪ್ಪ, ಮಾರಪ್ಪ, ಗಂಗಣ್ಣ ಮತ್ತಿತರರು, ವಿರಯನು ನೀಡಿದ ದಾನ ಮುದುಗೆರೆ. ಅದನ್ನು ಚತುಸ್ಸೀಮೆ ಸಹಿತ ಸರ್ಬ್ಬಕೊಡುಗೆಯಾಗಿ ನೀಡಲಾಗಿದೆ. ಈ ಶಿಲಾಶಾಸನವು ತಾಮ್ರಶಾಸನದ ಪಡಿಯೊಂದು ಶಾಸನದಲ್ಲೆ ತಿಳಿಯಪಡಿಸಲಾಗಿದೆ.

ಶ್ರೀಮತು ಪ್ರತಾಪ ಚಕ್ರವರ್ತ್ತಿ ಹೊಯಿಸಣ ಶ್ರೀ ವೀರಬಲ್ಲಾಳ ದೇವರಸರು ಪೃಥ್ವೀ ರಾಜವನ್ನಾಳುವಾಗ ಉಪ್ಪೂರ ಬಂಮೆಯನಾಯಕರು ಕುಕಲನಾಡನ್ನು ಆಳುತ್ತ ಇರಲು, ಅವರು ಮತ್ತು ಆ ನಾಡಿನ ಹನುಗೂರ ಮಲಯಪ್ಪ, ಗೋಪಗವಿಡ, ಬೋಕಣ್ಣ ಬಂಮಪ, ಸಿರಿಯಕ್ಕ, ಪಿಡಾರಿಯ(x) ಸೆಟಿ, ಮಲಪ್ಪ, ಸೊಂಣೆಸೆಟಿ ಇವರುಗಳು ತಾಮ್ರ ಪತ್ರದ ಮೂಲಕ ಬಿನ್ನವಿಸಲಾಗಿ ವೀರಯನು ದಾನ ಮಾಡಿದ. ಜಕಣ ಸೆಟಿ, ಸಮಸ್ತ ಪ್ರಜೆ ಗಉಡುಗಳು, ಕುಕಲನಾಡಿನ ಕಿತ್ತನೆಲೆಯ ಡೊಡನ ಗಉಡರ ಮಕ್ಕಳು ಗಉಡಪ್ಪ, ಮಾರಪ್ಪ, ಗಂಗಣ, ಅಂಣನ ಹೊಂನಜನವರಿಗೆ ಕುಕಲನಾಡಿನ ಮುದುಗೆರೆಯನ್ನು ಸರ್ಬ್ಬಕೊಡುಗೆಯಾಗಿ ಚತುಸೀಮೆ ಸಹಿತವಾಗಿ ಕೊಟ್ಟ ಕೊಡುಗೆಗೆ ತಾಮ್ರಶಾಸನದ ಪಡಿಯ ಶಿಲಾಶಾಸನ. ಆ ಊರಿನಲ್ಲಿ ತಪ್ಪಾಗದಂತೆ ವೀಳಯವ ಒಪ್ಪಿಗೆಯಿಂದ ಯಾವ ಅಪರಾಧವೂ ಇಲ್ಲದಂತಾಗಿ ದಾನ ನೀಡಲಾಗಿದೆ. ಆ ಊರಿಗೆ ತಪ್ಪಿ ನಡೆದವರು ಇಪ್ಪತ್ತೊಂದು ಪಿತೃಗಳ ನರಕಕ್ಕೆ ಹೋಗುವರು. ಆಳಿದವರು

ಗಂಗೆ ತಡಿಯ ಕವಿಲೆಯ ಕೊಂದ ದೋಷದಲ್ಲಿ ಹೋಗುವರು. ಮರ್ಯ್ಯಾದೆಯ ಭೂಮಿ ಮತ್ತು ಚಂದ್ರನಿರುವವರೆಗೆ ಸಲುವುದು. ಇದಕ್ಕೆ ನಾಯಕರ ಒಪ್ಪ ಮತ್ತು ನಡಸುವ ನಾಡ ಒಪ್ಪ ಶ್ರೀ ಮುಕ್ತನಾಥನದು ಎಂದಿದೆ.

ಶ್ರೀ ಮನು ಮಹಾನಾಯಕ ಚ(ಯಿ) ಮೇದಿನಿ ಮನ್ನೆಯರ ಗಂಡ ಉಪ್ಪೂರ ಬಂಮೆಯ ನಾಯಕನು ಕುಕಲನಾಡನಾಳುತ ಇಜೆ(x)

ಬೊಂಮಯ ನಾಯಕರು ಕುಕ್ಕಲನಾಡು ಪ್ರಭುಗಂ.....

....

....

ಶ್ರೀ ಮತು ಕುಕಲನಾಡುಪ್ರಭು ಕಿತ್ತನೆಲೆಯ ದೊಡನ ಗಲುಡರ ಮಕ್ಕಳುಗ

ಉಡಪ್ಪ ಮಾರಪ್ಪ ಗಂಗಣ ಅಂಣನ ಹೊಂನಜನವರಿಗೆ ಕುಕಲನಾಡೊಳ ಗಣಮ್[೬೦]

೬. ನೆಲಮಂಗಲ ತಾಲ್ಲೂಕಿನ ಕಿತ್ತನೆಲ್ಲಿಯ ಶಾಸನವು ಕುಕ್ಕಲನಾಡನ್ನು ಆಳುತ್ತಿದ್ದ ಉಪ್ಪೂರ ಬಂಮೆಯ ನಾಯಕನನ್ನು ಪ್ರಸ್ತಾಪಿಸಿದೆ. ಈ ಶಾಸನವು ಅಸ್ಪಷ್ಟವಾಗಿದೆ. ಕಾಲದ ಉಲ್ಲೇಖವಿರಬಹುದಾದ ಭಾಗ ಹಾಳಾಗಿರುವುದರಿಂದ ವಿದ್ವಾಂಸರು ಇದರ ಕಾಲವನ್ನು ಕ್ರಿ.ಶ.೧೪ನೇ ಶತಮಾನ(ಕ್ರಿ.ಶ.ಸು. ೧೩೩೦)ವೆಂದು ತೀರ್ಮಾನಿಸಿದ್ದಾರೆ.[೬೧]

ಯ-ಯ ರಗಂಡವುಪ್ಪರದ.....

..ಂಮಕಕರಿಂಗೆ ಕುಕ್ಕಲನಾಡನಾಳುವ

ಲಿ ಶ್ರೀಮತು ಕುಕಲಾನಾಡ ಪ್ರಭುಗಳು

ಗೌಡಪ್ಪ ಮಾರಪ್ಪಗಂ ..ಗೌಂಡ ಸೋಮ

ಗೌಂಡನ ಮಗ ಮಲೆಯಪಮಾಚಿಯ

ನಾಯ್ಕ ಬೊಂಮಿಸೆಟ್ಟಿ ಡಿಯಾ . ಸೆಟ್ಟಿ[೬೨]

....

೭. ಕಿತ್ತನೆಲ್ಲಿಯ ಮತ್ತೊಂದು ಶಾಸನವು ಕುಕ್ಕಲನಾಡಿನ ಉಲ್ಲೇಖವನ್ನು ತಿಳಿಸುತ್ತದೆ.

ಶ್ರೀ ಮನುಮಹಾ

ಪ್ರಧಾನಜಗದೊಬ್ಬ್ರಗಂಡ ಜಾತಿಯುದ್ದಂಣ್ನಾಯಕಂಗೆ ಕುಕ್ಕಲನಾಡು ಆ

ಳುವ ಕಾಲದಲು.... ....ಪ್ರಭು[೬೩]

ಅದೇ ರೀತಿ ಈ ನಾಡನ್ನು ಆಳುತ್ತಿದ್ದ ಮಯಿಲೆಯ ನಾಯಕ ಮತ್ತು ಅವನ ತಮ್ಮ ಜಂನೆಯ ನಾಯಕರ ಬಗ್ಗೆ ಕ್ರಿ.ಶ.೧೩೩೩ರ ನೆಲಮಂಗಲ ತಾಲ್ಲೂಕಿನ ಮಂಠಾಳು ಗ್ರಾಮದ ಶಾಸನವು ತಿಳಿಸುತ್ತದೆ.

....

ಮಹಾಸಾವಂತಾದಿಪತಿನಾರಲೋಕಗಂ

ಡ ಮಯಿಲೆಯ ನಯ್ಕ ಜಂನೆಯ ನಯ್ಕ

ರು ಕುಕ್ಕಲನಾಡ ಆಳುವಲ್ಲಿ ಶ್ರೀ ಮನು....[೬೪]

....

೯. ಚನ್ನಪಟ್ಟಣ ತಾಲ್ಲೂಕಿನ ಹಾಗಲಹಳ್ಳಿಯ ಕ್ರಿ.ಶ.೧೩೩೪ರ ಶಾಸನದಲ್ಲಿ ಕುಕ್ಕಲನಾಡಿನ ಉಲ್ಲೇಖ ಈ ರೀತಿ ಇದೆ.

.... ಶ್ರೀ

ಮನುಮಹಾ ಕುಕಲನಾಡ ಪ್ರಭು ಕಿತ್ತನೆಲೆಯ ಹೊಂನಗವು

ಡರ ಮಕಳು ಬೀರಂಣ ಹೊಂನಪ ಮಲೆಯಪ...[೬೫]

೧೦. ಬೆಂಗಳೂರು ತಾಲ್ಲೂಕು, ಬ್ಯಾಡರಹಳ್ಳಿಯ ಶಾಸನವು ಕುಕ್ಕಲನಾಡ ಪ್ರಭುಗಳ ಆಳ್ವಿಕೆ, ದಾನದ ವಿವರದ ಬಗ್ಗೆ ತಿಳಿಸುತ್ತದೆ. ಇದರ ಕಾಲ ಕ್ರಿ.ಶ.೧೩೩೬

.......ಶ್ರೀ ಮನುಮಹಾ ಸಾಮಂತಾಧಿಪ

ತಿನರಲೋಕಗಂಡ ಮಯಿಲೆಯನಾಯಕ ಚಂನೆಯ

ನಾಯಕರು ಕುಕ್ಕಲನಾಡನಾಳುತ್ತಂವಿರ್ದ್ದಲಿ ಆ

ಶ್ರೀ ಮನುಮಹಾ ಕುಕ್ಕಲನಾಡ ಮಹಾಪ್ರಭು...

.................[೬೬]

೧೧. ಕ್ರಿ.ಶ.೧೩೩೯ರ ಬೆಂಗಳೂರಿನ ಹಲಿಗೆ ವಡೆಯರ ಹಳ್ಳಿಯ ಶಾಸನದಲ್ಲಿ ಕುಕ್ಕಲನಾಡಿನ ಉಲ್ಲೇಖ ಈ ರೀತಿ ಇದೆ.

.... ಕುಮಾರ

ಕೋಟ್ಯೆಯನಾಯಕನವರು ಕುಕ್ಕಲನಾಡನಾ

ಳುವಲ್ಲಿ ಆ ಕುಕ್ಕಲನಾಡ ಪ್ರಭುವಿತ್ತನು...[೬೭]

(ಹಿಂಭಾಗ ಸವೆದು ಹೋಗಿದೆ)

೧೨. ಬೆಂಗಳೂರು ತಾಲ್ಲೂಕಿನ ರಾಮಸಮುದ್ರ (ರಾಮಸಂದ್ರ) ಗ್ರಾಮದ ಶಾಸನವು ಕುಕ್ಕಲನಾಡನ್ನು ಹೀಗೆ ಉಲ್ಲೇಖಿಸುತ್ತದೆ.

ಈ ಧಂಮ್ಮ೯ವ ನಾರಾರುಮ. ಪಾಲಿಸಿದವರು ಸಮಸ್ತ

ಭೋಗಮೋಕ್ಷ ವೆಂಪಡೆದರು ಈ ಧಮ್ಮ೯ಗಂಟಕರಾದವ

ರು ಗಂಗೆಯ ತಡಿಯ ಕಪಿಲೆಯ ಕೊಂದ ಪಾಪದಲಿ ಹೋ

ದರು || ಕುಕ್ಕಲನಾಡು...ವಲಿ ಮಾದಿಧರ್ಂಮ

......................[೯೮]

೧೩. ಮಾಗಡಿ ತಾಲ್ಲೂಕಿನ ಬೈಚಗುಪ್ಪೆ ಗ್ರಾಮದ ಕ್ರಿ.ಶ.೧೩೪೦ರ ಶಾಸನವು ಕುಕ್ಕಲನಾಡ ಪ್ರಭುಗಳು ಆಳ್ವಿಕೆ ಮಾಡಿದ ಬಗ್ಗೆ ತಿಳಿಸುತ್ತದೆ. ದಾನ ನೀಡಿದ ಬಗ್ಗೆ ವಿವರಿಸುತ್ತದೆ. ಬೈಯಿಚವ್ವೆ ಎಂಬ ಹೆಣ್ಣು ಮಗಳ ಬಗ್ಗೆ ಉಲ್ಲೇಖಿಸುತ್ತದೆ. ಇದು ಕುಕ್ಕಲನಾಡಿನ ಬಗ್ಗೆ ಈ ರೀತಿ ತಿಳಿಸುತ್ತದೆ.

....

ಶ್ರೀ ಮಃಮಹಾ ಕುಕ್ಕಲನಾಡಪ್ರಭು ಕಿತ್ತನೆಲ್ಲಿಯ ಹೊಂನವುಡರ

ಮಕ್ಕಳ್[೯೯].......

ಇದು ದಾನ ಶಾಸನ. ಈ ನಾಡನ್ನು ಆಳುತ್ತಿದ್ದ ಮಯಿಲೆಯನಾಯಕ ಮತ್ತು ಅವನ ಸಹೋದರರಾದ ಚೆಂನಯನಾಯಕ(ಜಂನೆಯನಾಯಕ)ನನ್ನು ಕುರಿತು ಪ್ರಸ್ತಾಪಿಸುತ್ತದೆ.

೧೪. ಕ್ರಿ.ಶ.೧೩೪೦ರ ನೆಲಮಂಗಲ ತಾಲ್ಲೂಕಿನ, ಬಾಣಸವಾಡಿ ಗ್ರಾಮದ ಶಾಸನದಲ್ಲಿ ಶ್ರೀವೀರಹರಿಯಪ್ಪ ಒಡೆಯರ ಸಾಮಂತನಾಗಿ ಮಯಿಲೆಯನಾಯ್ಕ ಕುಕ್ಕಲನಾಡನ್ನು ಆಳಿದ ಉಲ್ಲೇಖವಿದೆ. ಈ ಶಾಸನದ ಕೊನೆಯ ಆರು ಪಂಕ್ತಿಗಳು ಕಾಣುವುದಿಲ್ಲ.

....

.........ಶ್ರೀ ಮನುಮಹಾ

ಸಾಮುಂತಾಧಿಪತಿಪ ನರ ಲೋಕಗಂಡ ಮಯಿಲೆ

ಯನಾಯ್ಕರು ಕುಕ್ಕಲನಾಡನು ಆಳುತಿರ

ಲು ಶ್ರೀಮನುಮಹಾಕುಕ್ಕಲನಾಡ

.........ಲಿಯ ಹೊನ್ನು ......[೧೦೦]

(ಮುಂದೆ ಆರು ಪಂಕ್ತಿಗಳು ಕಾಣುವುದಿಲ್ಲ)

೧೫. ನೆಲಮಂಗಲ ತಾಲ್ಲೂಕಿನ ಹುರುಳಿ ಚಿಕ್ಕನಹಳ್ಳಿ ಗ್ರಾಮದ ಕ್ರಿ.ಶ.೧೩೫೯ರ ಶಾಸನವು ಕುಕ್ಕಲನಾಡನ್ನು ಹೀಗೆ ಉಲ್ಲೇಖಿಸುತ್ತದೆ.

ಶ್ರೀ ಮನುಮಹಾಸವಂತಾಧಿಪತಿ ಮಯಿಲೈಯ

ನಾಯಕರ ತಂಮಯೋಜಯನಾಯಕರೂ

ಸಂತೆಯನಾಯಕರೂ ಶ್ರೀ ಮನುಮಹಾಪ

..ನಾಡ (ಕುಕ್ಕಲನಾಡ) ಸಮಸ್ತ ಪ್ರಜೆಗಳೂಂಡುಗಳೂ

ಶ್ರೀ ಮತುಚಾತು.ಯ........

ಮಗತಂ ....[೧೦೦]

(ಮುಂದೆ ಕಲ್ಲು ಹೋಗಿದೆ)

೧೬. ಬೆಂಗಳೂರಿನ ಕನ್ನೆಲ್ಲಿ ಗ್ರಾಮದ ಕ್ರಿ.ಶ.೧೪೦೮ರ ಶಾಸನದಲ್ಲಿ ದೇವರಿಗೆ ಸುಂಕವನ್ನು ಮಾನ್ಯಮಾಡಿದ ಬಗ್ಗೆ ಉಲ್ಲೇಖವಿದೆ.

....

......ಶ್ರೀ ಮನ್ಮಹಾರಾಜಾಧಿ

ರಾಜ ರಾಜ ಪರಮೇಶ್ವರ ಶ್ರೀ

ವೀರದೇವರಾಯ ಮಹಾರಾಯ

ರು ಪ್ರಿಥ್ವೀರಾಜ್ಯಂಗೆಯಿಉತ್ತಿರ

ಲು ಅಧಿಕಾರಿಹಯ್ಯಕಸವರು

ಕುಕ್ಕಲನಾಡ ಕಂನ್ನೆಲ್ಲಿಯ ತಿರು

ಮಲೆನಾಥ ದೇವರಿಗೆ ನಂಮ

ದೇವರಿಗೆ ಆ ಕನ್ನೆಲ್ಲಿಯಲು ಯೆರ

ಡು ಮಗ್ಗವನು ಸುಂಕಮಾಂನ್ಯ

ವಾಗಿ ಆ ಚಂದ್ರಾರ್ಕ್ಕನ ಸ್ಥಾಯಿಯಾ

ಗಿ ಕೊಟ್ಟ ಧರ್ಮ್ಮಸಾಸನ[೧೦೧]

೧೭. ಬೆಂಗಳೂರಿನ ದೊಡ್ಡಬೊಮ್ಮಸಂದ್ರದ ಕ್ರಿ.ಶ.೧೪೩೦ರ ಶಾಸನದಲ್ಲಿ ಕುಕ್ಕಲನಾಡಿನ ಪ್ರಸ್ತಾಪ ಬರುತ್ತದೆ.

....

ಮಹಾಮಂಡಳೇಶ್ವರಪವುಡ

ರಾಯ...........

ತ್ತಿದ್ದಲ್ಲಿ ಕುಕ್ಕಳನಾಡ.....

..............ಈ ನಾಡ

ನಾಳುವಬುಕ್ಕನಾಯ್ಕರು ಆ

ಕುಕ್ಕಲನಾಡನು ಬಂಮ

ಹಳಿಯ.....ಸರ್ವ

ಮಾನ್ಯವಾಗಿ.......[೧೦೨]

೧೮. ಕ್ರಿ.ಶ.೧೪೯೫ರ ಬೆಂಗಳೂರು ತಾಲ್ಲೂಕಿನ ಗೊಂಗಡಿಪುರದ ಶಾಸನವು ಕುಕ್ಕಲನಾಡನ್ನು ಹೀಗೆ ಉಲ್ಲೇಖಿಸುತ್ತದೆ.

> ....ನಂಮ
> ನಾಯಕತನಕ್ಕೆ ಸಲುವ ಕುಕ್ಕಲನಾಡ ಅ
> ರ್ಧಭಾಗೆಯ ಕೆಂನೆಲ್ಲಿಯ.......[೧೦೪]

೧೯. ನೆಲಮಂಗಲ ತಾಲ್ಲೂಕಿನ ಹೆಸರುಘಟ್ಟದ ಕ್ರಿ.ಶ.೧೫೩೩ರ ಶಾಸನವು ವಿಜಯನಗರದ ಅರಸು ಅಚ್ಯುತರಾಯನು ಹೆಸರುಘಟ್ಟದ ಕೆರೆ ಕಟ್ಟಿಸಿ, ಅಲ್ಲಿನ ಚಂದ್ರಮೌಳೇಶ್ವರ ದೇವಾಲಯದಲ್ಲಿ ಕಾಶಿಯಿಂದ ಶಿವ ಲಿಂಗವನ್ನು ತರಿಸಿ ದೇವರ ಪ್ರತಿಷ್ಠಾಪನೆ ಮಾಡಿಸಿದನು. ದೇವಾಲಯಕ್ಕೆ ಅನೇಕ ಹೊಲ, ತೋಟಗಳನ್ನು, ಹಸುಗಳನ್ನು, ಊರುಗಳನ್ನು ದಾನ ಬಿಟ್ಟನು ಹಾಗೂ ಮೇರೆಗಳನ್ನು ಗುರ್ತಿಸಿದ ಬಗ್ಗೆ ಉಲ್ಲೇಖಿಸುತ್ತದೆ.

> ....
> ....ಮೂಡಲಿಗೆ ಸೋಮದೇವನಹಳ್ಳಿ ಸ್ಥಳದ ತೆಂಕಣ....
> ....ದೊಡ್ಡಹಳ್ಳಿ ಮೇರೆ ಚತುಶ್ಸೀಮೆ.......
> ಮೇರೆ...ಹುರುಳಿಚಿಕ್ಕನಹಳ್ಳಿ ಹೊಲ ಮೇರೆಯೀಂಥಾತಿಥಿಯಲ್ಲು ಸ್ವಾಮಿ
> ಅಪ್ಪಣೆ ಇಂದ ಅಚ್ಯುತರಾಯರು ಅಪ್ಪಂಣಗಳು ಚಂದ್ರಮೌ
> ಳೇಶ್ವರ ದೇವರ ಅಮ್ರುತಪಡಿಗೆ ಕುಕಲನಾಡ.....[೧೦೫]

೨೦. ಇದೇ ತಾಲ್ಲೂಕಿನ ನಾಗಸಂದ್ರಗ್ರಾಮದ ಶಾಸನದಲ್ಲೂ ಸಹ ಕುಕ್ಕಲನಾಡ ಉಲ್ಲೇಖವಿದೆ.

> ....ಕ್ರುಷ್ಣಪ.......
> .....ಯರು ಅಪ........
> ....ನಾಯ್ಕ ತನಕ್ಕೆಸ.......
> ವ ಕುಕ್ಕಲನಾ............
> ಕೊ... ಸಲುವನಾಗಸಮು
> ದ್ರ ದಗ್ರಾಮವಸ.....
> ಸ್ವರಭ . ರ ದೇವರಿಗೆ
> ಕೊಟ್ಟ .....[೧೦೬]

ಇವುಗಳಲ್ಲದೆ ಕುಕ್ಕಲನಾಡನ್ನು ಹೆಸರಿಸುವ ಇತರ ಶಾಸನಗಳೆಂದರೆ ನೆಲಮಂಗಲದ ಬಿನ್ನಮಂಗಲದ ಅಯ್ಯಾಸಾಬಿಹೊಲದ ಶಾಸನ.[೧೦೭] ಇದೇ ತಾಲ್ಲೂಕಿನ ಕಸಬೆಯ ಶಾಸನ ಇದರಲ್ಲಿ ಕಾಲದ

ಉಲ್ಲೇಖವಿಲ್ಲ.[೧೦೮] ಕಸಬೆಯ ಮತ್ತೊಂದು ಶಾಸನವು ಕುಕ್ಕಲನಾಡಿನ ಬಗ್ಗೆ ತಿಳಿಸುತ್ತದೆ.[೧೦೯] ಮುಂತಾದವುಗಳು......ಹೀಗೆ ಕುಕ್ಕಲನಾಡಿನ ಶಾಸನಗಳಲ್ಲಿ ಈ ನಾಡಿನ ಬಗ್ಗೆ ಅನೇಕ ಉಲ್ಲೇಖಗಳು ಬಂದಿವೆ.

ಅಡಿಟಿಪ್ಪಣಿಗಳು

೧. ಕೃಷ್ಣಮೂರ್ತಿ ಪಿ.ವಿ., **ಕುಕ್ಕಲನಾಡು**(ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ-೧). ಕಲಬುರ್ಗಿ ಎಂ.ಎಂ.(ಸಂ), ಪು.೪೦-೪೧

೨. **ಕನ್ನಡ ಕನ್ನಡ ನಿಘಂಟು ಸಂಪುಟ ೨**, ಕನ್ನಡ ಸಾಹಿತ್ಯ ಪರಿಷತ್

೩. **ಕನ್ನಡ ಕನ್ನಡ ನಿಘಂಟು ಸಂಪುಟ ೧**, ಕನ್ನಡ ಸಾಹಿತ್ಯ ಪರಿಷತ್

೪. Kittel F., **Kannada English dictionary**, Pp.420

೫. ಅದೇ, ಪು.೧೦೯

೬. **ತುಳು ನಿಘಂಟು ಸಂಪುಟ ೪**, ಪು.೮೧೧

೭. **ತುಳು ನಿಘಂಟು ಸಂಪುಟ ೧**, ಪು.೨೬೮

೮. Burrow T., Emeneau M.B., **A Dravidan Etimological dictionary**, Pp.113

೯. ಅದೇ, ಪು.೧೩೧

೧೦. ಅದೇ, ಪು.೧೨೦

೧೧. ಅದೇ, ಪು.೨೮

೧೨. ಅದೇ, ಪು.೧೭

೧೩. ಅದೇ, ಪು.೨೮

೧೪. ಕೃಷ್ಣಮೂರ್ತಿ ಪಿ.ವಿ., **ಕುಕ್ಕಲನಾಡು**(ಪ್ರಾ.ಕ.ಆ.ವಿಭಾಗಗಳು, ಸಂಪುಟ-೧. ಕಲಬುರ್ಗಿ ಎಂ.ಎಂ(ಸಂ), ಪು.೪೦-೪೧

೧೫. ಅದೇ, ಪು.೪೦-೪೧

೧೬. ಅದೇ, ಪು.೪೦-೪೧

೧೭. EC-IX, Bn, ೩೬, ಕ್ರಿ.ಶ.೭೫೦

೧೮. ಅದೇ, Nl, ೩೪, ಕ್ರಿ.ಶ.೭೫೦

೧೯. ಅದೇ, Nl, ೦೧, ಕ್ರಿ.ಶ.೧೦೨೯

೨೦. ಅದೇ, Nl, ೩೭, ಕ್ರಿ.ಶ.೧೦೩೩

೨೧. **ಶಂಬಾಜೋಷಿ, ಎಡೆಗಳು ಹೇಳುವ ಕಂನಾಡ ಕತೆ**, ಪು.೧೪

೨೨. ಅದೇ, ಪು.೪೨

೨೩. ಅದೇ

೨೪. ಅದೇ

೨೫. ಅದೇ

೨೬. ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು : ಒಂದು ಅಧ್ಯಯ, ಪು.೨೫

೨೭. ಅದೇ

೨೭a. ಅದೇ,

೨೮. ಅದೇ

೨೯. ಶಂಬಾಜೋಶಿ, ಎಡೆಗಳು ಹೇಳುವ ಕಂನಾಡ ಕಥೆ, ಪು.೬

೩೦. ಆರ್ಕೆ ಮಣಿಪಾಲ, ಹೆಸರಲ್ಲೇನಿದೆ?, ಪು.೧೯

೩೧. ಕೆಮ್ತೂರು ರಘುಪತಿ ಭಟ್ಟ, ತುಳುನಾಡಿನ ಸ್ಥಳನಾಮಗಳು, ಪು.೧೫

೩೨. ಅದೇ, ಪು.೧೮

೩೩. ಕೆಮ್ತೂರು ರಘುಪತಿ ಭಟ್ಟ, *ಕರ್ನಾಟಕ ನಾಮಶಾಸ್ತ್ರ ಒಂದು ಸ್ಥೂಲ ಪರಿಚಯ,* ಸಾಧನೆ ಸಂ-೧೧, ಸಂ-೨, ಪು.೯೪

೩೪. ಕೆಮ್ತೂರು ರಘುಪತಿ ಬಟ್ಟ, *ಸ್ಥಳನಾಮಗಳಲ್ಲಿ ಜನಪದ ನಿರುಕ್ತಿಗಳು,* ಜಾನಪದ ಜಗತ್ತು, ಸಂ.೧, ಸಂ.೧-೨

೩೫. ಕಲಬುರ್ಗಿ ಎಂ.ಎಂ, ಧಾರವಾಡ ನಾಮವಿವೇಚನೆ, ಅದೇ, ಸಂ.೧, ಸಂ-೫, ಪು.೧೯

೩೬. ಕೊಪ್ಪಾ ಎಸ್.ಕೆ., ತರ್ದವಾಡಿನಾಡು ಒಂದು ಅಧ್ಯಯನ, ಪು.೨೬

೩೭. ಚಿದಾನಂದಮೂರ್ತಿ ಎಂ., ಕರ್ನಾಟಕ ಸ್ಥಳನಾಮಗಳು, ವಾಗ್ವ್ಯಾರ್ಥ, ಪು.೧೪-೧೫ ಮತ್ತು ಕೆಮ್ತೂರು ರಘುಪತಿ ಭಟ್ಟ, ತುಳುನಾಡಿನ ಸ್ಥಳನಾಮಗಳು, ಪು.೧೪

೩೮. ಕಲಬುರ್ಗಿ ಎಂ.ಎಂ., *ಧಾರವಾಡ ನಾಮ ವಿವೇಚನೆ,* ಜಾನಪದ ಜಗತ್ತು, ಸಂ-೧, ಸಂ.೬, ಪು.೧೯

೩೯. ದ್ರಾವಿಡಿಯನ್ ಎಟಿಮೊಲಾಜಿಕಲ್ ಡಿಕ್ಷನರಿ, ಪು.೫೫, ಸಂ.೬೪೩, ೧೯೬೧ ಮತ್ತು ೧೯೬೮

೩೯a. ರಾಮಚಂದ್ರಮೂರ್ತಿ, ಎ ಸ್ಟೋರಿ ಆಫ್ ತೆಲುಗು ಪ್ಲೇಸ್ ನೇಮ್ಸ್, ಪು.೩೪೫

೪೦. ಚಿದಾನಂದಮೂರ್ತಿ ಎಂ., ವಾಗಾರ್ಥ, ಪು.೧೫

೪೧. ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟು, ಪು.೧೧೬

೪೨. ಕೆಮ್ತೂರು ರಘುಪತಿ ಭಟ್ಟ, ತುಳುನಾಡಿನ ಸ್ಥಳನಾಮಗಳು, ಪು.೫೦

೪೩. ದ್ರಾವಿಡಿಯನ್ ಎಟಿಮೊಲಾಜಿಕಲ್ ಡಿಕ್ಷನರಿ, ಪು.೫೭, ನಂ.೬೪೩

೪೪. ಸಿರಿಗನ್ನಡ ಅರ್ಥಕೋಶ, ಪು.೩೭೫

೪೫. ರಾಬರ್ಟ್‌ಕಾಲ್ಡ್ ವೆಲ್, ಎ ಕಂಪಾರೇಟಿವ್ ಗ್ರಾಮರ್ ಆಫ್ ದ್ರಾವಿಡಿಯನ್ ಲಾಂಗ್ವೇಜಸ್, ಪು.೫೭೨, ೧೯೬೧

೪೬. ಶಂಬಾಜೋಷಿ, ಎಡೆಗಳು ಹೇಳುವ ಕಂನಾಡ ಕತೆ, ಪು.೪೨

೪೭. ಚಿದಾನಂದಮೂರ್ತಿ ಎಂ., ವಾಗರ್ಥ, ಪು.೧೬

೪೮. ರಾಮಚಂದ್ರಮೂರ್ತಿ ಎಫ್.ಎಸ್., ಎ ಸ್ಟಡಿ ಆಫ್ ತೆಲುಗು ಪ್ಲೇಸ್ ನೇಮ್ಸ್, ಪು.೩೨೩

೪೯. ಕನ್ನಡ-ಕನ್ನಡ-ಇಂಗ್ಲೀಷ್ ನಿಂಘುಟು, ಪು.೪೪

೫೦. ರಾಬರ್ಟ್ ಕಾಲ್ಡ್ ವೆಲ್, ಎ ಕಂಪಾರೇಟಿವ್ ಗ್ರಾಮರ್ ಆಫ್ ದ್ರಾವಿಡಿಯನ್ ಲಾಂಗ್ವೇಜಸ್, ಪು.೯೭. ೧೯೬೧

೫೧. ದ್ರಾವಿಡಿಯನ್ ಎಟಿಮೊಲಾಜಿಕಲ್ ಡಿಕ್ಷನರಿ, ಪು.೨೬೯, ನಂ.೩೩೦೯

೫೨. ಮುರಿಯಪ್ಪ ಭಟ್ಟ(ಸಂ), ಕಿಟೆಲ್ ರ ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟು,

೫೩. ಸಿರಿಗನ್ನಡ ಅರ್ಥಕೋಶ, ಪು.೧೩೨

೫೪. ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟು, ಪು.೧೯೭

೫೫. ಸಿರಿಗನ್ನಡ ಅರ್ಥಕೋಶ, ಪು.೧೨೫

೫೬. ಅದೇ, ಪು.೧೨೧

೫೭. ಕನ್ನಡ-ಕನ್ನಡ ಇಂಗ್ಲೀಷ್ ನಿಘಂಟು, ಪು.೯೦೭

೫೮. ಕೊಪ್ಪಾ ಎಸ್.ಕೆ., ತರ್ದವಾಡಿನಾಡು : ಒಂದು ಅಧ್ಯಯನ, ಪು.೩೬

೫೯. ಅದೇ, ಪು.೩೬

೬೦. ಅದೇ, ಪು.೧೫

೬೧. ಕರ್ನಾಟಕ ರಾಜ್ಯ ಗೆಜೆಟಿಯರ್, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪು.೩೧

೬೨. ಅದೇ, ಪು.೩೭

೬೩. ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ, ಪು.೮೧೧

೬೪. ಅದೇ, ಪು.೯೨೯

೬೫. ಶಿವತಾರಕ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪು.೧

೬೬. ಅದೇ, ಪು.೧

೬೭. ಅದೇ, ಪು.೧೧

೬೮. ಅದೇ, ಪು.೧೩

೬೯. ಅದೇ, ಪು.೧೪

೭೦. ಅದೇ, ಪು.೧೪

೭೧. ಅದೇ, ಪು.೧೫

೭೨. ಅದೇ, ಪು.೧೫

೭೩. ಅದೇ, ಪು.೧೮

೭೪. ಅದೇ, ಪು.೧೯

೭೫. ಅದೇ, ಪು.೨೦

೭೬. ಅದೇ, ಪು.೨೦

೭೭. ಅದೇ, ಪು.೨೧

೭೮. ಇತಿಹಾಸ ದರ್ಶನ, ಸಂ-೧೦, ೧೯೯೫, ಪು.೧೮ ರಿಂದ ೨೦ ಮತ್ತು ಇತಿಹಾಸ ದರ್ಶನ, ಸಂ.೧೩, ೧೯೯೮, ಪು.೯-೧೦

೭೯. ಅದೇ, ಸಂ-೧೦, ೧೯೯೫, ಪು.೧೮-೨೦

೮೦. ಅದೇ, ಸಂ.೧೩, ೧೯೯೮, ಪು.೧೩-೧೪

೮೧. Indian Antiquery Vol-10, 1881, Pp.1-12, & Ancient India Vol-4, 1947, Pp.296 ಹಾಗೂ ಇತಿಹಾಸ ದರ್ಶನ ಸಂ.೧೪, ೧೯೯೯, ಪು.೧೩-೧೪

೮೨. ಇತಿಹಾಸ ದರ್ಶನ, ಸಂ.೯, ೧೯೯೪, ಪು.೩-೫ ಮತ್ತು ಅದೇ, ಸಂ.೧೧, ೧೯೯೬, ಪು.೩೦-೩೧

೮೩. ಡೆಕ್ಕನ್ ಹೆರಾಲ್ಡ್, ೨೭-೧೧-೧೯೯೭ ಮತ್ತು ಇಂಡಿಯನ್ ಆರ್ಕಿಯಾಲಜಿ ಎ ರಿವ್ಯೂ, ಸಂ.೧೪, ೧೯೯೯. ಪು.೧೧-೧೨ ಹಾಗೂ ಪ್ರಜಾವಾಣಿ, ೨೭ನೇ ಆಗಸ್ಟ್, ೨೦೦೦

೮೪. ಕೃಷ್ಣಮೂರ್ತಿ ಪಿ.ವಿ., ಕುಕ್ಕಲನಾಡು, ಇತಿಹಾಸದರ್ಶನ, ಸಂ.೭, ೧೯೯೨, ಪು.೧೪೪

೮೫. ಕಲಬುರ್ಗಿ ಎಂ.ಎಂ.(ಸಂ), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ-೧, ಪು.VI-VIII

೮೬. EC-IX, Bn, ೩೬, ಕ್ರಿ.ಶ.೭೫೦

೮೭. ಅದೇ, Nl, ೩೪, ಕ್ರಿ.ಶ.೭೫೦

೮೭a. ಅದೇ, Nl, ೦೧, ಕ್ರಿ.ಶ.೧೦೨೯

೮೮. ಅದೇ, Nl, ೩೭, ಕ್ರಿ.ಶ.೧೦೩೩

೮೯. ಅದೇ, Nl, ೦೩, ಕ್ರಿ.ಶ.೧೧೧೦

೯೦. ಗೋಪಾಲ್‌ರಾವ್ ಎಚ್.ಎಸ್., ಶಾಸನ ಸಂಕಲನ, ಪು.೨೦

೯೧. ಅದೇ, ಪು.೨೪-೨೫

೯೨. ಅದೇ, Nl, ೧೧, ಕ್ರಿ.ಶ.೧೩೩೦

೯೩. ಅದೇ, Nl, ೧೨, ಕ್ರಿ.ಶ.೧೩೩೦

೯೪. ಅದೇ, Nl, 9, ಕ್ರಿ.ಶ.೧೩೩೩

೯೫. ಅದೇ, ಚನ್ನಪಟ್ಟಣ ೦೭, ಕ್ರಿ.ಶ.೧೩೩೪

೯೬. ಅದೇ, Bn, ೧೧೦, ಕ್ರಿ.ಶ.೧೩೩೬

೯೭. ಅದೇ, Bn, ೧೧೭, ಕ್ರಿ.ಶ.೧೩೩೯

೯೮. ಅದೇ, Bn, ೧೧೧, ಕ್ರಿ.ಶ.೧೩೪೦

೯೯. ಅದೇ, ಮಾಗಡಿ, ೮೧, ಕ್ರಿ.ಶ.೧೩೪೦

೧೦೦. ಅದೇ Nl, 19, ಕ್ರಿ.ಶ.೧೩೪೦

೧೦೧. ಅದೇ, Nl, ೨೩, ಕ್ರಿ.ಶ.೧೩೫೯

೧೦೨. ಅದೇ, Bn, ೧೨೨, ಕ್ರಿ.ಶ.೧೪೦೮

೧೦೩. ಅದೇ, Bn, ೨೬, ಕ್ರಿ.ಶ.೧೪೩೦

೧೦೪. ಅದೇ, Bn, ೧೨೩, ಕ್ರಿ.ಶ.೧೪೯೫

೧೦೫. ಅದೇ, Nl, ೩೧, ಕ್ರಿ.ಶ.೧೫೩೩

೧೦೬. ಅದೇ, Nl, ೩೦, ಕ್ರಿ.ಶ.೧೫೮೧

೧೦೭. ಅದೇ, BS, ೧೦೩, ಕ್ರಿ.ಶ.೧೩೩೧

೧೦೮. ಅದೇ, ೧೮೫

೧೦೯. ಅದೇ, ೧೮೬, ಕ್ರಿ.ಶ.೧೫೨೩

ಅಧ್ಯಾಯ ೩

ಕುಕ್ಕಲನಾಡಿನ ರಾಜಕೀಯ ವ್ಯವಸ್ಥೆ

೩.೧. ಗಂಗರು

೩.೨. ಚೋಳರು

೩.೩. ಹೊಯ್ಸಳರು

೩.೪. ವಿಜಯನಗರದ ಅರಸರು

೩.೫. ಯಲಹಂಕನಾಡ ಪ್ರಭುಗಳು

೩

ಕುಕ್ಕಲನಾಡಿನ ರಾಜಕೀಯ ವ್ಯವಸ್ಥೆ

ಕುಕ್ಕಲನಾಡಿನ ಪ್ರದೇಶವನ್ನು ಆಳಿದ ವಿವಿಧ ಅರಸು ಮನೆತನಗಳ ಅರಸರು, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಳು ಮತ್ತು ಗಾವುಂಡರ ಬಗ್ಗೆ ಈ ಅಧ್ಯಾಯದಲ್ಲಿ ಇಲ್ಲಿನ ಶಾಸನಗಳ ಆಧಾರದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ(ಅಧ್ಯಾಯ ೨ರಲ್ಲಿ ಕುಕ್ಕಲನಾಡಿನ ಇತಿಹಾಸದ ಬಗ್ಗೆ ಚರ್ಚಿಸಲಾಗಿದೆ).

೩.೧. ಗಂಗರು

ಈಗಿನ ಕೋಲಾರ, ಬೆಂಗಳೂರು, ಮಂಡ್ಯ, ತುಮಕೂರು ಜಿಲ್ಲೆ ಪ್ರದೇಶಗಳು ಹಿಂದೆ ಗಂಗವಾಡಿ ಎನಿಸಿದ್ದು, ಗಂಗವಂಶವು ಈ ಪ್ರದೇಶದಲ್ಲಿ ಕ್ರಿ.ಶ.೩೫೦ ರಿಂದ ೫೫೦ರವರೆಗೆ ಪರಮಾಧಿಕಾರಿಗಳಾಗಿಯೂ, ಮುಂದೆ ೧೦ನೆಯ ಶತಮಾನದ ಕೊನೆಯವರೆಗೆ ಬಾದಾಮಿಯ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಮಾಂಡಲೀಕರಾಗಿಯೂ ಆಳುತ್ತಿದ್ದರು. ಆರಂಭದಲ್ಲಿ ಕೋಲಾರ, ಮುಂದೆ ತಲಕಾಡು, ಕೆಲಕಾಲ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಣ್ಣೆ ಇವರ ರಾಜಧಾನಿಗಳಾಗಿದ್ದವು. ಶಾಸನಗಳು ಇವರ ಇತಿಹಾಸಕ್ಕೆ ಮೂಲಾಧರಗಳಾದರೂ 'ಲೋಕವಿಭಾಗ' ಎಂಬ ಪ್ರಾಕೃತ ಕೃತಿ ಹಾಗೂ ಚಾವುಂಡರಾಯನ 'ಚಾವುಂಡರಾಯಪುರಾಣ'ದಲ್ಲೂ ಇವರ ಕುರಿತು ಕೆಲವು ಅಂಶಗಳು ತಿಳಿಯುತ್ತವೆ. ಕೊಂಗುದೇಶ ರಾಜರ್ಕ್ಕಳ (ಕೊಂಗುದೇಶದ ರಾಜರು) ಎಂಬ ತಮಿಳು ಗ್ರಂಥದಲ್ಲಿ ಗಂಗರ ಬಗ್ಗೆ ವಿವರಗಳಿವೆ. ಗಂಗರ ಇತಿಹಾಸವನ್ನು ಕೊಂಗುಣಿವರ್ಮನಿಂದ ಆರಂಭಿಸಿ ರಾಚಮಲ್ಲನ ಕಾಲಕ್ಕೆ ನಿಲ್ಲಿಸುತ್ತದೆ. ಈ ಗ್ರಂಥ ರಚನೆಯಾದ ಕಾಲ, ಕರ್ತೃ, ಬಳಸಿದ ಸಾಮಾಗ್ರಿ ಮುಂತಾದ ಅಂಶಗಳ ಬಗ್ಗೆ ವಿವರ ದೊರೆಯುವುದಿಲ್ಲ.[೧] ತಮಿಳು ಶಾಸನಗಳಲ್ಲೂ ಗಂಗರನ್ನು ಕೊಂಗಣಿ ಅರಸರೆಂದು ಕರೆದಿದೆ. ಗಂಗರು ತಮ್ಮನ್ನು ಜಾಹ್ನವೇಯ ಕುಲದ, ಕಣ್ವಾಯಾನ ಗೋತ್ರದ, ಇಕ್ಷ್ವಾಕು ವಂಶದವರೂ ಎಂದು ಕರೆದುಕೊಂಡಿದ್ದಾರೆ.[೨]

ಕ್ರಿ.ಶ.೫ನೆಯ ಶತಮಾನದಿಂದ ಕೋಲಾರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಲು ಪ್ರಾರಂಭಿಸಿದ ಗಂಗ ರಾಜರ "ಗಂಗವಾಡಿ ೯೬,೦೦೦" ಪ್ರದೇಶಕ್ಕೆ 'ಕುಕ್ಕಲನಾಡು' ಸೇರಿತ್ತು. ಗಂಗರ ಮೊದಲ ರಾಜಧಾನಿ ಕೋಲಾರ, ಮುಂದೆ ತಲಕಾಡು ಅವರ ರಾಜಧಾನಿಯಾಯಿತು. ಇವರ ಖ್ಯಾತ

ಕೇಂದ್ರ ನಂದಿಯು (ನಂದಿಬೆಟ್ಟ) ಕುಕ್ಕಲನಾಡಿಗೆ ತುಂಬಾ ದೂರವೇನೂ ಇಲ್ಲ. ಗಂಗರ ಕೊನೆಯ ಕಾಲದಲ್ಲಿ ನೆಲಮಂಗಲ ತಾಲ್ಲೂಕಿನ ಮಣ್ಣೆಯು ಅವರ ರಾಜಧಾನಿಯಾಯಿತು. ಗಂಗ ವಂಶದ ಅರಸು ಶ್ರಿಪುರುಷನು ಈ ಪ್ರದೇಶದಲ್ಲಿ ಆಡಳಿತ ನಡೆಸಿದ ಸ್ಪಷ್ಟ ದಾಖಲೆಗಳಿವೆ.

ಶ್ರೀ ಪುರುಷನು ಕುಕ್ಕಲನಾಡನ್ನು ಆಳ್ವಿಕೆ ಮಾಡಿದನೆಂದು ಈ ಪ್ರದೇಶದ ೩ ಶಾಸನಗಳು ಉಲ್ಲೇಖಿಸುತ್ತವೆ.[೩] ಕ್ರಿ.ಶ.೭೫೦ ದಾಸರಹಳ್ಳಿಯು ಶಾಸನದಲ್ಲಿ ಕುಕ್ಕಲನಾಡನ್ನು- "ಕುಕ್ಕರಪಾಟಿ ಕ್ಯಾಟೆನಾಡ್" ಎಂದು ಉಲ್ಲೇಖಿಸಿದೆ.[೪] ನೆಲಮಂಗಲ ತಾಲ್ಲೂಕಿನ ತೋಟಗೆರೆ ಗ್ರಾಮದ ಅರ್ಜುನ ದೇವಾಲಯದ ಪಕ್ಕದಲ್ಲಿರುವ ಶಾಸನವು ಎತ್ತಳ್ದೊರ ಎಂಬ ಶ್ರೀ ಪುರುಷನ ಸಾಮಂತನಾಯಕನು ಕುಕ್ಕಲನಾಡನ್ನು ಆಳುತ್ತಿದ್ದ ಎಂದು ತಿಳಿಸುತ್ತದೆ. ಈ ಶಾಸನವು ಕುಕ್ಕಲನಾಡನ್ನು 'ಕುಕ್ಕನರೆನಾಡು' ಎಂದು ಹೆಸರಿಸುತ್ತದೆ. 'ತಳಾರ ಜತ್ತ' ಎಂಬುವವನು ಪೊಗುಂಡಿ(ಣ್ಡಿ) ಯುದ್ಧದಲ್ಲಿ ಮಡಿದ ಬಗ್ಗೆ ಸಹ ವಿವರಿಸುತ್ತದೆ.[೫] ಅದೇ ಗ್ರಾಮದ ಮತ್ತೊಂದು ಶಾಸನವು - ಶ್ರೀ ಪುರುಷನು ರುದ್ರ ಸೋಮಯಾಜಿಯ ಮಗ ಸಕ್ಕಹರ ಶರ್ಮನಿಗೆ ಅತ್ತಿಗುಂಟೂರು ಎಂಬ ಗ್ರಾಮವನ್ನು ದಾನವಾಗಿ ನೀಡುತ್ತಾನೆ. ಇದು ಬ್ರಾಹ್ಮಣರ ಅಗ್ರಹಾರವಾಗಿತ್ತು. ಇಲ್ಲಿ ಯಾವುದೇ ತೆರಿಗೆಗಳಿರಲಿಲ್ಲ ಎಂದು ತಿಳಿಸುತ್ತದೆ.[೬] ಹೀಗೆ ಈ ನಾಡಿನ ಕೆಲವು ಶಾಸನಗಳು ಗಂಗದೊರೆ ಶ್ರೀ ಪುರುಷ ಮತ್ತು ಕುಕ್ಕಲನಾಡಿನ ಅವರ ಸಾಮಂತ ನಾಯಕರ ಬಗ್ಗೆ ವಿವರಿಸುತ್ತವೆ.

೩.೨. ಚೋಳರು

ತಮಿಳುನಾಡಿನ ತಂಜಾವೂರಿನಿಂದ ಆಳುತ್ತಿದ್ದ ಚೋಳರು, ೧ನೇ ರಾಜರಾಜನ ಕಾಲದಿಂದ (ಕ್ರಿ.ಶ.೯೮೫-೧೦೧೬) ಗಂಗವಾಡಿ ಪ್ರದೇಶದ ಮೇಲೆ ಆಕ್ರಮಣ ನಡೆಸಿ, ಬೆಂಗಳೂರು ಗ್ರಾಮಾಂತರದ ಕುಕ್ಕಲನಾಡಿನ ಪ್ರದೇಶವನ್ನು ತಲುಪಿದರು. ಮುಂದೆ ಕ್ರಿ.ಶ.೧೦೦೪ಕ್ಕೆ ಇಡೀ ಗಂಗವಾಡಿ ಚೋಳರ ಆಡಳಿತಕ್ಕೆ ಒಳಪಟ್ಟಿತು. ರಾಜೇಂದ್ರ ಚೊಳನ (ಕ್ರಿ.ಶ.೧೦೨೪-೧೦೫೪) ಕಾಲದಲ್ಲಿ ಚೋಳರ ಆಡಳಿತ ಇಲ್ಲಿ ಭದ್ರವಾಗಿ ನೆಲೆಯೂರಿತು. ಕುಕ್ಕಲನಾಡಿನ ಪ್ರದೇಶ, ರಾಜೇಂದ್ರ ಚೋಳನ 'ವಿಕ್ರಮ ಚೋಳಮಂಡಲ ಮತ್ತು 'ನಿಗರಿಲಿ ಚೋಳಮಂಡಳ'ಗಳಲ್ಲಿ ಸೇರಿತ್ತು. ಇಲ್ಲಿನ ಅವರ ಶಾಸಗಳು ತಮಿಳು ಭಾಷೆಯಲ್ಲೇ ಇದ್ದು ಚೋಳರನ್ನು ಇಲ್ಲಿಂದ ಹೊರದೂಡಿದ ನಂತರವೂ ಮುಂದೆ ಎರಡು ಶತಮಾನಕಾಲದಲ್ಲೂ ಅವರ ಈ ಪ್ರದೇಶದ ಬಹುಪಾಲು ಶಾಸನಗಳು ತಮಿಳು ಭಾಷೆಯಲ್ಲಿಯೇ ಇವೆ. ಕುಕ್ಕಲನಾಡಿನ ಪ್ರದೇಶವನ್ನು ಅಲ್ಲಿನ ಶಾಸನಗಳು ಚೋಳ ಅರಸರಾದ ರಾಜೇಂದ್ರಚೋಳ ಮತ್ತು ರಾಜರಾಜ ಕುಲೋತುಂಗ ಚೋಳರು ಆಳ್ವಿಕೆ ಮಾಡಿದ ಬಗ್ಗೆ ಉಲ್ಲೇಖಿಸುತ್ತವೆ.[೭] ಈ ಪ್ರದೇಶವನ್ನು ಚೋಳ ಅರಸರ ಮಹಾಮಂಡಳೇಶ್ವರರಾಗಿ ಆಡಳಿತ ಮಾಡಿದ, ದಂಡನಾಯಕರಾಗಿ ಆಳಿದ, ಇಲ್ಲಿ ಅಧಿಕಾರಿಗಳಾಗಿದ್ದ

ಮಲ್ಲಣ್ಣದೇವ ದಂಡನಾಯಕ, ಯದುವಮಲ್ಲ ದಂಡನಾಯಕ, ವಾಮನಯ್ಯ ಅಧಿಕಾರಿ ಮತ್ತು ಮುಮ್ಮಡಿ ಚೋಳಗಾವುಂಡರ ಬಗ್ಗೆ ಇಲ್ಲಿನ ಶಾಸನಗಳು ಬೆಳಕು ಚೆಲ್ಲುತ್ತವೆ.

ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಶಾಸನವು ಶ್ರೀ ರಾಜೇಂದ್ರ ಚೋಳನು ರಾಜಾಜ್ಞೆಯನ್ನು ಪಾಲಿಸಬೇಕೆಂದು ಕುಕ್ಕಲನಾಡಿನ ಅಧಿಕಾರಿಗಳಾದ ವಾಮನಯ್ಯ, ಯದುವಮಲ್ಲ ದಂಡನಾಯಕ, ಮಲ್ಲಣ್ಣ ದೇವ ದಂಡನಾಯಕರಿಗೆ ಸೂಚಿಸಿದ ಉಲ್ಲೇಖವಿದೆ. ದೇವಾಲಯದ ರಕ್ಷಣೆ, ಬಾಣಪುರದ ಕೆರೆಯ ಗದ್ದೆಯ ೧೨ ಕಂಡುಗ ಅಕ್ಕಿಯನ್ನು ದೇವಬೋಜ ಎಂಬುವವರಿಗೆ ನೀಡಬೇಕೆಂದು ತಿಳಿಸಲಾಗಿದೆ.[೮] ಹಾಗೂ ಇಲ್ಲಿನ ನಾಡಗೌಡರಿಗೆ (ಇವರ ಬಗ್ಗೆ ಉಲ್ಲೇಖವಿಲ್ಲ), ಕುಕ್ಕನೂರು ನಾಡಗಾವುಂಡನ ಮಗ ರಟ್ಟಕುಳ ಕಾಲ ಚೋಳಗಾವುಂಡ, ಬಾಣಪುರದ ವಿಕ್ರಮಚೋಳ ಗಾವುಂಡ, ಆಲೂರ ಚೋಳಗಾವುಂಡ, ಪಟ್ಟಂದೂರ ಉತ್ತಮ ಚೋಳಗಾವುಂಡ, ಬಾಳೆಯವಾಡಿಯ ಮುಮ್ಮಡಿ ಚೋಳ ಗಾವುಂಡ ಎಂಬ ಬಿರುವುಗಳಿದ್ದವು ಎಂದು ತಿಳಿದುಬರುತ್ತದೆ.

ಹೆಸರುಘಟ್ಟ ಬಳಿಯ ಐಗಂಡಪುರದ ಒಂದು ಶಾಸನವು ಅಲ್ಲಿನ ಸಿದ್ದೇಶ್ವರ ದೇವಾಲಯಕ್ಕೆ ನೀಡಿದ ದಾನವನ್ನು ತಿಳಿಸುತ್ತದೆ(ಇದರ ಬಗ್ಗೆ ವಿವರವಿಲ್ಲ) ಹಾಗೂ ವಾಮನಯ್ಯ ಎಂಬ ಅಧಿಕಾರಿಯ ಹೆಸರನ್ನು ಮಾತ್ರ ಉಲ್ಲೇಖಸಿತ್ತದೆ. ಮತ್ತು ಕುಕ್ಕಲನಾಡನ್ನು 'ಕುಕ್ಕನೂರ್ನ್ನಾಡು' ಎಂದು ಉಲ್ಲೇಖಿಸಿದೆ.[೯] ಕ್ರಿ.ಶ.೧೦೬೫ರ ಹುರುಳಿಚಿಕ್ಕನಹಳ್ಳಿಯ ತಮಿಳು ಶಾಸನದಲ್ಲಿ ವೀರರಾಜೇಂದ್ರಚೋಳ ಮತ್ತು ಅಹವ ಮಲ್ಲನೊಂದಿಗೆ ನಡೆದ ಯುದ್ಧದ ಉಲ್ಲೇಖವಿದೆ.[೧೦] (ಆದರೆ ವಿವರಗಳಿಲ್ಲ) ಹಾಗೂ ಮುಮ್ಮಡಿ ಚೋಳಗಾವುಂಡನ ಬಗ್ಗೆಯೂ ಉಲ್ಲೇಖ ಇದೆ. ಬಿನ್ನಮಂಗಲದ ತಮಿಳುಶಾಸನವು ಕುಲೋತ್ತುಂಗ ಚೋಳನು ಶ್ರೀಮುಕ್ತಿನಾಥ ದೇವರಿಗೆ ಬಿನ್ನಮಂಗಲ ಮತ್ತು ನಕ್ಕೂರು ಎಂಬ ಗ್ರಾಮಗಳನ್ನು(ದೇವರ ಸೇವೆಗೆ)ದತ್ತಿ ಬಿಟ್ಟ ಬಗ್ಗೆ ತಿಳಿಸುತ್ತದೆ.[೧೧]

ಈ ಮೇಲಿನ ಎಲ್ಲಾ ಶಾಸನಗಳಿಂದ ನಾವು ಕುಕ್ಕಲನಾಡನ್ನು ಚೋಳ ಅರಸರ ಸಾಮಂತಾಧಿಕಾರಿಗಳು ಆಡಳಿತ ನಡೆಸಿದರು ಎಂದು ಅರ್ಥೈಸಿಕೊಳ್ಳಬಹುದು.(ಆದರೆ ಈ ಶಾಸನಗಳಲ್ಲಿ ಆಡಳಿತದ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬರುವುದಿಲ್ಲ)

೩.೩. ಹೊಯ್ಸಳರು

ಕುಕ್ಕಲನಾಡಿನ ಪ್ರದೇಶದ ಗಂಗರ ಅನೇಕ ಅಧಿಕಾರಿಗಳು ಮಲೆನಾಡಿನಲ್ಲಿ ತಲೆಯೆತ್ತ ತೊಡಗಿದ್ದ ಹೊಯ್ಸಳರೊಂದಿಗೆ ಸೇರಿಕೊಂಡು ಚೋಳರನ್ನು ಗಂಗವಾಡಿ ಪ್ರದೇಶದಿಂದ ಹೊರ ಅಟ್ಟಲು ಪ್ರಯತ್ನಿಸುತ್ತಲೇ ಇದ್ದರು. ಕ್ರಿ.ಶ.೧೧೦೦ರ ನಂತರ ಹೆಚ್ಚು ಪ್ರಬಲರಾಗತೊಡಗಿದ ಹೊಯ್ಸಳರು ಕ್ರಿ.ಶ.೧೧೧೬ರಲ್ಲಿ ಗಂಗರ ಪ್ರಾಚೀನ ರಾಜಧಾನಿ ತಲಕಾಡಿನಿಂದ ಚೋಳರನ್ನು ಓಡಿಸಿ ಗಂಗವಾಡಿ ೯೬,೦೦೦ ಪ್ರದೇಶವನ್ನು

ತಮ್ಮ ವಶಕ್ಕೆ ತೆಗೆದುಕೊಂಡರು. ಆಗ "ಕುಕ್ಕಲನಾಡು" ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ಈ ಪ್ರದೇಶವು ಹೊಯ್ಸಳರ ಕಾಲದಲ್ಲಿ ಬಹಳ ಮಹತ್ವದ್ದಾಗಿತ್ತು ಎಂದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.

ಹೊಯ್ಸಳರು ಕರ್ನಾಟಕದಲ್ಲಿ ದ್ವಾರ ಸಮುದ್ರದಿಂದ ಆಳ್ವಿಕೆ ನಡೆಸಿದರು. ಇವರ ಪ್ರಮುಖ ಅರಸರು ವಿಷ್ಣುವರ್ಧನ, ಮೊದಲನೇ ವೀರಬಲ್ಲಾಳ, ರಾಮನಾಥ, ನರಸಿಂಹ, ವೀರಬಲ್ಲಾಳ II, ವೀರ ಬಲ್ಲಾಳ III ಮುಂತಾದವರು.

ಕುಕ್ಕಲನಾಡಿನ ಪ್ರದೇಶದಲ್ಲಿ ಹೊಯ್ಸಳ ದೊರೆ ವೀರಬಲ್ಲಾಳನ (ವೀರಬಲ್ಲಾಳ III) ಸಾಮಂತಾಧಿಕಾರಿಗಳಾಗಿ, ಮಹಾಮಂಡಳೇಶ್ವರರಾಗಿ, ಉಪ್ಪೂರ ಬಂಮೆಯ ನಾಯಕ, ಮಯಿಲೆಯ ನಾಯಕ, ಚಂನೆಯ ನಾಯಕ, ಜಾಲೆಯ ದಂಡನಾಯಕ, ಹೊಂಗನಗೌಡ, ಚಿಕ್ಕಣ್ಣ, ಹೊನ್ನಪ್ಪ ಮುಂತಾದ ಅಧಿಕಾರಿಗಳು ಆಡಳಿತ ನಡೆಸುತ್ತಿದ್ದರು ಎಂದು ಇಲ್ಲಿನ ಶಾಸನಗಳಲ್ಲಿ ಉಲ್ಲೇಖಗಳಿವೆ. ಆದರೆ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ.

ಕ್ರಿ.ಶ.೧೧೫೭ರ ಬೆಂಗಳೂರು ತಾಲ್ಲೂಕಿನ, ವಸಂತನ ಹಳ್ಳಿಯ ತಮಿಳು ಶಾಸನದಲ್ಲಿ ಹೊಯ್ಸಳ ದೊರೆ ನರಸಿಂಹ ಪೊಯ್ಸಳ ದೇವರಸನ ಅಧಿಕಾರಿ ಕುಕ್ಕಲನಾಡಿನ ಪೆರ್ಕಡಿಯ ಅಚಲಯ್ಯನು ತಿಪ್ಪೂರು ನಗರಕ್ಕೆ ಮುತ್ತಿಗೆ ಹಾಕಿ ಹೋರಾಡಿ ಶತ್ರುಗಳನ್ನು ಸೋಲಿಸಿ ಆ ಪ್ರದೇಶವನ್ನು ಗೆದ್ದ ಉಲ್ಲೇಖವಿದೆ. ಇದರಲ್ಲಿ ಮತ್ತೊಬ್ಬ ಅಧಿಕಾರಿ ಮಾಚಿದೇವರಸರ ಉಲ್ಲೇಖವು ಬರುತ್ತದೆ.[೧೨] ನೆಲಮಂಗಲ ತಾಲ್ಲೂಕಿನ ಐಗಂಡಪುರದ ಕ್ರಿ.ಶ.೧೩೦೧ರ ಹೊಯ್ಸಳ ದೊರೆ ವೀರಬಲ್ಲಾಳ ದೇವರಸನ ಕಾಲದ ತಮಿಳು ಶಾಸನದಲ್ಲಿ ವಿವಿಧ ತೆರಿಗೆಗಳು ಮತ್ತು ದಾನದ ಉಲ್ಲೇಖಗಳಿವೆ.[೧೩]

ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಕ್ರಿ.ಶ.೧೩೨೯ರ ಬೈಲಕೋನೇನಹಳ್ಳಿಯ ಶಾಸನವು ಹೊಯ್ಸಳ ದೊರೆ ವೀರಬಲ್ಲಾಳನ ಅಧೀನದಲ್ಲಿ ಕುಕ್ಕಲನಾಡನ್ನು ಆಳುತ್ತಿದ್ದ ಉಪ್ಪೂರ ಬಂಮೆಯ ನಾಯಕನ ಬಗ್ಗೆ ಉಲ್ಲೇಖಿಸುತ್ತದೆ. ಹಾಗೂ ಅವನು ನೀಡಿದ ದಾನದ ಬಗ್ಗೆ ವಿವರವನ್ನೊದಗಿಸುತ್ತದೆ. ದಾನ ನೀಡುವಾಗ ಸಾಕ್ಷಿಗಳಾಗುವವರ ಹೆಸರನ್ನು ಸೂಚಿಸಿದೆ. ಹನುಗೂರ ಮಲಯಪ್ಪ, ಗೋಪಗವಿಡ, ಬೋಕಣ, ಬಂಮಪ, ಸಿರಿಯಕ, ಪಿಡಾರಿಯ ಸೆಟಿ, ಮಲಪ್ಪ, ಸೊಂಣೆ ಸೆಟಿ ಮುಂತಾದವರು. ಇವರುಗಳು ಊರಿನ ಮುಖಂಡರು ಮತ್ತು ವಿವಿಧ ಅಧಿಕಾರಿಗಳಿರಬಹುದು. ದಾನ ನೀಡಿದವರು ವೀರಯ್ಯನು-ಪಡೆದವರು ಕಿತ್ತನೆಲ್ಲಿಯ ದೊಡ್ಡನ ಗೌಡರ ಮಕ್ಕಳು ಗೌಡಪ್ಪ, ಮಾರಪ್ಪ, ಗಂಗಣ್ಣರು ಎಂದು ಉಲ್ಲೇಖಿಸಿದೆ. ಆದರೆ ದಾನವನ್ನಾಗಿ ಏನನ್ನು ನೀಡಿದರು ಎಂಬುದರ ವಿವರವಿಲ್ಲ. ಈ ಶಾಸನದಿಂದ ನಮಗೆ ಕ್ರಿ.ಶ.೧೩೨೫ರ ಸುಮಾರಿನಲ್ಲಿ ಶ್ರೀಮನ್ಮಹಾ ನಾಯಕಚಾರ್ಯ ಮೇದಿನಿಮನ್ನೆಯರ

ಗಂಡ ಉಪ್ಪೂರ ಬೊಮ್ಮನಾಯಕನು ಕುಕ್ಕಲನಾಡನ್ನು ಆಳುತ್ತಿದ್ದ ಎಂದು ಹಾಗೂ ಕುಕ್ಕಲನಾಡಿನ ನಾಡ ಪ್ರಭುಗಳು ಕಿತ್ತನೆಲ್ಲಿಯ ದೊಡ್ಡಗೌಡನ ವಂಶೀಯರ ಬಗ್ಗೆ ಉಲ್ಲೇಖವಿರುವುದು ತಿಳಿದುಬರುತ್ತದೆ.[೧೪]

ನೆಲಮಂಗಲ ತಾಲ್ಲೂಕಿನ ಕಿತ್ತನೆಲ್ಲಿಯ ಕ್ರಿ.ಶ.೧೩೩೦ರ ಹೊಯ್ಸಳ ವೀರಬಲ್ಲಾಳ ಶಾಸನವು ಕುಕ್ಕಲನಾಡನ್ನು ಆಳುತ್ತಿದ್ದ ಜಾಲೆಯ ದಂಡನಾಯಕನ ಬಗ್ಗೆ ಉಲ್ಲೇಖಿಸುತ್ತದೆ.[೧೫] ಈ ಊರಿನ ಮತ್ತೊಂದು ಶಾಸನವು ಕುಕ್ಕಲನಾಡನ್ನಾಳುತ್ತಿದ್ದ ಉಪ್ಪೂರ ಬಂಮನಾಯಕನನ್ನು ಪ್ರಸ್ತಾಪಿಸಿದೆ.[೧೬]

ಕ್ರಿ.ಶ.೧೩೩೩ರ ಮಂತಾಳ ಗ್ರಾಮದ ಶಾಸನ[೧೭], ಕ್ರಿ.ಶ.೧೩೩೭ರ ಬ್ಯಾಡರಹಳ್ಳಿ ಶಾಸನ[೧೮], ಕ್ರಿ.ಶ.೧೩೪೦ರ ರಾಮಚಂದ್ರದ ಶಾಸನಗಳಲ್ಲಿ[೧೯], ಹೊಯ್ಸಳ ದೊರೆ ವೀರಬಲ್ಲಾಳ ದೇವರಸನ ಕಾಲದಲ್ಲಿ ಕುಕ್ಕಲನಾಡನ್ನು ಆಳುತ್ತಿದ್ದ ಮಯಿಲೆಯ ನಾಯಕ ಮತ್ತು ಅವನ ಸಹೋದರ ಜಂನೆಯ (ಚಂನೆಯ) ನಾಯಕರ ಬಗ್ಗೆ ಉಲ್ಲೇಖವಿರುವುದು ಕಂಡುಬಂದಿದೆ. ಹಾಗೆಯೇ ಕ್ರಿ.ಶ.೧೩೪-ರ ಹಲಿಗೆವಡೇರಳ್ಳಿ ಗ್ರಾಮದ ಶಾಸನ ಕುಕ್ಕಲನಾಡನ್ನು ಕೋಟ್ಯೆಯನಾಯಕ, ಬಂನೆಯ ನಾಯಕ, ಕುಮಾರ ಕೋಟ್ಯೆಯನಾಯಕರು ಆಳ್ವಿಕೆ ಮಾಡುತ್ತಿದ್ದರು ಎಂದು ತಿಳಿಸುತ್ತದೆ.[೨೦]

ಈ ಎಲ್ಲಾ ಶಾಸನಗಳಲ್ಲಿ ಕುಕ್ಕಲನಾಡನ್ನು ಆಳುತ್ತಿದ್ದ ನಾಯಕರು, ಗೌಡರುಗಳು, ಮಹಾ ಮಂಡಳೇಶ್ವರರು, ವಿವಿಧ ಅಧಿಕಾರಿ ವರ್ಗದವರ ಪ್ರಸ್ತಾಪವಿದೆಯೇ ಹೊರತು ಇವರುಗಳ ಬಗ್ಗೆ ಹೆಚ್ಚಿನ ವಿವರಗಳಿಲ್ಲ.

೩.೪. ವಿಜಯನಗರದ ಅರಸರು

ಕುಕ್ಕಲನಾಡಿನ ಪ್ರದೇಶವು ಹೊಯ್ಸಳರ ನಂತರ ವಿಜಯನಗರದ ವಶವಾಯಿತು. ಹೊಯ್ಸಳರ ರಾಜ್ಯ ನಾಶವಾಗಿ ಕರ್ನಾಟಕದ ಈ ಭಾಗದಲ್ಲಿ ಉಂಟಾದ ರಾಜಕೀಯ ನಿರ್ವಾತವನ್ನು ತುಂಬಿದ್ದು ವಿಜಯನಗರ ಸಾಮ್ರಾಜ್ಯ. ಹೊಯ್ಸಳರ ವಶವಿದ್ದ ಈ ಪ್ರದೇಶ ವಿಜಯನಗರದ ವಶವಾದಾಗ ಯಾವುದೇ ಘರ್ಷಣೆ, ರಕ್ತಪಾತಗಳು ಆದಂತೆ ಕಾಣಿಸದು. ಈಗಾಗಲೇ ಕಂಡಿದ್ದಂತೆ ಮೂರನೆಯ ಬಲ್ಲಾಳನ ಸೋದರಳಿಯ (ದಡಿ ಸೋಮದಂಡ ನಾಯಕನ ಮಗ) ಬಲ್ಲಪ್ಪ ದಂಡನಾಯಕ ವಿಜಯನಗರದ ಹರಿಹರನ ಮಗಳ ಗಂಡನಾಗಿದ್ದ.

ವಿಜಯನಗರದ ಆಳ್ವಿಕೆಯ ಮೊದಲ ಶಾಸನ ಕುಕ್ಕಲ ನಾಡಿನಲ್ಲಿ ನೆಲಮಂಗಲ ತಾಲ್ಲೂಕಿನ ಬಾಣಸವಾಡಿಯಲ್ಲಿ ದೊರೆತಿದೆ. ಈ ಶಾಸನದಲ್ಲಿ ವಿಜಯನಗರದ ಒಂದನೇ ಹರಿಹರನ (ಸಂಗಮವಂಶ) ಉಲ್ಲೇಖವಿದೆ. ಕುಕ್ಕಲನಾಡಪ್ರಭು ಮಯಿಲೆಯ ನಾಯಕನು 'ಮಹಾಮಂಡಳೇಶ್ವರ ವೀರಹರಿಯಪ್ಪ ಒಡೆಯನು ತನ್ನ ಸ್ವಾಮಿ ಎಂದು ಹೇಳಿದ್ದಾನೆ.[೨೧] ಈ ಮಯಿಲೆಯ ನಾಯಕನು ಕ್ರಿ.ಶ.೧೩೩೦ರಲ್ಲಿ

ಹೊಯ್ಸಳರ ಅಧಿಕಾರಿಯಾಗಿದ್ದು, ೧೩೪೦ರಲ್ಲಿ ವಿಜಯನಗರದ ಹರಿಹರನ ಸಾಮಂತನಾದದ್ದು ಕಂಡುಬರುತ್ತದೆ. ಇದೇ ರೀತಿ ಕನ್ನೆಲ್ಲಿಯ ೧೩೪೬ರ ಒಂದು ತಮಿಳು ಶಾಸನ ಮಹಾಮಂಡಳೇಶ್ವರ ಹರಿಯಪ್ಪ ಒಡೆಯ ಮತ್ತು ಅವನ ಅಧೀನನಾಗಿ ವಲ್ಲಪ್ಪ(ಮೇಲೆ ಹೇಳಿದ ಬಲ್ಲಪ್ಪ ದಂಡನಾಯಕ)ನನ್ನು ಉಲ್ಲೇಖಿಸುತ್ತದೆ. ಇದಲ್ಲದೆ ಬಾಣಸವಾಡಿ ಶಾಸನದಲ್ಲಿ ಹರಿಹರನನ್ನು 'ಚತುಸ್ಸಮುದ್ರಾಧಿಪತಿ' ಎಂದಿದ್ದು, ಅವನು ಆಗಲೇ ರಾಜತ್ವದ ಸ್ಥಾನಮಾನವನ್ನು ಹೊಂದಿದ್ದ. ಕ್ರಿ.ಶ.೧೩೪೦ರ ಪರಿಸರದಲ್ಲಿ ಅಳಿಯ ಬಲ್ಲಪ ಮತ್ತು ಅವನ ತಮ್ಮ ಸಿಂಗೆಯ ದಂಡನಾಯಕರು ತಮ್ಮ ತಂದೆ ಸೋಮದೇವ ದಂಡನಾಯಕರ ಅಧೀನರಾಗಿ ಆಳ್ವಿಕೆ ನಡೆಸುತ್ತಿದ್ದರು.[೨೨]

ನೆಲಮಂಗಲ ತಾಲ್ಲೂಕಿನ ಹುರುಳಿ ಚಿಕ್ಕನಹಳ್ಳಿಯ ಒಂದು ಶಾಸನವು ವಿಜಯನಗರದ ಅರಸು ಶ್ರಿ ವೀರಬುಕ್ಕಣ್ಣ ಒಡೆಯರ ಸಾಮಂತ ಅಧಿಕಾರಿ ಮಯಿಲೆಯನಾಯಕ, ಇವನ ಸಹೋದರರಾದ ಯೋಜಯನಾಯಕ, ಸಂತೆಯ ನಾಯಕರು 'ಕುಕ್ಕಲನಾಡನ್ನು' ಆಳುತ್ತಿದ್ದರು ಎಂದು ತಿಳಿಸುತ್ತದೆ.[೨೩]

ವಿಜಯನಗರದ ಅರಸು ಶ್ರೀ ವೀರದೇವರಾಯನ (ಒಂದನೇ ದೇವರಾಯ) ಕ್ರಿ.ಶ.೧೪೦೮ರ ಕನ್ನೆಲ್ಲಿ ಶಾಸನದಲ್ಲಿ ಹಯಕಸ ಎಂಬ ಕುಕ್ಕಲನಾಡಿನ ಅಧಿಕಾರಿಯ ಉಲ್ಲೇಖವಿದೆ.[೨೪] ಬೆಂಗಳೂರು ತಾಲ್ಲೂಕಿನ ದೊಡ್ಡ ಬೊಮ್ಮಸಂದ್ರದ ಕ್ರಿ.ಶ.೧೪೩೦ರ ಶಾಸನದಲ್ಲಿ ವಿಜಯನಗರದ ಅರಸು ಪ್ರೌಢದೇವರಾಯನ ಅಧೀನದಲ್ಲಿ ಕುಕ್ಕಲನಾಡನ್ನು ಆಳಿದ "ಬುಕ್ಕನಾಯಕನ" ಬಗ್ಗೆ ಉಲ್ಲೇಖವಿರುವುದು ತಿಳಿದುಬರುತ್ತದೆ.[೨೫] ಇದೇ ತಾಲ್ಲೂಕಿನ ಗೊಂಗಡಿಪುರಂ (ತಿಮ್ಮಣ್ಣರಾಜಪುರ)ದ ಕ್ರಿ.ಶ.೧೪೯೬ರ ಶಾಸನವೂ ವಿಜಯನಗರದ ಮತ್ತೊಬ್ಬ ಅರಸು ಇಮ್ಮಡಿ ನರಸಿಂಗರಾಯರ ವಿವಿಧ ಅಧಿಕಾರಿಗಳು ಮತ್ತು ಊರಿನ ಪ್ರಮುಖ ಮುಖಂಡರಾದ ಗೊಡೆರಾಯ ರೂಪನಾರಾಯಣ, ಹುಲಿಮಯ್ಯ ಮತ್ತು ಇವನ ಮಗ ಅನಂತಯ್ಯ ಮುಂತಾದವರನ್ನು ಉಲ್ಲೇಖಿಸುತ್ತದೆ.[೨೬]

ಹೆಸರುಘಟ್ಟದ ಕ್ರಿ.ಶ.೧೫೩೩ರ ಶಾಸನವು ವಿಜಯನಗರದ ಅರಸು ಅಚ್ಯುತದೇವರಾಯನ ಬಗ್ಗೆ ತಿಳಿಸುತ್ತದೆ. ಇಲ್ಲಿನ ಚಂದ್ರಮೌಳೇಶ್ವರ ದೇವಾಲಯಕ್ಕೆ ದತ್ತಿಬಿಟ್ಟ ಬಗ್ಗೆ ವಿವರಗಳಿವೆ. ಈ ಶಾಸನದಲ್ಲಿ ಕುಕ್ಕಲನಾಡಿನ ಉಲ್ಲೇಖವಿದೆ. ಇದರಿಂದ ಅಚ್ಯುತರಾಯನ ಆಡಳಿತಕ್ಕೆ ಕುಕ್ಕಲನಾಡು ಒಳಪಟ್ಟಿತ್ತು ಎನ್ನಬಹುದು.[೨೭]

ಮಾಗಡಿ ತಾಲ್ಲೂಕಿನ ಬಾಣವಾಡಿಯ ಕ್ರಿ.ಶ.೧೫೪೭ರ ಶಾಸನದಲ್ಲಿ ವಿಜಯನಗರದ ಅರಸು ಸದಾಶಿವರಾಯನ ಆಡಳಿತಾಧಿಕಾರಿಯಗಿ ಕುಕ್ಕಲನಾಡನ್ನು ಆಳುತ್ತಿದ್ದ ಚಂನೆಯದೇವ ಮಹಾಅರಸು ಮತ್ತು ಮುದುಗಟ್ಟದ ಪಂಡಿತಯ್ಯ ಅವರ ಉಲ್ಲೇಖವಿದೆ.[೨೮]

ಈ ಶಾಸನಗಳಲ್ಲಿ ಹೊಯ್ಸಳರ ಅಧೀನದಲ್ಲಿದ್ದ ಸಾಮಂತಾಧಿಪತಿಗಳು ಹಾಗೂ ನಾಡ ಪ್ರಭುಗಳು ಮುಂತಾದವರು, ವಿಜಯನಗರದ ಅರಸರ ಅಧೀನರಾಗಿ ಆಳ್ವಿಕೆ ನಡೆಸಿರುವುದನ್ನು ತಿಳಿದುಬರುತ್ತದೆ. ಅಲ್ಲದೆ ಹಿಂದಿನಂತೆಯೇ ಸ್ಥಳೀಯ ಆಡಳಿತದಲ್ಲಿ ಹೆಚ್ಚಿನ ಸ್ವಾಯತತ್ತೆ ಉಳಿದುಕೊಂಡಿದುದು ವೇದ್ಯವಾಗುತ್ತದೆ. ಕ್ರಿ.ಶ.೧೪೧೫ರ ಸುಮಾರಿನಲ್ಲಿ, ಅಂದರೆ ಮೊದಲನೆಯ ದೇವರಾಯನ ಆಳ್ವಿಕೆಯ ಕಾಲದಲ್ಲಿ ನಾಡುಗಳ ಆಡಳಿತ ಹೆಚ್ಚು ಕೇಂದ್ರೀಕರಣವಾದಂತೆ ತೋರುತ್ತದೆ. ಸ್ಥಳೀಯ ನಾಡಪ್ರಭುಗಳು ಮುಂತಾದವರ ಪ್ರಸ್ತಾಪ ಶಾಸನಗಳಲ್ಲಿ ಕಡಿಮೆ ಆಗಿರುವುದು ಕಂಡುಬರುತ್ತದೆ. ಅಲ್ಲದೆ ರಾಜನಿಂದ ನೇರವಾಗಿ ನೇಮಕವಾಗಿರುವ ಅಧಿಕಾರಿಗಳ ಪ್ರಭಾವ ಎದ್ದು ಕಾಣುತ್ತದೆ. ಈ ನಾಡನ್ನು ಪ್ರಸ್ತಾಪಿಸುವ ಕೊನೆಯ ಉಲ್ಲೇಖ ಕ್ರಿ.ಶ.೧೫೮೧ರ ನಾಗಸಂದ್ರ ಗ್ರಾಮದ ತ್ರುಟಿತ ಶಾಸನವೊಂದರಲ್ಲಿ ಕಂಡುಬರುತ್ತದೆ. ಮುಂದೆ ಈ ಪ್ರದೇಶ ಯಲಹಂಕ ಪ್ರಭುಗಳಾದ ಕೆಂಪೇಗೌಡನ ವಂಶೀಯರ ಆಳ್ವಿಕೆಗೆ ಒಳಪಟ್ಟಿತು.

೩.೫. ಯಲಹಂಕನಾಡ ಪ್ರಭುಗಳು

ಕುಕ್ಕಲನಾಡಿನ ಆಡಳಿತವು ವಿಜಯನಗರದ ಅರಸರ ನಂತರ ಯಲಹಂಕನಾಡ ಪ್ರಭುಗಳ ಆಳ್ವಿಕೆಗೆ ಒಳಪಟ್ಟಿತು. ಯಲಹಂಕನಾಡ ಪ್ರಭುಗಳು ಸಹ ವಿಜಯನಗರ ಅರಸ ಮಾಂಡಲೀಕರಾಗಿ, ಸಾಮಂತರಾಗಿ ಆಡಳಿತ ನಡೆಸಿದ್ದಾರೆ. ಕುಕ್ಕಲನಾಡಿನ ಪ್ರದೇಶವು ಒಂದನೇ ಕೆಂಪೇಗೌಡನ ಮಗ ಇಮ್ಮಡಿ ಕೆಂಪೇಗೌಡನ ಆಡಳಿತದಲ್ಲಿ ಸೇರಿತ್ತು. (ಕ್ರಿ.ಶ.೧೫೮೫ ರಿಂದ ೧೬೩೮). ಈತನ ಆಡಳಿತ ಪ್ರದೇಶವು ಬೆಂಗಳೂರಿನಿಂದ, ಮಾಗಡಿ, ರಾಮನಗರ ಮತ್ತು ಕುಣಿಗಲ್ ಗಳವರೆಗೆ ವಿಸ್ತರಿಸಿದ್ದಿತು.

ಎರಡನೇ ಕೆಂಪೇಗೌಡನ ಮಗ ಮುಮ್ಮಡಿ ಕೆಂಪೇಗೌಡನು ಮಾಗಡಿಯಲ್ಲಿದ್ದ ಮುಮ್ಮಡಿ ವೆಂಕಟನ ವಿರುದ್ಧ ಬಂಡೆದ್ದು, ಕೆಲವು ಮಾಂಡಲೀಕರನ್ನು ಹತ್ತಿಕ್ಕಿ 'ಸ್ವಾಮಿ ದ್ರೋಹದ ಗಂಡ'' ಎಂಬ ಬಿರುದನ್ನು ಪಡೆದ. ಆದರೆ ಬಿಜಾಪುರದಿಂದ ಬಂದ ರಣದುಲ್ಲಾಖಾನನ ಸೇನೆ ಈತನನ್ನು ಸೋಲಿಸಿ ಬೆಂಗಳೂರನ್ನು ವಶಪಡಿಸಿಕೊಂಡು ಆತನನ್ನು 'ಮಾಗಡಿ'ಯಿಂದ ಆಳುವಂತೆ ಏರ್ಪಾಡು ಮಾಡಿತು. ಈತನು(ಮುಮ್ಮಡಿ ಕೆಂಪೇಗೌಡ) ವಾರಣಾಸಿಯಲ್ಲಿ ಒಂದು ಮಠವನ್ನು ಕಟ್ಟಿ ಅದರ ವೆಚ್ಚಗಳಿಗಾಗಿ ಅರಳು ಕುಪ್ಪೆ ಗ್ರಾಮವನ್ನು ೧೬೬೭ರಲ್ಲಿ ದಾನವಿತ್ತನು. ಅವನು ಸಾವನದುರ್ಗ ಕೋಟೆಯನ್ನು ಬಲಪಡಿಸಿ, ಬಹುಶಃ ಕೆಳಗಿರುವ ಸಾವಂದಿ (ವೀರಭದ್ರ) ದೇವಾಲಯವನ್ನು ಕಟ್ಟಿಸಿದ.[೨೯]

ಈತನು ಅತೀವ ಧರ್ಮಶ್ರದ್ಧೆ ಉಳ್ಳವನಾಗಿ ದೇವಾಲಯ ಮತ್ತು ಅಗ್ರಹಾರಗಳನ್ನು ಕಟ್ಟಿಸಿದನು. ಮಳೆಕೆಂಪರಾಯನೆಂದು ಹೆಸರುವಾಸಿಯಾಗಿದ್ದ, ಈತನು ಮಾಗಡಿಯಲ್ಲಿ ಪ್ರಸನ್ನ ವೀರೇಶ್ವರ ದೇವಾಲಯ ಕಟ್ಟಿಸಿದನು ಮತ್ತು ಕೆಂಪಸಾಗರವೆಂಬ(ಕಲ್ಯಕೆರೆ) ಕೆರೆಯನ್ನು ಕಟ್ಟಿಸಿದನು.

ಮುಮ್ಮಡಿ ಕೆಂಪೇಗೌಡ ನಂತರದ ಪ್ರಭುಗಳಾದ ದೊಡ್ಡ ವೀರಪ್ಪಗೌಡ (ಕ್ರಿ.ಶ.೧೬೭೮-೧೭೧೦) ಮತ್ತು ಆತನ ಮಗ ಮುಮ್ಮಡಿ ಕೆಂಪವೀರಪ್ಪಗೌಡ (ಕ್ರಿ.ಶ.೧೭೧೦-೧೭೨೮) ಈ ನಾಡಿನ ರಾಜ್ಯಭಾರ ಮಾಡಿದರು(ಆಡಳಿತ ನಡೆಸಿದರು). ತಮ್ಮ ಪ್ರದೇಶದಲ್ಲಿ ಶೈವ ಮತ್ತು ವೈಷ್ಣವ ದೇವಾಲಯಗಳನ್ನು ಕಟ್ಟಿಸಿದರು. ಮಾಗಡಿಯಲ್ಲಿ ಪ್ರಸಿದ್ಧ ಈಶ್ವರ ದೇವಾಲಯ ಮತ್ತು ಕಲ್ಯಾಣಿಯನ್ನು ಕ್ರಿ.ಶ.೧೭೧೨ರಲ್ಲಿ ನಿರ್ಮಿಸಲಾಯಿತು. ಈತನು ಶೃಂಗೇರಿ ಮಠಕ್ಕೆ ಸೀಗೆಕುಪ್ಪ ಎಂಬ ಗ್ರಾಮವನ್ನು ದಾನ ಮಾಡಿದನು. ಈತನ ಆಸ್ಥಾನದಲ್ಲಿ ಸಾಹಿತಿಗಳಿಗೆ ಮತ್ತು ವಿದ್ವಾಂಸರಿಗೆ ಆಶ್ರಯ ನೀಡಲಾಗಿತ್ತು. ಅವರಲ್ಲಿ ಪ್ರಸಿದ್ಧನಾದ ಏಕಾಂಬ್ರ ದೀಕ್ಷಿತನು 'ವೀರಭದ್ರವಿಜಯ' ಎಂಬ ಕಾವ್ಯವನ್ನು ಬರೆದನು. ಇದು ಯಲಹಂಕ ಅರಸರ ಬಗ್ಗೆ ಮಾಹಿತಿಯನ್ನು ನೀಡುತ್ತದೆ.[೩೦] ಇವುಗಳಲ್ಲದೆ ಮಾಗಡಿಯಲ್ಲಿನ ರಾಮೇಶ್ವರ ದೇವಾಲಯ ಮತ್ತು ವರ್ಣಚಿತ್ರಗಳಿಂದ ಅಲಂಕೃತವಾದ ಒಂದು ಹಜಾರವನ್ನು ನಿರ್ಮಿಸಿದ.

ಮುಮ್ಮಡಿ ಕೆಂಪೇಗೌಡನ ಕಾಲದಲ್ಲಿ ಯಲಹಂಕನಾಡಿನ ಪ್ರದೇಶ ಮೇಲಿಂದ ಮೇಲೆ ವೈರಿಗಳ ದಾಳಿಗೆ ತುತ್ತಾಗಿತ್ತು. ಇಂತಹ ಸನ್ನಿವೇಶದಲ್ಲಿ ತನ್ನನ್ನು ರಕ್ಷಿಸಿಕೊಳ್ಳಲು ಪ್ರಬಲವಾದ ನೆಲಪಟ್ಟಣವನ್ನು (ಸಾವನದುರ್ಗ) ಎರಡನೇ ರಾಜಧಾನಿಯನ್ನಾಗಿ ಮಾಡಿಕೊಂಡನು. ಮುಮ್ಮಡಿ ಕಂಪೇಗೌಡನು ತನ್ನ ನಾಡಿನ ಇತರ ಪಾಳೆಗಾರರು ಇವರ ಜೊತೆಗೆ ಉತ್ತಮ ಸಂಬಂಧ ಹೊಂದಿರಲಿಲ್ಲ. ಇದರ ಲಾಭ ಪಡೆಯಲು ಮೈಸೂರಿನ ದೊಡ್ಡ ಕೃಷ್ಣರಾಜ ಒಡೆಯನು ನಿರ್ಧರಿಸಿದ. ದೇವರಾಜಯ್ಯನ ನೇತೃತ್ವದಲ್ಲಿ ಮೈಸೂರಿನ ಸೈನ್ಯ ಮಾಗಡಿಯನ್ನು ಆಕ್ರಮಿಸಿ, ಕೆಂಪ ವೀರಪ್ಪಗೌಡನನ್ನು ಸೋಲಿಸಿ ಸೆರೆ ಹಿಡಿಯಿತು. ಬಂಧಿತ ಪ್ರಭು ಸೆರೆಮನೆಯಲ್ಲಿ ಮರಣ ಹೊಂದಿದನು. ಇದರಿಂದ ಮುಂದೆ ಯಲಹಂಕನಾಡಿನಲ್ಲಿ ಸೇರಿ ಹೋಗಿದ್ದ ಕುಕ್ಕಲನಾಡು ಮೈಸೂರು ಸಂಸ್ಥಾನದಲ್ಲಿ ವಿಲೀನವಾಯಿತು.

ಕುಕ್ಕಲನಾಡನ್ನು ಆಳ್ವಿಕೆ ನಡೆಸಿದವರ ಪಟ್ಟಿ

ಕ್ರ. ಸಂ.	ಕುಕ್ಕಲನಾಡಿನ ಅರಸರು	ರಾಜಮನೆತನ	ಕುಕ್ಕಲನಾಡನ್ನು ಆಳ್ವಿಕೆ ಮಾಡಿದ ಗೌಡರು, ನಾಯಕರು ಪ್ರಭುಗಳು ಮತ್ತು ಅಧಿಕಾರಿಗಳು	ಆಕರ ಶಾಸನ
೦೧ ಕ್ರಿ.ಶ.೭೫೦	ಶ್ರೀಪುರುಷ	ಗಂಗರು	ಎತ್ತಳ್ಳೊರ	EC-IX, Nl,34,36,
೦೨	ರಾಜರಾಜಕುಲೋತುಂಗಚೋಳ	ಚೋಳರು	ಮಲ್ಲಣದೇವ ದಂಡನಾಯಕ ವಾಮನಯ್ಯ ಅಧಿಕಾರಿ ಯದುಮಲ್ಲ ದಂಡನಾಯಕ ಮುಮ್ಮಡಿ ಚೋಳಗಾವುಂಡ	EC-IX, Nl, 03, ಕ್ರಿ.ಶ.೧೧೧೦
೦೩.	ರಾಜೇಂದ್ರಚೋಳ	ಚೋಳರು	ಮಲ್ಲಣದೇವ ದಂಡನಾಯಕ	EC-IX, Nl.01, ಕ್ರಿ.ಶ.೧೦೨೯

[illegible]

			ವಾಮನಯ್ಯ ಅಧಿಕಾರಿ ಯದುಮಲ್ಲ ದಂಡನಾಯಕ ಮುಮ್ಮಡಿ ಚೋಳಗಾವುಂಡ	
೦೪	ಶ್ರೀ ನರಸಿಂಗ ಹೊಯ್ಸಳ	ಹೊಯ್ಸಳರು	ಅಚಲಯ್ಯ ಅಧಿಕಾರಿ	EC-IX, Bn,112, ಕ್ರಿ.ಶ.೧೧೫೬
೦೫	ವೀರಬಲ್ಲಾಳ ದೇವರಸ ವೀರಬಲ್ಲಾಳ III	ಹೊಯ್ಸಳರು	ಜಾಲೆಯ ದಂಡನಾಯಕ	EC-IX, Nl, 12, ಕ್ರಿ.ಶ.೧೩೩೦
೦೬	ವೀರಬಲ್ಲಾಳ ದೇವರಸ ವೀರಬಲ್ಲಾಳ III	ಹೊಯ್ಸಳರು	ಮಯಿಲೆಯನಾಯಕ, ಜಂನೆಯ ನಾಯ್ಕ, ನಾಗಗೌಡ ಮಾರಪ್ಪಗೌಡ	EC-IX, Nl,09, ಕ್ರಿ.ಶ.೧೩೩೩ EC-IX, Bn,110, ಕ್ರಿ.ಶ.೧೩೩೬
೦೭	ವೀರಬಲ್ಲಾಳ ದೇವರಸ ವೀರಬಲ್ಲಾಳ III	ಹೊಯ್ಸಳರು	ಹೊನ್ನಗವುಡ	EC-IX, ಚನ್ನಪಟ್ಟಣ ೦೭ ಕ್ರಿ.ಶ.೧೩೩೪
೦೮	ವೀರಬಲ್ಲಾಳ ದೇವರಸ ವೀರಬಲ್ಲಾಳ III	ಹೊಯ್ಸಳರು	ಉಪ್ಪರ ಬಂಮೆಯನಾಯಕ ಮಲಯಪ್ಪ ಗೋಪಾಲಗೌಡ ದೊಡ್ಡನಗೌಡ, ಗೌಡಪ್ಪ ಮಾರಪ್ಪ	ಗೋಪಾಲರಾವ್ ಎಚ್.ಎಸ್ ಶಾಸನ ಸಂಕಲನ ಪು.೨೬ ೨೦೦೧
೦೯	ವೀರಬಲ್ಲಾಳ ದೇವರಸ ವೀರಬಲ್ಲಾಳ III	ಹೊಯ್ಸಳರು	ಕೋಟ್ಯೆನಾಯಕ	EC-IX, Bn,117, ಕ್ರಿ.ಶ.೧೩೩೯ EC-IX, Bn,111, ಕ್ರಿ.ಶ.೧೩೪೦
೧೦	ವೀರ ಹರಿಯಪ್ಪ ವೊಡೆಯ	ವಿಜಯನಗರ ಅರಸರು	ಮಯಿಲೆಯ ನಾಯ್ಕ	EC-IX, Nl,19, ಕ್ರಿ.ಶ.೧೩೪೦
೧೧	ಸದಾಶಿವರಾಯ	ವಿಜಯನಗರ ಅರಸರು	ಚಂನೆಯದೇವ ಅರಸು, ಮದುಗಟ್ಟಿ ಪಂಡಿತ	EC-IX, ಮಾಗಡಿ, ಕ್ರಿ.ಶ.೧೩೪೦
೧೨	ಅರಿರಾಯ	ವಿಜಯನಗರ ಅರಸರು	ವೀರಭಕ್ಕಣವೊಡೆಯ ಯೋಜಯ ನಾಯಕ ಸಂತೆಯನಾಯಕ	EC-IX, Nl,23, ಕ್ರಿ.ಶ.೧೩೫೭
೧೩	ವೀರದೇವರಾಯ ಒಂದನೇ ದೇವರಾಯ	ವಿಜಯನಗರ ಅರಸರು	ಹಯಕ ಅಧಿಕಾರಿ	EC-IX, Bn,22, ಕ್ರಿ.ಶ.೧೪೦೮
೧೪	ಪ್ರೌಢದೇವರಾಯ	ವಿಜಯನಗರ ಅರಸರು	ಬುಕ್ಕನಾಯಕ	EC-IX, Bn,26, ಕ್ರಿ.ಶ.೧೪೩೦
೧೫	ಇಮ್ಮಡಿ ನರಸಿಂಹರಾಯ	ವಿಜಯನಗರ ಅರಸರು	ಗೋಡೆರಾಯ, ಅನಂತಯ್ಯದೇವ	EC-IX, Bn,123, ಕ್ರಿ.ಶ.೧೪೯೫
೧೬	ಅಚ್ಯುತದೇವರಾಯ	ವಿಜಯನಗರ ಅರಸರು		EC-IX, Nl,31, ಕ್ರಿ.ಶ.೧೫೩೩
೧೭	ವಿಜಯನಗರ ಅರಸು	ಯಲಹಂಕನಾಡ ಪ್ರಭುಗಳು	ಎರಡನೇ ಕೆಂಪೇಗೌಡ ಮೂರನೇ ಕೆಂಪೇಗೌಡ	

ಅಡಿಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ, ತಲಕಾಡಿನ ಗಂಗರ ದೇವಾಲಯಗಳು : ಒಂದು ಅಧ್ಯಯನ, ಪು.೪

೨. ಸೂರ್ಯನಾಥ ಕಾಮತ್, ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಪು.೩೪

೩. EC-IX, Nl, ೩೩, ೩೪, ಕ್ರಿ.ಶ.೭೫೦ ಮತ್ತು EC-IX, Bn, ೩೬, ಕ್ರಿ.ಶ.೭೫೦

೪. ಅದೇ, Bn, ೩೬, ಕ್ರಿ.ಶ.೭೫೦

೫. ಅದೇ, Nl, ೩೪, ಕ್ರಿ.ಶ.೭೫೦

೬. ಅದೇ, Nl, ೩೩, ಕ್ರಿ.ಶ.೭೫೦

೭. ಅದೇ, Nl, ೦೧, ಕ್ರಿ.ಶ.೧೦೨೯, ಅದೇ, Nl, ೩೭, ಕ್ರಿ.ಶ.೧೦೩೩; ಅದೇ, Nl, ೨೪ ಕ್ರಿ.ಶ. ೧೦೬೫ ಮತ್ತು ಅದೇ, Nl, ೦೩, ಕ್ರಿ.ಶ.೧೧೧೦

೮. ಅದೇ, Nl, ೦೧, ಕ್ರಿ.ಶ.೧೦೨೯

೯. ಅದೇ, Nl, ೩೭, ಕ್ರಿ.ಶ.೧೦೩೩

೧೦. ಅದೇ, Nl, ೨೪, ಕ್ರಿ.ಶ.೧೦೬೫

೧೧. ಅದೇ, Nl, ೦೩, ಕ್ರಿ.ಶ.೧೧೧೦

೧೨. ಅದೇ, Bn, ೧೧೨, ಕ್ರಿ.ಶ.೧೧೫೬

೧೩. ಅದೇ, Nl, ೩೮, ಕ್ರಿ.ಶ.೧೩೦೧

೧೪. ಗೋಪಾಲರಾವ್ ಎಚ್.ಎಸ್., ಶಾಸನಸಂಕಲನ, ಪು.೨೧-೨೬

೧೫. EC-IX, Nl, ೧೨, ಕ್ರಿ.ಶ.೧೩೩೦

೧೬. ಅದೇ, Nl, ೧೧, ಕ್ರಿ.ಶ.೧೩೩೦

೧೭. ಅದೇ, Nl, 9, ಕ್ರಿ.ಶ.೧೩೩೩

೧೮. ಅದೇ, Bn, ೧೧೦, ಕ್ರಿ.ಶ.೧೩೩೬

೧೯. ಅದೇ, Bn, ೧೧೧, ಕ್ರಿ.ಶ.೧೩೪೦

೨೦. ಅದೇ, Bn, ೧೧೭, ಕ್ರಿ.ಶ.೧೩೪೦

೨೧. ಅದೇ, Nl, ೧೯, ಕ್ರಿ.ಶ.೧೩೪೦

೨೨. ಅದೇ

೨೩. ಅದೇ, Nl, ೨೩, ಕ್ರಿ.ಶ.೧೩೫೯

೨೪. ಅದೇ, Bn, ೧೨೨, ಕ್ರಿ.ಶ.೧೪೦೮

೨೫. ಅದೇ, Bn, ೨೬, ಕ್ರಿ.ಶ.೧೪೩೦

೨೬. ಅದೇ, Bn, ೧೨೩, ಕ್ರಿ.ಶ.೧೪೯೫

೨೭. ಅದೇ, Nl, ೩೧, ಕ್ರಿ.ಶ.೧೫೩೩

೨೮. ಅದೇ, ಮಾಗಡಿ, ೭೪, ಕ್ರಿ.ಶ.೧೫೪೭

೨೯. ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಪು.೨೩೧

೩೦. ಬಸವರಾಜು ಎನ್. ಹಕ್ಕಿ, ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಪು.೩೬೨

ಅಧ್ಯಾಯ ೪

ಕುಕ್ಕಲನಾಡಿನ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ

೪

ಕುಕ್ಕಲನಾಡಿನ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ

ಸಾಮಾಜಿಕ ವ್ಯವಸ್ಥೆ

೪.೧. ಪೀಠಿಕೆ

ಒಂದು ಸಮಾಜದ ಸ್ಥಿರತೆ-ಅಸ್ಥಿರತೆ, ಪರಿವರ್ತನೆಯ ರೀತಿ ಮತ್ತು ಅಗಾಧತೆ, ಸ್ವಂತಿಕೆಯ ಅಳಿವು-ಉಳಿವು ಮೊದಲಾದವುಗಳು ಅದರ ಸಾಂಸ್ಕೃತಿಕ ಸಂಪತ್ತಿನ ಆಳ-ಎತ್ತರಗಳನ್ನು, ವಿಸ್ತಾರ-ವ್ಯಾಪ್ತಿಯನ್ನು, ಪ್ರೌಢಿಮೆ-ಪ್ರಬುದ್ಧತೆಯನ್ನು ಅವಲಂಬಿಸಿರುತ್ತವೆ. ಈ ನಿಟ್ಟಿನಲ್ಲಿ ಸಮಕಾಲೀನ ಸಾಹಿತ್ಯಿಕ ಮತ್ತು ಶಾಸನಾದಿ ಪುರಾತತ್ವ ಕುರುಹುಗಳು ಆಯಾ ಕಾಲದ ಸಾಮಾಜಿಕ ವ್ಯವಸ್ಥೆಯ ವಿವಿಧ ಮುಖಗಳನ್ನು ಸ್ಪಷ್ಟವಾಗಿ ಗುರುತಿಸಲು ಪ್ರತ್ಯಕ್ಷ ಮತ್ತು ಪರೋಕ್ಷ ಆಕರಗಳಾಗಿವೆ.

ಯಾವುದೇ ಒಂದು ಸಮಾಜವನ್ನು ತೆಗೆದುಕೊಂಡಾಗ ಅದು ಪ್ರಾಗೈತಿಹಾಸಿಕ ಕಾಲದಿಂದ ಆಧುನಿಕ ಕಾಲದವರೆಗೆ ಮಾಡಿದ ಅನೇಕ ಸಾಧನೆಗಳು ನಮಗೆ ಸ್ಪಷ್ಟವಾಗುತ್ತವೆ. ಅಲ್ಲದೆ ಪ್ರಾಗೈತಿಹಾಸಿಕ ಕಾಲದ ಜನ ಸಮುದಾಯವು ಜೀವನೋಪಾಯಕ್ಕಾಗಿ ಬಳಸುತ್ತಿದ್ದ ವಸ್ತುಗಳು, ಉಪಕರಣಗಳು, ಸ್ಮಾರಕಗಳಾದ ದೇವಾಲಯ, ಕೋಟೆ, ಶಾಸನಗಳು ಮುಂತಾದವುಗಳು. ನಮಗೆ ಅವರು ಮಾಡಿದ ಸಾಮಾಜಿಕರಂಗ, ಧಾರ್ಮಿಕರಂಗ, ಆರ್ಥಿಕರಂಗ. ಹೀಗೆ ಎಲ್ಲಾ ರಂಗಗಳಲ್ಲಿ ಮಾಡಿದ ಸಾಧನೆ, ಜೀವನ ವಿಧಾನವನ್ನರಿಯುವುದಕ್ಕೆ ಸಾಕ್ಷಿಗಳಾಗಿವೆ.

ಕುಕ್ಕಲನಾಡಿನ ಸಮಾಜವನ್ನು ನೋಡುವಾಗ, ಅಲ್ಲಿನ ಶಾಸನಗಳು ಪ್ರಮುಖವಾಗುತ್ತವೆ. ಶಾಸನಗಳಿಂದ ನಮಗೆ ಅಲ್ಲಿನ ಸಾಮಾಜಿಕ ಜೀವನದ ವಿವಿಧ ಮುಖಗಳ ಪರಿಚಯವಾಗುತ್ತದೆ. ಅದರಲ್ಲೂ ಪ್ರಧಾನವಾಗಿ ಶಾಸನಗಳು ದಾನ-ಧರ್ಮಗಳಿಗಾಗಿಯೇ ಹುಟ್ಟಿದವುಗಳಾದುದರಿಂದ ಆ ಒಂದು ಮುಖವೇ ಅಲ್ಲಿ ಗೋಚರಿಸುವುದು ಸಹಜ. ಇದರ ಜೊತೆಗೆ ಇತರೆ ವ್ಯವಸ್ಥೆಗಳನ್ನು ನಾವು ಕಾಣಬಹುದು.

ಸಾಮಾಜಿಕ ಜೀವನದ ನೆಮ್ಮದಿಗೆ ಬೇಕಾದ ಮೂಲಭೂತವಾದ ಅಂಶಗಳನ್ನು ಶಾಸನಗಳು ಸೂಚಿಸುತ್ತವೆ. ವಿದ್ಯಾಭ್ಯಾಸಕ್ಕಾಗಿ ಅನೇಕ ದೇವಾಲಯಗಳಿಗೆ ಮಠಗಳಿಗೆ ನೀಡಿದ ದಾನ, ಬ್ರಾಹ್ಮಣರ ನಿವಾಸಕ್ಕಾಗಿ (ಅಗ್ರಹಾರ) ಬಿಟ್ಟುಕೊಟ್ಟ ಹಳ್ಳಿಗಳು, ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ

ರಂಗಗಳಲ್ಲಿ ಸ್ತ್ರೀಯರಿಗೆ ಉನ್ನತವಾದ ಸ್ಥಾನ ಕೊಟ್ಟಿದ್ದರೆಂಬುದನ್ನು ಶಾಸನಗಳು ತಿಳಿಸುತ್ತವೆ. ಚತುರ್ವರ್ಣಗಳು, ಪರಿಪಾಲನೆ ಮತ್ತು ವಂಶ ಪಾರಂಪರ್ಯವಾಗಿ ಆಯಾಯ ವರ್ಣಗಳ, ವೃತ್ತಿಗಳ ಜೊತೆಗೆ ಸಾಮಾಜಿಕ ಕಾರ್ಯಗಳಾದ ಕೆರೆ, ಬಾವಿ ಮುಂತಾದ ಕೆಲಸಗಳಲ್ಲಿ ಜನತೆಯಲ್ಲಿದ್ದ ಸಹಕಾರ ಮನೋಭಾವನೆ ಮುಂತಾದ ಸಾಮಾಜಿಕ ವ್ಯವಸ್ಥೆಯ ವಿವಿಧ ವಿಷಯಗಳು ಶಾಸನಗಳಿಂದ ತಿಳಿದುಬರುತ್ತವೆ.

೪.೨. ಜಾತಿಗಳು ಮತ್ತು ವರ್ಗಗಳು

ಜಾತಿ ಎಂಬುದು ಭಾರತೀಯರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಒಂದು ಸಾಮಾಜಿಕ ವ್ಯವಸ್ಥೆ. ಸಮಾಜದ ಧರ್ಮ, ಸಂಪ್ರದಾಯ, ಆಚರಣೆ, ವೃತ್ತಿಗಳು, ಇನ್ನಿತರ ಅನೇಕ ಚಟುವಟಿಕೆಗಳು ಜಾತಿಯಿಂದ ನಿರ್ಧಾರವಾಗುತ್ತವೆ. ಜನರ ವೈಯಕ್ತಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಜನರ ಕಾರ್ಯಗಳನ್ನು ನಿರ್ದೇಶಿಸುವ, ನಿಯಂತ್ರಿಸುವ ಒಂದು ಪ್ರಮುಖ ವ್ಯವಸ್ಥೆಯಾಗಿ ಜಾತಿ ಪದ್ಧತಿಯು ಬೆಳೆದಿದೆ. ಈ ಜಾತಿ ಪದ್ಧತಿಯಲ್ಲಿ ಅನೇಕ ಆಚರಣೆಯ ಜೊತೆಗೆ ಕೆಲವು ಕಟ್ಟಳೆಗಳನ್ನು ನಾವು ಕಾಣುತ್ತೇವೆ. ಕುಕ್ಕಲನಾಡಿನಲ್ಲಿ ಬರುವ ಅನೇಕ ಜಾತಿಗಳನ್ನು, ವರ್ಗಗಳನ್ನು ಶಾಸನಗಳ ಮೂಲಕ ನಾವು ನೋಡಬಹುದಾಗಿದೆ.

೧. ಬ್ರಾಹ್ಮಣರು

ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಬ್ರಾಹ್ಮಣರಿಗೆ ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳಿದ್ದವು. ಮನುಸ್ಮೃತಿಯಲ್ಲಿ ಅಧ್ಯಯನ, ಅಧ್ಯಾಪನ, ಯಜ್ಞ ಮಾಡುವುದು ಮತ್ತು ಮಾಡಿಸುವುದು ದಾನ ಕೊಡುವುದು ಮತ್ತು ಸ್ವೀಕರಿಸುವುದು ಬ್ರಾಹ್ಮಣರ ಆರು ಕರ್ಮಗಳೆಂದು ಹೇಳಲಾಗಿದೆ.[೧]

ಹೀಗೆ ಷಟ್ಕರ್ಮ ನಿರತರಾಗಿದ್ದ ಮತ್ತು ರಾಜಕೀಯ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿದ್ದ ಅವರನ್ನು ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಗೌರವಿಸು ತ್ತಿದ್ದರಲ್ಲದೇ ಅವರು ವಿದ್ಯಾಭ್ಯಾಸವನ್ನು ಮುಂದುವರಿಸಲೆಂದು ದಾನದತ್ತಿಗಳನ್ನು ನೀಡುತ್ತಿದ್ದ ವಿಚಾರ ಅನೇಕ ಶಾಸನಗಳಿಂದ ಸ್ಪಷ್ಟವಾಗುತ್ತದೆ. ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿಯ ಕ್ರಿ.ಶ.೧೦೨೯ರ ಶಾಸನವು ಶಿಲಾಶಾಸನ ಬರೆದ ಮಹಾಮಾತ್ರನಜವಮ್ಮಯ್ಯ, ಶಾಸನವಾಚಕ ಪುಣ್ಯಸಮ್ಮರನ್ನು ಉಲ್ಲೇಖಿಸುತ್ತದೆ.[೨]

ನೆಲಮಂಗಲ ತಾಲೂಕಿನ ತೋಟಗೆರೆ ಗ್ರಾಮದ ಕ್ರಿ.ಶ.ಸು.೭೫೦ರ ಶಾಸನವು ಗಂಗರಸ ಶ್ರೀಪುರುಷನು ರುದ್ರಶರ್ಮ ಸೋಮಯಾಜಿಯಮಗ ಸಕ್ಕಹರಶರ್ಮನಿಗೆ 'ಅತ್ತಿಗುಂಟೂರು' ಎಂಬ ಬ್ರಾಹ್ಮಣರ ಅಗ್ರಹಾರವನ್ನು ದಾನ ನೀಡಿದ ಉಲ್ಲೇಖವಿದೆ.[೩]

ಹೇಳಲಾಗುತ್ತದೆ. ಅಂದರೆ ರಾಜನಿಗೆ ಸಹಾಯ ಮಾಡುವುದರ ಜೊತೆಗೆ ಅನೇಕ ಯುದ್ಧಗಳನ್ನು ಮಾಡಿ ಪ್ರಜೆಗಳ ರಕ್ಷಣೆ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಧರ್ಮಾಮೃತದ ಕರ್ತೃ ನಯಸೇನನು ಇವರನ್ನು ಕುರಿತು "......ಸಮಂತೊಸೆದೂರಂ ಗುಣಮುಂಮಹಾ ಪುರುಷರೊಳ್ಪಂ ಶೌಚಿ ಕೇಳಂತು ರಕ್ಷಿಸುವಂಮೋಹದಿನಂತೆರಕ್ಷಿಪುದು ಧಾತ್ರಿ ಚಕ್ರಮಮಂ ಕ್ಷತ್ರಿಯಂ" ಎಂದು ಹೇಳಿದ್ದಾನೆ.[೮] ಇದರಿಂದ ಕ್ಷತ್ರಿಯರು ಮಹಾಪುರುಷರಲ್ಲಿಯೇ ಶುಚಿತ್ವ ಹೊಂದಿದ್ದು ಭೂಮಂಡಲವನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾದವರೆಂದು ತಿಳಿಯುತ್ತದೆ.

ಕ್ರಿ.ಶ.ಸು.೭೫೦ರ ಬೆಂಗಳೂರಿನ ದಾಸರಹಳ್ಳಿಯ ಶಾಸನದಲ್ಲಿ ಗಂಗರಸ ಶ್ರೀಪುರುಷನ ಉಲ್ಲೇಖವಿದೆ.[೯] ಇವನ ಉಲ್ಲೇಖವಿರುವ ಮತ್ತೊಂದು ಶಾಸನ ನೆಲಮಂಗಲದ ತೋಟಗೆರೆ ಗ್ರಾಮದಲ್ಲಿ ಕಂಡುಬಂದಿದೆ.[೧೦] ಈ ತೋಟಗೆರೆಯ ಮತ್ತೊಂದು ಶಾಸನದಲ್ಲಿ ಎತ್ತಳ್ಗೊಂಡರನು ಕುಕ್ಕನರೆನಾಡನ್ನು (ಕುಕ್ಕಲನಾಡನ್ನು) ಆಳುವಾಗ... ಎಂಬ ಉಲ್ಲೇಖವಿದೆ.[೧೧]

ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಗ್ರಾಮದ ಕ್ರಿ.ಶ.೧೦೨೯ರ ಶಾಸನವು ಚೋಳ ಅರಸ ರಾಜೇಂದ್ರಚೋಳನ ಬಗ್ಗೆ ತಿಳಿಸುತ್ತದೆ. ಹಾಗೆಯೇ ವಿಕ್ರಮಂಚೋಳ, ಮುಮ್ಮಡಿ ಚೋಳರ ಬಗ್ಗೆಯು ಉಲ್ಲೇಖಿಸುತ್ತದೆ.[೧೨] ಈ ರಾಜೇಂದ್ರಚೋಳನ ಬಗ್ಗೆ ಕುಕ್ಕಲನಾಡಿನ ಇನ್ನೂ ಕೆಲವು ಶಾಸನಗಳಲ್ಲಿ ಉಲ್ಲೇಖವಿದೆ.[೧೩] ಕ್ರಿ.ಶ.೧೦೬೫ರ ಈ ಶಾಸನ ಆಹವಮಲ್ಲ ಮತ್ತು ಮುಮ್ಮಡಿ ಚೋಳನ ಬಗ್ಗೆಯೂ ಉಲ್ಲೇಖಿಸುತ್ತದೆ. ನೆಲಮಂಗಲ ತಾಲ್ಲೂಕು ಬಿನ್ನಮಂಗಲದ ಕ್ರಿ.ಶ.೧೧೧೦ರ ತಮಿಳು ಶಾಸನವು ಚೋಳ ದೊರೆ ಶ್ರೀ ಕುಲೋತುಂಗ ಚೋಳನ ಬಗ್ಗೆ ತಿಳಿಸುತ್ತದೆ.[೧೪]

ಬೆಂಗಳೂರಿನ ವಸಂತನಹಳ್ಳಿ ಗ್ರಾಮದ ಕ್ರಿ.ಶ.೧೧೫೬ರ ತಮಿಳು ಶಾಸನದಲ್ಲಿ ಹೊಯ್ಸಳರ ನರಸಿಂಗ ಪೊಯ್ಸಳನು ಕುಕ್ಕಲನಾಡನ್ನು ಆಳುವಾಗ.... ಎಂಬ ಉಲ್ಲೇಖವಿದೆ. ಅಚಲಯ್ಯ ಹಾಗೂ ಮಾಚಿದೇವರಸರ ಉಲ್ಲೇಖ ಸಹ ಈ ಶಾಸನದಲ್ಲಿದೆ.[೧೫] ನೆಲಮಂಗಲದ ಐಂಗಡಪುರ ಗ್ರಾಮದ ಕ್ರಿ.ಶ. ೧೩೦೧ರ ತಮಿಳು ಶಾಸನವು ಹೊಯ್ಸಳರ ವೀರಬಲ್ಲಾಳ ದೇವನ ಬಗ್ಗೆ ತಿಳಿಸುತ್ತದೆ.[೧೬] ಹೊಯ್ಸಳ ದೊರೆ ವೀರಬಲ್ಲಾಳ ದೇವರಸರನನ್ನು ಉಲ್ಲೇಖಿಸುವ ಇತರ ಶಾಸನಗಳೆಂದರೆ EC-IX, ಮಾಗಡಿ, ೧೫, ಕ್ರಿ.ಶ.೧೩೧೫; ಬೈಲಕೋನೇನಹಳ್ಳಿ ಶಿಲಾಶಾಸನ, ಕ್ರಿ.ಶ.೧೩೨೯;[೧೭]. EC-IX, Nl, ೧೨, ಕ್ರಿ.ಶ.೧೩೩೦; EC-IX, Nl, ೦೯, ಕ್ರಿ.ಶ.೧೩೩೩; EC-IX, CP, ೦೭, ಕ್ರಿ.ಶ.೧೩೩೪; EC-IX, Bn, ೧೧೦, ಕ್ರಿ.ಶ.೧೩೩೬; EC-IX, Bn, ೧೧೭, ಕ್ರಿ.ಶ.೧೩೩೯; EC-IX, Bn, ೧೧೧, ಕ್ರಿ.ಶ.೧೩೪೦; EC-IX, ಮಾಗಡಿ, ೮೧, ಕ್ರಿ.ಶ.೧೩೪೦ರ ಶಾಸನಗಳು.

೩. ವೈಶ್ಯರು

ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ವೈಶ್ಯರನ್ನು ಕ್ಷತ್ರಿಯರ ತರುವಾಯದ ಸ್ಥಾನದಲ್ಲಿ ಗುರುತಿಸಲಾಗುತ್ತಿತ್ತು. ಮನುಸ್ಮೃತಿಯಲ್ಲಿ ಪಶುಪಾಲನೆ, ದಾನಕೊಡುವುದು, ಯಜ್ಞಮಾಡುವುದು, ಅಧ್ಯಯನ ಮಾಡುವುದು. ನೆಲಜಲಗಳಲ್ಲಿ ವ್ಯಾಪಾರ ಮಾಡುವುದು. ಬಡ್ಡಿಸಾಲ ಕೊಡುವುದು ಮತ್ತು ಕೃಷಿಯಲ್ಲಿ ತೊಡಗುವುದು ವೈಶ್ಯರ ಕರ್ತವ್ಯಗಳೆಂದು ಹೇಳಲಾಗಿದೆ.[೧೮] ಕನ್ನಡ ನಾಡಿನ ಸಂದರ್ಭದಲ್ಲಿ ವ್ಯಾಪಾರಿಗಳು ತಮ್ಮನ್ನು ವೈಶ್ಯರೆಂದು ಕರೆದುಕೊಂಡಿದ್ದರೂ ವ್ಯವಸಾಯ, ಪಶುಪಾಲನೆಯಲ್ಲಿ ತೊಡಗಿದ್ದ ಇತರರು ತಮ್ಮನ್ನು ವೈಶ್ಯರೆಂದು ಕರೆದುಕೊಂಡಿಲ್ಲ. ಆದರೂ ಈ ಮೇಲಿನ ಕರ್ತವ್ಯಗಳನ್ನು ಮೈಗೂಡಿಸಿಕೊಂಡವರನ್ನು ಸಾಮಾನ್ಯವಾಗಿ ವೈಶ್ಯರೆಂದೇ ಗುರುತಿಸಲಾಗುತ್ತದೆ.

ವೈಶ್ಯರು ತಮ್ಮನ್ನು ಆರ್ಯವೈಶ್ಯ, ಕೋಮಟಿ ಮತ್ತು ಸೆಟ್ಟಿ ಎಂದು ಕರೆದುಕೊಳ್ಳುತ್ತಾರೆ. ಕುಕ್ಕಲನಾಡಿನ ಶಾಸನಗಳಲ್ಲಿ ವೈಶ್ಯರ ಗುಂಪಿಗೆ ಸೇರಿದ, ಸೆಟ್ಟಿಯರು, ಗೌಡರು, ವರ್ತಕರ ಉಲ್ಲೇಖಗಳ ಕಂಡುಬರುತ್ತವೆ.

ಅ. ಸೆಟ್ಟಿಯರು : ವ್ಯಾಪಾರವನ್ನು ಮಾಡುವ ಪ್ರಮುಖ ವ್ಯಕ್ತಿಗಳನ್ನು ಸೆಟ್ಟಿಯರು ಎಂದು ಕರೆಯುತ್ತಾರೆ. ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳೀ ಗ್ರಾಮದ ಕ್ರಿ.ಶ.೧೦೨೯ರ ಶಾಸನದಲ್ಲಿ ವಿನೋದ ಮಾಣಿಕ ಸೆಟ್ಟಿ ಎಂಬ ಹೆಸರಿನ ಉಲ್ಲೇಖವಿದೆ.[೧೯] ಬೈಲಕೊವೇನಹಳ್ಳಿಯ ಕ್ರಿ.ಶ.೧೩೨೯ರ ಶಾಸನದಲ್ಲಿ ಪಿಡಾರಿಯ(x)ಸೆಟಿ, ಸೊಂಣೆಸೆಟಿ, ಜಕಣಸೆಟಿಯರ ಉಲ್ಲೇಖವಿದೆ.[೨೦] ನೆಲಮಂಗಲ ತಾಲ್ಲೂಕಿನ, ಕಿತ್ತನಲ್ಲಿ ಗ್ರಾಮದ ಕ್ರಿ.ಶ.೧೩೩೦ರ ಶಾಸನ ಬೊಂಮಿಸೆಟ್ಟಿ, ಡಿಯಾಸೆಟ್ಟಿಯನ್ನು ಹೆಸರಿಸುತ್ತದೆ.[೨೧] ಮಾಗಡಿಯ ಬೈಚಗುಪ್ಪೆಗ್ರಾಮದ ಕ್ರಿ.ಶ.೧೩೪೦ರ ಶಾಸನ ಚಿಕಹೊನ್ನಪ್ಪ ಸೆಟ್ಟಿ, ಯಾಡಸೆಟ್ಟಿಯರನ್ನು ಕುರಿತು ತಿಳಿಸುತ್ತದೆ.[೨೨] ಇವುಗಳು ಸೆಟ್ಟಿಯರು ಈ ಪ್ರದೇಶದಲ್ಲಿದ್ದರು ಎಂಬುದನ್ನು ಖಚಿತಪಡಿಸುತ್ತವೆ.

ಆ. ಗೌಡ(ಗಾವುಂಡ) : ಒಂದು ನಾಡಿನ/ಊರಿನ ಮುಖ್ಯಸ್ಥರಿಗೆ ಗೌಡರು ಎನ್ನುತ್ತಾರೆ. ಇವರು ಆಡಳಿತ ಮತ್ತು ಕೃಷಿ ಚಟುವಟಿಕೆಯಲ್ಲಿ ನಿರತರಾಗಿರುತ್ತಿದ್ದರು. ಕುಕ್ಕಲನಾಡಿನ ಶಾಸನಗಳಲ್ಲಿ ಇವರ ಉಲ್ಲೇಖವಿದೆ. ಕ್ರಿ.ಶ.೧೦೨೯ರ ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಗ್ರಾಮದ ಶಾಸನದಲ್ಲಿ ಗಂಗಗಾವುಣ್ಡ, ಕುಕ್ಕನೂರ್ನಾಡ ನಾಳ್ಗಾವುಣ್ಡ, ಆಲೂರ ಚೋಳಗಾವುಣ್ಡ ಎಂಬ ಗೌಡರ/ಗಾವುಣ್ಡರ ಉಲ್ಲೇಖಗಳಿವೆ.[೨೩] ನೆಲಮಂಗಲದ ಮಂಠಾಳು ಗ್ರಾಮದ ಕ್ರಿ.ಶ.೧೩೩೩ರ ಶಾಸನದಲ್ಲಿ ಹೊಯ್ಸಳರ ಶ್ರೀ ವೀರಬಲ್ಲಾಳದೇವರಸರ ಮಹಾಸಾಮಂತಾಧಿಪತಿ ಮಯಿಲೆಯನಾಯ್ಕ, ಜಂನೆಯನಾಯ್ಕರು ಕುಕ್ಕಲನಾಡನ್ನು ಆಳುವಾಗ ಕಂಬಾಡಪ್ರಭು ನಾಗಗೌಡ ಮಾರಪ್ಪಗೌಡನಿಗೆ ಹೊಲಗಳನ್ನು ಕೊಡುಗೆ ನೀಡಿದ ವಿವರವಿದೆ.[೨೪] ಚನ್ನಪಟ್ಟಣ ತಾಲ್ಲೂಕಿನ ಹಾಗಲಹಳ್ಳಿಯ ಕ್ರಿ.ಶ.೧೩೩೪ರ ಶಾಸನವು ಕುಕ್ಕಲನಾಡಪ್ರಭು ಕಿತ್ತನೆಲ್ಲಿಯ ಹೊಂನಪಗೌಡನ ಮಕ್ಕಳಾದ

ಬೀರಣ, ಹೊಂನಪ, ಮಲೆಯಪರಿಗೆ ಪ್ರಜೆಗಳು, ಗೌಡರುಗಳು, ನಾಯಕರು ಹಾಗಲಹಳ್ಳಿ ಗ್ರಾಮವನ್ನು ಕೊಡುಗೆಯಾಗಿ ನೀಡಿದ ಬಗ್ಗೆ ತಿಳಿಸುತ್ತದೆ.[೨೫] ಕ್ರಿ.ಶ.೧೩೩೮ರ ಬೆಂಗಳೂರಿನ, ಬ್ಯಾಡರಹಳ್ಳಿ ಗ್ರಾಮದ ಶಾಸನದಲ್ಲಿ ಕುಕ್ಕಲನಾಡಪ್ರಭು ಕಿತ್ತನೆಲ್ಲಿಯ ಹೊನಗವುಡನ ಮಕ್ಕಳು ಚಿಕಂಣ, ಹೊನಪ್ಪ, ಗಂಪೆಗೌಡ, ಮಲೆಯಪ, ಮಂಚಪ, ಹೊನಪ, ಚೊಕ್ಕಣಗೋಪಗೌಡ, ರಾಮಣ್ಣ ನಿಧಿಯ ಮಾಡಿಸಿ ಎಲ್ಲಾ ಸಮಸ್ತ ಗೌಡರುಗಳು ಈ ಹಳ್ಳಿಯನು (ಬ್ಯಾಡರಹಳ್ಳಿ) ಸರ್ಬಮಾನ್ಯದ ಕೊಡುಗೆಯಾಗಿ ನೀಡಿದ ಉಲ್ಲೇಖವಿದೆ.[೨೬]

ಮಾಗಡಿ ತಾಲ್ಲೂಕಿನ ಬೈಚಗುಪ್ಪೆ ಗ್ರಾಮದ ಕ್ರಿ.ಶ.೧೩೪೦ರ ಶಾಸನವು ಕುಕ್ಕಲನಾಡ ಪ್ರಭು ಕಿತ್ತನೆಲ್ಲಿಯ ದೊಡ್ಡಗೌಡನ ವಂಶದಲ್ಲಿ ಹುಟ್ಟಿದ ಬಯಿಚವ್ವೆ(ಹೊಂನಪ್ಪಗೌಡನ ಮಗಳು) ಎಂಬ ಹೆಣ್ಣು ಮಗಳಿಗೆ 'ದಂಡಿಗೆಯ ಬೀಯಕ್ಕೆಂದು ತಾವರೇಕೆಜೆ ಹೊಲದೊಳಗಣ ಬಯಿಚವೆಹಳ್ಳಿ (ಬಯಿರವ್ವೆಹಳ್ಳಿ), ಅದಕ್ಕೆ ಸಲ್ಲುವ ಚಟ್ಟಣಕುಂಟೆ ಗ್ರಾಮವನು, ಉಂಬಳಿ ಬಿಟ್ಟಿರುವುದನ್ನು ತಿಳಿಸುತ್ತದೆ.[೨೭] ಕ್ರಿ.ಶ.೧೩೨೯ರ ಬೈಲಕೋನೇನಹಳ್ಳೀಯ ಶಾಸನವು ಆ ನಾಡಿನ ಗೋಪಗವಿಡ, ಗಉಡಪ್ಪ, ಮಾರಪ್ಪ, ದೊಡ್ಡ ಗೌಡರನ್ನು ಹೆಸರಿಸುತ್ತದೆ.[೨೮] ನೆಲಮಂಗಲ ತಾಲ್ಲೂಕಿನ ಕಿತ್ತನೆಲ್ಲಿಗ್ರಾಮದ ಕ್ರಿ.ಶ.೧೩೩೦ರ ಶಾಸನಗಳು ಗೌಡಮನೆತನದ ಗೌಡಪ್ಪ, ಮಾರಪ್ಪ, ಸೋಮಗೌಡ, ಮಲೆಯಪ ಮುಂತಾದವರನ್ನು ಹೆಸರಿಸುತ್ತದೆ.[೨೯] ಇದೇ ಗ್ರಾಮದ ಮತ್ತೊಂದು ಶಾಸನವು ಕಂಬೆಗೌಡನನ್ನು ಉಲ್ಲೇಖಿಸುತ್ತದೆ.[೩೦] ಈ ಎಲ್ಲಾ ದಾಖಲೆಗಳು ಗೌಡ ಮನೆತನವು ಕುಕ್ಕಲ ನಾಡಿನ ಪ್ರದೇಶದಲ್ಲಿ ಪ್ರಬಲವಾಗಿದ್ದಿತು ಎಂಬುದನ್ನು ಖಚಿತಪಡಿಸುತ್ತವೆ.

೩. ವರ್ತಕರು : ವ್ಯಾಪಾರ-ವ್ಯವಹಾರವನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿರುವವರೇ ವರ್ತಕರು. ಕ್ರಿ.ಶ.೧೩೩೦ರ ನೆಲಮಂಗಲದ ಕಿತ್ತನೆಲ್ಲಿ ಗ್ರಾಮದ ಶಾಸನವು 'ಹಲರು' ಗುಂಪಿಗೆ ಸೇರಿದ ವರ್ತಕರನ್ನು ಉಲ್ಲೇಖಿಸಿದೆ. ಇವರನ್ನು ವಿನಿಮಯವೃತ್ತಿಯ ವರ್ತಕರೆಂದು ವಿದ್ವಾಂಸರು ಗುರ್ತಿಸಿದ್ದಾರೆ.[೩೧]

೪. ಶೂದ್ರರು

ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರರನ್ನು ವೈಶ್ಯರ ತರುವಾಯದ ಸ್ಥಾನದಲ್ಲಿ ಗುರುತಿಸಲಾಗುತ್ತಿತ್ತು. ಮನುಸ್ಮೃತಿಯಲ್ಲಿ ಬ್ರಹ್ಮನು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ ನಿಸ್ವಾರ್ಥ ಸೇವೆ ಮಾಡಿಕೊಂಡಿರುವವರೆ ಶೂದ್ರರು. ಅದು ಅವರ ಕರ್ತವ್ಯವೆಂದು ಆದೇಶಿಸಿದ್ದಾನೆ ಎಂದು ಹೇಳಲಾಗಿದೆ.[೩೨] ಕುಕ್ಕಲನಾಡಿನ ಶಾಸನಗಳಲ್ಲಿ ಇವರನ್ನು ಪ್ರತ್ಯೇಕವಾಗಿ ಗುರುತಿಸುವ ಉಲ್ಲೇಖಗಳು ದೊರೆಯುವುದಿಲ್ಲ. ಆದರೂ ಸಮಕಾಲೀನ ಸೈನ್ಯಪಡೆಗಳಲ್ಲಿ ದೇವಾಲಯಗಳ ನಿರ್ಮಾಣ, ಶಿಲ್ಪ ಮತ್ತು ಶಾಸನಗಳ ಕಂಡರಣೆ, ಒಕ್ಕಲತನ ಮೊದಲಾದ ಚಟುವಟಿಕೆಗಳಲ್ಲಿ ಇವರ ಸೇವೆಯನ್ನು ಮರೆಯುವಂತಿಲ್ಲ.

೫. ಇತರೆ ಜಾತಿಗಳು

ಕುಕ್ಕಲನಾಡಿನಲ್ಲಿ ಇತರ ವೃತ್ತಿಗಳನ್ನು ಮಾಡುವ ಅನೇಕ ಜಾತಿಗಳಿದ್ದವು. ಅವುಗಳಲ್ಲಿ ಮುಖ್ಯವಾಗಿ ವಿಶ್ವಕರ್ಮ(ಆಚಾರಿಗಳು, ಅಕ್ಕಸಾಲಿಗರು, ಬಡಿಗೆಯವರು, ಕಮ್ಮಾರರು), ತಳವಾರ, ನೇಯ್ಗೆಯವರು ಮೊದಲಾದವರನ್ನು ಇಲ್ಲಿ ಪರಿಚಯಿಸಲಾಗಿದೆ.

ಅ. ವಿಶ್ವಕರ್ಮ ಮತ್ತು ನೇಯ್ಗೆಯವರು : ಇವರು ಕರಕುಶಲ ಹಾಗೂ ಕಲಾಕೆಲಸ ಮಾಡುವವರಾಗಿದ್ದಾರೆ. ಇವರಲ್ಲಿ ಪ್ರಮುಖರಾದವರು ಆಚಾರಿಗಳು, ಅಕ್ಕಸಾಲಿಗರು, ಬಡಿಗೆಯವರು ಮತ್ತು ಕಮ್ಮಾರರು, ಅಕ್ಕಸಾಲಿಗರು, ಚಿನ್ನದ ಕೆಲಸ ಮಾಡುವವರು. ಬಡಿಗೆಯವರು ಮರದ ಕೆಲಸಗಳನ್ನು ಮಾಡುವವರು. ಕಮ್ಮಾರರು ಕಬ್ಬಿಣದ ಕೆಲಸವನ್ನು ಮಾಡುತ್ತಾರೆ (ಆಚಾರಿಗಳು ಈ ಮೇಲಿನ ಎಲ್ಲ ಕೆಲಸಗಳನ್ನು ಮಾಡುವವರಾಗಿದ್ದರು). ಇವರ ಉಲ್ಲೇಖವಿರುವ ಶಾಸನಗಳು ಕುಕ್ಕಲನಾಡಿನ ಪ್ರದೇಶದಲ್ಲಿ ದೊರೆತಿವೆ.

ಕ್ರಿ.ಶ.ಸು.೭೫೦ರ ಬೆಂಗಳೂರಿನ ದಾಸರಹಳ್ಳಿಯ ಶಾಸನದಲ್ಲಿ ಶ್ರೀ ಅಮ್ಬಿ ಆಚಾರಿಯ ಮಗ ನಾಗನು ಮಡಿದ ಎಂಬ ಉಲ್ಲೇಖವಿದೆ. ಅಂದರೆ ನಾಗ ಎಂಬುವವನು ಈ ಶಾಸನವನ್ನು ರಚಿಸಿದ ಎಂದರ್ಥ. ಇದು ಆಚಾರಿವರ್ಗದ ಜನರು ಈ ಪ್ರದೇಶದಲ್ಲಿ ಇದ್ದರು ಎಂಬುದಕ್ಕೆ ದಾಖಲೆಯಾಗಿದೆ.[೩೩] ನೆಲಮಂಗಲದ ಐಗಂಡಪುರ ಗ್ರಾಮದ ಕ್ರಿ.ಶ.೧೩೦೧ರ ತಮಿಳು ಶಾಸನವು ಕುಕ್ಕಲನಾಡಿನ ಪ್ರದೇಶದಲ್ಲಿ ಅನೇಕ ರೀತಿಯ ತೆರಿಗೆಗಳನ್ನು ಹಾಕುತ್ತಿದ್ದರು ಎಂದು ತಿಳಿಸುವಾಗ ನೇಯ್ಗೆ ಮಗ್ಗಗಳ ಮೇಲೆ, ಅಕ್ಕಸಾಲಿಗರ ಮೇಲೆ, ಹಸು ಎತ್ತುಗಳ ಮೇಲೆ, ಉಡುಗೊರೆಗಳ ಮೇಲೆ ಸುಂಕ ವಿಧಿಸುತ್ತಿದ್ದರು ಎಂದು ತಿಳಿಸುತ್ತದೆ.[೩೪] ಅದೇ ರೀತಿ ಮಾಗಡಿಯ ಕಲ್ಲೂರು ಗ್ರಾಮದ ಕ್ರಿ.ಶ.೧೩೧೫ರ ಶಾಸನದಲ್ಲಿ ಅಲ್ಲಾಳನಾಥ ದೇವರಿಗೆ ಎಲ್ಲಾ ಗದ್ದೆಯನ್ನು ಬಡಿಗೆಯವರು, ಕಮ್ಮಾರರು, ಅಕ್ಕಸಾಲಿಗರು ಮುಂತಾದ ೪ ನಾಡುಗಳ ವೀರ ಪಾಂಚಾಳರು ತಪು, ತವುಡಿ ರೂಪದಲ್ಲಿ ನೀಡಿದರು ಎಂಬ ದಾಖಲೆ ಇದೆ.[೩೫]

ಕ್ರಿ.ಶ.೧೪೦೮ರ, ಬೆಂಗಳೂರಿನ ಕನ್ನೆಲ್ಲಿ ಗ್ರಾಮದ ಶಾಸನವು ಶ್ರೀ ವೀರದೇವರಾಯನ ಅಧಿಕಾರಿ ಹಯಕಸನು ಕುಕ್ಕಲನಾಡಿನ ಕನ್ನೆಲ್ಲಿಯ ತಿರುಮಲೆನಾಥ ದೇವರಿಗೆ ಅಲ್ಲಿನ ಎರಡು ಮಗ್ಗವನ್ನು ಸುಂಕಮಾನ್ಯವಾಗಿ ಕೊಟ್ಟ ವಿವರವನ್ನು ದಾಖಲಿಸಿದೆ.[೩೬] ನೆಲಮಂಗಲ ತಾಲ್ಲೂಕಿನ, ಬಿನ್ನಮಂಗಲದ ಕ್ರಿ.ಶ.೧೧೧೦ರ ತಮಿಳು ಶಾಸನವು ಕುಕ್ಕಲನಾಡಿನ ಪ್ರದೇಶದಲ್ಲಿ ವಿವಿಧ ವೃತ್ತಿಗಳ ಜನರಿಗೆ, ಕೆಲಸಗಾರರಿಗೆ ತೆರಿಗೆ ವಿಧಿಸುತ್ತಿದ್ದರು ಎಂದು ತಿಳಿಸುತ್ತಾ ನೇಯ್ಗೆಯ ಮೇಲೂ ತೆರಿಗೆ ವಿಧಿಸುತ್ತಿದ್ದರು ಎಂದು ಉಲ್ಲೇಖಿಸುತ್ತದೆ.[೩೭]

ಈ ಮೇಲಿನ ದಾಖಲೆಗಳಿಂದ ವಿಶ್ವಕರ್ಮರು ಹಾಗೂ ನೇಯ್ಗೆಯರವರು ಈ ಪ್ರದೇಶದಲ್ಲಿದ್ದರು ಎಂದು ತಿಳಿದುಬರುತ್ತದೆ.

ಆ. ತಳವಾರರು : ರಕ್ಷಣೆ ಕೆಲಸ ಮಾಡುವವರು ತಳವಾರರು. ಇವರ ಉಲ್ಲೇಖವಿರುವ ಶಾಸನ ಕುಕ್ಕಲನಾಡಿನ ಪ್ರದೇಶದಲ್ಲಿ ಕಂಡುಬಂದಿದೆ. ಕ್ರಿ.ಶ.ಸು.೭೫೦ರ ನೆಲಮಂಗಲದ ತೋಟಗೆರೆ ಗ್ರಾಮದ ಶಾಸನವು ಎತ್ತಳ್ಳೊರನು ಕುಕ್ಕನರೆ(ಕುಕ್ಕಲ)ನಾಡನ್ನು ಆಳುವಾಗ ತಳಾರ ಜತ್ತನು ಪೊಗುಂಡಿ ಕಾಳಗದಲ್ಲಿ ಇರಿದು ಸತ್ತನು ಎಂಬ ಉಲ್ಲೇಖವಿದೆ. ಇದರಿಂದ ತಳವಾರ ಜನಾಂಗವು ಈ ಪ್ರದೇಶದಲ್ಲಿತ್ತೆಂದು ಹೇಳಬಹುದಾಗಿದೆ.[೩೮]

ಇವುಗಳಲ್ಲದೆ ನಾನಾಗೋತ್ರದ, ನಾನಾಸೂತ್ರದ, ನಾನಾಜಾತಿಯ, ನಾನಾ ಶಾಖೆಯ, ನಾನಾ ನಾಮಧೇಯರಾದ ಅನೇಕ ಜನರು ಇದ್ದರೆಂದು ಕ್ರಿ.ಶ.೧೫೩೩ರ ನೆಲಮಂಗಲದ ಹೆಸರುಘಟ್ಟದ ಶಾಸನವು ತಿಳಿಯುತ್ತದೆ.[೩೯] ಇದರಿಂದ ಈ ನಾಡಿನ ಸಮಾಜದಲ್ಲಿ ವೈವಿಧ್ಯಮಯವಾದ ಕಸುಬುದಾರರಿದ್ದರೆಂದು ತಿಳಿಸುತ್ತದೆ. ಇಂಥ ಎಲ್ಲ ವೃತ್ತಿಗಳ ಜನ ಸಮಾಜದಲ್ಲಿರುವುದರಿಂದ ಅಂಥ ಸಮಾಜಕ್ಕೆ ಪರಿಪೂರ್ಣತೆ ಪ್ರಾಪ್ತವಾಗುತ್ತದೆ.

೪.೩. ಸ್ತ್ರೀಯರ ಸ್ಥಾನಮಾನ ಮತ್ತು ವಿದ್ಯಾಭ್ಯಾಸ

ಸ್ತ್ರೀಯರು ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಹೊಂದಿದ್ದರು. ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಸ್ತ್ರೀಯರ ಸ್ಥಾನವು ಪುರುಷನಿಗಿಂತ ಉನ್ನತವಾಗಿತ್ತು ಎಂಬುದಕ್ಕೆ ಪ್ರಾಚೀನ ಕಾಲದ ಸ್ತ್ರೀಯರಾದ ಅಪಲಾ, ಲೋಪಮುದ್ರೆ, ಮೈತ್ರೇಯಿ, ಗಾರ್ಗಿ ಇವರು ಶಿಕ್ಷಣವನ್ನು ಕಲಿತ ಮಹಿಳೆಯರಾಗಿದ್ದರು ಎಂಬ ಅಂಶವನ್ನು ನಾವು ಇಂದಿಗೂ ಓದುತ್ತಾ ಬಂದಿದೇವೆ.

ಸ್ತ್ರೀಯ ಕಾರ್ಯವ್ಯಾಪ್ತಿಯು ಕೇವಲ ಮನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಅವಳು ಸಾಮಾಜಿಕ, ರಾಜಕೀಯ, ಧಾರ್ಮಿಕ, ಕಲೆ, ವಾಸ್ತುಶಿಲ್ಪ, ಆರ್ಥಿಕ ಮತ್ತು ಸಾಹಿತ್ಯಕ ಮುಂತಾದ ರಂಗಗಳಲ್ಲಿ ಪುರುಷನಂತೆ ಸಮಾನವಾಗಿ ಭಾಗವಹಿಸುತ್ತಿದ್ದಳು. ಕುಕ್ಕಲನಾಡಿನ ಪ್ರದೇಶದ ಮಾಗಡಿ ತಾಲ್ಲೂಕಿನ ಬೈಚಗುಪ್ಪೆ ಗ್ರಾಮದ ಕ್ರಿ.ಶ.೧೩೪೦ರ ಶಾಸನವು ಕುಕ್ಕಲನಾಡಪ್ರಭು ಕಿತ್ತನೆಲ್ಲಿಯ ದೊಡ್ಡಗೌಡನ ವಂಶದಲ್ಲಿ ಹುಟ್ಟಿದ (ಹೊಂನಪ್ಪ ಗೌಡನ ಮಗಳು) ಬಯಿಚವ್ವೆ ಎಂಬ ಹೆಣ್ಣುಮಗಳಿಗೆ 'ದಂಡಿಗೆಯ ಬೀಯ'ಕ್ಕೆಂದು ತಾವರೇಕೆಜೆ ಹೊಲದೊಳಗಣ ಬಯಿಚವ್ವೆ ಹಳ್ಳಿ (ಬಯಿರವ್ವೆಹಳ್ಳಿ), ಅದಕ್ಕೆ ಸಲ್ಲುವ ಚಟ್ಟನಕುಂಟೆ ಗ್ರಾಮವನು ಉಂಬಳಿ ಬಿಟ್ಟಿರುವುದನ್ನು ತಿಳಿಸುತ್ತದೆ.[೪೦] ಈ ಬಯಿರವ್ವೆ ಹಳ್ಳಿ ಇಂದಿನ ಬೈಚಗುಪ್ಪೆ ಗ್ರಾಮವಾಗಿರಬಹುದು.

ಬೆಂಗಳೂರಿನ ಕ್ರಿ.ಶ.೧೩೪೦ರ ರಾಮಸಮುದ್ರ(ರಾಮಸಂದ)ದ ಶಾಸನ ಕುಕ್ಕಲನಾಡಿನ ನಾಯಕರು ಶ್ರೀ ಗಂಗಾದೇವಿಯನ್ನು ಪ್ರಾರ್ಥಿಸಿ ರಾಮಸಮುದ್ರದ ಕೆರೆಯನ್ನು ಕಟ್ಟಿಸಿದರು ಎಂದು ಉಲ್ಲೇಖಿಸುತ್ತದೆ. ಇವುಗಳಿಂದ ನಮಗೆ ಅಂದಿನ ಕಾಲದಲ್ಲಿ ಜನರು ಸ್ತ್ರೀ ದೇವತೆಗಳನ್ನು ಪೂಜಿಸುತ್ತಿದ್ದರೆಂದು ಹಾಗೂ

ತಮ್ಮ ಹೆಣ್ಣು ಮಕ್ಕಳು ಚೆನ್ನಾಗಿರಲೆಂದು ಕೊಡುಗೆಗಳನ್ನು ನೀಡುತ್ತಿದ್ದರು ಎಂಬ ಪ್ರಮುಖವಾದ ಅಂಶಗಳು ತಿಳಿದುಬರುತ್ತವೆ.

ವಿದ್ಯಾಭ್ಯಾಸ

ಮಾನವನ ದೈಹಿಕ, ಬೌದ್ಧಿಕ ಬೆಳವಣಿಗೆಯನ್ನು ವಿಕಾಸ ಮಾಡುವಲ್ಲಿ ಶಿಕ್ಷಣದ ಪಾತ್ರ ಪ್ರಮುಖವಾಗಿದೆ. ಈ ಶಿಕ್ಷಣವನ್ನು ಮಠಗಳು, ದೇವಸ್ಥಾನಗಳು, ಘಟಿಕಾಸ್ಥಾನಗಳು, ಬ್ರಹ್ಮಪುರಿಗಳು ಮತ್ತು ಅಗ್ರಹಾರಗಳಲ್ಲಿ ನೀಡಲಾಗುತ್ತಿತ್ತು. ಈ ಎಲ್ಲಾ ಶಿಕ್ಷಣ ಕೇಂದ್ರಗಳಲ್ಲಿ ಆಧ್ಯಾತ್ಮಿಕ, ಬೌದ್ಧಿಕ, ವ್ಯಾಕರಣ ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಕುಕ್ಕಲನಾಡಿನ ಅನೇಕ ಗ್ರಾಮಗಳು ಶಿಕ್ಷಣದ ಕೇಂದ್ರಗಳಾಗಿದ್ದವು ಎಂಬುದಕ್ಕೆ ಅನೇಕ ಶಾಸನಗಳಲ್ಲಿ ಉಲ್ಲೇಖವಾಗಿರುವ ಹೆಸರುಗಳನ್ನು ನಾವು ನೋಡಬಹುದು.

ಅಗ್ರಹಾರ

ಅಗ್ರಹಾರಗಳು ಪ್ರಾಚೀನ ಕಾಲದ ವಿದ್ಯಾಕೇಂದ್ರಗಳಾಗಿದ್ದು ಬಹುಸಂಖ್ಯವಾಗಿ ಹಳ್ಳಿ, ಹಳ್ಳಿಗಳಲ್ಲಿ ಶೈಕ್ಷಣಿಕ ಸೌಲಭ್ಯವನ್ನು ಪಡೆದುಕೊಂಡು ಶಿಕ್ಷಣವನ್ನು ಒದಗಿಸುತ್ತಿದ್ದವು. ಇವುಗಳಿಗೆ ಅನೇಕ ರಾಜ, ಮಹಾರಾಜರ, ನಾಯಕರ, ಪ್ರಭುಗಳ ಮತ್ತು ಸಾರ್ವಜನಿಕರ ಆಶ್ರಯವಿರುತ್ತಿತ್ತು. ಇಂತಹ ಅಗ್ರಹಾರಗಳ ಉಲ್ಲೇಖಗಳು ಕುಕ್ಕಲನಾಡಿನ ಶಾಸನಗಳಲ್ಲಿ ಕಂಡುಬಂದಿವೆ.

ನೆಲಮಂಗಲ ತಾಲ್ಲೂಕಿನ ತೋಟಗೆರೆಯ ಕ್ರಿ.ಶ.ಸು.೭೫೦ರ ಶಾಸನದಲ್ಲಿ ಗಂಗರಸ ಶ್ರೀ ಪುರುಷ ಮಹಾರಾಜನು ಅತ್ತಿಗುಂಟೂರು ಎಂಬ ಅಗ್ರಹಾರವನ್ನು ಸಕ್ಕಹರಶರ್ಮ ಎಂಬುವವನಿಗೆ ದಾನ ನೀಡಿದರ ಬಗ್ಗೆ ತಿಳಿಸುತ್ತದೆ.[೪೧] ಬೆಂಗಳೂರಿನ ದೊಡ್ಡಬೊಮ್ಮಸಂದ್ರದ ಕ್ರಿ.ಶ.೧೪೩೦ರ ಶಾಸನವು ಬಂಮಹಳಿ (ಬೊಮ್ಮನಹಳ್ಳಿ) ಅಗ್ರಹಾರದ ಬಗ್ಗೆ ಉಲ್ಲೇಖಿಸುತ್ತದೆ.[೪೨]

ಬೆಂಗಳೂರು ತಾಲ್ಲೂಕಿನ ಗೊಂಗಡಿಪುರ ಗ್ರಾಮದ ಕ್ರಿ.ಶ.೧೪೯೫ರ ಶಾಸನವು ಗೊಂಗಡಿಪುರ (ತಿಂಮಂಣರಾಜಪುರ) ಎಂಬ ಅಗ್ರಹಾರದ ಬಗ್ಗೆ ತಿಳಿಸುತ್ತದೆ.[೪೩] ಕ್ರಿ.ಶ.೧೫೪೭ರ ಮಾಗಡಿ ತಾಲ್ಲೂಕಿನ, ಬಾಣವಾಡಿಯ ಶಾಸನವು ಬಾಣವಾಡಿಯ ವೀರಭದ್ರ ದೇವಾಲಯಕ್ಕೆ ರಾಮಪುರ ಎಂಬ ಅಗ್ರಹಾರವನ್ನು ದಾನಬಿಟ್ಟ ವಿವರವನ್ನು ಉಲ್ಲೇಖಿಸುತ್ತದೆ.[೪೪]

ಸಂಪ್ರದಾಯ ಮತ್ತು ನಂಬಿಕೆಗಳು

ನಾವು, ನಮ್ಮ ಭಾರತೀಯ ಸಂಸ್ಕೃತಿಯನ್ನು ಗಮನಿಸಿದಾಗ ಅದು ಶ್ರೇಷ್ಠವಾದ, ಉನ್ನತವಾದ, ಸಂಸ್ಕೃತಿಯಾಗಿದೆ ಎಂಬುದು ತಿಳಿದುಬರುತ್ತದೆ. ಇಂತಹ ಸಂಸ್ಕೃತಿಯು ಅನೇಕ ನಂಬಿಕೆ ಮತ್ತು

ಸಂಪ್ರದಾಯಗಳಾದ ಧರ್ಮ, ಹಬ್ಬ, ಜಾತ್ರೆ, ದೇವರು, ದೇವಾಲಯ, ಮಠ, ಮಸೀದಿ ಮುಂತಾದವುಗಳು ಧಾರ್ಮಿಕ ಮತ್ತು ಸಾಮಾಜಿಕ ರಂಗದಲ್ಲಿ ವಹಿಸದ ಪಾತ್ರ ಅಮೋಘವಾದುದು.

ಕುಕ್ಕಲನಾಡಿನ ಶಾಸನಗಳನ್ನು ಗಮನಿಸಿದಾಗ ಆ ಶಾಸನಗಳಲ್ಲಿರುವ ಪಾಪ, ಪುಣ್ಯ, ದಾನ, ಧರ್ಮ, ಕರ್ಮ, ನರಕ, ದಾನದ ವೈಶಿಷ್ಟ್ಯವನ್ನು ವಿಶೇಷವಾಗಿ ಕಾಣಬಹುದು. ಸಮಾಜದಲ್ಲಿ ಬಾಳುವ ಪ್ರತಿಯೊಬ್ಬ ವ್ಯಕ್ತಿಯು ಪಾಪ-ಪುಣ್ಯ, ಸ್ವರ್ಗ-ನರಕ, ಧರ್ಮ-ಕರ್ಮ ಮುಂತಾದವುಗಳ ಕಲ್ಪನೆಯನ್ನಿಟ್ಟುಕೊಂಡು ದಾನವನ್ನು ಮಾಡುವುದರ ಮೂಲಕ ನಾವು ಸ್ವರ್ಗಕ್ಕೆ ಹೋಗುತ್ತೇವೆ, ಇಲ್ಲವಾದರೆ ನರಕಕ್ಕೆ ಹೋಗುತ್ತೇವೆ ಎಂಬ ಭಾವನೆ, ಕಲ್ಪನೆಯನ್ನು ನಾವು ಇಂದಿಗೂ ಸಮಾಜದಲ್ಲಿ ಕಾಣುತ್ತೇವೆ.

ದೇವರು, ಸರ್ವಶಕ್ತ, ಭಕ್ತರು ಸಲ್ಲಿಸುವ ಸೇವೆಗೆ ಒಲಿದು, ಬೇಡಿದ್ದನ್ನು ನೀಡುವ ಕರುಣಾಳು, ನಮ್ಮೆಲ್ಲ ತಪ್ಪುಗಳನ್ನು ಮನ್ನಿಸಿ ಕಾಪಾಡುವ ದಯಾಮಯಿ. ವಿಶಾಲ ಹೃದಯವುಳ್ಳ ಆ ದೇವರನ್ನು ನಾನಾ ವಿಧವಾಗಿ ಆರಾಧಿಸುವ, ಪೂಜಿಸುವ ಪದ್ಧತಿ ಇದೆ. ಜನ ತಮ್ಮ ಕಷ್ಟಗಳನ್ನು ಪರಿಹರಿಸಿ ಕೈಹಿಡಿದು ರಕ್ಷಿಸುವವನು ದೇವರೆಂದ ಮೇಲೆ ಆ ದೇವರನ್ನು ಪೂಜಿಸಬೇಕು. ಪ್ರಾರ್ಥಿಸಬೇಕು ಎಂದು ಅನೇಕ ದೇವಾಲಯಗಳನ್ನು, ಛತ್ರಗಳನ್ನು, ಮಂದಿರಗಳನ್ನು ದೇವತಾ ಮೂರ್ತಿಗಳನ್ನು ನಿರ್ಮಿಸುವುದರ ಜೊತೆಗೆ ಅವುಗಳಿಗೆ ದಾನ ನೀಡುವುದನ್ನು ಕಲಿತರು. ಹೀಗೆ ಪಾಪ-ಪುಣ್ಯದ ಕಲ್ಪನೆಯೊಂದಿಗೆ ದಾನ ಬೆಳೆದುಕೊಂಡುಬಂದಿದೆ.

ಕರ್ನಾಟಕದಲ್ಲಿ ದೊರೆತ ಹೆಚ್ಚಿನ ಸಂಖ್ಯೆಯ ಶಾಸನಗಳು ದಾನ ಶಾಸನಗಳಾಗಿವೆ. ಇವು ಕರ್ನಾಟಕ ಸಂಸ್ಕೃತಿಯ ಒಂದು ಪ್ರಧಾನವಾದ ಅಂಶವನ್ನು ಎತ್ತಿ ತೋರಿಸುತ್ತದೆ. ಜೀವನದ ಮೌಲ್ಯಗಳಲ್ಲಿ ಧರ್ಮಕ್ಕೆ ಪ್ರಪ್ರಥಮ ಸ್ಥಾನವನ್ನಿತ್ತ ಧಾರ್ಮಿಕ ಸಂಸ್ಕೃತಿಯ ಸ್ವರೂಪ ಈ ಶಾಸನಗಳಲ್ಲಿ ಪ್ರತಿಬಿಂಬಿತವಾಗಿದೆ. ಶಾಸನಗಳ ಉಗಮಕ್ಕೆ ಈ ಮನೋಧರ್ಮವೇ ಪ್ರೇರಕ ಶಕ್ತಿಯೆನ್ನಬಹುದು. ಇಂತಹ ದಾನದ ಸ್ವರೂಪವನ್ನು ಕುಕ್ಕಲನಾಡಿನ ಅನೇಕ ಶಾಸನಗಳಲ್ಲಿ ನಾವು ಕಾಣಬಹುದಾಗಿದೆ.

ನೆಲಮಂಗಲ ತಾಲ್ಲೂಕಿನ ಐಗಂಡಪುರ ಗ್ರಾಮದ ಕ್ರಿ.ಶ.೧೦೩೩ರ ತಮಿಳು ಶಾಸನವು ಇಲ್ಲಿನ ಸಿದ್ದೇಶ್ವರ ದೇವರಿಗೆ ಭೂದಾನ ಬಿಟ್ಟ ಬಗ್ಗೆ ಉಲ್ಲೇಖಿಸುತ್ತದೆ.[೪೫] ಕ್ರಿ.ಶ.೧೧೧೦ರ, ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲದ ತಮಿಳು ಶಾಸನದಲ್ಲಿ ಅಲ್ಲಿನ ಮುಕ್ತಿನಾಥ ದೇವಾಲಯಕ್ಕೆ ಬಿನ್ನಮಂಗಲ ಮತ್ತು ನಕ್ಕೂರು ಗ್ರಾಮಗಳನ್ನು ದಾನ-ದತ್ತಿ ಬಿಟ್ಟ ಬಗ್ಗೆ ವಿವರಿಸಲಾಗಿದೆ.[೪೬] ಕ್ರಿ.ಶ.೧೩೧೫ರ ಮಾಗಡಿಯ ಕಲ್ಲೂರು ಗ್ರಾಮದ ಕ್ರಿ.ಶ.೧೩೧೫ರ ಶಾಸನವು ಅಲ್ಲಾಳನಾಥ ದೇವರಿಗೆ ಗದ್ದೆಯನ್ನು ದಾನ ಬಿಟ್ಟ ಬಗ್ಗೆ ತಿಳಿಸುತ್ತದೆ.[೪೭]

ನೆಲಮಂಗಲ ತಾಲ್ಲೂಕಿನ ಹೆಸರುಘಟ್ಟದ ಕ್ರಿ.ಶ.೧೫೩೩ರ ಶಾಸನವು ಚಂದ್ರಮೌಳೇಶ್ವರ ದೇವಾಲಯಕ್ಕೆ ಊರಿನ ಜನರು ಹೊಲ, ಗದ್ದೆ, ತೋಟಗಳನ್ನು ದಾನಮಾಡಿದ ವಿವರಿಸುತ್ತದೆ.[೪೮] ಕ್ರಿ.ಶ.೧೫೪೭ರ ಮಾಗಡಿ ತಾಲ್ಲೂಕಿನ ಬಾಣವಾಡಿಯ ಶಾಸನವು ವೀರಭದ್ರದೇವಾಲಯದ ನೈವೇದ್ಯಕ್ಕೆ, ರಾಮಾಪುರ ಎಂಬ ಗ್ರಾಮವನ್ನು ದಾನ ಬಿಟ್ಟ ಬಗ್ಗೆ ಉಲ್ಲೇಖಿಸುತ್ತದೆ.[೪೯] ಕ್ರಿ.ಶ.೧೪೦೮ರ ಬೆಂಗಳೂರಿನ ಕನ್ನೆಲ್ಲಿ ಗ್ರಾಮದ ಶಾಸನವು ಕುಕ್ಕಲನಾಡಿನ ಅಧಿಕಾರಿ ಹಯಕಸ ಎನ್ನುವವನು ತಿರುಮಲನಾಥ ದೇವರಿಗೆ ಎರಡು ಮಗ್ಗವನು ಸುಂಕಮಾನ್ಯವಾಗಿ ಕೊಟ್ಟ ಉಲ್ಲೇಖವಿದೆ.[೫೦] ಕ್ರಿ.ಶ.೧೦೨೯ರ ನೆಲಮಂಗಲ ತಾಲ್ಲೂಕಿನ, ಸೋಲದೇವನಹಳ್ಳಿ ಗ್ರಾಮದ ಶಾಸನವು ನಾಥಪಂಥದ ಗುರುಗಳಾದ ಮೌನಿಭಟ್ಟಾರಕ ಗುರುವಿನ (ಮೌನಿನಾಥಮುನಿ) ಬಗ್ಗೆ ಉಲ್ಲೇಖಿಸುತ್ತದೆ.[೫೦] ಇದರಿಂದ ಈ ಪ್ರದೇಶದಲ್ಲಿನ ಗುರು ಭಕ್ತಿಯ ಬಗ್ಗೆ ತಿಳಿಯುತ್ತದೆ.

೪.೪. ಶಾಸನ ಕವಿಗಳು ಮತ್ತು ಲಿಪಿಕಾರರು

ಕುಕ್ಕಲನಾಡಿನ ಪ್ರದೇಶದಲ್ಲಿ ದೊರೆತಿರುವ ಶಾಸನಗಳಿಂದ ನಾವು ಇಲ್ಲಿನ ಶಾಸನ ಕವಿಗಳು ಅಥವಾ ಶಾಸನಗಳ ಪಾಠ ರಚಕರು ಮತ್ತು ಲಿಪಿಕಾರರ ಅಥವಾ ಕಂಡರಣೆಕಾರರ ಬಗ್ಗೆ ತಿಳಿಯಬಹುದು.

ಶಾಸನಕವಿಗಳು

ಶಾಸನಗಳ ಕೊನೆಯಲ್ಲಿ ತಮ್ಮ ಹೆಸರನ್ನು ದಾಖಲು ಗೊಳಿಸಿರುತ್ತಾರೆ. ಕೆಲವೊಮ್ಮೆ ಶಾಸನಗಳ ಮಧ್ಯದಲ್ಲೂ ಸಹ ಇವರ ಹೆಸರನ್ನು ಕಾಣಬಹುದು.

ಪುಣ್ಯಸಮ್ರ್ಮ

ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಗ್ರಾಮದ ಕ್ರಿ.ಶ.೧೦೨೯ರ ಶಾಸನದಲ್ಲಿ "ಮುಮ್ಮಡಿ ಚೋಳಗಾವುಣ್ಡನುಂ ಸಾಕ್ಷಿಯಾಗ್ಗಲಿ ಶಿಲಾಶಾಸನಮಂಬರೆದಂ ಮಹಾಮಾತ್ರನ ಜವಮ್ರ್ಮಯ್ಯನಮಗಂ ಶಾಸನವಾಚಕಚಕ್ರವರ್ತ್ತಿ ಪುಣ್ಯಸಮ್ರ್ಮಂ" ಎಂದಿದೆ.[೫೧] ಅಂದರೆ ಪುಣ್ಯಸಮ್ರ್ಮನು ಶಾಸನ ರಚಿಸಿಸು ವುದಲ್ಲದೆ ಶಾಸನಗಳನ್ನು ಓದುವುದರಲ್ಲಿಯೂ ಪ್ರಸಿದ್ಧನಾಗಿದ್ದನು ಎಂದು ತಿಳಿಯುತ್ತದೆ. ೫೫ ಸಾಲು ಗಳಿರುವ ಈ ಶಾಸನ ಹಳಗನ್ನಡದಲ್ಲಿದೆ. ವಿಷಯ ನಿರೂಪಣೆಯನ್ನು ಗದ್ಯದಲ್ಲಿ ಹೇಳುತ್ತದೆ.

ಕೇಶವ

ನೆಲಮಂಗಲ ತಾಲ್ಲೂಕಿನ ಬೈಲಕೋನೇನಹಳ್ಳಿಯ ಕ್ರಿ.ಶ.೧೩೨೯ರ ಶಾಸನವು "ಯಿ ಸಸನವ ಬರದ ಸೇನಬೋವ ಕೇಶವದೇವ" ಎಂದು ತಿಳಿಸುತ್ತದೆ.[೫೨] ಇದರಿಂದ ಈ ಶಾಸನವನ್ನು ರಚಿಸಿದವನು ಸೇನಬೋವ ಕೇಶವನೆ ಎಂದು ತಿಳಿದುಬರುತ್ತದೆ. ಈ ಶಾಸನವಲ್ಲದೆ ಕ್ರಿ.ಶ.೧೩೪೦ರ ಮಾಗಡಿ

ತಾಲ್ಲೂಕಿನ ಬೈಚಗುಪ್ಪೆ ಗ್ರಾಮದ ಶಾಸನವನ್ನು ಈತನೇ ರಚಿಸಿದ್ದು ಎಂಬ ಉಲ್ಲೇಖವಿದೆ. "ಶ್ರೀಮಾರನಾಥಯಿಂತಿವರುಬೆದಿಂ ಕೇಸವನಬರಹ"[೫೪] ೧೮ ಸಾಲುಗಳಿಂದ ಕೂಡಿರುವ ಈ ಶಾಸನವು ಗದ್ಯದಲ್ಲಿ ವಿಷಯವನ್ನು ನಿರೂಪಿಸುತ್ತದೆ. ಕುಕ್ಕಲನಾಡಿನ ಕಿತ್ತನಲ್ಲಿಯ ದೊಡ್ಡಗೌಡನ ವಂಶದ 'ಬಯಿಚವ್ವೆ' ಎಂಬ ಹೆಣ್ಣುಮಗಳಿಗೆ 'ದಂಡಿಗೆಯ ಬೀಯ' ಕೆಂದು ತಾವರೆಕೆಜೆ ಹೊಲದೊಳಗಣ ಬಯಿರವ್ವೆಹಳ್ಳಿ ಅದಕ್ಕೆ ಸಲ್ಲುವ 'ಚಟ್ಟಣಕುಂಟೆ' ಗ್ರಾಮವನು ಉಂಬಳಿ ಬಿಟ್ಟಿರುವುದನ್ನು ತಿಳಿಸುತ್ತದೆ.

ಜಕ್ಕಣ್ಣ

ಬೆಂಗಳೂರಿನ ಬ್ಯಾಡರಹಳ್ಳಿ ಗ್ರಾಮದ ಶಾಸನದಲ್ಲಿ "...ನಾಡ ವೊಪ್ಪ ಶ್ರೀ ಮುಕ್ತನಾಥ ಬರೆದ ಸೇನಬೋವ ಜಕ್ಕಣ್ಣ ಮಂಗಳ ಮಹಾಶ್ರೀ" ಎಂದಿದೆ.[೫೫] ಇದರ ಕಾಲ ಕ್ರಿ.ಶ.೧೩೩೬. ಗದ್ಯದ ನೇರ ನಿರೂಪರಣೆ ಇರುವ ೪೮ ಸಾಲುಗಳ ಈ ಶಾಸನ ಬರೆದ ಸೇನಬೋವಜಕ್ಕಣ ಎಂಬ ಮಾತನ್ನಾಧರಿಸಿ ಕವಿ-ಲಿಪಿಕಾರ ಈತನೇ ಆಗಿರಬೇಕೆಂದು ಹೇಳಬಹುದು.

ಜ...ಮೆಯಣ

"ಶ್ರೀ ಶ್ರೀ ಶ್ರೀ ಬರೆದ..ನ.ಜ...ಮೆಯಂಣ..." ಎಂದು ನೆಲಮಂಗಲ ತಾಲ್ಲೂಕಿನ ಮಂಠಾಳು ಗ್ರಾಮದ ಶಾಸನದಲ್ಲಿ ಉಲ್ಲೇಖಗೊಂಡಿದೆ.[೫೬] ಇದರಿಂದ ಈ ಶಾಸನವನ್ನು ಬರೆದವನು 'ಜ..ಮೆಯಂಣ' ಎಂಬುವನು ಎಂದು ಗೊತ್ತಾಗುತ್ತದೆ. ಇದರ ಕಾಲ ಕ್ರಿ.ಶ.೧೩೩೩. ಇದು ೩೨ ಸಾಲುಗಳಿರುವ ಶಾಸನ. ಗದ್ಯಶೈಲಿಯಲ್ಲಿ ವಿಷಯವನ್ನು ತಿಳಿಸುತ್ತದೆ. ಇದಲ್ಲದೆ ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲದ ಕ್ರಿ.ಶ.೧೩೩೧ರ ಶಾಸನದಲ್ಲಿ ಮಯಣನ ಉಲ್ಲೇಖವಿದೆ. "...ನಾಡವೊಪ್ಪ ಶ್ರೀ...ಮುಕ್ತಿನಾಥ... ಮಯ..." ಎಂದಿದೆ.[೫೭] ಶಾಸನ ತ್ರುಟಿತವಾಗಿರುವುದರಿಂದ ಹೆಸರು ಸ್ಪಷ್ಟವಿಲ್ಲ. ಇದರಿಂದ ಮಯಣನೆ ಈ ಶಾಸನದ ಕವಿ ಎಂದು ತಿಳಿಯಬಹುದು.

ಲಿಂಗಣ್ಣ

ನೆಲಮಂಗಲ ತಾಲ್ಲೂಕಿನ ಕಿತ್ತನೆಲ್ಲಿ ಗ್ರಾಮದ ಕ್ರಿ.ಶ.೧೩೩೦ರ ಶಾಸನವು "ಶ್ರೀ ಶ್ರೀ ಸೇನಬೋವ ಲಿಂಗಣ ಮಾರೋಜನ ಬರಹ" ಎಂದು ಉಲ್ಲೇಖಿಸುತ್ತದೆ.[೫೮] ಇದರಿಂದ ೪೦ ಸಾಲುಗಳುಳ್ಳ ಗದ್ಯ ಶೈಲಿಯಲ್ಲಿ ವಿಷಯ ನಿರೂಪಣೆ ಇರುವ ಈ ಶಾಸನವನ್ನು ಬರೆದವನು ಲಿಂಗಣ್ಣ ಎಂದು ತಿಳಿಯುತ್ತದೆ.

ಅನಂತಣ್ಣ(ಅನಂತಂಣ್ಣ)

ಕ್ರಿ.ಶ.೧೩೪೦ರ ಬೆಂಗಳೂರಿನ ರಾಮಸಂದ್ರ(ರಾಮಸಮುದ್ರ)ದ ಶಾಸನವು ೪೫ ಸಾಲುಗಳಿಂದ ಕೂಡಿದ್ದು, ವಿಷಯವು ಗದ್ಯಶೈಲಿಯಲ್ಲಿ ನಿರೂಪಿತಗೊಂಡಿದೆ. ಈ ಶಾಸನದಲ್ಲಿ "ನಾಡ ಸೇನಬೋವ

ಕೇಶವದೇವನ ಮಕ್ಕಳು ...ಅನಂಚಂಣ್ಣನ ಬರಹ ಮಂಗಳ ಮಹ ಶ್ರೀ ಶ್ರೀ'' ಎಂಬ ಉಲ್ಲೇಖವಿದೆ.[೫೯] ಇದರಿಂದ ನಮಗೆ ಈ ಶಾಸವವನ್ನು ಬರೆದವನು ಸೇನಬೋವ ಕೇಶವ ದೇವನ ಮಗ ಅನಂತಂಣ್ಣಾ ಎಂದು ಗೋತ್ತಾಗುತ್ತದೆ. ಈ ಶಾಸನವು ಕುಕ್ಕಲನಾಡಿನ ಮಹಾಸಮಂತಾಧಿಪತಿ ಮಯಿಲೆಯ ನಾಯಕ ಮತ್ತು ಆತನ ಸಹೋದರರು ರಾಮಸಮುದ್ರವೆಂಬ ಕೆರೆಯನ್ನು ೩೦೦೦(ಮೂರು ಸಾವಿರ) ಹೊನ್ನನಿಕ್ಕ ಕಟ್ಟಿಸಿದ ಬಗ್ಗೆ ವಿವರಿಸುತ್ತದೆ.

ಶಾಸನ ಲಿಪಿಕಾರರು

ಕವಿ ರಚಿಸಿದ ಅಥವಾ ಬರೆದ ಶಾಸನವನ್ನು ಕಂಡರಣೆ ಮಾಡುವವರೆ ಶಾಸನ ಲಿಪಿಕಾರರು ಅಥವಾ ಶಾಸನ ಕಂಡರಣೆಕಾರರು. ಕುಕ್ಕಲನಾಡಿನ ಶಾಸನಗಳಲ್ಲಿ ಕಂಡುಬರುವ ಶಾಸನ ಲಿಪಿಕಾರರೆಂದರೆ

ವಾಮಚಾರಿ(ವಮ್ಮ ಚರಿ)

ಕ್ರಿ.ಶ.೧೧೦೦ರ ಮಾಗಡಿ ತಾಲ್ಲೂಕಿನ ತಾವರೆಕೆರೆಯ ಒಂದು ವೀರಗಲ್ಲಿನಲ್ಲಿರುವ ಶಾಸನದ ಕೊನೆಯಲ್ಲಿ ವಾಮಚಾರಿ ಎಂಬುವವನ ಹೆಸರಿದೆ. ಇವನೇ ಈ ಶಾಸನವನ್ನು ಮತ್ತು ಶಿಲ್ಪವನ್ನು ಕೆತ್ತಿದ್ದಾನೆ ಎಂದು ಊಹಿಸಬಹುದು.

....
ಶ್ರೀ ಆ...
ವಮ್ಮ ಚ
ರಿಯ...
ಸಂ.ಯು
ಕಲು[೬೦]

ಚಿನೋಜ

ಕ್ರಿ.ಶ.೧೩೭೯ರ ನೆಲಮಂಗಲ ತಾಲ್ಲೂಕಿನ ಬೈಲಕೋನೇನಹಳ್ಳಿಯ ಶಾಸನವು "ಆಚಾರಿ ಚಿನೋಜ" ಎಂದು ಉಲ್ಲೇಖಿಸುತ್ತದೆ.[೬೧] ಇದರಿಂದ ೨೦ ಸಾಲುಗಳುಳ್ಳ ಈ ಶಾಸನದ ಕಂಡರಣೆಕಾರ 'ಚಿನೋಜ' ಎಂದು ತಿಳಿದುಬರುತ್ತದೆ.

ಮಾರೋಜ

"...ಶ್ರೀ ಶ್ರೀ ಸೇನಬೋವ ಲಿಂಗಣ್ಣ ಮಾರೋಜನ ಬರಹ'' ಎಂಬ ಉಲ್ಲೇಖವು ನೆಲಮಂಗಲ ತಾಲ್ಲೂಕಿನ ಕಿತ್ತನಲ್ಲಿ ಗ್ರಾಮದ ಕ್ರಿ.ಶ.೧೩೩೦ರ ಶಾಸನದಲ್ಲಿ ಕಂಡುಬರುತ್ತದೆ.[೬೨] ಇದರಿಂದ ಈ ಶಾಸನ ರಚನೆಕಾರ ಲಿಂಗಣ್ಣ, ಕಂಡರಣೆಕಾರ ಮಾರೋಜ ಎಂದು ಅರ್ಥೈಸಬಹುದು. ಗದ್ಯಶೈಲಿಯಲ್ಲಿರುವ ಈ

ಶಾಸನವು ೪೦ ಚರಣಗಳಿಂದ ಕೂಡಿದೆ. ಇದು 'ಹಲರು' ಗುಂಪಿಗೆ ಸೇರಿದ ವರ್ತಕರ ಬಗ್ಗೆ ತಿಳಿಸುತ್ತದೆ. ಹಾಗೂ ಅವರ ಆಸ್ತಿಯ ಒಡೆತನದ ಬಗ್ಗೆ ವಿವರಿಸುತ್ತದೆ.

ಅಮ್ಬಿ ಆಚಾರಿ ಮಗನ್ನಾಗನ್

ಕ್ರಿ.ಶ.೭೫೦ರ ಬೆಂಗಳೂರಿನ ದಾಸರಹಳ್ಳಿ ಗ್ರಾಮದ ಶಾಸನವು "ಶ್ರೀ ಅಮ್ಬಿ ಆಚಾರಿಯರ ಮಗನ್ನಾಗನ್ ಮಡಿದ(ಮಾಡಿದ)" ಎಂದು ತಿಳಿಸುತ್ತದೆ.[೬೩] ಇದರಿಂದ ಅಮ್ಬಿ ಆಚಾರಿಯ ಮಗ ನಾಗ ಎನ್ನುವವನು ಈ ಶಾಸನವನ್ನು ಮಾಡಿದ್ದಾನೆ(ಕಂಡರಿಸಿದ್ದಾನೆ) ಎಂದು ಹೇಳಬಹುದು. ಇವರಲ್ಲದೆ 'ಸಿದ್ದೇಶ್ವರಾಚಾರಿ' ಎನ್ನುವ ಶಾಸನ ಕಂಡರಣೆಕಾರ ಇದ್ದನೆಂಬ ದಾಖಲೆ ಕ್ರಿ.ಶ.೧೦೭೫ರ ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಗ್ರಾಮದ ಶಾಸನದಿಂದ ತಿಳಿದುಬರುತ್ತದೆ.

೪.೫. ಶಾಪಾಶಯಗಳು

ಈ ಪ್ರದೇಶದಲ್ಲಿನ ಜನರಿಗೆ ದೇವರ ಬಗ್ಗೆ ಇದ್ದ ಭಯ, ಭಕ್ತಿ, ತಂದೆ-ತಾಯಿ, ಗುರು-ಹಿರಿಯರಲ್ಲಿನ ಗೌರವಾಧಾರಗಳು ಇಲ್ಲಿನ ಶಾಸನಗಳಲ್ಲಿನ ಶಾಪಾಶಯಗಳ ಮೂಲಕ ತಿಳಿಯಬಹುದಾಗಿದೆ. ನೆಲಮಂಗಲದ ತೋಟಗೆರೆ ಗ್ರಾಮದ ಕ್ರಿ.ಶ.೭೫೦ರ ಶಾಸನದಲ್ಲಿ ಜತ್ತ ಎಂಬ ತಳವಾರನು ಯುದ್ಧದಲ್ಲಿ ಸತ್ತ ಪ್ರಯುಕ್ತ ಅವನಿಗೆ ನೀಡಿದ ದಾನವನ್ನು ಯಾರಾದರು ಅಪಹರಿಸಿದರೆ ಅವರು ಪಂಚ ಮಹಾಪಾತಕಗಳಿಗೆ ಗುರಿಯಾಗುವರು ಎಂದಿದೆ.[೬೪]

ನೆಲಮಂಗಲದ ಸೋಲದೇವನ ಹಳ್ಳಿಯ ಕ್ರಿ.ಶ.೧೦೭೫ರ ಶಾಸನದಲ್ಲಿ "ಈಧರ್ಮ್ಮಮನಳಿದಂ ಕವಿಲೆಯುಂ ವಾರಣಾಸಿಯು ಮನಟುದ ಮಹಾಪಾತಕಂ" ಎಂಬ ಶಾಪಾಶಯವಿದೆ.[೬೫] ಮಾಗಡಿ ತಾಲೂಕಿನ ಕಲ್ಲೂರು ಗ್ರಾಮದ ಕ್ರಿ.ಶ.೧೩೧೫ರ ಶಾಸನದಲ್ಲಿನ ಶಾಪಾಶಯ ಹೀಗಿದೆ.

......ಅದ್ರುಷ್ಟದಲಿ ಗಂಗೆತಡಿ
ಯಲಿ ಕವಿಲೆಯನು ಬ್ರಾಹ್ಮರನುತಂಮತ
..............ವಧಿಸಿದಪಾಪದಲಿಹೋಹರು.

ಕ್ರಿ.ಶ.೧೩೭೫ರ ನೆಲಮಂಗಲ ತಾಲ್ಲೂಕಿನ, ಬೈಲಕೋನೇನಹಳ್ಳಿಯ ಶಾಸನದಲ್ಲಿ,

"ಆ ಊರಿಂಗೆ ತಪ್ಪಿನಡೆದವರು ಯಿ
ಪ್ಪತೊಂದು ಪಿತುಗಳ ನರಕಕ್ಕೆ ಯಿರೆ ದೇವರು ತಾಯಿಗೆ ಒಡವು (ಜ) ದೇವರಿಗೆ
ಸತ್ರಾ ಅಳಿದವರು ಗಂಗೆ ತಡಿಯ ಕವಿಲೆಯ ಕೊಂದ ಮೋಸದಲು ಹೋಹರು
ಯಿ ಮರಿಯಾದೆಗೆ ಭೂಮಿಉ ಚಂದ್ರನುಳುಂನವರ ಸಲುಉದು ಮಂ
ಗಳ ಮಹಾ ಶ್ರೀ ಶ್ರೀ ನಾಯಕರ ಒಪ್ಪ (ಚ್ರ೦) ನಡೆಸುವ ನಾಡ ಒಪ್ಪ ಶ್ರೀ ಮುಕ್ಸನಾತ

ಅಂದರೆ ಈ ಊರಿಗೆ ತಪ್ಪಿ ನಡೆದವರು ಇಪ್ಪತ್ತೊಂದು ಪಿತೃಗಳ ನರಕಕ್ಕೆ ಹೋಗುವರು. ನಾಶಮಾಡಿದವರು ಗಂಗೆ ತಡಿಯ ಕವಿಲೆಯ ಕೊಂದ ದೋಷದಲ್ಲಿ ಹೋಗುವರು.[೬೬] ಮರ್ಯ್ಯಾದೆಯು ಭೂಮಿ ಮತ್ತು ಚಂದ್ರನಿರುವವರೆಗೆ ಸಲುವುದು. ಇದಕ್ಕೆ ನಾಯಕರ ಒಪ್ಪ ಮತ್ತು ನಡೆಸುವ ನಾಡ ಒಪ್ಪ ಶ್ರೀ ಮುಕ್ತನಾಥನದು ಎಂದು ಶಾಪಾಶಯವಿದೆ.[೬೭]

ನೆಲಮಂಗಲದ ಮಂತಾಳು ಗ್ರಾಮದ ಕ್ರಿ.ಶ.೧೩೩೩ರ ಶಾಸನವು ಹೊಲಗಳನ್ನು ದಾನ ನೀಡಿದ ಬಗ್ಗೆ ತಿಳಿಸುತ್ತಾ, ಈ ಕೊಡುಗೆಯೂ ಚಂದ್ರ-ಸೂರ್ಯರಿರುವವರೆಗೆ ಶಾಶ್ವತ ಎಂದು ಉಲ್ಲೇಖಿಸುತ್ತದೆ.[೬೮] ಬೆಂಗಳೂರಿನ ದೊಡ್ಡ ಬೊಮ್ಮಸಂದ್ರದ ಕ್ರಿ.ಶ.೧೪೩೦ರ ಶಾಸನದಲ್ಲಿ ಈ ಧರ್ಮಕ್ಕೆ ತಪ್ಪಿದವರು ವಾರಣಾಸಿಯಲಿ ತಂದೆ-ತಾಯಿಯನ್ನು ಕೊಂದ ಪಾಪಕ್ಕೆ ಹೋಗುವವರು ಎಂದಿದೆ.[೬೯]

ಹೀಗೆ ಈ ಪ್ರದೇಶದಲ್ಲಿ ಕಂಡುಬಂದಿರುವ ಶಾಪಾಶಯಗಳಿಂದ, ಇಲ್ಲಿನ ಜನರಿಗೆ ತಂದೆ-ತಾಯಿಗಳ ಬಗ್ಗೆ, ದೇವತೆಗಳ ಬಗ್ಗೆ, ಪ್ರಾಣಿ-ಪಕ್ಷಿಗಳ ಬಗ್ಗೆ, ಗಂಗಾನದಿ, ವಾರಣಾಸಿ, ಕವಿಲೆಯ ಬಗ್ಗೆ ಮತ್ತು ಸೂರ್ಯ, ಚಂದ್ರರ ಬಗ್ಗೆ ಇದ್ದಂತಹ ಭಯ, ಭಕ್ತಿ, ಗೌರವ, ಪ್ರೀತಿ, ವಾತ್ಸಲ್ಯ ನಂಬಿಕೆಯ ಮತ್ತು ಪಾವಿತ್ರತೆಯ ಬಗ್ಗೆ ತಿಳಿದುಬರುತ್ತದೆ.

೪.೬. ಆಹಾರ ಮತ್ತು ಉಡುಗೆ ತೊಡುಗೆಗಳು

ಸಾಮಾಜಿಕ ರಂಗದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ನೈಸರ್ಗಿಕವಾದ ಗಾಳಿ, ಮಳೆ, ಆಹಾರ, ನೀರು, ಅವಶ್ಯಕವಾಗಿ ಬೇಕೇ ಬೇಕು. ಪ್ರಾಚೀನ ಕಾಲದಿಂದ ಇಂದಿನ ಕಾಲದವರೆಗೂ ವ್ಯಕ್ತಿಗೆ ಇವು ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿವೆ. ಕುಕ್ಕಲನಾಡಿನ ಶಾಸನಗಳಲ್ಲಿ ಇವುಗಳ ಬಗ್ಗೆ ಕುರುಹುಗಳನ್ನು ಕಾಣಬಹುದಾಗಿದೆ.

ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲ ಗ್ರಾಮದ ಕ್ರಿ.ಶ.೧೧೧೦ರ ತಮಿಳು ಶಾಸನದಲ್ಲಿ ಈ ಪ್ರದೇಶದ ಜನರಿಗೆ ನೀರಾವರಿ ಮತ್ತು ಒಣ ಭೂಮಿಯ ಬೆಳೆಗಳಿಗೆ ತೆರಿಗೆಗಳನ್ನು ವಿಧಿಸುತ್ತಿದ್ದರು ಎಂಬ ಉಲ್ಲೇಖವಿದೆ. ಅಂದರೆ ಈ ಪ್ರದೇಶದಲ್ಲಿ ಎರಡು ರೀತಿಯ ಬೆಳೆಗಳನ್ನು ಬೆಳೆಯುತ್ತಿದ್ದರು ಎಂದು ತಿಳಿಯುತ್ತದೆ.[೭೦] ಕ್ರಿ.ಶ.೧೩೧೫ರ ಮಾಗಡಿಯ ಕಲ್ಲೂರು ಗ್ರಾಮದ ಶಾಸನದಲ್ಲಿ ಅಲ್ಲಾಳನಾಥ ದೇವರಿಗೆ ಗದ್ದೆಯನ್ನು ದಾನ ನೀಡುವ ಉಲ್ಲೇಖವಿದೆ.[೭೧] ಕ್ರಿ.ಶ.೧೫೩೩ರ ಹೆಸರುಘಟ್ಟದ ಶಾಸನದಲ್ಲಿ ಚಂದ್ರಮೌಳೇಶ್ವರ ದೇವಾಲಯಕ್ಕೆ ಜನರು ಹೊಲಗದ್ದೆ, ತೋಟಗಳನ್ನು, ದಾನ ಮಾಡಿದ ಉಲ್ಲೇಖ ಕಂಡುಬಂದಿದೆ.[೭೨]

ಇವುಗಳಿಂದ ನಮಗೆ ಕುಕ್ಕಲನಾಡಿನ ಪ್ರದೇಶದ ಜನರು ಭತ್ತ, ಕಬ್ಬು, ಬಾಳೆ, ರಾಗಿ, ಕಾಳುಗಳನ್ನು ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆದು ಉಪಯೋಗಿಸುತ್ತಿದ್ದರು ಎಂದು ಖಚಿತವಾಗಿ ತಿಳಿದುಬರುತ್ತದೆ.

ಉಡುಗೆ ತೊಡುಗೆಗಳು

ಈ ಪ್ರದೇಶದ ಜನರು ಯಾವ ಬಗೆಯ ಉಡುಗೆ ತೊಡುಗೆಗಳನ್ನು ಬಳಸುತ್ತಿದ್ದರು ಎಂದು ಶಾಸನಗಳಲ್ಲಿ ವಿವರವಾದ ಉಲ್ಲೇಖಗಳು ದೊರೆಯುವುದಿಲ್ಲ. ಆದರೆ ಕ್ರಿ.ಶ.೧೧೧೦ರ ಬಿನ್ನಮಂಗಲದ ಶಾಸನದಲ್ಲಿ ಹತ್ತಿಬಟ್ಟೆ, ನೇಯ್ಗೆಯ ಬಗ್ಗೆ[೭೩] ಕ್ರಿ.ಶ.೧೩೦೧ರ ಐಗಂಡಪುರದ ಶಾಸನದಲ್ಲಿ ನೇಯ್ಗೆ ಮಗ್ಗಗಳ ಬಗ್ಗೆ[೭೪] ಹಾಗೂ ಕ್ರಿ.ಶ.೧೪೦೮ರ ಕನ್ನೆಲ್ಲಿ ಗ್ರಾಮದ ಶಾಸನದಲ್ಲಿ ಮಗ್ಗಗಳ ಬಗ್ಗೆ ಉಲ್ಲೇಖವಿದೆ. ಇದರಿಂದ ಈ ಪ್ರದೇಶದಲ್ಲಿ ಹತ್ತಿಬಟ್ಟೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರು ಎಂದು ತಿಳಿದುಬರುತ್ತದೆ. ಹಾಗೆಯೇ ಐಗಂಡಪುರದ ಶಾಸನದಲ್ಲಿ ಹತ್ತಿಬಟ್ಟೆಯ ಉಡುಗೊರೆಗಳ ಬಗ್ಗೆಯು ಉಲ್ಲೇಖ ಬರುತ್ತದೆ.[೭೫]

ಪ್ರಾಣಿಗಳು

ಪ್ರಾಣಿಗಳು ಸಾಮಾಜಿಕ ವ್ಯವಸ್ಥೆಯ ಒಂದು ಭಾಗ ಅಥವಾ ಒಂದು ಅಂಶ ಎಂದರೆ ತಪ್ಪು ಆಗಲಿಕ್ಕಿಲ್ಲ. ಏಕೆಂದರೆ, ಪ್ರಾಚೀನ ಕಾಲದಿಂದ ನಾವು ನೋಡಿದಾಗ ಪ್ರಾಣಿಗಳ ಪಾತ್ರ ಪ್ರಮುಖವಾಗಿದೆ. ಹಸು, ಎಮ್ಮೆ, ಕುರಿ ಮತ್ತು ಮೇಕೆಗಳು ಹೈನುಗಾರಿಕೆಯಲ್ಲಿ ಪ್ರಮುಖ ಪಾತ್ರವಹಿಸಿದರೆ, ಕೃಷಿ ರಂಗಕ್ಕೆ ಎತ್ತು, ಕೋಣ ಮತ್ತು ಕತ್ತೆ ಮುಂತಾದವುಗಳು ಪ್ರಮುಖ ಪಾತ್ರವಹಿಸುತ್ತವೆ. ಇನ್ನು ಸಾಕು ಪ್ರಾಣಿಗಳಾಗಿ ಕೋಳಿ, ಪಾರಿವಾಳ ಮತ್ತು ಕುರಿಗಳು ಮುಂತಾದವುಗಳು ವ್ಯಾಪಾರಕ್ಕೆ ಸರಿಸಾಟಿಯಾಗಿವೆ. ಕುಕ್ಕಲನಾಡಿನ ಪ್ರದೇಶದ ಶಾಸನಗಳಲ್ಲಿ ಸಹ ಕೆಲವು ಪ್ರಾಣಿಗಳ ಉಲ್ಲೇಖ ಕಂಡುಬಂದಿದೆ.

ನೆಲಮಂಗಲ ತಾಲ್ಲೂಕಿನ, ಬಿನ್ನಮಂಗಲದ ಕ್ರಿ.ಶ.೧೧೧೦ರ ಶಾಸನದಲ್ಲಿ ಹಸುಗಳ ಮೇಲೆ[೭೬] ಕ್ರಿ.ಶ.೧೩೧೦ರ ಐಗಂಡಪುರದ ಶಾಸನದಲ್ಲಿ ಹಸು, ಎತ್ತುಗಳ ಮೇಲೆ[೭೭] ತೆರಿಗೆಗಳನ್ನು ವಿಧಿಸುತ್ತಿದ್ದ ಉಲ್ಲೇಖ ಕಂಡುಬಂದಿದೆ.

೪.೭. ವ್ಯಕ್ತಿನಾಮಗಳು

ಪ್ರಾಚೀನ ಇತಿಹಾಸವನ್ನು ಅರಿಯಲು ಸ್ಥಳನಾಮಗಳಂತೆ ವ್ಯಕ್ತಿನಾಮಗಳು ಸಹ ಬಹುಮುಖ್ಯ ಆಧಾರಗಳಾಗಿವೆ. ಯಾವುದೇ ಪ್ರಾಂತ್ಯದ ಮೇಲೆ ಅರಸರ ಪ್ರಭುತ್ವ ಬದಲಾಗಬಹುದು. ಆದರೆ ಸ್ಥಳೀಯರ ಭಾಷೆಯ ಭಾಗವಾಗಿರುವ ವ್ಯಕ್ತಿ, ಗ್ರಾಮಗಳಿಗೆ ಹೆಸರನ್ನಿಡುವ ಪದ್ಧತಿ ತೀವ್ರ ಬದಲಾಗದು.

ಜನತೆಯ ಸಂಸ್ಕೃತಿಯ ಘಟಕವಾಗಿರುವ ಈ ಪದ್ಧತಿ ಬಹುಕಾಲ ಇರುತ್ತದೆ. ಅಂತೆಯೇ ಕುಕ್ಕಲನಾಡಿನ ಶಾಸನಗಳಲ್ಲಿ ಉಲ್ಲೇಖಿಗೊಂಡಿರುವ ವ್ಯಕ್ತಿನಾಮಗಳ ಒಂದು ಅವಲೋಕನವನ್ನು ಇಲ್ಲಿ ಮಾಡಲಾಗಿದೆ.

ವ್ಯಕ್ತಿಯನ್ನು ಸಮೂಹದಿಂದ ಗುರುತಿಸಿಕೊಡುವ ಸಾಧನಗಳಲ್ಲಿ ಹೆಸರು ಪ್ರಾಚೀನವಾದುದು. ವ್ಯಕ್ತಿ ನಾಮಗಳೆಲ್ಲ ಅಂಕಿತ ನಾಮಗಳೇ ಆಗಿರುವುದರಿಂದ, ಅವುಗಳನ್ನು ಅಂಕಿತಗೊಳಿಸಿದವರ ವೈಯಕ್ತಿಕ ಬಯಕೆ, ಹಾರೈಕೆಗಳೂ ಅವರ ಕೌಟುಂಬಿಕ ಪರಂಪರೆಗಳೂ ಅವುಗಳ ಒಡಲಲ್ಲಿ ಅಡಗಿರುತ್ತವೆ. ವ್ಯಕ್ತಿನಾಮ ಸಾಮಾನ್ಯವಾಗಿ ಎರಡು ಘಟಕಗಳನ್ನೊಳಗೊಂಡಿರುತ್ತದೆ. ಅವುಗಳನ್ನು ನಿರ್ದಿಷ್ಟ ಮತ್ತು ವಾರ್ಗಿಕ ಘಟಕಗಳೆಂದು ಕರೆಯಬಹುದು. ನಿರ್ದಿಷ್ಟ ಘಟಕಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿಯ ಸಾಂಸ್ಕೃತಿಕ ಹಿನ್ನೆಲೆ ಚೆನ್ನಾಗಿ ಬಿಂಬಿತವಾಗಿರುತ್ತದೆ. ವ್ಯಕ್ತಿಯ ನಂಬಿಕೆ, ಆಶಯ, ಆದರ್ಶ ಹಾಗೂ ಪರಂಪರೆಯ ಕುರುಹುಗಳು ಅಲ್ಲಿ ಒಳಗೊಂಡಿರುತ್ತವೆ ಎನ್ನಬಹುದು. ಹೀಗಾಗಿ ಎಲ್ಲಾ ಕಾಲಕ್ಕೂ ವ್ಯಕ್ತಿನಾಮಗಳಲ್ಲಿನ ನಿರ್ದಿಷ್ಟ ಘಟಕ ವೈವಿಧ್ಯಮಯವಾಗಿರುತ್ತದೆಯಲ್ಲದೆ, ಕಾಲದಿಂದ ಕಾಲಕ್ಕೆ ತಮ್ಮ ಮೇಲೆ ಉಂಟಾದ ಸಂಸ್ಕೃತಿಯ ಪ್ರಭಾವಗಳ ಸೂಚಕಗಳು ಆಗಿರುತ್ತವೆ.

ಕುಕ್ಕಲನಾಡಿನ ಪ್ರದೇಶದಲ್ಲಿದ್ದ ವ್ಯಕ್ತಿನಾಮಗಳನ್ನು ಸಾಮಾಜಿಕವಾಗಿ ಪರಿಶೀಲಿಸಿದರೆ ಕೆಲವಾರು ಸಾಮಾನ್ಯ ವಿಚಾರಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ ಆ ಕಾಲದಲ್ಲಿ ಅಧಿಕಾರ ವರ್ಗ ಸೂಚಕವಾದ ವ್ಯಕ್ತಿನಾಮಗಳು ಇದ್ದವು. ಇವುಗಳಲ್ಲೂ ಉನ್ನತ, ಮಧ್ಯಮ ಮತ್ತು ಕೆಳವರ್ಗದ ಅಧಿಕಾರ ವರ್ಗ ಸೂಚಕ ವ್ಯಕ್ತಿನಾಮಗಳೆಂದು ಗುರ್ತಿಸಬಹುದು. ಉದಾಹರಣೆಗೆ ಹೆಸರಿನ ಜೊತೆಗೆ ನಾಯಕ, ಗೌಡ ಮತ್ತು ತಳವಾರ. ಎರಡನೆಯದಾಗಿ ಸಾಮಾನ್ಯವಾಗಿ ಕೆಳವರ್ಗದ ಅಥವಾ ದಲಿತವರ್ಗದ ವ್ಯಕ್ತಿಗಳು ತಮ್ಮ ಹೆಸರಿನ ಹಿಂದೆ ಅಥವಾ ಮುಂದೆ ತಮ್ಮ ಕಸುಬಿನ ಹೆಸರನ್ನು ಸೇರಿಸಿಕೊಳ್ಳುತ್ತಿದ್ದುದ್ದನ್ನು ಕುಕ್ಕಲನಾಡಿನ ಅಂದಿನ ಸಮಾಜದಲ್ಲಿ ನಾವು ಕಾಣಬಹುದು. ಮೂರನೆಯದಾಗಿ ವ್ಯಾಪಾರ ವರ್ಗಗಳ ಜೊತೆಗೆ ಸೆಟ್ಟಿ ಎಂಬುದು ಸರ್ವೇಸಾಮಾನ್ಯವಾಗಿತ್ತು. ನಾಲ್ಕನೆಯದಾಗಿ ವ್ಯಕ್ತಿನಾಮಗಳು ಸಮಾಜದಲ್ಲಿದ್ದ ಶಿಷ್ಟವರ್ಗ ಮತ್ತು ಕೆಳವರ್ಗದವರನ್ನು ಗುರ್ತಿಸಲು ಸಹಾಯಕವಾಗುತ್ತಿವೆ. ಕೊನೆಯದಾಗಿ ಜಾತಿ ಸೂಚಕ ವ್ಯಕ್ತಿನಾಮಗಳೂ ಕೂಡ ಬಳಕೆಯಲ್ಲಿದ್ದವು. ವ್ಯಕ್ತಿನಾಮಗಳಿಂದ ವ್ಯಕ್ತಿಗಳ ಧಾರ್ಮಿಕ ಒಲವುಗಳನ್ನು ತಿಳಿದುಕೊಳ್ಳಬಹುದಿತ್ತು. ಹೀಗೆ ವ್ಯಕ್ತಿನಾಮಗಳನ್ನು ಅಧ್ಯಯನ ಮಾಡಿ ವಿಂಗಡಿಸಿ ತಯಾರಿಸಿದ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

೧. ಅಧಿಕಾರಿವರ್ಗ ಸೂಚಕ ವ್ಯಕ್ತಿನಾಮಗಳು

ಅ. ಉನ್ನತ ಅಧಿಕಾರಿ ವರ್ಗ[೭೮]

೧. ಅಹವಮಲ್ಲ

೨. ನಗರ

೩. ಹರಿಯಪ್ಪ ವೊಡೆಯರ್

೪. ಬುಕ್ಕಂಣ ವೊಡೆಯರ್

೫. ಎತ್ತೋಳ್ದರ

೬. ವಾಮನಯ್ಯ ಅಧಿಕಾರಿ

೭. ಅಚಲಯ್ಯ ಅಧಿಕಾರಿ

೮. ಹಯಕಸ ಅಧಿಕಾರಿ

ಆ. ಮಧ್ಯಮ ಅಧಿಕಾರಿ ವರ್ಗ[೭೯]

೧. ಮಲ್ಲಣ್ಣ ದಣ್ಣನಾಯಕ

೨. ಉಪ್ಪುರ ಬಂಮೆಯನಾಯಕ

೩. ಮಾಚಿಯನಾಯಕ

೪. ಮಯಿಲೆಯ ನಾಯಕ

೫. ಜಂನೆಯ ನಾಯಕ

೬. ಚಂನೆಯ ನಾಯಕ

೭. ಕೋಟ್ಟೆಯ ನಾಯಕ

೮. ಕಾಟ ನಾಯಕ

೯. ಯೊಜಯ ನಾಯಕ

೧೦. ಸಂತೆಯ ನಾಯಕ

೧೧. ಬುಕ್ಕನಾಯಕ

ಇ. ಕೆಳ ಅಧಿಕಾರಿವರ್ಗ[೮೦]

೧. ಹನಗೂರ ಮಲೆಯಪ

೨. ಗೋಪಗವಿಡ (ಗೌಡ)

೩. ಬಂಮಪ

೪. ದೊಡನ ಗಉಡ

೫. ಗಉಡಪ್ಪ

೬. ಮಾರಪಗವುಡ

೭. ಸೇನಬೋವ ಕೇಶವದೇವ

೮. ಕಂಚಿಗೌಡ

೯. ಸೇನಬೋವ ಲಿಂಗಣ ಮಾರೋಜ

೧೦. ಸೋಮಗೌಡ

೧೧. ನಾಗಗವುಡ

೧೨. ಗವುಡಪ ಚಿಕ್ಕಣ

೧೩. ಗೌಡಲೊಕ್ಕಣ

೧೪. ಮಂಚಪ ಗವುಡ

೧೫. ಹೊಂನಪ್ಪ

೧೬. ಚಿಕ್ಕಮಾಲೆ ಚೂಡಪ

೧೭. ಬಂನಿಕಪ

೧೮. ಹೊನಪ್ಪ

೧೯. ಹಾರಿಯಪ

೨೦. ದೇವಪ

೨. ವೃತಿ ಮತ್ತು ಜಾತಿ ಸೂಚಕ ವ್ಯಕ್ತಿನಾಮಗಳು[೮೧]

೧. ಅಮ್ಬಿ ಆಚಾರಿ

೨. ವಿನೋದ ಮಾಣಿಕ ಸೆಟ್ಟಿ

೩. ರಾಜರಾಜಸೆಟ್ಟಿ

೪. ಪಿಡಾರಿಯ(x) ಸೆಟ್ಟಿ

೫. ಸೊಂಣೆ ಸೆಟಿ

೬. ಜಕಣ ಸೆಟಿ

೭. ಬೊಂಮಿಸೆಟ್ಟಿ

೮. ಡಿಯಾ ಸೆಟ್ಟಿ

೯. ಚಿಕ ಹೊನಪ್ಪ ಸೆಟ್ಟಿ

೧೦. ತಳಾರ ಜತ್ತ

೧೧. ಯಾಡಸೆಟ್ಟಿ

೩. ಬ್ರಾಹ್ಮಣರು ಮತ್ತು ಪುರೋಹಿತ ವರ್ಗ ಸೂಚಕ ವ್ಯಕ್ತಿನಾಮಗಳು[೮೨]

೧. ರುದ್ರಶರ್ಮ

೨. ಸೋಮಯಾಜಿ

೩. ಸಕ್ಕಹರಶರ್ಮ

೪. ನಜವರ್ಮ

೫. ಪುಣ್ಯಸರ್ಮ್ಮ

೬. ಮುದುಗಟ್ಟದ ಪಂಡಿತಯ್ಯ

೭. ಅನಂತಯ್ಯ ದೇವ

೮. ಶ್ರೀರೂಪಶಿವಪಣ್ಡಿತ

೯. ಸಿದ್ದೇಶ್ವರಚಾರಿ

೪. ಶೈವ ಮತ್ತು ವೀರಶೈವ ಸೂಚಿತ ವ್ಯಕ್ತಿನಾಮಗಳು[೮೩]

೧. ಅಪ್ಪಣಯ್ಯ

೨. ವೀರಯ್ಯ

೩. ವಾಮನಯ್ಯ

೪. ಹುಲಿಯ ಶಾಮಯ್ಯ

೫. ತಿಮ್ಮರಸ

೬. ಲಕ್ಕರಸ

೭. ತಿಪ್ಪರಸ

೮. ಅಂಣೇದೇವ

೫. ವೈಷ್ಣವ ಸೂಚಕ ವ್ಯಕ್ತಿನಾಮಗಳು[೮೪]

೧. ಬೋಕಣ

೨. ಗಂಗಣ

೩. ನಾರಿದೇವಂಣ

೪. ಬೀರಂಣ

೫. ಬೆಕಂಣ

೬. ಚೊಕ್ಕಣ

೭. ರಾಮಣ್ಣ

೮. ತಿಂಮಂಣ

೯. ಹರಿಯ ತಿಕ್ಕಂಣ

೧೦. ರೂಪನಾರಾಯಣ

೬. ಸನ್ಯಾಸಿವರ್ಗದ ಸೂಚಕ ವ್ಯಕ್ತಿನಾಮಗಳು[೮೫]

೧. ಮೌನಿ ಭಟ್ಟಾರಕ ಮುನಿ

೨. ಮೌನಿನಾಥ ಮುನಿ

೩. ಕೃತೋಧಿನಾಥ

ಸಾರ್ವಜನಿಕ ಕಾರ್ಯಗಳು

ರಾಜರುಗಳು, ಅವರ ಸಾಮಂತರು ಎಲ್ಲಾ ವ್ಯಕ್ತಿಗಳ ಸಹಕಾರ ಮನೋಭಾವನೆಯಿಂದ ಸಾರ್ವಜನಿಕ ಕಾರ್ಯಗಳಾದ ಕೆರೆ, ಬಾವಿಗಳನ್ನು ಕಟ್ಟಿಸುವುದು, ಊರಿನಲ್ಲಿರುವ ಸಮಸ್ಯೆಗಳನ್ನು ಬಗೆಹರಿಸುವುದು. ಶಿಕ್ಷಣದ ಕಾರ್ಯಗಳ ಧಾರ್ಮಿಕ ಕಾರ್ಯಗಳು ಹೀಗೆ ಅನೇಕ ರೀತಿಯ ಕಾರ್ಯಗಳನ್ನು ಊರಿನ ಎಲ್ಲರು ಸೇರಿ ಮಾಡುವಂತಹ ಕೆಲಸಗಳಾಗಿದ್ದವು. ಇವುಗಳನ್ನು ಯಾರು, ಯಾವ ರೀತಿ ಮಾಡುತ್ತಿದ್ದರು ಎಂಬ ಅಂಶಗಳನ್ನು ಶಾಸನಗಳಲ್ಲಿ ಕಾಣಬಹುದಾಗಿದೆ. ಇದಕ್ಕೆ ಉದಾಹರಣೆಯಾಗಿ ವಿಜಯನಗರದ (ಸಂಗಮ) ಒಂದನೇ ದೇವರಾಜನ ಕಾಲದಲ್ಲಿ ರಚಿತವಾದ (ಕ್ರಿ.ಶ.೧೪೧೦) ಹಂಪಿಯ ಲಕ್ಷ್ಮೀಧರನ ಶಾಸನದಲ್ಲಿ ಬರುವ ಒಂದು ಪದ್ಯ. ಸಾಮಾಜಿಕ ಜೀವನಕ್ಕೆ ಹಿನ್ನೆಲೆಯಾಗಿದೆ. ಇದು ಉದಾತ್ತ ಸಂಸ್ಕೃತಿಯನ್ನು ಅರ್ಥವತ್ತಾಗಿ ಸೂಚಿಸುತ್ತದೆ. ಒಂದನೇ ದೇವರಾಜನ ಮಂತ್ರಿ ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಅವರೊಂದಿಗೆ ಉದಾತ್ತ ವಿಚಾರದ ಸಂಸ್ಕೃತಿಯನ್ನು ರಕ್ತಗತವಾಗುವಂತೆ ಎರೆದಳೆಂಬುದನ್ನು ಶಾಸನ ಕವಿ ಹೀಗೆ ಹೇಳಿದ್ದಾನೆ.

> ಕೆಱೆಯಂ ಕಟ್ಟಿಸು ಭಾವಿಯಂ ಸವಸು ದೇವಾಗಾರಮಂ
> ಮಾಡಿಸಜ್ಜೆಱೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಱಿಬುಕೆಯಿ ನಂಬಿ-
> ದ ರ್ಗ್ಗೆಱೆವೆಟ್ಟಾಗಿರು ಶಿಷ್ಟರಂ ಪೊರಯೆನುತ್ತಿಂತೆಲ್ಲವಂ ಪಿಂದೆ ತಾ
> ಯೆಱೆದದಳ್ಪಾಲೆಱೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ||[೮೬]

ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು. ನಂಬಿದವರಿಗೆ ಆಶ್ರಯದಾತನಾಗು, ಸತ್ಪುರುಷರನ್ನು ರಕ್ಷಿಸು ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಹಾಲನ್ನು ಹಾಕಿದಳಂತೆ ತಾಯಿ. ಇಂತಹ ಅರ್ಥವತ್ತಾದ ಕಲ್ಪನೆ ಕವಿಯದು.

ಸಾಮಾಜಿಕ ಜೀವನದ ನೆಮ್ಮದಿಗೆ ಬೇಕಾದ ಮೂಲಭೂತವಾದ ಅಂಶಗಳನ್ನು ಶಾಸನಗಳಿಂದ ತಿಳಿದುಕೊಳ್ಳಬಹುದಾಗಿದೆ. ಕುಕ್ಕಲನಾಡಿನ ಶಾಸನಗಳಲ್ಲಿಯೂ ಸಾರ್ವಜನಿಕ ಕಾರ್ಯದ ಉಲ್ಲೇಖಗಳನ್ನು ಕಾಣಬಹುದಾಗಿದೆ.

ನೆಲಮಂಗಲ ತಾಲ್ಲೂಕಿನ, ಸೋಲದೇವನಹಳ್ಳಿಯ ಕ್ರಿ.ಶ.೧೦೭೯ರ ಶಾಸನವು

> ಬಾಣಪುರದ ನಿತ್ಯ ವಿನೋದ ಮಾಣಿಕಸೆಟ್ಟಿ
> ಗಂಪೊಂಗೊಟ್ಟಿ ಬಾಣಪುರದ ಕೆಱೆಯಕೆ
> ವಿಗೆಪನ್ನಿರ್ಕ್ಕಣ್ಡುಗ ಗಟ್ಟೆಯಂಕೊಣ್ಡಂರಾಜಾನುಗ್ರಹದಿನ್ದೇ
> ವ ಭೋಗಂಗೊಟ್ಟಂ[೮೭]

ಎಂದು ಬಾಣಪುರದ ಕೆರೆಯನ್ನು ದೇವರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಕ್ರಿ.ಶ.೧೩೪೦ರ ಬೆಂಗಳೂರಿನ ರಾಮಸಂದ್ರ ಗ್ರಾಮದ ಶಾಸನ ಕುಕ್ಕಲನಾಡಿನ ನಾಯಕರು ಎಲ್ಲಾ ಜೀವರಾಶಿಗಳನ್ನು ರಕ್ಷಿಸಲೆಂದು ಶ್ರೀ ಗಂಗಾದೇವಿಯನ್ನು ಪ್ರಾರ್ಥಿಸಿ 'ರಾಮಸಮುದ್ರ'ವೆಂಬ ಕೆರೆಯನ್ನು ೩೦೦೦ ಹೊನ್ನನ್ನಿಕ್ಕಿ ಕಟ್ಟಿಸಿದ ಬಗ್ಗೆ ವಿವರಿಸುತ್ತದೆ. ಕೆರೆ ಎಂಬುದು ದೇವತೆಗಳಿಗೆ, ಮನುಷ್ಯನಿಗೆ, ಪಿತೃಗಳಿಗೆ, ಗಂಧರ್ವರಿಗೆ, ಉರಗಳಿಗೆ, ರಾಕ್ಷಸರಿಗೆ, ಮರಗಳಿಗೆ ಮತ್ತು ಭೂತಗಳಿಗೆ ಆಶ್ರಯವೆಂದೂ ನೀರನ್ನು ಗೋವುಗಳು, ಮೃಗ, ಪಕ್ಷಿ, ಮಾನವರು ಕುಡಿಯಲು ಬಳಸುವುದರಿಂದ ಕಟ್ಟಿಸಿದವರಿಗೆ ಒಳ್ಳೆಯದಾಗುತ್ತದೆ ಎಂದು ವಿವರಿಸಿದೆ.[೮೮]

ಮಾಗಡಿ ತಾಲ್ಲೂಕಿನ ಬೈಚಗುಪ್ಪೆಗ್ರಾಮದ ಕ್ರಿ.ಶ.೧೩೪೦ರ ಶಾಸನವು 'ತಾವರೇಕೆಜೆ'ಯನ್ನು ಉಲ್ಲೇಖಿಸುತ್ತದೆ.[೮೯] ಹಾಗೆಯೇ ಬೆಂಗಳೂರಿನ ಗೊಂಗಡಿಪುರ(ತಿಮ್ಮಣರಾಜಪುರ)ದ ಕ್ರಿ.ಶ.೧೪೯೫ರ ಶಾಸನವು ದಾನದ ಬಗ್ಗೆ ವಿವರಿಸುತ್ತಾ, "ಬಡಗಲು ಕೆಂಪಬಸವಯ್ಯನ ಹಳ್ಳಿಯ ಕೆರೆಯ ಹಿರಿಯದಾರಿ" ಎಂದು ಹೆಸರಿಸುತ್ತದೆ.[೯೦]

ಇವುಗಳಲ್ಲದೆ, ಕುಕ್ಕಲನಾಡಿನ ಪ್ರದೇಶದ ಹಳ್ಳಿಗಳಲ್ಲಿ ಇಂದಿಗೂ ಸಹ ಕೆರೆ, ಬಾವಿಗಳನ್ನು ನೋಡಬಹುದು. ಉದಾ : ಮಧುರೆಕೆರೆ, ಹೆಸರುಘಟ್ಟದಕೆರೆ, ಬಿನ್ನಮಂಗದಕೆರೆ, ಕಿತ್ತನೆಲ್ಲಿಕೆರೆ, ಬೈಲಕೋನೇನಹಳ್ಳಿಕೆರೆ, ಬಾಣವಾಡಿಕೆರೆ, ಬಾವಿಗಳು ಮತ್ತು ಪುಷ್ಕರಣಿಗಳು ಮುಂತಾದವು. ಇವುಗಳನ್ನು ಕಟ್ಟಿಸುವ ಉದ್ದೇಶ ಸಮಾಜದ ಜನತೆಗೆ ಮಾಡುವ ಪರೋಪಕಾರವನ್ನು ತೋರಿಸುತ್ತದೆ.

ಆರ್ಥಿಕ ವ್ಯವಸ್ಥೆ

೪.೯. ಪೀಠಿಕೆ

ಒಂದು ದೇಶದ ಜನರು ಸರಕು-ಸೇವೆಗಳನ್ನು ಹೇಗೆ ಉತ್ಪಾದಿಸುತ್ತಾರೆ ಮತ್ತು ಅವುಗಳನ್ನು ಹೇಗೆ ಉಪಭೋಗಿಸುತ್ತಾರೆ ಎಂಬುದು ಆ ದೇಶದಲ್ಲಿನ ಆರ್ಥಿಕ ವ್ಯವಸ್ಥೆಯನ್ನವಂಬಿಸಿದೆ. ಆರ್ಥಿಕ ವ್ಯವಸ್ಥೆಯು, ಆರ್ಥಿಕ ಸಂಘಟನೆ ಮತ್ತು ಆರ್ಥಿಕ ಸಂಘ-ಸಂಸ್ಥೆಗಳನ್ನೊಳಗೊಂಡಿರುತ್ತದೆ. ಇಂಥ ಆರ್ಥಿಕ ವ್ಯವಸ್ಥೆಯೂ ದೇಶದಿಂದ ದೇಶಕ್ಕೆ ಬದಲಾಗುತ್ತಾ ಹೋಗುತ್ತದೆ. ಆದುದರಿಂದ ಒಂದು ದೇಶದಲ್ಲಿನ ಆರ್ಥಿಕ ಚಟುವಟಿಕೆಗಳು ಆ ದೇಶದಲ್ಲಿ ಆಚರಣೆಯಲ್ಲಿರುವ ಆರ್ಥಿಕ ವ್ಯವಸ್ಥೆಯನ್ನೇ ಅವಲಂಬಿಸಿರುತ್ತವೆ.

ಕುಕ್ಕಲನಾಡಿನ ಶಾಸನಗಳಲ್ಲಿ ಆರ್ಥಿಕ ಅಂಶಗಳು ಕಂಡುಬರುತ್ತವೆ. ಇಲ್ಲಿಯ ವ್ಯಾಪಾರ ಪದ್ಧತಿ, ಸುಂಕದ ಕ್ರಮ, ತೆರಿಗೆ ಪದ್ಧತಿ, ಕಂದಾಯ ಕ್ರಮ, ಕೃಷಿ, ವ್ಯಾಪಾರ, ನೀರಾವರಿ ಹಾಗೂ ರಾಜನು ಕೊಡುತ್ತಿದ್ದ ದಾನ-ದತ್ತಿಗಳು, ಉಂಬಳಿಗಳು, ಶಾಸನಗಳ ಮೂಲಕ ಆರ್ಥಿಕ ವ್ಯವಸ್ಥೆಯ ಅಂಶಗಳನ್ನು ತಿಳಿಸುತ್ತವೆ.

ಕುಕ್ಕಲನಾಡಿನಲ್ಲಿ ಆಡಳಿತ ನಡೆಸಿದ ಗಂಗರು, ಹೊಯ್ಸಳರು, ಚೋಳರು, ವಿಜಯನಗರದ ಅರಸರು ಮತ್ತು ಇವರ ಮಾಂಡಲೀಕರು ನಡೆಸಿಕೊಂಡು ಬಂದ ಆರ್ಥಿಕ ಪದ್ಧತಿಯನ್ನು, ನಂತರ ಬಂದ ಯಲಹಂಕನಾಡ ಪ್ರಭುಗಳು ಮುಂದುವರಿಸಿಕೊಂಡು ಬಂದರು. ನಾವು ಇಲ್ಲಿನ ಆರ್ಥಿಕ ವ್ಯವಸ್ಥೆಯನ್ನು ಅರಿಯಲು, ಇಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನಗಳ ಕಾಲಾವಧಿಯ ಶಾಸನಗಳು ಸೂಕ್ತ ಮಾಹಿತಿ ಕೊಡುತ್ತವೆ.

೪.೧೦. ಭೂ ಸಂಪತ್ತು

ಒಂದು ನಾಡಿನ ಜನತೆ ಮತ್ತು ಜೀವನ ನಿರ್ವಹಣೆ ಮತ್ತು ಆರ್ಥಿಕ ಭದ್ರತೆಗೆ ಅಲ್ಲಿನ ನಿಸರ್ಗ ಸಂಪತ್ತಾದ ಭೂಮಿಯನ್ನಾಶ್ರಯಿಸುವುದು ಕಂಡುಬರುತ್ತದೆ. ಆಧುನಿಕ ಅರ್ಥಶಾಸ್ತ್ರದನ್ವಯ ಪ್ರಕೃತಿದತ್ತವಾದ ಎಲ್ಲ ಕೊಡುಗೆಗಳು ಅಂದರೆ ಮಣ್ಣು, ನೀರು, ಖನಿಜ, ಅರಣ್ಯ ಸಂಪತ್ತುಗಳು ಭೂಮಿಯಲ್ಲಿ ಸಮಾವೇಶವಾಗುತ್ತವೆ. ಹೀಗಾಗಿ ಭೂಮಿ ಅತ್ಯಂತ ಮಹತ್ವದ ನಿಸರ್ಗ ಸಂಪನ್ಮೂಲವೆಂದು ಹೇಳಬಹುದು. ಭೂಮಿಯನ್ನು ಸ್ಥೂಲವಾಗಿ ವ್ಯವಸಾಯ ಯೋಗ್ಯಭೂಮಿ, ಬೀಳುಭೂಮಿ(ವ್ಯವಸಾಯ ಯೋಗ್ಯವಲ್ಲದ್ದು) ಎಂದು ವಿಭಾಗಿಸಬಹುದು. ಹೊಸ ಊರುಗಳ ಸೃಷ್ಟಿಯೊಂದಿಗೆ ಅದರ ಸುತ್ತಮುತ್ತಲೂ ವ್ಯವಸಾಯ ಯೋಗ್ಯ ಭೂಮಿಯ ನಿರ್ಮಾಣವೂ ಆಗುತ್ತಿತ್ತು. ಬೀಳು ಭೂಮಿಯನ್ನು ಸಾಮಾನ್ಯವಾಗಿ ಪಶುಪಾಲನೆ ಹುಲ್ಲುಗಾವಲೆಂದು ಉಪಯೋಗಿಸಲಾಗುತ್ತಿತ್ತು. ವ್ಯವಸಾಯಯೋಗ್ಯ ಭೂಮಿಯನ್ನು ಸಾಮಾನ್ಯವಾಗಿ 'ಕೆಯ್' ಎಂದು ಕರೆಯಲಾಗುತ್ತಿದ್ದರೂ, ಮಳೆಯನ್ನವಲಂಬಿಸಿ ಸಾಗುವಳಿ ಮಾಡುವ ಭೂಮಿಯನ್ನು ದೇವ ಮಾತೃಕವೆಂದೂ, ನದಿ, ಕೆರೆ, ಬಾವಿ ಮುಂತಾದವುಗಳನ್ನು ಅವಲಂಬಿಸಿರುವುದನ್ನು ನದಿ ಮಾತೃಕವೆಂದೂ ವಿಂಗಡಿಸಿ ಕರೆಯಲಾಗುತ್ತಿತ್ತು.[೯೧] ಕುಕ್ಕಲನಾಡಿನ ಶಾಸನಗಳಲ್ಲಿ ಹೊಲ, ಗದ್ದೆ, ತೋಟಗಳನ್ನು ದಾನ ನೀಡಿದ ವಿವರಗಳು ಕಂಡುಬರುತ್ತವೆ.

ಕ್ರಿ.ಶ.೧೩೧೫ರ ಮಾಗಡಿ ತಾಲ್ಲೂಕಿನ ಕಲ್ಲೂರು ಗ್ರಾಮದ ಶಾಸನದಲ್ಲಿ ಅಲ್ಲಾಳನಾಥದೇವರಿಗೆ ಗದ್ದೆಯನ್ನು ದಾನ ನೀಡಿದ ಉಲ್ಲೇಖವಿದೆ.

............ಕ್ರಮಣವಾಗಿ ಕೊ

ಟ್ಟಸಿಲಾಸಾಸನದ ಕ್ರಮವೆಂತೆಂದಡೆ ಆ ಕಲುಹೂರ

ಶ್ರೀ ಅಲ್ಲಾಳನಾಥ ....ಸರ್ವ್ವ......ಗದೆಯುಸಲುವಂತಾ

ಗ.....................

ಹರ...[೯೨]

ನೆಲಮಂಗಲದ ಮಂತಾಳು ಗ್ರಾಮದ ಶಾಸನದಲ್ಲಿ ಕುಕ್ಕಲನಾಡಿನ ಮಹಾಸಾಮಂತಾಧಿಪತಿಗಳಾದ ಮಯಿಲೆಯನಾಯ್ಕ, ಜಂನೆಯ ನಾಯ್ಕರು ಕಂಬಾಡಪ್ರಭು ನಾಗಗೌಡ, ಮಾರಪ್ಪಗೌಡನಿಗೆ ಹೊಲಗಳನ್ನು ಕೊಡುಗೆ ನೀಡಿದ ವಿವರವಿದೆ.

> ....ಶ್ರೀ ಮನು
> ಮಹಾಸಾಮಂತಾಧಿಪತಿನಾರಲೋಕಗಂ
> ಡಮಯಿಲೆಯನಯ್ಕ ಜಂನೆಯನಯ್ಕ
> ರು ಕುಕ್ಕಲನಾಡ ಆಳುವಲ್ಲಿ ಶ್ರೀ ಮನು
> ಮಹಾಕಂಬಾಡ ಪ್ರಭು ಮಂಟಪದ ನಾಗ
> ಗವುಡ...ಮಾರಪ್ಪಗವುಡಂಗೆ ಹೊಸ
> ಕುಂಟೆಯ .....ಯನುಗವುಡಪ ಚಿಕ್ಕಣ
> ಮಲೆಯ .....ಗೆ ಗೌಡಲೊಕ್ಕಣ...
> ಧಿ......ಟೆಕಂಮಂಣ......
> ಯನೊಳಗಾದ ಸಮಸ್ತಪ್ರಜಗವುಡು
> ಗಳು ಮುಂದಿಟುಕೊಟ್ಟಕೊಡುಗೆ...[೯೩]

ನೆಲಮಂಗಲ ತಾಲ್ಲೂಕಿನ ಹೆಸರುಘಟ್ಟದ ಶಾಸನದಲ್ಲಿ ಚಂದ್ರಮೌಳೇಶ್ವರ ದೇವರ ನೈವೇದ್ಯಕ್ಕೆ ಅಲ್ಲಿನ ಮಹಾಜನಗಳು ತಮ್ಮ ಹೊಲ, ಗದ್ದೆ, ತೋಟಗಳನ್ನು ದಾನ ನೀಡಿದ ಉಲ್ಲೇಖ ಕಂಡುಬಂದಿದೆ.

...........ಚಂದ್ರಮೌಳೇಶ್ವರ ಅಮೃತಪಡಿ ನೈವೇದ್ಯ ದೀಪಾರಾಧನೆಗೆ

> ಮೊದಲಾದ ವಂದಾನವಂ ಕೊಟ್ಟು ಸಮರ್ಪಿಸಿದ ಹೊಲಗದ್ದೆ ತೋಟ......ವರಡೊಣೆಕಲ್ಲ ಸ್ಥಳದ ಮೂಡಲುಪ....ಂಬಯನು ಮಾಡಿದ
>
> ಹೊಲಮೇರೆ ತೆಂಕಲು ದನದ ಓಣಿಮೇರೆಪಡುವಲಿಗೆತ್ರಿಶೂಲ ಕಲ್ಲುಮೇರೆ ಬಡಗಲಿಗೆ ದಾಸೇನಹಳ್ಳಿ ಗೌಡಬರಬುಹೊಲ ಮೇರೆತ್ರಿಶೂಲಕ
>
> ಲ್ಲುಗಳ [ಒಳ]ಗಾದ ಚತುಸ್ಸೀಮೆಹೊಲಸ್ಥಲ ...ಸ್ಥಳದಲು. ಮೂಡಲು ಕೆಜೆದಂಡೆಹತ್ತಿರ ಹುಣಸೇಮರದ ಕೆಳಗೆನಟ್ಟ ತ್ರಿಶೂಲ ಕಲ್ಲಮೇಲೆ ತೆಂಕಲಿಗೆ ಪಡುವಂದೊಡ್ಡ ಹುಣಸೇಮರದ ಕೆಳಗೆ ನೆಟ್ಟತ್ರಿ
>
> ಲ್ಲು ಒಳಗಾದ ಚತುಸ್ಸೀಮೆ ಸ್ಥಳ ಒದುವ..ಯರಕುಂಟೆತೆಂಕಣಿ ತೋಟಸ್ಥಳ ಕಲ್ಲು
>
> ಮೂಡಲಿಗೆ ಕಂಭದಮಾನ್ಯದ ಹೊಲಮೇರೆತೆಂಕಲಿಗೆದಶಕ ಸ್ಥಳದ ದೊಡ್ಡ ಬೀರ...ಮೋರೆಪಡು ವಲವೋಣೆಯನ ಕೊಂಡ ಮೇರೆ ಬಡಗಲಿಗೆವೋ
>
> ಣೆಯನ ಕುಂಟೆ ಕೆಳಗಣಗದ್ದೆ ಮೇರೆ ತ್ರಿಶೂಲ ಕಲ್ಲು ಒಳ[ಗ]ಣ ಚತುಸೀಮೇ ಸ್ಥಳದ.. ಅಂತು ಹೊಲದಸ್ಥಳ ಮೇರೆಯಗದ್ದೆಗೆ ತೋಟ

ದೇವರ ಅಣೆಕೆಳಗಣ ಸ್ಥಳದಲು ಮೂಡಲಿಗೆ ತೋಟ ಮೇರೆ ತೆಂಕಲಿಗೆ ಲಕ್ಷ್ಮೀನಾರಸಿಂಹ ನ ಕುಂಟೆ ಕೋಡಿಕಾಲುವೆ ಮೇರೆ ತ್ರಿಶೂಲ ಕಲ್ಲು ಒಳಗಾದ ಚತುಸ್ಸೀಮೆ ತೋಟ ಸ್ಥಳ ವಂದು ಅಂತು ಹೊಲಸ್ಥಳ.... ಸಮರ್ಪ್ಪಿಸ್ಥರ

ದೇವರ ಪ್ರಕಾರ ಸ್ಥಾನಿಕರ ಮನೆಬೀದಿನುಸ್ವಾಮಿಗೆಯಿಂದಕ್ಕೆ ಮುಟ್ಟ ಭೂಮಿಯನು ಮಹಾಜನಂಗಳು ಸಮರ್ಪ್ಪಿಸ್ತರು ಮಹಾಜನಗಳು ಮಂಗಳ ಮಸ್ತುನಮಶಿವಾಯ...... ಧಾರೆನೆರದುಕೊಟ್ಟ ವಿವರ.....[೯೪]

ಇವುಗಳಿಂದ ಈ ಪ್ರದೇಶದಲ್ಲಿ ಎರಡೂ ರೀತಿಯ ಭೂಮಿಯ ಜೊತೆಗೆ ಗೋಮಾಳಗಳು ಇದ್ದವೆಂದು ಊಹಿಸಬಹುದಾಗಿದೆ. ಇಂದಿಗೂ ಸಹ ಕುಕ್ಕಲನಾಡಿನ ಕೆಲ ಊರುಗಳಲ್ಲಿ ಗೋಮಾಳಗಳು ಕಂಡುಬಂದಿವೆ. ಇವು ಹಿಂದಿನ ಕಾಲದಿಂದಲೂ ಇದ್ದಿರಬಹುದಾದರೂ ಇವುಗಳನ್ನು ಉಲ್ಲೇಖಿಸುವ ಶಾಸನಗಳು ನಮಗೆ ದೊರೆಯುವುದಿಲ್ಲ.

೪.೧೧. ವ್ಯವಸಾಯ (ಒಕ್ಕಲುತನ)

ಭಾರತದಲ್ಲಿ ಇತಿಹಾಸಪೂರ್ವ ಕಾಲದಿಂದಲೂ ಅನುಚಾನವಾಗಿ ಬೆಳೆದುಬಂದ ಒಕ್ಕಲುತನವೇ ಕುಕ್ಕಲನಾಡಿನ ಅರ್ಥವ್ಯವಸ್ಥೆಯ ಜೀವನಾಡಿಯಾಗಿತ್ತು. ಬಹುಜನರ ಜೀವನೋಪಾಯದ ಮುಖ್ಯ ಕಸುಬಾದ ಕೃಷಿ, ವ್ಯಾಪಾರ, ಉದ್ಯೋಗ, ಕೈಗಾರಿಕೆಗಳನ್ನೊಳಗೊಂಡು ನಾಡಿನ ಸಮಸ್ತ ಆದಾಯಕ್ಕೆಲ್ಲ ಮೂಲ ಕೇಂದ್ರಬಿಂದುವಾಗಿದ್ದಿತು. ಅದರಿಂದಾಗಿ ಒಕ್ಕಲುತನದ ಅಭಿವೃದ್ಧಿಯೆಂದರೆ ಒಂದು ನಾಡಿನ ಅಭಿವೃದ್ಧಿ ಎಂಬುದನ್ನು ನಮ್ಮ ಪ್ರಾಚೀನರು ಚೆನ್ನಾಗಿ ಮನಗಂಡಿದ್ದರು.

ವ್ಯವಸಾಯ ಕ್ರಮ ಕುರಿತಂತೆ ಈ ನಾಡಿನ ಶಾಸನಗಳು ಸ್ಪಷ್ಟವಾದ ಚಿತ್ರವನ್ನೊದಗಿಸುವುದಿಲ್ಲ. ಕೃಷಿಕರು ಬಡವರಾದರೆ ಅವರಿಗೆ ಕೃಷಿ ಉಪಕರಣ, ಎತ್ತು ಬಿತ್ತು ಬೇಸಾಯದ ಖರ್ಚಿಗೆ ಹಣವನ್ನು ರಾಜನಾದವನು ಕೊಡುವುದರೊಂದಿಗೆ ಒಕ್ಕಲುತನವನ್ನು ದಂಡ, ವಿಷ್ಟಿ, ತೆರಿಗೆಗಳಿಂದ ನಾಶವಾಗದಂತೆ ರಕ್ಷಿಸಬೇಕೆನ್ನುತ್ತಾನೆ ಕೌಟಿಲ್ಯ.[೯೫] ದಾನದ ವಸ್ತುಗಳಲ್ಲಿ ವ್ಯವಸಾಯ ಯೋಗ್ಯ ಭೂಮಿಗೆ ಪ್ರಥಮ ಪ್ರಾಶಸ್ತ್ಯ ಸಂದಿದ್ದು, ಕರ್ನಾಟಕದ ಮುಕ್ಕಾಲುಪಾಲು ಶಾಸನಗಳೂ ಭೂದಾನಕ್ಕೆ ಸಂಬಂಧಿಸಿವೆ. ಯಾಜ್ಞವಲ್ಕ್ಯ ಸ್ಮೃತಿ "ಧಾನ್ಯಾದಿ ಫಳ ಕೊಡುವ ಭೂಮಿಯನ್ನು ದಾನ ಮಾಡುವ ದಾತೃ ಸ್ವರ್ಗಲೋಕದಲ್ಲಿ ಪೂಜ್ಯನಾಗುವನು" ಎಂದಿದೆ. (ಕುಲಕರ್ಣಿ ನಾಗೇಶ ರಂಗೋ(ಅನು), ಯಾಜ್ಞವಲ್ಕ್ಯ ಸ್ಮತಿ, ಪು.೭೪) ದಾನವಾಗಿ ಕೊಟ್ಟ ಭೂಮಿಯನ್ನು ಕಾಪಾಡುವ, ಕೆಡಿಸುವವರಿಗೆ ಶಾಸನ ಫಲಶ್ರುತಿಗಳನ್ನು ಹೇಳುವ ಪುಣ್ಯ-ಪಾಪದಲ್ಲಿ ಒಕ್ಕಲುತನದ ಏಳು-ಬೀಳಿನ ಸೂಚನೆಯೂ ಒಂದಾಗಿದೆ.

ಹೊಲ, ಗದ್ದೆ, ತೋಟಗಳ ಪ್ರಸ್ತಾಪ ಪ್ರಾಸಂಗಿಕವಾಗಿ ಶಾಸನಗಳಲ್ಲಿ ಬಂದಿದೆ. ಮಳೆಯಾಧಾರಿತ ಹೊಲಗಳಲ್ಲಿ ರಾಗಿ, ಜೋಳ ಮತ್ತು ದ್ವಿದಳ ಧಾನ್ಯಗಳನ್ನು, ಕೆರೆ, ಕಟ್ಟೆ, ಬಾವಿ, ನದಿಯ ನೀರನ್ನು

ಆಧರಿಸಿದ ಭೂಮಿಯಲ್ಲಿ(ಗದ್ದೆ ಮತ್ತು ತೋಟಗಳಲ್ಲಿ) ಭತ್ತ, ಕಬ್ಬು, ತೆಂಗು, ಅಡಿಕೆ ಮತ್ತು ವೀಳ್ಯದೆಲೆ, ತರಕಾರಿ ಬೆಳೆಯುತ್ತಿದ್ದರು ಎಂದು ಊಹಿಸಬಹುದು. ಇಂದಿಗೂ ಈ ಪ್ರದೇಶದಲ್ಲಿ ಈ ಎಲ್ಲಾ ಬೆಳೆಗಳನ್ನು ಕಾಣಬಹುದಾಗಿದೆ. ಇವುಗಳ ಜೊತೆಗೆ ಇಲ್ಲಿ ಮಾವು, ಹಲಸು, ನೇರಳೆ ಮತ್ತು ಹುಣಸೆ ಮುಂತಾದ ಮರಗಳು ಕಂಡುಬರುತ್ತವೆ.

೪.೧೨. ಪಶುಸಂಗೋಪನೆ ಮತ್ತು ನೇಕಾರಿಕೆ

ಪಶುಸಂಗೋಪನೆ

ಈ ಪ್ರದೇಶದಲ್ಲಿ ಪ್ರಾಣಿಗಳನ್ನು ಸಾಕುವುದು ಉಪಕಸುಬಾಗಿತ್ತು ಎಂದು ಇಂದಿನ ಪರಿಸ್ಥಿತಿಯನ್ನು ಗಮನಿಸಿ ಹೇಳಬಹುದು. ಕುರಿ, ಕೋಳಿ ಸಾಕಾಣೆ ಹಿಂದಿನಿಂದ ಇದೆ ಎಂದು ಊಹಿಸಬಹುದು. ಕುಕ್ಕಲನಾಡಿನ ಶಾಸನಗಳಲ್ಲಿ ಹಸು, ಎತ್ತುಗಳ ಉಲ್ಲೇಖ ಬರುತ್ತದೆ. ಇವುಗಳು ಒಕ್ಕಲುತನಕ್ಕೆ ಸಹಾಯಕವಾಗುವ ಶ್ರಮಗಳಲ್ಲಿ ,ಮನುಷ್ಯನೊಂದಿಗಿನ ಪಾತ್ರವೂ ಮಹತ್ವವಾದುದು. ಹಾಲು, ತುಪ್ಪ, ಆಹಾರ ಪೂರೈಸುವ ಅವು ಆತನ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗಿದ್ದವು.

ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲ ಗ್ರಾಮದ ತಮಿಳು ಶಾಸನದಲ್ಲಿ ಹಸುಗಳ ಉಲ್ಲೇಖ.[೯೬] ಹಾಗೂ ಐಗಂಡಪುರದ ತಮಿಳು ಶಾಸನದಲ್ಲಿ ಎತ್ತುಗಳ ಉಲ್ಲೇಖ ಕಂಡು ಬರುತ್ತದೆ.[೯೭] (ಇವುಗಳ ಉಲ್ಲೇಖ ಈ ಪ್ರದೇಶದಲ್ಲಿ ತೆರಿಗೆಗಳನ್ನು ವಿಧಿಸುತ್ತಿದ್ದರು ಎಂಬ ಸಂದರ್ಭದಲ್ಲಿ ಬರುತ್ತದೆ.)

ನೇಕಾರಿಕೆ/ಬಟ್ಟೆ ತಯಾರಿಕೆ

ಕುಕ್ಕಲನಾಡಿನ ಪ್ರದೇಶದ ಶಾಸನಗಳಲ್ಲಿ ನೇಯ್ಗೆಯವರು(ನೇಕಾರರು), ಮಗ್ಗಗಳ ಬಗ್ಗೆ ಉಲ್ಲೇಖಗಳು ಸಿಗುತ್ತವೆ. ಇವುಗಳಿಂದ ನಮಗೆ ಈ ಪ್ರದೇಶದಲ್ಲಿ ಬಟ್ಟೆ ಕೈಗಾರಿಕೆ(ಗುಡಿ ಕೈಗಾರಿಕೆ)ಗಳು ಇದ್ದವು ಎಂದು ಊಹಿಸಬಹುದಾಗಿದೆ.

ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲದ ತಮಿಳು ಶಾಸನದಲ್ಲಿ ನೇಯ್ಗೆ, ಹತ್ತಿ ಬಟ್ಟೆಯ ಮೇಲೆ ತೆರಿಗೆಗಳನ್ನುವಿಧಿಸುತ್ತಿದ್ದರು ಎಂಬ ಉಲ್ಲೇಖವಿದೆ.[೯೮] ಐಂಗಡಪುರದ ಮತ್ತೊಂದು ತಮಿಳು ಶಾಸನದಲ್ಲಿ ನೇಯ್ಗೆ ಮಗ್ಗಗಳ ಬಗ್ಗೆ ಉಲ್ಲೇಖವಿದೆ.[೯೯] ಕನ್ನೆಲ್ಲಿ ಗ್ರಾಮದ ಶಾಸನದಲ್ಲಿ

.....ಅಧಿಕಾರಿಹಯಕಸವರು
ಕುಕ್ಕಲನಾಡು ಕಂನ್ನೆಲ್ಲಿಯ ತಿರು
ಮಲೆನಾಥ ದೇವರಿಗೆ ನಂಮ
ದೇವರಿಗೆ ಆ ಕಂನ್ನೆಲ್ಲಿಯಲುಯೆರ

ಡು ಮಗ್ಗವನು ಸುಂಕಮಾಂನ್ಯ
.ವಾಗಿ ಆ ಚಂದ್ರಾರ್ಕ್ಕ ಸ್ಥಾಯಿಯಾ
ಗಿ ಕೊಟ್ಟ ಧರ್ಮ್ಮಸಾಸನ[೧೦೦]

ಎಂಬ ಉಲ್ಲೇಖವಿದೆ. ಹೀಗೆ ಬಟ್ಟೆನೇಯ್ಗೆಯು ಸಹ ಒಂದು ಪ್ರಾಚೀನ ವ್ಯವಸಾಯೇತರ ಕಸುಬಾಗಿತ್ತು.

ವಾಣಿಜ್ಯ ವ್ಯವಹಾರ

ಈ ಪ್ರದೇಶದಲ್ಲಿ ವ್ಯಾಪಾರಸ್ಥರು ತಮ್ಮ ಸಂಘಗಳನ್ನು ರಚಿಸಿಕೊಂಡು, ವ್ಯಾಪಾರ-ವ್ಯವಹಾರಗಳನ್ನು ಮಾಡುತ್ತಿದ್ದರು. ವಸ್ತುಗಳ ವಿನಿಮಯ ಪದ್ಧತಿ ರೂಢಿಯಲ್ಲಿತ್ತು. ಬಂಡಿ, ಎತ್ತು, ಕೋಣ, ಕತ್ತೆ, ಕುದುರೆಗಳ ಮೂಲಕ ವಸ್ತುಗಳನ್ನು ಸಾಗಿಸಲಾಗುತ್ತಿತ್ತು. ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಶೆಟ್ಟಿ(ಸೆಟ್ಟಿ), ಹಲರು ಮೊದಲಾದವರು ವ್ಯಾಪಾರವನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ಕುಕ್ಕಲನಾಡಿನ ಅನೇಕ ಶಾಸನಗಳಲ್ಲಿ ಇವರನ್ನು ಕುರಿತ ಉಲ್ಲೇಖಗಳನ್ನು ಗಮನಿಸಬಹುದಾಗಿದೆ.

೪.೧೨. ಶಾಸನಗಳಲ್ಲಿರುವ ವರ್ತಕರು

ಕುಕ್ಕಲನಾಡಿನ ಪ್ರದೇಶದಲ್ಲಿ ಸೆಟ್ಟಿಗಳ ಉಲ್ಲೇಖವಿರುವ ಹಲವಾರು ಶಾಸನಗಳು ದೊರೆತಿವೆ. ಇದರಿಂದ ಈ ಪ್ರದೇಶದಲ್ಲಿ ವ್ಯಾಪಾರ-ವ್ಯವಹಾರ ಚೆನ್ನಾಗಿ ನಡೆಯುತ್ತಿತ್ತು ಎಂದು ತಿಳಿಯಬಹುದು.

ಅ. ಸೆಟ್ಟಿಗಳು

ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ ಗ್ರಾಮದ ಕ್ರಿ.ಶ.೧೦೭೯ರ ಶಾಸನದಲ್ಲಿ ಸೆಟ್ಟಿಯರಾದ ವಿನೋದಮಾಣಿಕ ಸೆಟ್ಟಿ, ರಾಜರಾಜ ಸೆಟ್ಟಿಯರ ಉಲ್ಲೇಖ ಬರುತ್ತದೆ.[೧೦೧] ಬೈಲಕೊನೇನಹಳ್ಳಿಯ ಶಾಸನ ದಲ್ಲಿ ಸೊಂಣೆಸೆಟಿ, ಜಕಣಸೆಟಿ, ಪಿಡಾರಿಯ ಸೆಟಿ ಎಂಬುವರಿದ್ದರು ಎಂದು ತಿಳಿದುಬರುತ್ತದೆ.[೧೦೨] ಕಿತ್ತನೆಲ್ಲಿ ಗ್ರಾಮದ ಶಾಸನ ಬೊಂಮಿಸೆಟ್ಟಿ, ಡಿಯಾಸೆಟ್ಟಿಯರ ಬಗ್ಗೆ ವಿವರಿಸುತ್ತದೆ.[೧೦೩] ಮಾಗಡಿ ತಾಲ್ಲೂಕಿನ, ಬೈಚಗುಪ್ಪೆ ಗ್ರಾಮದ ಶಾಸನದಲ್ಲಿ ಚಿಕ್ಕಹೊನ್ನಪ್ಪಸೆಟ್ಟಿ, ಯಾಡಸೆಟ್ಟಿ ಎಂಬುವವರು ಇದ್ದರು ಎಂಬುದನ್ನು ತಿಳಿಸುತ್ತದೆ.[೧೦೪] ಈ ಸೆಟ್ಟಿಗಳೆಲ್ಲರು ವ್ಯಾಪಾರದ ಜೊತೆಗೆ ಅನೇಕ ದಾನ-ಧರ್ಮ ಮಾಡಿರುವುದನ್ನು ಈ ಶಾಸನಗಳು ವಿವರಿಸುತ್ತವೆ.

ಆ. ಹಲರು

ಕ್ರಿ.ಶ.೧೩೩೦ರ ಕಿತ್ತನೆಲ್ಲಿ ಗ್ರಾಮದ ಶಾಸನವು 'ಹಲರು' ಗುಂಪಿಗೆ ಸೇರಿದ ವರ್ತಕರನ್ನು ಉಲ್ಲೇಖಿಸುತ್ತದೆ. ವಿದ್ವಾಂಸರು ಇವರನ್ನು 'ವಿನಿಮಯ ವೃತ್ತಿಯ' ವರ್ತಕರೆಂದು ಗುರುತಿಸಿರುತ್ತಾರೆ. ಇವರು ದೇವಾಲಯಗಳ ಮಂಟಪ, ಭೋಗಮಂಟಪ, ಮುಖಶಾಲೆ, ನಿರ್ಮಾಣದಂತ ಬಿಡಿಯಾದ

ಕೆಲಸಗಳನ್ನು ಮಾಡಿಸಿರುತ್ತಾರೆ. ಪ್ರಸ್ತುತ `ಹಲರು` ಗುಂಪಿಗೆ ಸೇರಿದ ವರ್ತಕರು ಮಕ್ಕಳಿಲ್ಲದೆ ಮರಣಹೊಂದಿದಾಗ ಅವರ ಆಸ್ತಿ, ಒಡಹುಟ್ಟಿದ ತಮ್ಮಂದಿರಿಗೆ ಸಲ್ಲಬೇಕೆಂತಲೂ, ಅಣ್ಣ ತಮ್ಮಂದಿರಿಲ್ಲ ದಿದ್ದರೆ ಅಳಿಯ-ಮಗಳಿಗೆ ಸಲ್ಲಬೇಕೆಂತಲೂ ಜಾತಿಯ ಆಚಾರ್ಯ ಪಥಕವನ್ನು ನಿರೂಪಿಸುತ್ತದೆ.

....

ರಾಮನಮಗಣ್ಣವವೊಳಗಾದ ಸಮಸ್ತ...ರದಂಬಾಳದ ಹಲರೊಳ...

ಗೆ ಆರುಸತ್ತಡ ಮ........ಮಕ್ಕಳಿಲ್ಲದಿದ್ದಡೆ ಅಂಣ

ತಂಮಂದಿರಿಗೆ ಸಲುವುದು ತಂಮ ಅಂಣತಂಮಂದಿರು ಇಲ್ಲದಿದ್ದರೆ ಅಳಿಯ ಮಂ

ಮ[ಗ]ಳಿಗೆ ಸಲುವುದು ಇವರಾರೂವಿ....... ಆಹಲರುನಡ......

ಳ್ಳದನು ಆ ಹಲರವಿಚಾರಿಸಿಕೊಂಬರು ಇ ಜಾತಿಯ ಆಚಾರಪಥಕರು...

ನುಹಲರಸಿಕ್ಷಿಸುವರುವೀರಬ...ರೂಕಡಹ ....ದೋರಸಮುದ್ರ...[೧೦೫]

ಹಾಗೆಯೇ ಬೆಂಗಳೂರಿನ ಚಿಕ್ಕಬಾಣವರ ಗ್ರಾಮ ಶಾಸನದಲ್ಲು 'ಹಲರ' ಬಗ್ಗೆ ಉಲ್ಲೇಖವಿದೆ.

....

..ಹೊಯ್ಸಳ ದೇವರ ದಣ್ಣನಾಯಕಮುದೆಯಮಯ್ಯಂಗಳ

ನೆ ಕಡಂಬೂರಲುರೌದಿಹೆಗ್ಗಡೆ ಮಾಚಗೊಂಡನುಂಯಿವರ್ಗ್ಗೆ

ಮಗಂ ಮಾಚಿದೇವನು ಹಲರುಮೆಚ್ಚ.....[೧೦೬]

.... ಎಂಬ ಉಲ್ಲೇಖವಿದೆ.

೪.೧೪. ತೆರಿಗೆ ಪದ್ಧತಿ ಅಥವಾ ಕಂದಾಯ ಪದ್ಧತಿ

ಒಂದು ದೇಶದ ಅಭಿವೃದ್ಧಿ ಮತ್ತು ಸುಭದ್ರತೆಗಳು ಅದರ ಹಣಕಾಸಿನ ವ್ಯವಸ್ಥೆಯನ್ನವಲಂಬಿಸಿರು ತ್ತದೆ. ಹಣಕಾಸು ಅಥವಾ ಕಂದಾಯವು ರಾಜ್ಯದ ಬೊಕ್ಕಸಕ್ಕೆ ಆದಾಯವನ್ನು ತರುವ ಮೂಲಸಾಧನವಾಗಿತ್ತು. ಅಂತೆಯೇ ರಾಜ್ಯದ ಸಪ್ತಾಂಗಗಳಲ್ಲಿ ಕೋಶವೂ ಒಂದಾಗಿತ್ತು. ಭಾರತದ ಪ್ರಾಚೀನ ರಾಜಕೀಯವೇತ್ತರು ಅದಕ್ಕೆ ಬಹಳ ಮನ್ನಣೆ ಕೊಟ್ಟಿದ್ದಾರೆ. ಈ ಕೋಶ ತುಂಬುವ ಹಾದಿಯೇ ತೆರಿಗೆ ಮತ್ತು ಇತರ ರಾಜ್ಯಾದಾಯಗಳಿಗೆ ಮೂಲ ಕಾರಣವೆಂದು ಹೇಳಬಹುದು.

ಕುಕ್ಕಲನಾಡಿನ ಶಾಸನಗಳಲ್ಲಿ ಕಂಡುಬರುವ ವಿವಿಧ ತೆರಿಗೆಗಳು/ಸುಂಕಗಳು ಹೀಗಿವೆ. ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲದ ತಮಿಳು ಶಾಸನದಲ್ಲಿ ಈ ಪ್ರದೇಶದ ಜನರಿಗೆ ಬೇಸಿಗೆ ಮತ್ತು ಚಳಿಗಾಲದ ಬೆಳೆಗಳಿಗೆ ಕುಮ್ಮರಿ ಎಂಬ ತೆರಿಗೆಯನ್ನು ಹಾಕುತ್ತಿದ್ದರು. ಹತ್ತಿಬಟ್ಟೆ, ನೇಯ್ಗೆಯ ಮೇಲೆ, ಹಸುಗಳ ಮಲೆ, ಮನೆಗಳ ಮೇಲೆ ಮತ್ತು ಕುಟುಂಬಗಳ ಮೇಲೆ ತೆರಿಗೆಗಳನ್ನು ಹಾಕುತ್ತಿದ್ದರು ಎಂಬ ಉಲ್ಲೇಖವಿದೆ.[೧೦೭]

ಐಗಂಡಪುರದ ಕ್ರಿ.ಶ.೧೩೦೧ರ ತಮಿಳು ಶಾಸನವು ಕುಕ್ಕಲನಾಡಿನ ಪ್ರದೇಶದಲ್ಲಿ ನೇಯ್ಗೆ-ಮಗ್ಗಗಳ ಮೇಲೆ, ಅಕ್ಕಸಾಲಿಗರ ಮೇಲೆ ಹಸು-ಎತ್ತುಗಳ ಮೇಲೆ ಉಡುಗೊರೆಗಳ ಮೇಲೆ ತೆರಿಗೆ/ಸುಂಕ ವಿಧಿಸುತ್ತಿದ್ದರು ಎಂದು ತಿಳಿಸುತ್ತದೆ.[೧೦೮] ಕನ್ನೆಲ್ಲಿ ಗ್ರಾಮದ ಶಾಸನದಲ್ಲಿ ಮಗ್ಗಗಳ ಮೇಲೆ ತೆರಿಗೆ ವಿಧಿಸುತ್ತಿದ್ದರು ಎಂಬುದು ತಿಳಿಯುತ್ತದೆ.[೧೦೯] ದೊಡ್ಡಬೊಮ್ಮಸಂದ್ರದ ಶಾಸನದಲ್ಲಿ ಊರುಗಳ ಮೇಲೆ ತೆರಿಗೆಗಳನ್ನು ವಿಧಿಸುತ್ತಿದ್ದ ಉಲ್ಲೇಖವಿದೆ.[೧೧೦] ಬ್ಯಾಡರಹಳ್ಳಿಯ ಶಾಸನವು ಇಲ್ಲಿ(ಬ್ಯಾಡರಹಳ್ಳಿಯಲ್ಲಿ) ಹುಟ್ಟಿದರೆ ಎಲ್ಲ ತೆರಿಗೆಗಳೂ ಕಂದಾಯವು ಸಲ್ಲುವುದು ಎಂದು ಉಲ್ಲೇಖಿಸುತ್ತದೆ.[೧೧೧] ಅಂದರೆ ಇಲ್ಲಿ ಆ ಪ್ರದೇಶದ ಪಾವಿತ್ರ್ಯ ಹಾಗೂ ತೆರಿಗೆಯ ಪ್ರಾಮುಖ್ಯತೆ ತಿಳಿಯುತ್ತದೆ. ಹೀಗೆ ಕಂದಾಯ ಪದ್ಧತಿಯಲ್ಲಿ ಆದಾಯದ ಮೂಲಗಳ ಪದ್ಧತಿಯನ್ನು ಈ ಪ್ರದೇಶದ ಶಾಸನಗಳಲ್ಲಿ ಕಾಣುತ್ತೇವೆ.

ವ್ಯಯ ಅಥವಾ ಖರ್ಚು

ಈ ನಾಡಿನ ತೆರಿಗೆಯ ಆದಾಯದ ವಿಷಯದಲ್ಲಿ ಲಭ್ಯವಾದಷ್ಟು ಮಾಹಿತಿಗಳು/ಶಾಸನಗಳು ಅದರ ವ್ಯಯದ ವಿಷಯದಲ್ಲಿ ಸಿಗುವುದಿಲ್ಲ. ರಾಜ್ಯದ ಹೆಚ್ಚಿನ ಆದಾಯ ರಕ್ಷಣೆಗಾಗಿ ವಿನಿಯೋಗವಾಗುತ್ತಿತ್ತೆಂದು ತಿಳಿಯುತ್ತದೆ.

ಆದಾಯದ ಹೆಚ್ಚಿನ ಭಾಗವು ಅಧಿಕಾರಿಗಳಿಗೆ ವೇತನ ಕೊಡುವುದಕ್ಕೆ, ಕೋಟೆ, ಸೈನ್ಯ ಆಯುಧಗಳು, ಸೈನಿಕರ ವೇತನ, ರಾಜನ ವೈಯಕ್ತಿಕ ಜೀವನಕ್ಕೆ, ಆಡಳಿತ ವ್ಯವಸ್ಥೆಗೆ, ಸಾಮಾಜಿಕ, ಧಾರ್ಮಿಕ ಸುಧಾರಣಾ ಕಾರ್ಯಗಳಿಗೆ ವಿನಿಯೋಗವಾಗುತ್ತಿತ್ತು/ವ್ಯಯವಾಗುತ್ತಿತ್ತು.

ಕುಕ್ಕಲನಾಡಿನ ಅನೇಕ ಗ್ರಾಮಗಳಲ್ಲಿರುವ ದೇವಾಲಯಗಳು ಕೋಟೆ, ಶಾಸನಗಳ ನಿರ್ಮಾಣ, ಕೆರೆ, ಛತ್ರ, ಬಾವಿಗಳ ನಿರ್ಮಾಣಕ್ಕೆ ಮತ್ತು ವಿದ್ಯಾಭ್ಯಾಸಕ್ಕೆ ವ್ಯಯ ಮಾಡುತ್ತಿದ್ದರು. ಜೊತೆಗೆ ಬಹಳಷ್ಟು ತೆರಿಗೆಗಳನ್ನು ಆಯಾ ಊರಿನ ದೇವಾಲಯ, ಛತ್ರ, ಅಗ್ರಹಾರಗಳಿಗೆ ಬಿಟ್ಟುಕೊಡುತ್ತಿದ್ದರೆಂದು ಇಲ್ಲಿಯ ಶಾಸನಗಳು ತಿಳಿಸುತ್ತವೆ.

ಚನ್ನಪಟ್ಟಣ ತಾಲೂಕಿನ ಹಾಗಲಹಳ್ಳಿ ಗ್ರಾಮದ ಶಾಸನ ಹಾಗಲಹಳ್ಳಿ ಗ್ರಾಮವನು ಕಿತ್ತನೆಲ್ಲಿಯ ಗೌಡರಿಗೆ ಸುಂಕಮಾನ್ಯವಾಗಿ ಕೊಡುಗೆ ನೀಡಿದ ವಿವರವನ್ನು ದಾಖಲಿಸಿದೆ.[೧೧೨] ಹಾಗೆಯೇ ಬೆಂಗಳೂರಿನ ಬ್ಯಾಡರಹಳ್ಳಿಯ ಶಾಸನದಲ್ಲಿ ಬ್ಯಾಡರಹಳ್ಳಿಯನ್ನು ತೆರಿಗೆ ಬಿಟ್ಟು ಸರ್ಬಮಾನ್ಯದ ಕೊಡುಗೆಯಾಗಿ ನೀಡಿದ ಉಲ್ಲೇಖವಿದೆ.[೧೧೩] ಕ್ರಿ.ಶ.೧೪೦೮ರ ಬೆಂಗಳೂರಿನ ಕನ್ನೆಲ್ಲಿ ಗ್ರಾಮದ ಶಾಸನವು ಅಲ್ಲಿನ ತಿರುಮಲನಾಥ ದೇವರಿಗೆ ಎರಡು ಮಗ್ಗವನು ಸುಂಕಮಾನ್ಯವಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ.[೧೧೪] ಬೆಂಗಳೂರಿನ ದೊಡ್ಡಬೊಮ್ಮಸಂದ್ರದ ಶಾಸನದಲ್ಲಿ ಕುಕ್ಕಲನಾಡಿನ ಬುಕ್ಕನಾಯ್ಕರು ಬೊಮ್ಮನಹಳ್ಳಿಯನು ಸರ್ವಮಾನ್ಯವಾಗಿ ಸುಂಕಬಿಟ್ಟು ಅಗ್ರಹಾರಕ್ಕೆ ನೀಡಿದ ಉಲ್ಲೇಖವಿದೆ.[೧೧೫]

ಸರಕುಗಳು

ಈ ಪ್ರದೇಶದ ಬೆಳೆಗಳಾದ ಭತ್ತ, ರಾಗಿ, ಕಬ್ಬು, ಬಾಳೆ, ತೆಂಗು, ಅಡಿಕೆ, ತರಕಾರಿ, ಮಾವು, ಹಲಸು, ಕೆಲಮಸಾಲೆ ಪದಾರ್ಥಗಳು ಇಲ್ಲಿನ ಸರಕುಗಳಾಗಿದ್ದವು. ಇವುಗಳನ್ನು ಸಾಗಿಸಲು ಬಂಡಿಗಳು ಎತ್ತು, ಕೋಣ, ಕತ್ತೆ, ಕುದುರೆಗಳನ್ನು ಬಳಸುತ್ತಿದ್ದರು.

೪.೧೫. ಅಳತೆ ಪದ್ಧತಿ

ಅಳತೆ : ಜೀರಿಗೆ, ಸಾಸಿವೆ, ಮೆಣಸು, ಶುಂಠಿ, ಅರಿಶಿಣ ಮೊದಲಾದ ಸಾಂಬಾರ ಪದಾರ್ಥಗಳು ಹಾಗೂ ಭತ್ತ, ರಾಗಿ, ಕಡಲೆ, ಎಳ್ಳು ಮುಂತಾದ ದವಸ-ಧಾನ್ಯಗಳನ್ನು ಕೊಳಗ, ಬಳ್ಳ, ಸೇರು, ಮಾನ, ಗಿದ್ದನ, ಹಾನೆ, ದಳ ಮುಂತಾದವುಗಳಿಂದ ಅಳೆಯುತ್ತಿದ್ದರು. ರಾಜಾದಿತ್ಯನು ತನ್ನ 'ವ್ಯವಹಾರ ಗಣಿತ'ದಲ್ಲಿ ಕರ್ನಾಟಕದ ಅಳತೆಗಳನ್ನು ಹೀಗೆ ವಿವರಿಸಿದ್ದಾನೆ.

೪ ಗಿದ್ದ - ೧ ಸೊಲ್ಲಗೆ

೪ ಸೊಲ್ಲಗೆ - ೧ ಮನ

೪ ಮಾನ - ೧ ಬಳ್ಳ

೪ ಬಳ್ಳ - ೧ ಕೊಳಗ

೨೦ ಕೊಳಗ - ೧ ಖಂಡುಗ

ತೂಕ

೪ ಸುವರ್ಣ - ೧ ಕರ್ಪೆ

೪ ಕರ್ಪೆ - ೧ ಪಲ

೨೦ ಪಲ - ೧ ಬಿಸಿಗೆ

೫ ಬಿಸಿಗೆ - ೧ ತೊಲಿ

೨೦ ತೊಲಿ - ೧ ಭಾರ

ನಾಣ್ಯ : ವ್ಯಾಪಾರದಲ್ಲಿ ಚಲಾವಣೆಯಾಗುತ್ತಿದ್ದ ನಾಣ್ಯಗಳಲ್ಲಿ ಹೊನ್ನ(ಗದ್ಯಾಣ), ಹಾಗ, ಪಣ, ವೀಸ, ಬೇಳೆ, ಅಡ್ಡ, ಕಾಣಿ, ಕಾಗಿಣಿ, ತಾರ, ದ್ರಮ್ಮ ಪ್ರಮುಖವಾದವುಗಳು. ವ್ಯವಹಾರ ಗಣಿತದಲ್ಲಿ ಬರುವ ನಾಣ್ಯದ ಕೋಷ್ಟಕ ಇಂತಿದೆ.

೪ ಕಾಣಿ - ೧ ವೀಸ

೫ ವೀಸ - ೧ ಹಾಗ

೪ ಹಾಗ - ೧ ಪಣ

೧೦ ಪಣ - ೧ ಗದ್ಯಾಣ

ಬಂಗಾರ, ಬೆಳ್ಳಿ ಹಾಗೂ ತಾಮ್ರ ಇತರೆ ಲೋಹಗಳಿಂದ ಇವುಗಳನ್ನು ಟಂಕಿಸಲಾಗುತ್ತಿತ್ತು. ಈ ನಾಣ್ಯಗಳ ತೂಕವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಮತ್ತು ಒಬ್ಬ ಅರಸನಿಂದ ಮತ್ತೊಬ್ಬ ಅರಸನ ಕಾಲಕ್ಕೆ ವ್ಯತ್ಯಾಸವನ್ನು ಕಾಣಬಹುದು.

ವರ್ತಕರ ಅಧಿಕಾರ ಮತ್ತು ನ್ಯಾಯ ಸ್ವರೂಪ

ಸಂತೆ, ಪೇಟೆ, ಪಟ್ಟಣಗಳ ನಿರ್ಮಾಣ ಯೋಜನೆ ಹಾಗೂ ಅದರ ಅಧಿಕಾರ, ನ್ಯಾಯ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರ-ನಾಯಕರು, ಗೌಡರು, ಪಟ್ಟಣಸ್ವಾಮಿ, ಮಂಡಲಸ್ವಾಮಿ, ನಾಡಸ್ವಾಮಿಯರದಾಗಿರುತ್ತಿತ್ತು. ಇವರು ತಮ್ಮ ಕಾರ್ಯಗಳನ್ನು ಮಾಡುವುದರ ಮೂಲಕ ಆರ್ಥಿಕ ರಂಗದಲ್ಲಿ ಏರುಪೇರು ಆಗದಂತೆ ನೋಡಿಕೊಳ್ಳುವುದು ಮತ್ತು ಆರ್ಥಿಕ ರಂಗದಲ್ಲಿ ಅಭಿವೃದ್ಧಿಪಡಿಸುವುದು ಇವರ ಮುಖ್ಯ ಕರ್ತವ್ಯವಾಗಿತ್ತು.

ಪಟ್ಟಣಸ್ವಾಮಿ

ಯಾವುದೇ ವಿನಿಮಯ ವರ್ತಕ, ಪ್ರಾಕಾರದವನು ಈ ಪಟ್ಟಣಸ್ವಾಮಿ ಸ್ಥಾನವನ್ನು ಅಲಂಕರಿಸ ಬಹುದಾಗಿತ್ತು. ಪಟ್ಟಣಸ್ವಾಮಿ ಎನ್ನುವುದು ಒಂದು ಸ್ಥಾನ ಅಥವಾ ಹುದ್ದೆ. ಸಂತೆಯ ನಿರ್ಮಾಣ ಮತ್ತು ಸಂತೆಯ ಸಂಯೋಜನ ಕಾರ್ಯಗಳನ್ನು ಮಾಡುವುದು ಇವನ ಕರ್ತವ್ಯಗಳಾಗಿದ್ದವು. ಕೆಲವು ಬಾರಿ ಶೆಟ್ಟಿಗಳು ಪಟ್ಟಣಸ್ವಾಮಿಗಳಾಗಿರುತ್ತಿದ್ದರು ಎಂಬ ಉಲ್ಲೇಖ ಕಂಡುಬರುತ್ತದೆ. ಶ್ರವಣಬೆಳಗೊಳ ಶಾಸನದಲ್ಲಿ ನಾಗದೇವನು, ಮಲ್ಲಸೆಟ್ಟಿಯರು ಪಟ್ಟಣಸ್ವಾಮಿಯಾದ ಉಲ್ಲೇಖಗಳಿವೆ.

ಮಂಡಲಸ್ವಾಮಿ

ಮಂಡಲಸ್ವಾಮಿ ಸ್ಥಾನ, ಪಟ್ಟಣ ಸ್ವಾಮಿಗಿಂತ ಉನ್ನತವಾಗಿದ್ದಿತು. ನಾಡಿನ ಒಂದು ಭಾಗವಾದ ಮಂಡಲದಲ್ಲಿ ಇವರು ಸಂತೆ ಮಾಡಿಸುವ, ಪಟ್ಟಣ ಕಟ್ಟಿಸುವ ಕರ್ತವ್ಯ ಇವರದಾಗಿತ್ತು.

ನಾಡಸ್ವಾಮಿ

ಇವನು ಪಟ್ಟಣಸ್ವಾಮಿ, ಮಂಡಲಸ್ವಾಮಿಗಿಂತ ಉನ್ನತ ಸ್ಥಾನ ಹೊಂದಿದ್ದನು. ಇಡೀ ನಾಡಿನ ಪಟ್ಟಣಗಳ, ಸಂತೆಗಳ ಕೆಲಸ ಇವನದಾಗಿತ್ತು. ಇಲ್ಲಿನ ಸಮಸ್ಯೆಗಳನ್ನೆಲ್ಲಾ ಇವನೇ ಬಗೆಹರಿಸಬೇಕಿತ್ತು. ಹೀಗೆ ಈ ಎಲ್ಲಾ ಅಂಶಗಳು ಈ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗೆ ಸಾಕ್ಷಿಯಾಗಿವೆ.

ಅಡಿಟಿಪ್ಪಣಿಗಳು

೧. ಶೇಷನವರತ್ನ (ಅನು), ಮನುಸ್ಮೃತಿ, ಪು.೨೦

೨. EC-IX, NI, ೦೧, ಕ್ರಿ.ಶ.೧೦೨೯

೩. ಅದೇ, Nl, ೩೩, ಕ್ರಿ.ಶ.ಸು.೭೫೦

೪. ಅದೇ, Bn, ೨೬, ಕ್ರಿ.ಶ.೧೪೩೦

೫. ಅದೇ, Bn, ೧೨೩ ಕ್ರಿ.ಶ.೧೪೯೫

೬. ಅದೇ, ಮಾಗಡಿ, ೭೪, ಕ್ರಿ.ಶ.೧೫೪೭

೭. ಶೇಷನವರತ್ನ(ಅನು), ಮನುಸ್ಮೃತಿ, ಪು.೨೦

೮. ಮಹೀಶವಾಡಿ ಬಿ.ಬಿ.(ಸಂ), ಧರ್ಮಾಮೃತಂ, ಆಶ್ವಾಸ-೨, ಪದ್ಯ-೫೩, ಪು.೬೨

೯. EC.IX, Bn, ೩೬, ಕ್ರಿ.ಶ.ಸು.೭೫೦

೧೦. ಅದೇ, Nl, ೩೩, ಕ್ರಿ.ಶ.ಸು.೭೫೦

೧೧. ಅದೇ, Nl, ೩೪, ಕ್ರಿ.ಶ.ಸು.೭೫೦

೧೨. ಅದೇ, Nl, ೩೪, ಕ್ರಿ.ಶ.೧೦೨೯

೧೩. ಅದೇ, Nl, ೩೭, ಕ್ರಿ.ಶ.೧೦೩೩, ಮತ್ತು ಅದೇ, Nl, ೨೪, ಕ್ರಿ.ಶ.೧೦೬೫

೧೪. ಅದೇ, Nl, ೦೩, ಕ್ರಿ.ಶ.೧೧೧೦

೧೫. ಅದೇ, Bn, ೧೧೨, ಕ್ರಿ.ಶ.೧೧೫೬

೧೬. ಅದೇ, Nl, ೩೮, ಕ್ರಿ.ಶ.೧೩೦೧

೧೭. ಗೋಪಾಲ್‌ರಾವ್ ಎಚ್.ಎಸ್., ಶಾಸನ ಸಂಕಲನ, ಪು.೨೧

೧೮. ಶೇಷನವರತ್ನ(ಅನು), ಮನುಸ್ಮೃತಿ, ಪು.೨೦

೧೯. EC-IX, Nl, ೦೧, ಕ್ರಿ.ಶ.೧೦೨೯

೨೦. ಗೋಪಾಲರಾವ್ ಎಚ್.ಎಸ್., ಶಾಸನ ಸಂಕಲನ, ಪು.೨೧

೨೧. EC-IX, Nl, ೧೧, ಕ್ರಿ.ಶ.೧೩೩೦

೨೨. ಅದೇ, ಮಾಗಡಿ, ೮೧, ಕ್ರಿ.೧೩೪೦

೨೩. ಅದೇ, Nl, ೦೧, ಕ್ರಿ.ಶ.೧೦೨೯

೨೪. ಅದೇ, Nl, ೦೯, ಕ್ರಿ.ಶ.೧೩೩೩

೨೫. ಅದೇ, CP, ೦೭, ಕ್ರಿ.ಶ.೧೩೩೪

೨೬. ಅದೇ, Bn, ೧೧೦, ಕ್ರಿ.ಶ.೧೩೩೬

೨೭. ಅದೇ, ಮಾಗಡಿ, ೮೧, ಕ್ರಿ.ಶ.೧೩೪೦

೨೮. ಗೋಪಾಲರಾವ್ ಎಚ್.ಎಸ್., ಶಾಸನ ಸಂಕಲನ, ಪು.೨೧-೨೬

೨೯. EC-IX, Nl, ೧೧, ಕ್ರಿ.ಶ.೧೩೩೦

೩೦. ಅದೇ, Nl, ೧೨, ಕ್ರಿ.ಶ.೧೩೩೦

೩೧. ಅದೇ,

೩೨. ಶೇಷನವರತ್ನ(ಅನು), ಮನುಸ್ಮೃತಿ, ಪು.೨೦

೩೩. EC-IX, Bn, ೩೬, ಕ್ರಿ.ಶ.೭೫೦

೩೪. ಅದೇ, Nl, ೩೮, ಕ್ರಿ.ಶ.೧೩೦೧

೩೫. ಅದೇ, ಮಾಗಡಿ, ೧೫, ಕ್ರಿ.ಶ.೧೩೧೫

೩೬. ಅದೇ, Bn, ೧೨೨, ಕ್ರಿ.ಶ.೧೪೦೮

೩೭. ಅದೇ, Nl, ೦೩, ಕ್ರಿ.ಶ.೧೧೧೦

೩೮. ಅದೇ, Nl, ೩೪, ಕ್ರಿ.ಶ.೭೫೦

೩೯. ಅದೇ, Nl, ೩೧, ಕ್ರಿ.ಶ.೧೫೩೩

೪೦. ಅದೇ, ಮಾಗಡಿ, ೮೧, ಕ್ರಿ.ಶ.೧೩೪೦

೪೧. ಅದೇ, Nl, ೩೩, ಕ್ರಿ.ಶ.೭೫೦

೪೨. ಅದೇ, Bn, ೨೬, ಕ್ರಿ.ಶ.೧೪೩೦

೪೩. ಅದೇ, Bn, ೧೨೩, ಕ್ರಿ.ಶ.೧೪೯೫

೪೪. ಅದೇ, ಮಾಗಡಿ, ೭೪, ಕ್ರಿ.ಶ.೧೫೪೭

೪೫. ಅದೇ, Nl, ೩೭, ಕ್ರಿ.ಶ.೧೦೩೩

೪೬. ಅದೇ, Nl, ೦೩, ಕ್ರಿ.ಶ.೧೧೧೦

೪೭. ಅದೇ, ಮಾಗಡಿ, ೧೫, ಕ್ರಿ.ಶ.೧೩೧೫

೪೮. ಅದೇ, Nl, ೩೧, ಕ್ರಿ.ಶ.೧೫೩೩

೪೯. ಅದೇ, ಮಾಗಡಿ, ೭೪, ಕ್ರಿ.ಶ.೧೫೪೭

೫೦. ಅದೇ, Bn, ೧೨೨, ಕ್ರಿ.ಶ.೧೪೦೮

೫೧. ಅದೇ, Nl, ೦೧, ಕ್ರಿ.ಶ.೧೦೨೯

೫೨. ಅದೇ, Nl, ೦೧, ಕ್ರಿ.ಶ.೧೦೨೯

೫೩. ಗೋಪಾಲರಾವ್ ಎಚ್.ಎಸ್., ಶಾಸನ ಸಂಕಲನ, ಪು.೨೧

೫೪. EC-IX, ಮಾಗಡಿ, ೮೧, ಕ್ರಿ.ಶ.೧೩೪೦

೫೫. ಅದೇ, Bn, ೧೧೦, ಕ್ರಿ.ಶ.೧೩೩೬

೫೬. ಅದೇ, Nl, ೦೯, ಕ್ರಿ.ಶ.೧೩೩೩

೫೭. ಅದೇ, Bs.Vol-IX, ೧೦೩, ಕ್ರಿ.ಶ.೧೩೩೧

೫೮. ಅದೇ, Nl, ೧೨, ಕ್ರಿ.ಶ.೧೩೩೦

೫೯. ಅದೇ, Bn, ೧೧೧, ಕ್ರಿ.ಶ.೧೩೪೦

೬೦. ಅದೇ, ಮಾಗಡಿ, ೮೦, ಕ್ರಿ.ಶ.೧೧೦೦

೬೧. ಗೋಪಾಲರಾವ್ ಎಚ್.ಎಸ್., ಶಾಸನ ಸಂಕಲನ, ಪು.೨೧

೬೨. EC-IX, Nl, ೧೨, ಕ್ರಿ.ಶ.೧೩೩೦

೬೩. ಅದೇ, Bn, ೩೬, ಕ್ರಿ.ಶ.ಸು.೭೫೦

೬೪. ಅದೇ, Nl, ೩೪, ಕ್ರಿ.ಶ.ಸು.೭೫೦

೬೫. ಅದೇ, Nl, ೦೧, ಕ್ರಿ.ಶ.ಸು.೧೦೨೯

೬೬. ಅದೇ, Bn, ೧೧೦, ಕ್ರಿ.ಶ.೧೩೩೬, ಅದೇ, Bn, ೧೧೧, ಕ್ರಿ.ಶ.ಸು.೧೩೪೦, ಅದೇ, ಮಾಗಡಿ, ೮೧, ಕ್ರಿ.ಶ.೧೩೪೦

೬೭. ಗೋಪಾಲರಾವ್ ಎಚ್.ಎಸ್., **ಶಾಸನ ಸಂಕಲನ**, ೨೦೦೧, ಪು.೨೧-೨೨

೬೮. EC-IX, Nl, ೦೯, ಕ್ರಿ.ಶ.೧೩೩೩ ಮತ್ತು ಅದೇ, Bn, ೧೨೩, ಕ್ರಿ.ಶ.೧೪೯೫

೬೯. ಅದೇ, Bn, ೨೬, ಕ್ರಿ.ಶ.೧೪೩೦, ಮತ್ತು ಮಾಗಡಿ, ೭೪, ಕ್ರಿ.ಶ.೧೫೪೭

೭೦. ಅದೇ, Nl, ೦೩, ಕ್ರಿ.ಶ.೧೧೧೦

೭೧. ಅದೇ, ಮಾಗಡಿ, ೧೫, ಕ್ರಿ.ಶ.೧೩೧೫

೭೨. ಅದೇ, Nl, ೩೧, ಕ್ರಿ.ಶ.೧೫೩೩

೭೩. ಅದೇ, Nl, ೦೩, ಕ್ರಿ.ಶ.೧೧೧೦

೭೪. ಅದೇ, Nl, ೩೮, ಕ್ರಿ.ಶ.೧೩೦೧

೭೫. ಅದೇ, Nl, ೩೮, ಕ್ರಿ.ಶ.೧೩೦೧

೭೬. ಅದೇ, Nl, ೦೩, ಕ್ರಿ.ಶ.೧೧೧೦

೭೭. ಅದೇ, Nl, ೩೮, ಕ್ರಿ.ಶ.೧೩೦೧

೭೮. ಅದೇ, Nl, ೦೧, ೦೩, ೧೯, ೨೪, ೩೪, Bn, ೩೬, ೧೨೨

೭೯. ಅದೇ, Nl, ೦೯, ೧೧, ೧೯, ೨೩, Bn, ೨೬, ೧೧೦, ೧೧೧, ೧೧೭ ಮಾಗಡಿ, ೮೧

೮೦. ಅದೇ, Nl, ೦೯, ೧೧, ೧೨, Bn, ೧೧೦, ೧೧೧, ೧೧೭, ೧೨೩, ಮಾಗಡಿ, ೭೪, ೮೧, Cp, ೦೭, ಮತ್ತು ಗೋಪಾಲರಾವ್ ಎಚ್.ಎಸ್., **ಶಾಸನ ಸಂಕಲನ**, ಪು.೨೧ ೨೬

೮೧. ಅದೇ, Nl, ೦೧, ೧೧, ೩೪, Bn, ೩೬, ೧೧೧, ಮಾಗಡಿ, ೮೧, ಗೋಪಾಲರಾವ್ ಎಚ್.ಎಸ್., **ಶಾಸನ ಸಂಕಲನ**, ಪು.೨೧

೮೨. ಅದೇ, Nl, ೦೧, ೩೩ Bn, ೧೨೩, ಮಾಗಡಿ, ೭೪

೮೩. ಅದೇ, Nl, ೦೧, Bn, ೧೨೩, ಮಾಗಡಿ, ೮೧, ಮತ್ತು ಗೋಪಾಲರಾವ್ ಎಚ್.ಎಸ್., **ಶಾಸನ ಸಂಕಲನ**, ಪು.೨೧-೨೬

೮೪. ಅದೇ, Nl, ೧೨ Bn, ೧೧೦, ೧೨೩, ೦೭, ಗೋಪಾಲರಾವ್ ಎಚ್.ಎಸ್., **ಶಾಸನ ಸಂಕಲನ**, ಪು.೨೧-೨೬

೮೫. ಅದೇ, Nl, ೦೧, ಕ್ರಿ.ಶ.೧೦೨೯

೮೬. ಅಣ್ಣಿಗೇರಿ ಎ.ಎಂ. ಮತ್ತು ಶೇಷಶಾಸ್ತ್ರಿ ಆರ್.(ಸಂ), **ಶಾಸನ ಸಂಗ್ರಹ**, ಪು.೧೦೧

೮೭. EC-IX, Nl, ೦೧, ಕ್ರಿ.ಶ.೧೦೨೯

೮೮. ಅದೇ, Bn, ೧೧೧, ಕ್ರಿ.ಶ.೧೩೪೦

೮೯. ಅದೇ, ಮಾಗಡಿ, ೮೧, ಕ್ರಿ.ಶ.೧೩೪೦

೯೦. ಅದೇ, Bn, ೧೨೩, ಕ್ರಿ.ಶ.೧೪೯೫

೯೧. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು.೪೦೪

೯೨. EC-IX, ಮಾಗಡಿ ೧೫, ಕ್ರಿ.ಶ.೧೩೧೫

೯೩. ಅದೇ, Nl, ೦೯, ಕ್ರಿ.ಶ.೧೩೩೩

೯೪. ಅದೇ, Nl, ೩೧, ಕ್ರಿ.ಶ.೧೫೩೩

೯೫. ಕೃಷ್ಣಭಟ್ ಕೆ.(ಅನು), **ಕೌಟಿಲ್ಯನ ಅರ್ಥಶಾಸ್ತ್ರ;** ಅಧಿಕರಣ ii-i, ಪು.೯೮-೯೯

೯೬. EC-IX, Nl, ೦೩, ಕ್ರಿ.ಶ.೧೧೧೦

೯೭. ಅದೇ, Nl, ೩೮, ಕ್ರಿ.ಶ.೧೩೦೧

೯೮. ಅದೇ, Nl, ೦೩, ಕ್ರಿ.ಶ.೧೧೧೦

೯೯. ಅದೇ, Nl, ೩೮, ಕ್ರಿ.ಶ.೧೩೦೧

೧೦೦. ಅದೇ, Bn, ೧೨೨, ಕ್ರಿ.ಶ.೧೪೦೮

೧೦೧. ಅದೇ, Nl, ೦೧, ಕ್ರಿ.ಶ.೧೦೨೯

೧೦೨. ಗೋಪಾಲರಾವ್ ಎಚ್.ಎಸ್., **ಶಾಸನ ಸಂಕಲನ,** ಪು.೨೧-೨೬

೧೦೩. EC-IX, Nl, ೧೧, ಕ್ರಿ.ಶ.೧೩೩೦

೧೦೪. ಅದೇ, ಮಾಗಡಿ, ೮೧, ಕ್ರಿ.ಶ.೧೩೪೦

೧೦೫. ಅದೇ, Nl, ೧೨, ಕ್ರಿ.ಶ.೧೩೩೦

೧೦೬. ಅದೇ, Bn, ೨೫, ಕ್ರಿ.ಶ.೧೧೪೦

೧೦೭. ಅದೇ, Nl, ೦೩, ಕ್ರಿ.ಶ.೧೧೧೦

೧೦೮. ಅದೇ, Nl, ೩೮, ಕ್ರಿ.ಶ.೧೩೦೧

೧೦೯. ಅದೇ, Bn, ೧೨೨, ಕ್ರಿ.ಶ.೧೪೦೮

೧೧೦. ಅದೇ, Bn, ೨೬, ಕ್ರಿ.ಶ.೧೪೩೦

೧೧೧. ಅದೇ, Bn, ೧೧೦, ಕ್ರಿ.ಶ.೧೩೩೬

೧೧೨. ಅದೇ, Cp, ೦೭, ಕ್ರಿ.ಶ.೧೩೩೪

೧೧೩. ಅದೇ, Bn, ೧೧೦, ಕ್ರಿ.ಶ.೧೩೩೬

೧೧೪. ಅದೇ, Bn, ೧೨೨, ಕ್ರಿ.ಶ.೧೪೦೮

೧೧೫. ಅದೇ, Bn, ೨೬, ಕ್ರಿ.ಶ.೧೪೩೦

ಅಧ್ಯಾಯ ೫

ಕುಕ್ಕಲನಾಡಿನ ಧಾರ್ಮಿಕ ವ್ಯವಸ್ಥೆ

೫

ಕುಕ್ಕಲನಾಡಿನ ಧಾರ್ಮಿಕ ವ್ಯವಸ್ಥೆ

೫.೧. ಪೀಠಿಕೆ

ಚಿಂತನಾಪರವಾದ ಧರ್ಮವು ನಿರಂತರ ಅಧ್ಯಯನ ಶೀಲವಾದದ್ದು. ಧರ್ಮಕ್ಕೆ ಆದಿ ಅಂತ್ಯಗಳೆಂಬ ಮಿತಿ ಇಲ್ಲ. ಕಾಲದಿಂದ ಕಾಲಕ್ಕೆ ಜೀವನದ ವಿಕಾಸಗಳಿಗುಣವಾಗಿ ಧರ್ಮದ ಬಗೆಗಿನ ಅನಿಸಿಕೆಗಳು, ಕ್ರಿಯೆಗಳು ಬದಲಾಗುತ್ತಾ ಹೋಗುತ್ತವೆ. ಅದೇ ತೆರನಾಗಿ ಪ್ರದೇಶದಿಂದ ಪ್ರದೇಶಕ್ಕೆ ಧರ್ಮದ ಪರಿಕಲ್ಪನೆ ಬದಲಾವಣೆ ಹೊಂದುತ್ತದೆ. ವಿಶ್ವದ ಎಲ್ಲಾ ಕಡೆಯಲ್ಲೂ ಧರ್ಮವು ಒಂದೇ ತೆರನಾಗಿರುವುದಿಲ್ಲ. ಆಯಾ ಕಾಲ, ದೇಶಗಳಿಗನುಗುಣವಾಗಿ ಅದು ವಿವಿಧ ರೂಪಗಳನ್ನು ತಾಳುತ್ತದೆ. ಒಂದು ಪ್ರದೇಶದಲ್ಲಿ ಹುಟ್ಟಿದ ಧರ್ಮ ಕಾಲಾಂತರದಲ್ಲಿ ವಿಶ್ವದ ತುಂಬಾ ಪಸರಿಸಲೂಬಹುದು. ಯಾವುದು ಸಮಾಜಕ್ಕೆ ಧಾರಣ ಸಾಮರ್ಥ್ಯ ನೀಡುತ್ತದೋ ಅದು ಧರ್ಮ.[೧]

'Religion' ಎಂಬ ಇಂಗ್ಲೀಷ್ ಪದಕ್ಕೆ ನಾವು 'ಧರ್ಮ' ಎಂಬ ಪದವನ್ನು ಸಮಾನವಾಗಿ ಬಳಸುತ್ತೇವೆ. ರಿಲೀಜನ್ ಎಂಬ ಇಂಗ್ಲೀಷ್ ಪದ 'ರಿಲಿಗೋ' ಎಂಬ ಲ್ಯಾಟಿನ್ ಶಬ್ದದಿಂದ ಬಂದದ್ದಾಗಿದೆ. ಈ ಪದದ ಅರ್ಥ 'ಪೂಜ್ಯ' ಅಥವಾ 'ಪವಿತ್ರವಾದದ್ದು' ಎಂದು. ಇಂಗ್ಲೀಷ್‌ನ ರಿಲಿಜನ್ ಎಂಬ ಪದಕ್ಕೆ ಸಮಾನವಾಗಿ ಸಂಸ್ಕೃತದಲ್ಲಿ 'ಧರ್ಮ' ಎಂಬ ಶಬ್ದವನ್ನು ಬಳಸುತ್ತೇವೆ. ಧರ್ಮ ಎಂಬ ಪದವು ಸಂಸ್ಕೃತದ ಮೂಲಧಾತು 'ದೃ'ದಿಂದ ಬಂದಿರುವುದು. 'ದೃ' ಎಂದರೆ ಸಂಸ್ಕೃತದಲ್ಲಿ ಧರಿಸು, ಧಾರಣೆ ಮಾಡು, ಎತ್ತಿಹಿಡಿ ಎಂಬ ಅರ್ಥವನ್ನು ನೀಡುತ್ತದೆ.[೨]

ಮಾನವನು ತನ್ನ ಸ್ವೇಚ್ಛಾಜೀವನವನ್ನು ಬದಿಗಿರಿಸಿ ತನ್ನ ಜೀವನಕ್ಕೆ ವ್ಯವಸ್ಥಿತವಾದ ಬದುಕು ಬೇಕೆಂದು ಯಾವಾಗ ಅನಿಸಿತೋ ಆಗ ಅವನು ತನ್ನ ಜೀವನಕ್ಕೆ ಒಂದು ಚೌಕಟ್ಟನ್ನು ಹಾಕಬಯಸಿದನು. ಮಾನವ ತಾನು ನಿರ್ಮಿಸಿಕೊಂಡ ಆ ಚೌಕಟ್ಟೆ ಧರ್ಮವಾಯಿತು. ಪ್ರಾಚೀನ ಭಾರತವನ್ನು ಗಮನಿಸಿದಾಗ 'ಧರ್ಮ' ಎಂಬುದು ಒಂದು ಜೀವನ ವಿಧಾನವೇ ಆಗಿದೆ. ಮನುಷ್ಯನ ಬದುಕಿನ ಮುಖ್ಯ ಕೇಂದ್ರವೇ ಧರ್ಮವಾಗಿತ್ತು. ಒಟ್ಟಿನಲ್ಲಿ ಮಾನವನ ಜೀವನದ ಅಗತ್ಯ ಮತ್ತು ವಿಕಸಿತ ಮಾನವನ ಬುದ್ಧಿಶಕ್ತಿಯ ಫಲವೇ ಧರ್ಮದ ಹುಟ್ಟಿಗೆ ಕಾರಣವಾಯಿತು.

ಮನುಷ್ಯ ತಾನು ರೂಪಿಸಿಕೊಂಡ ಚೌಕಟ್ಟೇ ಧರ್ಮ, ಹಿಂದೂಗಳ ಚಿಂತನೆಯಲ್ಲಿ ಕಾನೂನು ಮತ್ತು ಧರ್ಮ ಎಂಬ ಎರಡು ಪದಗಳ ವಿಂಗಡಣೆ ಇಲ್ಲ. ಈ ಎರಡೂ ಪದಗಳು ಧರ್ಮ ಎಂಬ ಶಬ್ದದಲ್ಲೇ ಅಡಕವಾಗಿವೆ. ನ್ಯಾಯಕ್ಕೆ ಧರ್ಮವೇ ಆಧಾರ. ಆದರ್ಶ, ನೈತಿಕತೆ ನ್ಯಾಯಗಳ ತಳಹದಿಯ ಮೇಲೆಯೇ ಮಾನವನು ತನ್ನ ಧರ್ಮವನ್ನು ರೂಪಿಸಿಕೊಂಡನು. ನಾಗರಿಕ ಸಮಾಜವು ಪ್ರಾರಂಭವಾದಾಗಿನಿಂದ ಅದರ ಆಗು-ಹೋಗುಗಳನ್ನು ನಿರ್ಧರಿಸುತ್ತಿದ್ದುದ್ದು ಧರ್ಮ. ಧರ್ಮದ ಮುಖ್ಯವಾದ ಕಲ್ಪನೆ ಎಂದರೆ ಒಟ್ಟಾಗಿ ಹಿಡಿಯುವುದೇ ಆಗಿದೆ. ಭಾರತೀಯ ಪ್ರಾಚೀನ ಗದ್ಯಗ್ರಂಥಗಳು ಅದೇ ಅರ್ಥದಲ್ಲಿ 'ಧರ್ಮ' ಎಂಬ ಶಬ್ದವನ್ನು ಬಳಸಿದವು. ಆದ್ದರಿಂದಲೇ ಧರ್ಮ ಎಂದರೆ ವಿವಿಧ ಸಮಾಜ ವರ್ಗಗಳು, ಸಮರಸದಿಂದ ಜೀವನ ನಿರ್ವಹಿಸಲು ಅನುವಾಗುವಂತಿದ್ದ ಕರ್ತವ್ಯ ಸಂಹಿತೆ.

ಭಾರತವು ವೈವಿಧ್ಯ ಧರ್ಮ ಹಾಗೂ ಮತಗಳ ಆಗರ. ವೈವಿಧ್ಯತೆಯಲ್ಲಿ ಏಕತೆಯನ್ನು ಪಾಲಿಸಿಕೊಂಡು ಬಂದಿರುವ ದೇಶಿಯ ಸಂಸ್ಥಾನಗಳು ಮಧ್ಯಕಾಲೀನ ಯುಗದಲ್ಲಿ ಧಾರ್ಮಿಕ ಹಾಗೂ ಮತೀಯ ಸಾಮರಸ್ಯವನ್ನು ಯಶಸ್ವಿಯಾಗಿ ಪರಿಪಾಲಿಸಿಕೊಂಡು ಬಂದಿವೆ. ಯಾವ ಪಂಥೀಯನೇ ನಾಯಕನಾಗಿದ್ದರೂ ಧಾರ್ಮಿಕ ಹಗೂ ಮತೀಯ ಪ್ರಚೋದನೆಗೆ ಸಮಸ್ಯೆಯುಂಟುಮಾಡದೆ ವಿಶಾಲ ತಳಹದಿಯಲ್ಲಿ ಆಡಳಿತವನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದಿರುವುದು ಇತಿಹಾಸದ ಹೆಗ್ಗಳಿಕೆ ಆಗಿದೆ. ಆಯಾ ಧರ್ಮದವರಿಗೆ ಮಾನ್ಯತೆ ನೀಡಿ ಧಾರ್ಮಿಕ ಅಭಿವೃದ್ಧಿಗೆ ಸರ್ವಧರ್ಮ ಸಮನ್ವಯತೆಯಲ್ಲಿ ನಂಬಿಕೆಯಿರಿಸಿಕೊಂಡು ಬಂದ ಕುಕ್ಕಲನಾಡಿನ ನಾಯಕ/ಪ್ರಭುಗಳ ಪಾತ್ರವು ಹಿರಿದಾದುದು. ಧರ್ಮ ಸಮಾಜದ ಅವಿಭಾಜ್ಯ ಅಂಗ. ಬೇರೆ, ಬೇರೆ ಮತಧರ್ಮಗಳು, ಸಮಾಜವನ್ನು ಪೋಷಿಸುತ್ತಾ ಮತ್ತು ಸಮಾಜದಿಂದ ಪೋಷಿಸಲ್ಪಡುತ್ತಾ ಮಾನವನ ಜೀವನಕ್ಕೆ ನೈತಿಕ ನೆಲೆಗಟ್ಟನ್ನು ಒದಗಿಸಿವೆ. ಎಲ್ಲರ ಒಳಿತನ್ನು ಬಯಸುವ ಮೂಲ ಆಶಯವನ್ನೂ ಹೊಂದಿವೆ. ಈ 'ಧರ್ಮ'ದ ಆಚರಣೆಗಳು ಜನಾಂಗಿಕವಾಗಿ ಭಿನ್ನವಾದರೂ ಅವುಗಳಲ್ಲಿ ಮನುಷ್ಯನ ಉದ್ಧಾರದ ಪರಿಕಲ್ಪನೆಯಿದೆ. ಈ ಉದ್ದೇಶವನ್ನಿಟ್ಟುಕೊಂಡು ಹುಟ್ಟಿದ ಹಲವು ಧರ್ಮಗಳು ಭಾರತದಲ್ಲಿವೆ. ಇಲ್ಲಿಯ ಎಲ್ಲಾ ಧರ್ಮಗಳೂ ಕರ್ನಾಟದಲ್ಲಿಯೂ ಬಾಳಿ ಬೆಳಗಿವೆ. ಕುಕ್ಕಲನಾಡಿನ ನಾಯಕರು, ಪ್ರಭುಗಳು, ಗೌಡರುಗಳು ಹೊಸದಾಗಿ ಧಾರ್ಮಿಕ ಕ್ಷೇತ್ರದಲ್ಲಿ ಯಾವ ಬದಲಾವಣೆಯನ್ನು ತರಲಿಲ್ಲ. ಇವರು ಕರ್ನಾಟಕದ ಅರಸರ ಸಮಕಾಲೀನರಾಗಿ, ಅವರ ಸಾಮ್ರಾಜ್ಯದ ಧಾರ್ಮಿಕ ಪರಂಪರೆಯನ್ನು, ಈ ಪ್ರದೇಶದಲ್ಲಿ ಎತ್ತಿಹಿಡಿದರು. ಧಾರ್ಮಿಕ ದೃಷ್ಟಿಯಿಂದ ಪರಿಶೀಲಿಸಿದರೆ ಈ ಪ್ರದೇಶದಲ್ಲಿ ಧಾರ್ಮಿಕ ಏಕತೆಗಿಂತ ವೈವಿಧ್ಯತೆ ಇತ್ತೆಂದು ಆಧಾರಗಳಿಂದ ತಿಳಿಯುತ್ತದೆ. ಇಂತಹ ವೈವಿಧ್ಯತೆಯಿಂದ ಕೂಡಿ ಶಿಷ್ಟಮತ ಧಾರ್ಮಿಕ ಪಂಥಗಳು/ಧರ್ಮಗಳು ಸಹಬಾಳ್ವೆಯಿಂದ ಬಾಳಿ ಬದುಕಿದವು. ಅವುಗಳಲ್ಲಿ ಹಲವು ಕುಕ್ಕಲನಾಡಿನ ಪ್ರದೇಶಗಳಲ್ಲಿ ಕಂಡುಬರುತ್ತವೆ.

೫.೨. ಜೈನಮತ(ಜೈನಧರ್ಮ)

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವೇ ಆಗಿದೆ. ಎಂಬ ವಿದ್ವಾಂಸರ ಮಾತನ್ನು ಬಹುಶಃ ಎಲ್ಲ ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ.[೩] ಕಾರಣ ದಕ್ಷಿಣ ಭಾರತದ ಜೈನಧರ್ಮವು ಕರ್ನಾಟಕದ ಇತಿಹಾಸದೊಂದಿಗೆ ಬೆಳೆಯುತ್ತ ತನ್ನದೇ ಆದ ಇತಿಹಾಸವನ್ನು ನಿರ್ಮಿಸಿದ್ದನ್ನು ಇತಿಹಾಸದ ಪುಟಗಳಿಂದ ತಿಳಿಯಬಹುದು. ಕರ್ನಾಟಕದ ನೂರಾರು ಶಾಸನಗಳು, ಗ್ರಂಥಗಳು, ಇತರ ಸಾಂಸ್ಕೃತಿಕ ಆಕರಗಳು, ಜೈನಧರ್ಮ, ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳನ್ನು ಉಲ್ಲೇಖಿಸಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ವಲಯಗಳನ್ನು ರೂಪಿಸುವಲ್ಲಿ ಜೈನಧರ್ಮದ ಪಾತ್ರ ಹಿರಿದು, ಘನವಾದುದು ಎಂಬುದರಲ್ಲಿ ಸಂದೇಹವಿಲ್ಲ.

ಒಂದು ಕಾಲದಲ್ಲಿ ಈ ನಾಡಿನ ಜೀವನಾಡಿಯಾಗಿದ್ದ ಜೈನಧರ್ಮವು ಯಾವ ಕಾಲದಲ್ಲಿ ಇಲ್ಲಿ ಬಂದು ತಳವೂರಿತ್ತೆಂದು ನಿಖರವಾಗಿ ಹೇಳುವುದು ಕಷ್ಟ ಸಾಧ್ಯ. ಆದರೂ ದೊರೆತ ಆಧಾರಗಳಿಂದ ಕರ್ನಾಟಕದಲ್ಲಿ ಜೈನಧರ್ಮದ ಇತಿಹಾಸವು ಉತ್ತರ ಭಾರತದಿಂದ ಬಂದ ಶ್ರುತಕೇವಲಿ ಭದ್ರಬಾಹು ಸ್ವಾಮಿಗಳೊಂದಿಗೆ ಪ್ರಾರಂಭವಾಗುತ್ತದೆ. ಒಂದು ಪರಂಪರೆಯನ್ನನುಸರಿಸಿ, ಮೌರ್ಯರ ಸಾಮ್ರಾಟನಾದ ಚಂದ್ರಗುಪ್ತನ ಮೇಲೆ ಭದ್ರಬಾಹುಗಳ ಪ್ರಭಾವ ಅಧಿಕವಾಗಿದ್ದ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ಭಯಂಕರ ಕ್ಷಾಮ ಬೀಳಲು ಜೈನಾಚಾರ್ಯನಾದ ಭದ್ರಬಾಹು ತನ್ನ ೧೨,೦೦೦ ಮುನಿಸಂಘದೊಡನೆ ದಕ್ಷಿಣಕ್ಕೆ ಪ್ರಯಾಣ ಬೆಳೆಸಿದನು. ಆ ಸಂದರ್ಭದಲ್ಲಿ ಭದ್ರಬಾಹುಗಳ ಶಿಷ್ಯನಾದ ಚಂದ್ರಗುಪ್ತನು ಅವರೊಂದಿಗೆ ಹೊರಟು ಶ್ರವಣಬೆಳಗೊಳಕ್ಕೆ ಬಂದಂತೆ ತಿಳಿದುಬರುತ್ತದೆ. ಶ್ರವಣಬೆಳಗೊಳದ ಚಿಕ್ಕ ಬೆಟ್ಟದ ಮೇಲಿನ ಪಾರ್ಶ್ವನಾಥ ಬಸದಿಯ ಬಲಗಡೆ ಬಂಡೆಯ ಮೇಲೆ ಕೆತ್ತಲಾಗಿರುವ ಒಂದನೆಯ ಶಾಸನ ೬-೭ನೆಯ ಶತಮಾನಕ್ಕೆ ಸಂಬಂಧಿಸಿದ್ದು, ಪ್ರಭಾಚಂದ್ರನೆಂಬ ಮುನಿಯು ಸಮಾಧಿ ಹೊಂದಿದುದನ್ನು ಹೇಳುತ್ತಾ ಜೊತೆಗೆ ಭದ್ರಬಾಹು ಚಂದ್ರಗುಪ್ತರಿಗೆ ಸಂಬಂಧಿಸಿದ ಮೇಲಿನ ವಿವರಗಳನ್ನು ಒದಗಿಸುತ್ತದೆ. ಇದರಿಂದ ಕ್ರಿ.ಪೂ.೩ನೆಯ ಶತಮಾನದಲ್ಲಿಯೇ ಕರ್ನಾಟಕದಲ್ಲಿ ಜೈನಧರ್ಮ ಅಸ್ತಿತ್ವದಲ್ಲಿತ್ತೆಂದು ತಿಳಿಯಬಹುದು. ಇದೇ ಭದ್ರಬಾಹು ಮತ್ತು ಚಂದ್ರಗುಪ್ತರಿಗೆ ಸಂಬಂಧಿಸಿದಂತೆ ಅನೇಕ ಶಾಸನಗಳು(EC-II, ೨೫೧, ೧೧ನೇ ಶತಮಾನ, EC-II, ೨೫೪, ೧೩ನೇ ಶತಮಾನ, EC-II ೩೬೪, ಕ್ರಿ.ಶ.೧೪೩೨, EC-II ಕ್ರಿ.ಶ.೧೧೨೯, EC-III, ಶ್ರೀರಂಗಪಟ್ಟಣ ೧೪೭ ಮತ್ತು ೧೪೮, ಕ್ರಿ.ಶ.೯೦೦, EC-II ೨೪, ೭ನೆಯ ಶತಮಾನ) ಮತ್ತು ಜೈನ ಗ್ರಂಥಗಳಾದ ಹರಿಷೇಣ ಕವಿಯ(ಕ್ರಿ.ಶ.೯೮೧) ಸಂಸ್ಕೃತದ ಬೃಹತ್ ಕಥಾಕೋಶ, ರತ್ನನಂದಿಯ ಭದ್ರಬಾಹು ಚರಿತ, ಭ್ರಾಜಿಷ್ಣು ಕವಿಯ ಆರಾಧನ ಕರ್ಣಾಟ ಟೀಕಾ, ಚಿದಾನಂದ ಕವಿಯ ಮುನಿ ವಂಶಾಭ್ಯುದಯ, ದೇವಚಂದ್ರನ ರಾಜಾವಳೀ ಕಥಾಸಾರ ಮುಂತಾದವುಗಳಿಂದಲೂ

[illegible]

[illegible]

[illegible]

[illegible]

ಅನೇಕ ವಿವರಗಳು ದೊರೆಯುತ್ತಿದ್ದು, ಭದ್ರಬಾಹುಗಳು ಕರ್ನಾಟಕಕ್ಕೆ ಮುನಿಸಂಘದೊಡನೆ ಬಂದುದನ್ನು ಸಮರ್ಥಿಸುತ್ತವೆ. ಶ್ರವಣ ಬೆಳಗೊಳದ ಚಿಕ್ಕಬೆಟ್ಟಕ್ಕೆ ಚಂದ್ರಗಿರಿ ಎಂದು ಹೆಸರಿದ್ದು ಅದೇ ಬೆಟ್ಟದ ಮೇಲಿರುವ ಚಂದ್ರಗುಪ್ತ ಬಸದಿ, ಭದ್ರಬಾಹು ಗುಹೆ ಮತ್ತು ಭದ್ರಬಾಹುವಿನ ಪಾದ ಚಿಹ್ನೆಗಳು ಮೇಲಿನ ವಿವರಗಳನ್ನು ಐತಿಹಾಸಿಕ ಸತ್ಯವೆಂದು ಸಮರ್ಥಿಸುತ್ತವೆ.

ಈ ಎಲ್ಲ ಆಧಾರಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೆ ಆರ್.ನರಸಿಂಹಚಾರ್, ಡಾ.ವಿನ್ಸೆಂಟ್ ಸ್ಮಿಥ್ ಮತ್ತು ಎಸ್.ಆರ್.ಶರ್ಮ, ಬಿ.ಎಲ್.ರೈಸ್ ಮುಂತಾದವರು ಮೇಲಿನ ಘಟನೆಗಳನ್ನು ಐತಿಹಾಸಿಕ ಸತ್ಯವೆಂದು ಒಪ್ಪಿದ್ದಾರೆ. ಶ್ರುತಕೇವಲಿ ಭದ್ರಬಾಹು ಚಂದ್ರಗುಪ್ತರು ಮುನಿ ಪರಿವಾರದೊಡನೆ ಕರ್ನಾಟಕಕ್ಕೆ ಕಾಲಿಡುವ ಪೂರ್ವದಲ್ಲಿಯೇ ಜೈನಧರ್ಮ ಕರ್ನಾಟಕದಲ್ಲಿ ನೆಲೆಯೂರಿತ್ತು ಎಂಬುದಕ್ಕೆ ಅನೇಕ ಆಧಾರಗಳಿವೆ. ಕ್ರಿ.ಪೂ.೫-೬ನೆಯ ಶತಮಾನದಲ್ಲಿ ಮಹಾವೀರನ ಸಮವಸರಣವು ಕರ್ನಾಟಕಕ್ಕೆ ಬಂದಿತ್ತೆಂದು ಆಗ ಹೇಮಾಂಗವನ್ನಾಳುತ್ತಿದ್ದ (ಮೈಸೂರು ಪ್ರಾಂತ) ಸತ್ಯಂಧರ ರಾಜನ ಮಗನಾದ ಜೀವಂಧರ ಮಹಾರಾಜನು ಮಹಾವೀರನ ಅನುಯಾಯಿಗಾಗಿ ತಾನು ಜಿನದೀಕ್ಷೆ ವಹಿಸಿ ವೀರಸಂಘದಲ್ಲಿ ಸೇರಿದಂತೆ ಗುಣಭದ್ರಾಚಾರ್ಯರ ಉತ್ತರ ಪುರಾಣದಿಂದಲೂ, ಭಾಸ್ಕರ ಕವಿಯ ಜೀವಂಧರ ಚರಿತೆಯಿಂದಲೂ ತಿಳಿಯುತ್ತದೆ. ಇದೇ ಸಮಯಕ್ಕೆ ಇನ್ನಷ್ಟು ಹಿಂದಕ್ಕೆ ಹೋದರೆ ನೇಮಿನಾಥ ತೀರ್ಥಂಕರರು ಯಾದವರಲ್ಲಿ ಆಂತರಿಕ ಕಲಹ ಉಂಟಾದಾಗ ದ್ವಾರಕೆಯನ್ನು ತ್ಯಜಿಸಿ ಬಂದು ಕೆಲ ಕಾಲ ಕರ್ನಾಟಕದ ಪ್ರಾಂತದಲ್ಲಿ ತಪಸ್ಸು ಮಾಡಿದಂತೆ ಪ್ರತೀತಿ ಇದೆ. ಆದಿ ತೀರ್ಥಕರ ವೃಷಭದೇವನು ಕನ್ನಡ ಜಿಲ್ಲೆಯ ಬೆಟ್ಟಗಳಲ್ಲಿ ವಿಹರಿಸಿದಂತೆ ಕೆಲವು ವಿದ್ವಾಂಸರು ಊಹಿಸಿದ್ದಾರೆ. ಬೌದ್ಧಗ್ರಂಥ ಮಹಾವಂಶವೇ ಮೊದಲಾದ ಗ್ರಂಥಗಳಲ್ಲಿ ಸಿಂಹಳ ದ್ವೀಪದ ವರ್ಣನೆಯಲ್ಲಿ ಜೈನಧರ್ಮದ ಉಲ್ಲೇಖವು ಸ್ಪಷ್ಟವಾಗಿ ಸಿಗುವುದರಿಂದ ಅದರ ಪ್ರಚಾರಕರು ಉತ್ತರ ಭಾರತದಿಂದ ದಕ್ಷಿಣ ಭಾರತದ ಮಾರ್ಗವಾಗಿಯೇ ಪ್ರವಾಸ ಮಾಡಿರಬೇಕು. ಅಲ್ಲದೆ ಅವರು ೪ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಸಿಂಹಳಕ್ಕೆ ಹೋಗಿದ್ದರೆಂಬುದರಲ್ಲಿ ಸಂದೇಹವಿಲ್ಲ. ತಿರುಕ್ಕುರುಳ್, ತೊಲಕಾಪ್ಪಿಯಮ್ ಮತ್ತು ನಾಲಡಿಯಾರ್ ಮುಂತಾದ ತಮಿಳು ಗ್ರಂಥಗಳಲ್ಲಿ ಜೈನತತ್ವ ಗಳನ್ನು ಕುರಿತು ಚರ್ಚಿಸಿರುವುದರಿಂದ ದಕ್ಷಿಣ ಭಾರತದಲ್ಲಿ ಜೈನಧರ್ಮವು ಪ್ರಬಲವಾಗಿರಬೇಕೆಂದು ಊಹಿಸಬಹುದು.[೪] ಅಲ್ಲದೇ ಅಶೋಕನ ಕಾಲಕ್ಕೆ ಮೌರ್ಯ ಸಾಮ್ರಾಜ್ಯವು ದಕ್ಷಿಣದ ಬಹುಭಾಗವನ್ನು ಒಳಗೊಂಡಿದ್ದು, ಕರ್ನಾಟಕವನ್ನು ವ್ಯಾಪಿಸಿತ್ತೆಂದು ಕರ್ನಾಟಕದಲ್ಲಿ ಮಸ್ಕಿ, ಸಿದ್ದಾಪುರ, ಜಟಿಂಗರಾಮೇಶ್ವರ, ಕೊಪ್ಪಳ, ಮೊಳಕಾಲ್ಮೂರಿನಲ್ಲಿ ದೊರೆತ ಶಾಸನಗಳಿಂದ ಊಹಿಸಬಹುದು. ಅಶೋಕನ ಮೊಮ್ಮಗನಾದ ಸಂಪ್ರತಿ ಚಂದ್ರಗುಪ್ತನು ಜೈನ ಧರ್ಮಾನುಯಾಯಿ ಆಗಿದ್ದನು. ಇವನು ಅಶೋಕನಂತೆಯೇ (ಬೌದ್ಧ ಧರ್ಮ ಪ್ರಚಾರಕ್ಕಾಗಿ ದೇಶದ ನಾನಾ ಮೂಲೆಗಳಿಗೂ ಪ್ರಚಾರಕರನ್ನು ಕಳುಹಿಸಿದಂತೆ) ದಕ್ಷಿಣ ಭಾರತಕ್ಕೆ ಜೈನಧರ್ಮ ಪ್ರಚಾರಕರನ್ನು ಕಳುಹಿಸಿದ್ದಾನೆ. ಈ ಎಲ್ಲ ಆಧಾರಗಳನ್ನು ನೋಡಿದಲ್ಲಿ ಭದ್ರಬಾಹು

[illegible]

ಚಂದ್ರಗುಪ್ತರು ದಕ್ಷಿಣಕ್ಕೆ ಬರುವ ಪೂರ್ವದಲ್ಲಿಯೇ ಕರ್ನಾಟಕದಲ್ಲಿ ಜೈನಧರ್ಮ ಪ್ರಚಾರದಲ್ಲಿತ್ತೆಂಬುದು ತಿಳಿಯುತ್ತದೆ.[೫] ಪ್ರಾಚೀನ ಕರ್ನಾಟಕದಲ್ಲಿ ದಿಗಂಬರ ಸಂಪ್ರದಾಯವೇ ಪ್ರಧಾನವಾಗಿದೆ. ಶ್ವೇತಾಂಬರ, ದಿಗಂಬರ ಆಚರಣೆಗಳಲ್ಲಿ ಭೇದಗಳಿದ್ದರೂ ತತ್ತ್ವ ಸಿದ್ಧಾಂತಗಳಲ್ಲಿ ಹೆಚ್ಚಿನ ಭೇದ ಕಂಡುಬರುವುದಿಲ್ಲ.

ಶ್ವೇತಾಂಬರ ಸಂಪ್ರದಾಯ ಉತ್ತರ ಭಾರತದಲ್ಲಿ ಹೆಚ್ಚು ಪ್ರಚಾರದಲ್ಲಿದ್ದರೂ ಶ್ವೇತಾಂಬರರು ಪ್ರಾಚೀನ ಕರ್ನಾಟಕದಲ್ಲಿಯೂ ಇದ್ದರೆಂಬುದಕ್ಕೆ ಶಾಸನಗಳಲ್ಲಿ, ಗ್ರಂಥಗಳಲ್ಲಿ ಆಧಾರಗಳು ದೊರೆಯುತ್ತವೆ. ಸಮ್ಯಕ್ತ ಸಪ್ರತಿ ಗ್ರಂಥಕರ್ತೃ ಹರಿಭದ್ರಸೂರಿಯ ಪ್ರಕಾರ ೧ನೇ ಶತಮಾನದಲ್ಲಿ ರಾಷ್ಟ್ರಕೂಟರ ರಾಜಧಾನಿ ಮಾಳಖೇಡವು ಪ್ರಮುಖ ಜೈನ ಕೇಂದ್ರವಾಗಿದ್ದು, ಶ್ವೇತಾಂಬರ ಆಚಾರ್ಯರಾದ ಪಾದಲಿಪ್ತಾಚಾರ್ಯರು ಈ ಕೇಂದ್ರವನ್ನು ಸಂದರ್ಶಿಸಿದ್ದರು.[೬]

ಇದೇ ಕಾಲದಲ್ಲಿದ್ದ ಶ್ವೇತಾಂಬರ ಸಾಧು ಕಾಲಕಾಚಾರ್ಯರು ಪ್ರತಿಷ್ಠಾನ ಪುರವನ್ನಾಳುತ್ತಿದ್ದ ದಕ್ಷಿಣ ದೊರೆ ಶಾತವಾಹನರ ರಾಜನಲ್ಲಿ ಬಂದಂತೆಯೂ ತಿಳಿದುಬರುತ್ತದೆ. ೫ನೆಯ ಶತಮಾನದ ಕದಂಬರ ತಾಮ್ರಪಟದಲ್ಲಿ ಶ್ವೇತಾಂಬರ ಸಂಗಕ್ಕೆ ದತ್ತಿಕೊಟ್ಟ ಉಲ್ಲೇಖ (ಕದಂಬರ ಮೃಗೇಶವರ್ಮನ ದೇವಗಿರಿಯ ತಾಮ್ರಶಾಸನ) ರಾಜನು ತನ್ನಾಳ್ವಿಕೆಯ ೪ನೆಯ ವರ್ಷದ ೮ನೆಯ ಪಕ್ಷದ ಪೂರ್ಣಿಮ ತಿಥಿಯಂದು ವೈಜಯಂತಿಯಲ್ಲಿದ್ದಾಗ ಕಾಲವಂಗ ಗ್ರಾಮವನ್ನು ಮೂರು ಭಾಗಗಳನ್ನಾಗಿ ಮಾಡಿ ಒಂದು ಭಾಗವನ್ನು ಅರ್ಹಂತರಿಗೆ ಮತ್ತು ಜಿನೇಂದ್ರ ದೇವರಿಗೆ ಇನ್ನೊಂದು ಭಾಗವನ್ನು 'ಶ್ವೇತಪಟ' ಮಹಾ ಸಂಘಕ್ಕೆ ಉಳಿದುದನ್ನು 'ನಿರ್ಗ್ರಂಥ ಮಹಾಶ್ರಮಣ ಸಂಘ'ಕ್ಕೆ ಕೊಟ್ಟನೆಂದು ಹೇಳುತ್ತದೆ.[೭] ರಾಷ್ಟ್ರಕೂಟರ ದೊರೆ ಅಮೋಘವರ್ಷನದೆಂದು ತಿಳಿಯಲಾದ 'ಪ್ರಶ್ನೋತ್ತರ ರತ್ನಮಾಲಿಕ'ದ ಕರ್ತೃ 'ವಿಮಲ'ನು ಶ್ವೇತಾಂಬರರ ಗುರು ಎಂಬುದಾಗಿ ಕೆ.ಬಿ.ಪಾಠಕ್ ಅಭಿಪ್ರಾಯ ಪಟ್ಟಿದ್ದಾರೆ. ಅವನು ಕನ್ನಡಿಗನಾಗಿದ್ದು, ಕವಿರಾಜಮಾರ್ಗಕಾರ ಹೇಳುವ 'ವಿಮಲೋದಯ'ನೇ ವಿಮಲನೆಂಬುದಾಗಿ ಗೋವಿಂದ ಪೈ ಅವರು ಅಭಿಪ್ರಾಯ ಪಟ್ಟಿದ್ದಾರೆ. ವಡ್ಡಾರಾಧನೆಯಲ್ಲಿ ಶ್ವೇತಾಂಬರರ ಉಲ್ಲೇಖವಿದ್ದು, ಅವರನ್ನು ಅರ್ಧಗಪ್ಪಡದ ವರೆಂದು ಕರೆಯಲಾಗಿದೆ. ಇಂದ್ರನಂದಿಯೂ ತನ್ನ ಶ್ರುತಾವತಾರದಲ್ಲಿ ಶ್ವೇತಾಂಬರರನ್ನು ಉಲ್ಲೇಖಿಸಿ ಇದನ್ನು 'ಜೈನಾಭಾಸ' ಎಂದು ಹೇಳಿದ್ದಾನೆ. ಅರ್ಹದ್ದಾಸನೂ (ಕ್ರಿ.ಶ.೧೩೯೮) ಸೇರಿದಂತೆ ೧೪ನೆಯ ಶತಮಾನದ ಶಾಸನವೊಂದು ಶ್ವೇತಾಂಬರ ಪಂಥವನ್ನು 'ವಿಪರೀತ ರೂಪೇ', 'ವಿಸಂಘೆ' ಎಂದು ಕರೆದಿದೆ (EC-II, ೨೫೪, ಕ್ರಿ.ಶ.೧೩೯೮).

ಉಮಾಸ್ವಾತಿಯ ತತ್ತ್ವಾರ್ಥಸೂತ್ರಕ್ಕೆ ವ್ಯಾಖ್ಯಾನವನ್ನು ಬರೆದ ಬಾಲಚಂದ್ರನು (ಕ್ರಿ.ಶ.ಸು.೧೧೫೦) ತನ್ನ ಗ್ರಂಥಾರಂಭದಲ್ಲಿ "ದ್ವೈಪಾಯಕನೆಂಬ ಒಬ್ಬ ಬ್ರಾಹ್ಮಣನು ಸಿತಪಟ ಮಾತಾನುಕೂಲ ಸಕಲ ಶಾಸ್ತ್ರಗಳನ್ನರಿತು ಶ್ವೇತಾಂಬರ ಪಂಥವನಾಗಿದ್ದು, ನಿರ್ಗ್ರಂಥಾಚಾರ್ಯರಾ ಉಮಾಸ್ವಾತಿಗಳಿಂದ ಬೋಧನೆ

ಪಡೆದವನೆಂದು ಹೇಳಿದ್ದಾನೆ. ಕ್ರಿ.ಶ.೧೪೪೦ರಲ್ಲಿದ್ದ ಮಹದೇ ಎಂಬ ಜೈನಾಚಾರ್ಯನು ದೇವಗಿರಿಯ (ದೌಲತಾಬಾದ್) ದಿಗಂಬರರನ್ನು ಶ್ವೇತಾಂಬರರನ್ನಾಗಿ ಪರಿವರ್ತಿಸಿದಂತೆ ತಿಳಿದುಬರುತ್ತದೆ.

ಹೀಗೆ ಕರ್ನಾಟಕದಲ್ಲಿ ಶ್ವೇತಾಂಬರರ ಉಲ್ಲೇಖ ಅಲ್ಲಲ್ಲಿ ಕಂಡುಬಂದರೂ ಕದಂಬರ ತಾಮ್ರಪಟಗಳು ಮಾತ್ರ ಕರ್ನಾಟಕದಲ್ಲಿ ವಾಸಿಸಿದ್ದರೆಂಬುದಕ್ಕೆ ಸ್ಪಷ್ಟ ಉಲ್ಲೇಖಗಳನ್ನು ಒದಗಿಸುತ್ತವೆ. ಅಲ್ಪ ಸಂಖ್ಯೆಯಲ್ಲಿದ್ದ ಈ ಜೈನಪಂಥ ಜೈನರಿಂದಲೇ 'ಜೈನಾಭಾಸ' - 'ವಿಪರೀತ ರೂಪ' ಎಂಬ ಟೀಕೆಗಳಿಗೆ ಗುರಿಯಾಗಿ ವೃದ್ಧಿ ಹೊಂದಲಾರದೆ ಮರೆಯಾಯಿತು. ಈ ಕಾರಣಗಳಿಗಾಗಿ ಈ ಸಂಘದ ಚಟುವಟಿಕೆಗಳ ಕಾರ್ಯವೈಖರಿ ಮತ್ತು ಆಚಾರ್ಯರನ್ನು ಕುರಿತ ಸ್ಪಷ್ಟ ಚಿತ್ರಣ ಕೊಡಲು ಸಾಧ್ಯವಿಲ್ಲವಾಗಿದೆ.[೮]

'ಜೀವದಯೆ'ಯೇ ಜೈನಧರ್ಮದ ಜೀವಾಳವಾಗಿದೆ. ಈ ಕಾರಣಕ್ಕಾಗಿಯೇ ತುಂಬ ಜನಪ್ರಿಯವಾದ ಈ ಧರ್ಮ ಕರ್ನಾಟಕಕ್ಕೆ ಯಾವಾಗ ಆಗಮಿಸಿತೆಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಅದರೆ ಇದು ಕರ್ನಾಟಕಕ್ಕೆ ಬಂದು ಕನ್ನಡಿಗರ ಸಾಹಿತ್ಯ, ಸಂಸ್ಕೃತಿಯನ್ನು ಸಮೃದ್ಧಗೊಳಿದುದರ ಬಗೆಗೆ ಹೆಮ್ಮೆಯಿದೆ. ಇದು ಕರ್ನಾಟಕವನ್ನಾಳಿದ ರಾಜರ, ಸಾಮಂತರ, ಆಶ್ರಯ ಪಡೆದು ಮಾಡಿದ ಕಾರ್ಯ, ರೂಪಿಸಿದ ಮೌಲ್ಯಗಳಿಂದಾಗಿ ೧೦ನೇ ಶತಮಾನದ ಸುಮಾರಿಗೆ ಅತ್ಯುನ್ನತ ಸ್ಥಾನಕ್ಕೇರಿದುದು ಚಾರಿತ್ರಿಕ ಸತ್ಯವಾಗಿದೆ. ಕರ್ನಾಟಕದ ಇತರ ಭಾಗಗಳಂತೆ 'ಗಂಗವಾಡಿ'ಯಲ್ಲೂ ಮೊದಲು ಸರ್ಪಾರಾಧನೆ ಮಾಡುವ ಜನಾಂಗ ನೆಲೆಸಿತ್ತು. ಕಾಲ ಕ್ರಮೇಣ ಜೈನಧರ್ಮ, ಶೈವಧರ್ಮ, ಬೌದ್ಧಧರ್ಮ ಮತ್ತು ವೈಷ್ಣವ ಧರ್ಮಗಳು ಗಂಗವಾಡಿಯನ್ನು ಪ್ರವೇಶಿಸಿದ್ದವು. ಯಜ್ಞ, ಯಾಗಾದಿಗಳಿಗೆ ವಿರುದ್ಧವಾಗಿ ಬೌದ್ಧಧರ್ಮ ಬಲವಾಗಿ ಬೇರೂರಲು ಸಾಧ್ಯವಾಗಿರಲಿಲ್ಲ. ಶಾತವಾಹನರ ಕಾಲದಲ್ಲಿ ಚೇತರಿಸಿಕೊಂಡ ವೈದಿಕ ಧರ್ಮ ಹಾಗೂ ಇತರ ಧರ್ಮಗಳಿಗೆ ಗಂಗ ಅರಸರ ಪ್ರೋತ್ಸಾಹ ದೊರೆಯಿತು.

ಕ್ರಿ.ಶ.ಸು.೭೫೦ರಲ್ಲಿ ಶ್ರೀ ಪುರುಷನು ಗಂಗವಾಡಿಯನ್ನು ಆಳ್ವಿಕೆ ಮಾಡುತ್ತಿರುವಾಗ ಕುಕ್ಕಲನಾಡು ಅವನ ಆಳ್ವಿಕೆಯಲ್ಲಿ ಸೇರಿತ್ತು. ಕುಕ್ಕಲನಾಡಿನ ನಾಯಕರು ಅವನ ಸಾಮಂತರಾಗಿ ಜೈನಧರ್ಮವನ್ನು ಪ್ರೋತ್ಸಾಹಿಸಿದ್ದರು. ಬಹಳ ಹಿಂದಿನಿಂದಲೂ ನಿಂತುಹೋಗಿದ್ದ ಹಬ್ಬಗಳು, ಯಾಗಗಳು, ಶ್ರೀಪುರುಷನ ಕಾಲದಲ್ಲಿ ಮತ್ತೆ ಪ್ರಾರಂಭವಾದವು. ಇವರು ಬ್ರಾಹ್ಮಣರಿಗೆ ಅನೇಕ ಹಳ್ಳಿಗಳನ್ನು ದಾನ-ದತ್ತಿಯಾಗಿ ಬಿಟ್ಟರು. ಅವರು ಬಸದಿಗಳನ್ನು ಕಟ್ಟಿಸಿದುದ್ದಕ್ಕೆ ಈ ನಾಡಿನಲ್ಲಿ (ಕುಕ್ಕಲನಾಡು) ಯಾವುದೇ ಆಧಾರ ಗಳಿಲ್ಲವಾದರೂ, ದಾನದತ್ತಿಗಳನ್ನು ನೀಡುವ ಮೂಲಕ ಜೈನಧರ್ಮವನ್ನು ಪೋಷಿಸಿಕೊಂಡು ಬಂದಿದ್ದಾರೆ. ಗಂಗ ಅರಸರು ಜೈನಧರ್ಮದವರಾಗಿದ್ದಾಗ್ಯೂ ಕೂಡ, ಇತರ ಧರ್ಮಗಳನ್ನು (ಶೈವಧರ್ಮ, ವೈಷ್ಣವಧರ್ಮ) ಪ್ರೋತ್ಸಾಹಿಸುತ್ತಿದ್ದರು.

ಚೋಳರ ಕಾಲದ ಕುಕ್ಕಲನಾಡಿನಲ್ಲಿ ಜೈನಧರ್ಮವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತ್ತಾದರೂ, ಅದರ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ. ಹೊಯ್ಸಳರ ಕಾಲದ ಕುಕ್ಕಲನಾಡಿನಲ್ಲಿ ಜೈನಧರ್ಮವು

ಅಸ್ತಿತ್ವದಲ್ಲಿತ್ತು. ಇಲ್ಲಿನ ನಾಯಕರು ಎಲ್ಲ ಧರ್ಮಗಳಿಗೂ ಪ್ರೋತ್ಸಾಹ ಕೊಡುತ್ತಿದ್ದರು. ನಾಯಕರ ವೈಯಕ್ತಿಕ ಒಲವು ಯಾವುದೇ ಒಂದು ಪಂಥದ ಕಡೆಗೆ ತಿರುಗಿದ್ದರೂ ಅನ್ಯಮತದ ಬಗ್ಗೆ ಅವರು ಅಸಹನೆ ತೋರಿಸಿದ ನಿದರ್ಶನಗಳಿಲ್ಲ. ಇವರ ಕಾಲದಲ್ಲಿ ದೇವಾಲಯಗಳನ್ನು, ಬಸದಿಗಳನ್ನು ಕಟ್ಟಿಸುವುದರಲ್ಲೂ, ದೇವರು ಹಾಗೂ ಬ್ರಾಹ್ಮಣರಿಗಾಗಿ ದಾನ, ಧರ್ಮಗಳನ್ನು ಮಾಡುವುದುರಲ್ಲಿ ಅರಸನಿಂದ ಹಿಡಿದು ಕೆಳವರ್ಗದ ಜನರವರೆಗೆ ಒಬ್ಬರನೊಬ್ಬರು ಮೀರಿಸುತ್ತಿದ್ದರು. ಆದರೆ ಈ ನಾಡಿನಲ್ಲಿ ಬಸದಿಗಳನ್ನು ಕಟ್ಟಿಸಿದ ಬಗ್ಗೆ ದಾಖಲೆಗಳಿಲ್ಲ.

ವಿಜಯನಗರದ ಅರಸರು ವೈದಿಕ ಮತಕ್ಕೆ ಸೇರಿದವರಾಗಿದ್ದರೂ ಅವರೆಲ್ಲರೂ ಪರಧರ್ಮ ಸಹಿಷ್ಣುಗಳಾಗಿದ್ದರು. ವಿಜಯನಗರದ ಅರಸರ ಸಾಮಂತಾಧಿ ಪತಿಗಳಾದ ಕುಕ್ಕಲನಾಡಿನ ಮಯಿಲೆಯ ನಾಯಕ, ಹಯಕಸ, ಯೋಜಯನಾಯಕ, ಸಂತೆಯನಾಯಕ ಮುಂತಾದವರು ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರು. ಇವರು ಜೈನ ಆಚಾರ್ಯರಾದ ಧರ್ಮಭೂಷಣನ ಬಗ್ಗೆ ಭಕ್ತಿಯುಳ್ಳವರಾಗಿದ್ದರು. ಜೈನರಿಗೆ ದಾನ-ದತ್ತಿಗಳನ್ನು ನೀಡುತ್ತಿದ್ದರು. ಜಿನಾಲಯಗಳನ್ನು ನಿರ್ಮಿಸಿದ್ದರು. ಆದರೆ ಇದಕ್ಕೆ ನಿರ್ದಿಷ್ಟ ಆಧಾರಗಳು ದೊರೆಯುವುದಿಲ್ಲ. ಯಲಹಂಕ ನಾಡ ಪ್ರಭುಗಳು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಲು ಬರುವಷ್ಟರಲ್ಲಿ (ಕ್ರಿ.ಶ.೧೫೮೫), ಜೈನಧರ್ಮವು ತನ್ನ ಪ್ರಾಬಲ್ಯತೆಯನ್ನು ಕಳೆದುಕೊಂಡಿತ್ತು. ವೀರಶೈವ ಮತ್ತು ಹಿಂದೂಧರ್ಮಗಳು ಹೆಚ್ಚು ಪ್ರಾಬಲ್ಯತೆಯಿಂದ ಕೂಡಿದ್ದವು. ಕುಕ್ಕಲನಾಡಿನ ಪ್ರದೇಶದ ಮಾಗಡಿ ತಾಲ್ಲೂಕಿನ ಹೂಜಿಗೆರೆ ಗ್ರಾಮದ ಶಾಸನದಲ್ಲಿ ಜೈನಗುರು ಚಂದ್ರಸೇನ ಸೂರಿಗಳ ಬಗ್ಗೆ

> ಚಂದ್ರಸೇನ...ರಿ
> ಗಳಗುಡ್ಡ ಮಾಯಪನ...
> ನಿಸಿದ್ಧಿ
> ಚಂದ್ರಸೇನ ಸೂರಿಗಳಗು
> ಡ್ಡ....ನಿಸಿದ್ಧಿ[೧೦]

ಎಂಬ ಉಲ್ಲೇಖವಿದೆ. ಇದರಿಂದ ಈ ಪ್ರದೇಶದಲ್ಲಿ ಜೈನಧರ್ಮವು ಇತ್ತೆಂದು ತಿಳಿದುಬರುತ್ತದೆ.

೫.೩. ಶೈವಮತ(ಶೈವಧರ್ಮ)

ಶೈವಧರ್ಮವು ಪ್ರಾಚೀನ ಕಾಲದಿಂದಲೂ ಪ್ರಬಲ ಧರ್ಮವಾಗಿಯೇ ಇರುವುದು ಶಾಸನ ಮತ್ತು ಸಾಹಿತ್ಯ ಕೃತಿಗಳಿಂದ ತಿಳಿದಿರುವ ವಿಚಾರ. ಸಿಂಧೂ ನದಿ ಬಯಲಿನ ಸೈಂಧವ ಸಂಸ್ಕೃತಿ, ವೇದಗಳು, ಪುರಾಣಗಳು ಶಿವನನ್ನು ಪರಿಚಯಿಸಿವೆ. ಶಿವಪರವಾದ ಶೈವಧರ್ಮವೂ ವೇದ-ಪುರಾಣಗಳಷ್ಟೇ ಪ್ರಾಚೀನವಾದುದು. ಶೈವಧರ್ಮದಲ್ಲಿ ಪಾಶುಪತ, ಕಾಳಾಮುಖ, ಕಾಪಾಲಿಕ ಇತ್ಯಾದಿ ಪಂಥಗಳಿದ್ದವು.

ಕಾಳಾಮುಖದಲ್ಲಿ ಶಕ್ತಿಪರ್ಷೆ ಮತ್ತು ಸಿಂಹಪರ್ಷೆಗಳೆಂಬ ಎರಡು ಪಂಗಡಗಳಿದ್ದವು. ಇವುಗಳಲ್ಲಿ ಪ್ರತ್ಯೇಕ ಶಾಖೆಗಳಿದ್ದವು. ಅವೇ ಆಮ್ನಾಯ ಅಥವಾ ಆವಳಿಗಳು. ಅವುಗಳಲ್ಲಿ ಮುಖ್ಯವಾದವು ಪರ್ವತಾವಳಿ ಮತ್ತು ಭುಜಂಗಾವಳಿ. ಇವುಗಳಲ್ಲಿ 'ಇಟ್ಟಿಗೆಯ ಸಂತತಿ' ಮತ್ತು 'ಮೂವರ ಕೋಣೆಯ ಸಂತತಿ' ಮುಂತಾದ ಉಪಶಾಖೆಗಳಿದ್ದವು.

ವಿವೇಕಚಿಂತಾಮಣಿಯಲ್ಲಿ ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅವಾಂತರಶೈವ, ಪ್ರವರ ಶೈವ, ಅಂತರಶೈವ, ಎಂಬ ಏಳು ವಿಧದ ಶೈವರನ್ನು ಉಲ್ಲೇಖಿಸಿದೆ. ಆರಾಧಿಸುವ ಮತ್ತು ಪೂಜಿಸುವ ದೇವತೆಯರನ್ನು ಲಕ್ಷ್ಯದಲ್ಲಿಟ್ಟುಕೊಂಡು ಶೈವರನ್ನು ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತ ಎಂದು ನಾಲ್ಕು ಭಾಗ ಮಾಡಲಾಗಿದೆ. ಶಕ್ತಿಪರವಾದುದು ವಾಮ, ಭೈರವ ಪರವಾದುದು ದಕ್ಷಿಣ, ಸಪ್ತಮಾತೃಕಾ ಪರವಾದುದು ಮಿಶ್ರ ಮತ್ತು ಶಿವಪರವಾದುದು ಸಿದ್ಧಾಂತ. ಆಚರಣೆಗಳ ಪ್ರಕಾರ ಸಾಮಾನ್ಯ ಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ ಎಂಬ ನಾಲ್ಕು ವಿಧಗಳುಂಟು.

'ದೀಕ್ಷೆ ಪಡೆದ ವ್ಯಕ್ತಿ, ಪ್ರಧಾನ ದೇವತೆ, ಆಚರಣೆ, ಈ ಮೂರು ಅಂಶಗಳ ಆಧಾರದಿಂದ ಶೈವಭೇದಗಳನ್ನೂ ಗುರುತಿಸಬೇಕಾಗುತ್ತದೆ. ಪ್ರಧಾನವಾಗಿ ಪರಿಗಣಿಸಿರುವ ಲಾಕುಳ, ಪಾಶುಪತ, ಕಾಳಾಮುಖ, ಕಾಪಾಲಿಕ ಶೈವ ಪಂಥಗಳು. ನಿರ್ದಿಷ್ಟ ತತ್ವ ಮತ್ತು ಸಿದ್ಧಾಂತಗಳನ್ನು ಅವಲಂಬಿಸಿವೆ. ಸಿದ್ಧಾಂತಕ್ಕೆ ಅವರ ಆಚರಣೆ ಇರುತ್ತದೆ. ಈ ಶೈವಪಂಥಗಳ ಮೂಲನೆಲೆ ಯಾವುದು? ಅವರು ಕರ್ನಾಟಕದ ಮೂಲ ನಿವಾಸಿಗಳೇ? ಬೇರೆಡೆಯಿಂದ ಬಂದು ಇಲ್ಲಿ ನೆಲೆಸಿದವರೆ? ಇಂತಹ ಪ್ರಶ್ನೆಗಳಿಗೆ ಹಲವು ವಿದ್ವಾಂಸರು ಉತ್ತರಿಸುವ ಪ್ರಯತ್ನ ಮಾಡಿದ್ದಾರೆ.

"ಕಾಳಾಮುಖರು ಕಾಶ್ಮೀರದಿಂದ ಕರ್ನಾಟಕಕ್ಕೆ ಬಂದವರು. ಇವರು ಲಗುಡ ಧಾರಣರು ಅಥವಾ ದಂಡಧಾರಿಗಳು ಎಂದು ಶ್ರೀಭಾಷ್ಯಾದಲ್ಲಿ ಹೇಳಿದೆ. ಇದು ಅವರ ವೈಶಿಷ್ಟ್ಯವಾಗಿದೆ ಎಂಬ ಡಾ.ಎಂ.ಎಚ್ .ಕೃಷ್ಣ ಅವರ ಅಭಿಪ್ರಾಯವನ್ನು, ಶ್ರೀ ಕಪಟರಾಳ ಕೃಷ್ಣರಾಯರು ಹೀಗೆ ವಿಶ್ಲೇಷಿಸುತ್ತಾ ಎಲ್ಲಾ ಕಾಳಾಮುಖರು ಕಾಶ್ಮೀರದಿಂದ ಕರ್ನಾಟಕಕ್ಕೆ ಬಂದವರೆಂದು ಊಹಿಸುವುದು ಸರಿಯಲ್ಲ, ಯಾಕೆಂದರೆ ಕಾಳಾಮುಖರು ಬೇರೆ, ಬೇರೆ, ಸಂತಾನದವರೆಂದು ಅನೇಕ ಗುರು ಪರಂಪರೆಯ ಪೀಳಿಗೆಗಳನ್ನು ಹೇಳಲಾಗಿದೆ ಎಂದು ಹೇಳಿದ್ದಾರೆ.[೧೧]

ಡೇವಿಡ್ ಎನ್. ಲೊರೆಸ್ ಜೆನ್ ಅವರು ಇದೇ ವಿಷಯವಾಗಿ ಮತ್ತಷ್ಟು ವಿವರವಾಗಿ ಚರ್ಚಿಸಿ, 'ಕಾಳಾಮುಖರು ಕಾಶ್ಮಿರದಿಂದ ಬಂದು ಇಲ್ಲಿ ನೆಲೆ ನಿಂತವರು' ಎಂದು ಒಪ್ಪಿದ್ದಾರೆ.[೧೨] ಆದರೆ ಈ ವಲಸೆಗಳಿಗೆ ಕಾರಣಗಳೇನು? ಎಂಬುದು ಸ್ಪಷ್ಟವಾಗಿಲ್ಲ ಎಂದು ಅವರೇ ತಿಳಿಸಿದರೂ, ಧರ್ಮ ಪ್ರಚಾರ, ಕೈ ತಪ್ಪಿದ ರಾಜಾಶ್ರಯ, ಅಸ್ಥಿರ ರಾಜಕೀಯ ಪರಿಸ್ಥಿತಿ, ಕ್ಷಾಮ-ಈ ಯಾವುದೇ ಒಂದು ಅಥವಾ ಹಲವು

ಕಾರಣಗಳಿಂದ ಲಾಕುಳ ಶೈವ/ಕಾಳಾಮುಖರು ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದಿರಬೇಕು. ಮುಸಲ್ಮಾನರ ದಾಳಿಯು ಕಾಳಾಮುಖರು ದಕ್ಷಿಣದ ಕಡೆಗೆ ಬರಲು ಕಾರಣವಾಗಿರಬಹುದು. ಕಾಶ್ಮೀರದಿಂದ ಬಹಳ ಹಿಂದಿನ ಕಾಲಕ್ಕೆ ದಕ್ಷಿಣದ ಕಡೆಗೆ ವಲಸೆ ಬಂದ ಕಾಳಾಮುಖರು ದಕ್ಷಿಣದಲ್ಲಿ ನೆಲೆಗೊಂಡರು. ಅದರಲ್ಲೂ ವಿಶೇಷವಾಗಿ ಈಗಿನ ಆಂಧ್ರ, ತಮಿಳುನಾಡು, ಕರ್ನಾಟಕಗಳು ಅವರ ಮುಖ್ಯ ನೆಲೆಗಳಾದವು.

ಗಂಗಾವಾಡಿ ಕುಕ್ಕಲನಾಡಿನ ಪ್ರದೇಶದಲ್ಲಿ ಶೈವಧರ್ಮ ರಾಜ ಮನ್ನಣೆ ಪಡೆದ ಧರ್ಮವಾಗಿತ್ತು. ಶ್ರೀಪುರುಷನ ಕಾಲದ ಕುಕ್ಕಲನಾಡಿನ ನಾಯಕರು ಶೈವಧರ್ಮದ ಆರಾಧಕರಾಗಿದ್ದರು. ಇವರ ಕಾಲದಲ್ಲಿ ಶೈವ ಧರ್ಮದಲ್ಲಿ ಅನೇಕ ಪಂಗಡಗಳಿದ್ದವು. ಶಿವಭಕ್ತರನ್ನು ಪಾಶುಪತ ಅಥವಾ ಮಹೇಶ್ವರರೆಂದು ಕರೆಯುತ್ತಿದ್ದರು.

ಶೈವಧರ್ಮ ಮತ್ತು ಜೈನಧರ್ಮಗಳ ನಡುವೆ ಒಂದು ಬಗೆಯ ಸ್ಪರ್ಧೆಯುಂಟಾಗಿ ಜೈನ ಆಚಾರ್ಯರು ಗಂಗವಾಡಿಯ ಅರಸರ ಒಲವು ಜೈನ ಧರ್ಮದತ್ತ ಹರಿಯುವಂತೆ ಮಾಡಿದರು. ಇದು ಸಹಜವಾಗಿ ಗಂಗರ ಸಾಮಂತರಾದ ಕುಕ್ಕಲನಾಡಿನ ನಾಯಕರಲ್ಲೂ ಜೈನಧರ್ಮದ ಪ್ರಭಾವವೂ ಹೆಚ್ಚಾಗುವಂತೆ ಮಾಡಿತು. ರಾಜೇಂದ್ರಚೋಳನ ಕಾಲದಲ್ಲಿ ಶೈವಧರ್ಮ ಹಾಗೂ ಇತರ ಧರ್ಮಗಳೊಂದಿಗಿನ ಸಹಿಷ್ಣತೆಯ ಅಂಶವನ್ನು ಕಾಣುತ್ತೇವೆ. ಆದರೆ ಕುಲೋತುಂಗನ ಕಾಲದಲ್ಲಿ ಶೈವಧರ್ಮದಲ್ಲಿ ಅಸಹಿಷ್ಣತೆಯ ಅಂಶವನ್ನು ಕಾಣುತ್ತೇವೆ. ಕ್ರಿ.ಶ.೧೧೬೦ರ ಶಿಲಾಶಾಸನ (ತಂಜಾವೂರು ಜಿಲ್ಲೆ) ಶೈವರು ಮತ್ತು ವೈಷ್ಣವರು ಒಟ್ಟಿಗೆ ಸೇರುವುದನ್ನು ಮಹಾಸಭೆ ನಿಷೇಧಿಸಿತ್ತು ಎಂದು ಉಲ್ಲೇಖಿಸಿದೆ.

ಇದೇ ಕಾಲಾವಧಿಯಲ್ಲಿ ಕಾಳಾಮುಖ, ಕಾಪಾಲಿಕ ಮತ್ತು ಪಾಶುಪತ ಶೈವ ಪಂಥಗಳು ಹುಟ್ಟಿಕೊಂಡವು. ಈ ಪಂಥಗಳ ಅನುಯಾಯಿಗಳಲ್ಲಿ ಸಾಕಷ್ಟು ಮಂದಿ ಸಹಜ ಜೀವನವನ್ನು ಸಾಗಿಸುವುದರ ಮೂಲಕ ಅಲ್ಪಕಾಲ ಮಾತ್ರ ಧಾರ್ಮಿಕ ಕ್ರಿಯಾವಿಧಿಗಳಲ್ಲಿ ನಿರತರಾಗುತ್ತಿದ್ದರು. ಆದರೆ ಕೆಲವರು ಮಾತ್ರ ಉದ್ದೇಶಪೂರ್ವಕವಾಗಿ ಸಮಾಜ ವಿರೋಧಿ ಕಾರ್ಯಗಳಲ್ಲಿ ನಿರತರಾಗುತ್ತಿದ್ದರು. ಇದರಿಂದಾಗಿ ಇಲ್ಲಿ ಮತಾಂಧತೆಯ ವಾತಾವರಣ ಸೃಷ್ಟಿಯಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಸಮಾಜದ ಶುದ್ಧೀಕರಣ ಕಾರ್ಯಕ್ಕಾಗಿ ಶ್ರೀ ಬಸವೇಶ್ವರರ ನೇತೃತ್ವದಲ್ಲಿ ವೀರಶೈವ ಪಂಥ ಜನ್ಮತಳೆಯಿತು.

ಕುಕ್ಕಲನಾಡಿನಲ್ಲಿ ಶಾಸನೋಕ್ತವಾಗಿರುವ ಶೈವ ದೇವಾಲಯಗಳಲ್ಲಿ ಐಗಂಡಪುರದ 'ಐವರಕಂಡೀಶ್ವರ ಗುಡಿ' ಗಮನಾರ್ಹವಾದುದಾಗಿದೆ. ಐವರಗಂಡ ಎಂದರೆ ಪಾಂಡವರು ಐದು ಜನರ ಹೆಸರಿನಲ್ಲಿ ಕಟ್ಟಿಸಿರುವ ದೇಗುಲ ಇದಾಗಿದೆ. ಈ ದೇಗುಲದ ಪ್ರಸಿದ್ಧಿಯಿಂದಾಗಿ ಈ ಊರಿಗಿದ್ದ 'ಹಿರಿಯಮತ್ತಕೂರು' ಎಂಬ ಪೂರ್ವನಾಮ ಮರೆಯಾಗಿ ಐವರಕಂಡಪುರ ಅಥವಾ ಐಗಂಡಪುರ ಎಂಬ ಹೆಸರೇ ಪ್ರಚಲಿತವಾಗಿದೆ.

ಧರ್ಮೇಶ್ವರ ಎಂಬ ಹೆಸರಿನ ಮತ್ತೊಂದು ದೊಡ್ಡ ದೇವಾಲಯದ ಐಗಂಡಪುರದಲ್ಲಿದೆ. ಈ ದೇವಾಲಯದ ಆವರಣದಲ್ಲಿ ನಕುಲ, ಸಹದೇವ ಮತ್ತು ಕುಂತಿಯರ ಹೆಸರಿನಲ್ಲಿ ಲಿಂಗಗಳನ್ನೊಳಗೊಂಡ

ಸಣ್ಣಗುಡಿಗಳಿವೆ. ಈ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಈ ದೇವರನ್ನು ಶಾಸನದಲ್ಲಿ 'ಸಿದ್ದೇಶ್ವರ'ನೆಂದು ಕರೆದಿದೆ.[೧೩] ಅಲ್ಲೇ ಕುಂತಿ ಲಿಂಗದ ಬಳಿ ದೊರೆತ ಹೊಯ್ಸಳ ನರಸಿಂಹನ ಶಾಸನದಲ್ಲಿ ಈ ದೇವರನ್ನು 'ಅಯ್ಯರಗಂಡದೇವರು' ಎಂದು ಕರೆದಿದೆ.[೧೪]

ಕ್ರಿ.ಶ.೧೦೩೩ಕ್ಕೆ ಸೇರಿದ ರಾಜೇಂದ್ರಚೋಳನ ಕಾಲದ ಶಾಸನವೊಂದು ಐಗಂಡಪುರದ ಇಂದಿನ ಗೋಪಾಲ ಕೃಷ್ಣಸ್ವಾಮಿ ದೇವಾಲಯದ ತಳಪಾದಿಯ ಮೇಲೆ ಕಂಡುಬಂದಿದ್ದು, (ಕೋನೇರಿಯನ್ ಮೈಕೊಂಡಾನ್ ರಾಜಮಾಣಿಕ್ಯ ಮೂವೇನ್ದ ವೇಳಾನ್ಬ್ ದೇವರಿಗೆ) ದಂಡನಾಯಕ ವಾಮನಯ್ಯನು ಈ ದೇವಾಲಯವನ್ನು ಕಟ್ಟಿಸಿ ದತ್ತಿ ಬಿಟ್ಟಿದ್ದಾನೆ. ಇದು ಸಹ ಶೈವದೇವಾಲಯವಾಗಿದೆ.[೧೫]

ಈ ನಾಡಿನ ಮತ್ತೊಂದು ಪ್ರಮುಖ ಶೈವ ದೇವಾಲಯಗಳೆಂದರೆ ಕ್ರಿ.ಶ.೧೧೧೦ರ ಕುಲೋತ್ತುಂಗ ಚೋಳನ ಕಾಲದ ಮುಕ್ತಿನಾಥ ದೇವಾಲಯ. ಇವನು ಈ ದೇವಾಲಯದ ಅಭಿವೃದ್ಧಿಗೆ ಶ್ರಮಿಸಿದ್ದಾನೆ. ಈ ದೇವಾಲಯವು ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲ ಗ್ರಾಮದಲ್ಲಿದೆ. ಇಲ್ಲಿನ ಶಾಸನವು ಕುಲೋತುಂಗ ಚೋಳನು ಮುಕ್ತಿನಾಥ ದೇವರ ಸೇವಾಕಾರ್ಯಗಳಿಗೆ ಬಿನ್ನಮಂಗಲ ಮತ್ತು ನಕ್ಕೂರು ಗ್ರಾಮಗಳನ್ನು ದತ್ತಿ ಬಿಟ್ಟಿರುವ ಬಗ್ಗೆ ವಿವರಿಸುತ್ತದೆ.[೧೬]

ಕ್ರಿ.ಶ.೧೫೩೩ರ ಹೆಸರುಘಟ್ಟದ ಶಾಸನದಲ್ಲಿ ಚಂದ್ರಮೌಳೇಶ್ವರ ದೇವರ ಪ್ರಸ್ತಾಪವಿದೆ. ಕಾಶಿಯಿಂದ ಶಿವಲಿಂಗವನ್ನು ತಂದು ಹೆಸರುಘಟ್ಟದಲ್ಲಿ ದೇವಾಲಯ ಕಟ್ಟಿಸಿ ಅಲ್ಲಿ ಈ ಶಿವಲಿಂಗ ಪ್ರತಿಷ್ಠಾಪಿಸಿ ಅದಕ್ಕೆ ಹೊಲ-ಗದ್ದೆ ತೋಟಗಳನ್ನು ಊರ ಜನರು ದಾನ-ದತ್ತಿ ಬಿಟ್ಟ ಉಲ್ಲೇಖವಿದೆ.[೧೭] ಇದು ಶೈವಧರ್ಮಕ್ಕೆ ಉದಾಹರಣೆಯಾಗಿದೆ.

ಮಾಗಡಿಯ ಸೋಮೇಶ್ವರ ದೇವಾಲಯಕ್ಕೆ ದತ್ತಿನೀಡಿದ ಬಗ್ಗೆ ಅಲ್ಲಿನ ತಾಮ್ರಶಾಸನದಿಂದ ತಿಳಿದುಬರುತ್ತದೆ.[೧೮] ಬೆಂಗಳೂರು ತಾಲ್ಲೂಕಿನ ದೊಡ್ಡ ಬೊಮ್ಮಸಂದ್ರದ ಗೋಪಾಲಸ್ವಾಮಿ ದೇವಾಲಯಕ್ಕೆ ಅಗ್ರಹಾರವನ್ನು ದಾನಬಿಟ್ಟ ಉಲ್ಲೇಖವಿದೆ.[೧೯] ಈ ಮೇಲಿನ ವಿವರಗಳಿಂದ ಕುಕ್ಕಲನಾಡಿನಲ್ಲಿ ಶೈವಮತ ಇತ್ತೆಂದೂ ನಿರ್ಧರಿಸಬಹುದಾಗಿದೆ.

೫.೪. ನಾಥಪಂಥ

ಕರ್ನಾಟಕದ ಮಟ್ಟಿಗೆ ನಾಥಪಂಥವು ಉತ್ತರಭಾರತದಿಂದ ಬಂದು ಇಲ್ಲಿ ನೆಲೆಯೂರುವಾಗ, ಬೇರೆ, ಬೇರೆ ಪ್ರಭುತ್ವಗಳಿಂದ ಉಪಚಾರ ಪಡೆದಿದೆ. ಅಂದರೆ ಜೈನ, ಬೌದ್ಧ, ಕಾಳಾಮುಖ, ಶೈವ, ವೀರಶೈವ, ವೈಷ್ಣವ, ಮತ ಪಂಥಗಳಿಗೆ ದೊಡ್ಡ ರಾಜಕೀ ಪ್ರಭುತ್ವಗಳ ಬೆಂಬಲ ಸಿಕ್ಕಂತೆ ನಾಥರಿಗೆ ಸಿಕ್ಕಿರುವುದು ಕಾಣುವುದಿಲ್ಲ. ಮಾಗಡಿ, ದೇವನಹಳ್ಳಿ, ಬೆಂಗಳೂರು, ಚಿಕ್ಕಬಳ್ಳಾಪುರ ಪಾಳೇಗಾರರು, ಮೈಸೂರು ಅರಸರು ಮುಂತಾದ ಸ್ಥಳೀಯ ಅರಸರಿಂದ, ನಾಯಕರಿಂದ ನಾಥರಿಗೆ ಉತ್ತೇಜನ ಸಿಕ್ಕಿತು.

ಕರ್ನಾಟಕದ ಆಳುವ ದೊರೆಗಳಿಂದ ಬೆಂಬಲ ಪಡೆದ ಕಾಪಾಲಿಕರಿಗೆ ತಮಿಳುನಾಡಿನ ರಾಜರು ಕೊಟ್ಟ ಬೆಂಬಲ, ಉನ್ನತವಾದುದು. ಪ್ರಸಿದ್ಧ ಕಾಪಾಲಿಕ ಕೇಂದ್ರವೂ ಭೈರವರಾಧನೆಯ ಜಾಗವೂ ಆಗಿದ್ದ ಚುಂಚನಗಿರಿಗೆ ಚೋಳರು ಪ್ರೋತ್ಸಾಹ ಕೊಟ್ಟರೆಂದು ತಿಳಿದುಬರುತ್ತದೆ. ಈಗಲೂ, ಚುಂಚನಗಿರಿ ಸಾಹಿತ್ಯದಲ್ಲಿ ಚೋಳರ ಪ್ರಸ್ತಾಪಬರುತ್ತದೆ. ಬೆಟ್ಟದಲ್ಲಿ ಚೋಳ ಕಂಬವಿದೆ. ಚುಂಚನಗಿರಿಗೆ ಚುಂಚುನಕೋಟೆ ಎಂಬ ಹೆಸರಿದೆ. ಚೋಳರು ಕಾಪಾಲಿಕರಿಗೆ ದೊಡ್ಡ ಮಟ್ಟದ ಬೆಂಬಲ ನೀಡಿದ್ದು ಸೀತಿಬೆಟ್ಟದ ಭೈರವನಿಗೆ. ಇಲ್ಲಿ ಸಿಗುವ ೬೦ಕ್ಕೂ ಹೆಚ್ಚು ತಮಿಳು ಶಾಸನಗಳು (ಕ್ರಿ.ಶ.೧೧ ರಿಂದ ೧೬ನೇ ಶತಮಾನ) ಭೈರವಾರಾಧನೆಗೆ ರಾಜಪೋಷಣೆಯ ಪರಿಯನ್ನು ತಿಳಿಸುತ್ತವೆ. ಭೈರವನನ್ನು ಈ ಶಾಸನಗಳಲ್ಲಿ ತ್ರಿಭುವನ ವಿಡಂಗ, ಕ್ಷೇತ್ರಪಾಲ ಉಡ್ಯೆಯ, ಕ್ಷೇತ್ರಪಾಲ ಪಿಳ್ಳೆಯಾರ್, ಭೈರವನಾಯಾರ್ ಎಂದು ಕರೆಯಲಾಗಿದೆ. ಈ ಶಾಸನಗಳನ್ನು ಚೋಳರಲ್ಲದೆ, ಅವರಿಗಿಂತ ಹಿಂದೆ ಇದ್ದ ಗಂಗರು, ನಂತರದ ಹೊಯ್ಸಳರು ಹಾಕಿಸಿದ್ದಾರೆ. ಇವುಗಳಲ್ಲಿ ಕೆಲವು ಭೈರವ ದೇವರಿಗೆ ದತ್ತಿ ಬಿಟ್ಟ ಶಾಸನಗಳು, ಕೆಲವು ರಾಜರಿಗೆ ಜಯ ಸಿಗಲೆಂದು ದಾನಕೊಟ್ಟ ಹರಕೆ ಶಾಸನಗಳು.[೨೦] ಇಲ್ಲಿನ ಬೆಟ್ಟದಲ್ಲಿ ಸೀತೆಯ ಭೈರವನಗುಡಿ, ಜತೆಯಲ್ಲಿ ಕಾಪಾಲಿಕ ಮಠಗಳು ಇರಬಹುದು. ನಂತರದ ಕಾಲದಲ್ಲಿ ಇಲ್ಲಿ ನಾಥರು ಬಂದು ನೆಲೆಸಿರಬಹುದು. ನೈಸರ್ಗಿಕ ಗುಹೆಗಳನ್ನು ಒಳಗೊಂಡಿರುವ ಸೀತಿಯಬೆಟ್ಟವು ಜನವಸತಿಯ ಹಳ್ಳಿಗಳಿಂದ ಸುತ್ತವರಿದಿದೆ. ಬೆಟ್ಟದ ಕೆಳಗೆ ಜೋಗಿಲಿಂಗೇಶ್ವರ ಗುಡಿ ಇದೆ. ಹೆಸರೇ ಹೇಳುವಂತೆ ಇದು ನಾಥಜೋಗಿಗಳ ತಂಗುದಾಣವೂ ಆಗಿತ್ತು. ಬೆಟ್ಟದ ಮೇಲೆ ಸಿಕ್ಕಿರುವ ಯೋಗಿಯ ಶಿಲ್ಪವೂ ಇದಕ್ಕೆ ಪೂರಕವಾಗಿದೆ. ದೊಡ್ಡ ಕರ್ಣಕುಂಡಲಗಳನ್ನು ಧರಿಸಿ, ಧ್ಯಾನಮುದ್ರೆಯಲ್ಲಿ ಕುಳಿತಿರುವ ಈ ಶಿಲ್ಪವು ಅಪೂರ್ವವಾಗಿದೆ. ಈ ಯೋಗಿಯು ನಾಥನೋ, ಕಾಪಾಲಿಕನೋ ಹೇಳುವುದು ಕಷ್ಟ. ಸಂಪತ್ತಿನಿಂದ ಕೂಡಿದ ಈ ಭೈರವಸ್ಥಾನದಲ್ಲಿ ಯೋಗಿಗಳಾದ ನಾಥರು ಇದ್ದಿರಬಹುದು. ಇವರು ರಾಜಾಶ್ರಯದಲ್ಲಿ ಬದುಕುವುದನ್ನು ರೂಢಿಸಿಕೊಂಡಿದ್ದರು ಎಂದು ತೋರುತ್ತದೆ. ಮುಂದೆ ಈ ಭಾಗದಲ್ಲಿ ಬಳ್ಳಾಪುರ ಪಾಳೇಗಾರರು ಈ ಬೆಟ್ಟದ ಗುಡಿ ಮತ್ತು ಸೇವೆಯನ್ನು ಮುಂದುವರಿಸಿದರು.[೨೧]

ಹೊಯ್ಸಳರು ಬಿಟ್ಟಿದೇವ ಅಥವಾ ವಿಷ್ಣುವರ್ಧನನ ಕಾಲಕ್ಕೆ ರಾಮಾನುಜಯ ಪ್ರಭಾವದಿಂದ, ಶ್ರೀ ವೈಷ್ಣವರಾದರೂ ಅನೇಕ ದೇವರುಗಳಿಗೆ ಬಿಟ್ಟಂತೆ ಭೈರವ ದೇವರಿಗೂ ದತ್ತಿಬಿಟ್ಟಿದ್ದರು. ೧೨೬೯ರ ಹೊಯ್ಸಳ ಶಾಸನವು ವೀರನರಸಿಂಹರಾಜನು ಭೈರವ ದೇವರಿಗೆ ದತ್ತಿಬಿಟ್ಟ ದಾಖಲೆ ಇದೆ. ಆದರೆ ರಾಜ್ಯದ ಎಲ್ಲ ಪ್ರಮುಖ ಸಮುದಾಯಗಳ ಧಾರ್ಮಿಕ ಕೇಂದ್ರಗಳಿಗೆ ದತ್ತಿಬಿಡುವುದು ಕೂಡ ಒಂದು ಸಾಮಾನ್ಯ ರಾಜಕೀಯ ಕ್ರಮವಾಗಿತ್ತು. ಅದರಲ್ಲೂ ಧರ್ಮಪಂಥ ಯಾವುದೇ ಇರಲಿ, ಜನಪ್ರಿಯವಾದ ದೈವಗಳಿಗೆ ಮನ್ನಣೆ ನೀಡುವುದು ಜನಬೆಂಬಲ ಪಡೆಯುವ ತಂತ್ರವೂ ಆಗಿತ್ತು. ಈ ಕ್ರಮವನ್ನು ಆಧುನಿಕ ರಾಜಕಾರಣದಲ್ಲಿ ಕಾಣಬಹುದು. ಸ್ಥಳೀಯ ಜನಸಮುದಾಯಗಳ ಜೊತೆ ನೇರ ಸಂಬಂಧ ಇರಿಸಿಕೊಳ್ಳಬೇಕಾದ

ಮಾಂಡಲಿಕರು ಇದನ್ನು ಮಾಡುತ್ತಿದ್ದರು. ೧೩೪೩ರ ಚುಂಚನಗಿರಿ ಶಾಸನವು ವಿಜಯನಗರ ಮಾಂಡಲಿಕ ಯಲಹಂಕನಾಡ ಪ್ರಭು ರಣಭೈರೇಗೌಡನ ಮನೆದೇವರಾದ ಕಾಲಭೈರವನಿಗೆ ದಾನಕೊಟ್ಟ ವಿವರವನ್ನು ತಿಳಿಸುತ್ತದೆ.[೨೨]

ಹೊಯ್ಸಳರು ವಿಜಯನಗರದವರು ಶ್ರೀವೈಷ್ಣವ ಮತದ ಪೋಷಕರಾದರಷ್ಟೇ. ಪ್ರಭುತ್ವಗಳು ನಿರ್ದಿಷ್ಟ ಮತಕ್ಕೆ ತಮ್ಮ ನಿಷ್ಠೆ ಬದಲಿಸಿದಾಗ, ವಿಭಿನ್ನಕಾರಿ ಪರಿಣಾಮಗಳಾಗುತ್ತಿದ್ದವು. ವಿಷ್ಣುವರ್ಧನನ ಮತಾಂತರದಿಂದ ವೈಷ್ಣವರು ರಾಜಗುರುಗಳಾದ ಬಳಿಕ, ಕಾಪಾಲಿಕ ವೈಷ್ಣವ ಸಂಘರ್ಷಗಳು ಹಲವಾರು ನಡೆದಿವೆ. ಇದಕ್ಕಿರುವ ಒಂದು ಸಣ್ಣ ದಾಖಲೆ ಎಂದರೆ ಚುಂಚುನಗಿರಿ ಸಮೀಪದ ಮೇಲುಕೋಟೆಯಲ್ಲಿದ್ದ ರಾಮಾನುಜರು. ಕಾಪಾಲಿಕರನ್ನು ಟೀಕಿಸುವುದು. ಚುಂಚನಗಿರಿ ಭೈರವನು ಕಾವೇರಿ ತೀರದ ಚುಂಚನಕಟ್ಟೆಯನ್ನು ರಾಮನಿಗೆ ಬಿಟ್ಟುಕೊಟ್ಟು 'ಅಗ್ರಾರಕ್ಕಿಂತ ಇದು ಲೇಸೆಂದು' ಚುಂಚನಗಿರಿಗೆ ವಲಸೆಬರುವುದು ದಂತಕಥೆಯಾಗಿದೆ.[೨೩]

ದುಡಿಯುವ ಕೃಷಿಕ ಸಮುದಾಯದ ಜೀವನದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ದೈವಿಕ ಆಚರಣೆಗಳನ್ನು ಪ್ರಭುತ್ವ ನೀತಿಗಳಲ್ಲಾಗುವ ಏರುಪೇರುಗಳು ದೊಡ್ಡ ಪ್ರಮಾಣದಲ್ಲಿ ಅಲುಗಿಸುತ್ತಿರಲಿಲ್ಲ. ಹಳೇಬೀಡಿನ ಶಾಂತಲೇಶ್ವರ, ಹೊಯ್ಸಳೇಶ್ವರ ಗುಡಿಯ ಹೊರಗೋಡೆ ಹಾಗೂ ಗೋಪುರಗಳು ಭೈರವ ಮೂರ್ತಿಗಳಿಂದ ತುಂಬಿಹೋಗಿವೆ. ಇದರ ಹಿಂದೆ ಚುಂಚನಗಿರಿ ಪರಿಸರದಲ್ಲಿದ್ದ ಕಾಪಾಲಿಕರ ಭೈರವಾರಾಧನೆಯ ಪ್ರಭಾವವಿದೆ. ಇದೇ ಮೈಸೂರು ಭಾಗದಲ್ಲಿ ೮-೯ನೇ ಶತಮಾನಗಳಿಂದಲೇ ಕಾಪಾಲಿಕ ಪಂಥವು ಬಲವಾಗಿತ್ತು[೨೪] ಎಂದು ತಿಳಿಯಬಹುದು. ಈಗಲೂ ಹಾಸನ ಜಿಲ್ಲೆಯ ಬೇಲೂರು, ಹಳೇಬೀಡು ಪ್ರದೇಶಗಳಲ್ಲಿ ಭೈರವಾರಾಧನೆ ದಟ್ಟವಾಗಿದೆ. ನೂರಾರು ಭೈರವನ ಗುಡಿಗಳಿವೆ. ಭೈರವ ಜೋಗಿ ಸಿದ್ಧ ಹೆಸರಿನ ಹಳ್ಳಿಗಳಿವೆ. ಕಾಪಾಲಿಕ ಹಾಗೂ ನಾಥಪಂಥಗಳು ದಾರ್ಶನಿಕ ಪಂಥಗಳಾಗಿ ಇರುವ ಬದಲಿಗೆ, ಸಮುದಾಯಗಳಲ್ಲಿ ಭೈರವರಾಧನೆಯ ರೂಪದಲ್ಲಿ ಇದ್ದುದೇ ಹೆಚ್ಚು. ಅದರಲ್ಲೂ ಭೈರವಾರಾಧನೆಯ ಭಾಗವಾಗಿರುವ ಬಲಿ ಪದ್ಧತಿಯು ಜನರ ಆಹಾರ ಪದ್ಧತಿಯ ಭಾಗವಾಗಿತ್ತು.

ಕೋಲಾರ ಸುತ್ತ-ಮುತ್ತಲಿನ ಆಳ್ವಿಕೆ ನಡೆಸಿದ ಆವತಿನಾಡಿನ ಗೌಡಪ್ರಭುಗಳು ಭೈರವಾರಾಧಕರಾಗಿದ್ದರು. ಯಲಹಂಕನಾಡಿನ ಪ್ರಭು ರಣಭೈರೇಗೌಡನು ಭೈರವದೇವರಿಗೆ ದತ್ತಿ ಬಿಡುತ್ತಾನೆ. ದೊಡ್ಡ ಬಳ್ಳಾಪುರ, ಚಿಕ್ಕಬಳ್ಳಾಪುರ, ದೇವನಹಳ್ಳಿ, ಕೊರಟಗೆರೆ ಪಾಳೇಗಾರರ ಹೆಸರಲ್ಲಿ ಭೈರವ ಮತ್ತು ಜೋಗಿ ಎಂಬ ದೈವ ಹಾಗೂ ಪಂಥ ವಾಚಕಗಳು ಸಾಮಾನ್ಯ. ಇವರೆಲ್ಲರೂ ತಂತಮ್ಮ ಆಡಳಿತ ಭಾಗದಲ್ಲಿ ಬರುತ್ತಿದ್ದ ಕಾಪಾಲಿಕ ಯತಿಗಳನ್ನು ಸಿದ್ಧರಮಠಗಳನ್ನು ಭೈರವಗುಡಿಗಳನ್ನು ಪೋಷಣೆ ಮಾಡಿದರು. ಚಿತ್ರದುರ್ಗದ ಪಾಳೇಗಾರರು, ಅಲ್ಲಿದ್ದ ಸಿದ್ಧಪಂಥದ ಯತಿಗಳಿಗೆ ಅವರ ಮಠಗಳಿಗೆ ಆಶ್ರಯಕೊಟ್ಟರು.

ಅನೇಕ ಪಾಳೆಯಗಾರರು ತಮ್ಮನ್ನು ಸಿದ್ದರ ಶಿಷ್ಯರು ಎಂದು ಭಾವಿಸಿದ್ದರು. ಅವರು 'ಸಿದ್ಧರದಯ'ವನ್ನು ಕಳೆದುಕೊಂಡ ಕಾರಣದಿಂದಲೇ ದುರ್ಗದ ಪತನವಾಯಿತು ಎಂಬ ಹೇಳಿಕೆ ಇಲ್ಲಿನ ಜನಪದ ಸಾಹಿತ್ಯದಲ್ಲಿ ಬರುತ್ತದೆ. ಈ ಸಿದ್ಧರು ಯಾರು ಆಗಿರದೆ, ಲುಂಕೆಮಲೆ ಹಾಗೂ ಚಿತ್ರದುರ್ಗದ ಹುಲಿಗೊಂದಿ ಮಠದ ನಾಥರಾಗಿದ್ದರು.[೨೫]

ಮೂಲತಃ ವೈಷ್ಣವರಾದ ಮೈಸೂರು ದೊರೆಗಳು ಶೈವಪಂಥಗಳ ವಿಷಯದಲ್ಲಿ ಅಷ್ಟು ಉತ್ಸುಕತೆ ತೋರಿದಂತಿಲ್ಲ. ಆದರೂ ತಮ್ಮ ವೈಯಕ್ತಿಕ ನಂಬಿಕೆಯ ಧರ್ಮಗಳಾಚೆ ಉದಾರವಾದಿ ಅರಸರಾಗಿದ್ದರು. ರಾಜಧರ್ಮದ ಭಾಗವಾಗಿ, ಎಲ್ಲ ಪಂಥದ ಗುರುಗಳನ್ನು, ಮಠಗಳನ್ನು, ಗೌರವಿಸುತ್ತಿದ್ದರು. ನಾಥರ ಪ್ರಕಾರ, ಒಡೆಯರ ಪಟ್ಟದ ಸಂದರ್ಭದಲ್ಲಿ ಚುಂಚನಗಿರಿಯ ನಾಥಯೋಗಿಯೂ ಇದ್ದು ಆಶೀರ್ವಾದ ಮಾಡುತ್ತಿದ್ದನು. ಇದಕ್ಕೆ ಪೂರಕವಾಗಿ ಅರಮೆನಯ ಚಿತ್ರಸಂಪುಟಗಳಲ್ಲಿ ಚುಂಚನಗಿರಿಯ ನಾಥರಿದ್ದಾರೆ. ಅರಮನೆಯ ಚಿತ್ರಗಾರರಿಂದ ಒಡೆಯರು ತಮ್ಮ ಪರಿವಾರದ ವಿದ್ವಾಂಸರ, ಸಂಗೀತಗಾರರ, ಜಟ್ಟಿಗಳ, ಅಧಿಕಾರಿಗಳ ಭಾವಚಿತ್ರಗಳನ್ನು ಬರೆಯಿಸುತ್ತಿದ್ದರು. ಇಂತಹ ಒಂದು ಚಿತ್ರ ಸಂಪುಟವು ಮೈಸೂರು ಜಗನ್ಮೋಹಿನಿ ಮಹಲಿನಲ್ಲಿದೆ. ಅದರಲ್ಲಿ 'ಚುಂಚನಗಿರಿ ಜೋಗಿ' 'ನಾಥರೂ' ಎಂಬ ಕೆಳ ಬರಹವಿರುವ ೨ ಅಪೂರ್ವ ಚಿತ್ರಗಳಿವೆ. ವಿಶೇಷವೆಂದರೆ, ಇಲ್ಲಿ ನಾಥನು ಗಡ್ಡಮೀಸೆ ಬಿಟ್ಟು, ವಜ್ರದಾಭರಣಗಳನ್ನು ಸಿಕ್ಕಿಸಿದ ಪೇಟವನ್ನು ತೊಟ್ಟಿರುವುದು. ಚುಂಚನಗಿರಿ ಜೋಗಿಯ ಕಿವಿಯಲ್ಲಿ ಕುಂಡಲಗಳು ಎದ್ದುಕಾಣುತ್ತಿವೆ. ಇಲ್ಲಿ ಸಣ್ಣ ಆಭರಣವುಳ್ಳ ಪೇಟವಿದೆ.[೨೬] ಮೈಸೂರು ಅರಸರು ತಮ್ಮ ಕಾಲಕ್ಕಾಗಲೇ ನಾಥರಿಗೆ ಬೇಕಾದಷ್ಟು ರಾಜಮರ್ಯಾದೆ ಮಾಡಿದ್ದರು. ತಮ್ಮ ಸಂಚಾರದಲ್ಲಿ ರಾಜರು ಆಯಾ ಭಾಗದ ಜೋಗಿ ಮಠಗಳಿಗೆ ಸೌಜನ್ಯದ ಭೇಟಿ ಕೊಡುತ್ತಿದ್ದರು. ಮೈಸೂರು ಸರಕಾರದ ಹುಕುಮಿನ(ಆಜ್ಞೆಯ) ಪ್ರಕಾರ ಅಧಿಕಾರ ಸ್ವೀಕರಿಸಿದ ಚುಂಚನಗಿರಿಯ ನಾಥರು ಸಂಚಾರದಲ್ಲಿ ಅರಮನೆ ಕೊಟ್ಟ ಬಿರುದು ಬಾವಲಿಗಳ ಸಮೇತ ಹೋಗುತ್ತಿದ್ದರು.[೨೭] ಅವರ ಸಂಚಾರದಲ್ಲಿ ಉಕ್ಕಡದ(ಗಡಿಪ್ರದೇಶದ) ಅಧಿಕಾರಿಗಳಿಗೆ ರಹದಾರಿ ಸೂಚನೆಯನ್ನು ಸರಕಾರವು ಕೊಟ್ಟಿತ್ತು. ಅವರ ಒಂದು ಹುಕುಂ ಹೀಗಿದೆ.

ಶ್ರೀ ಚುಂಚನಗಿರಿ ಶ್ರೀ ಸಿದ್ಧಸಿಂಹಾಸನ ಮಠದ ಜಗದ್ಗುರು ಶ್ರೀ ಭಕ್ತನಾಥ ಸ್ವಾಮಿಯವರು ಶಿಷ್ಯವರ್ಗದವರ ಆಚಾರ ವಿಚಾರಕ್ಕೂ ಮತ್ತು ಶಿಷ್ಯಾರ್ಚನೆಗೂ ಮೈಸೂರು ಸೀಮೆಯಲ್ಲಿ ಸಂಚಾರ ಮಾಡುವುದರಿಂದ ಸದರಿ ಸ್ವಾಮಿಗಳವರು ನಿಮ್ಮ ನಿಮ್ಮ ಗಡಿಗಳ ಮಾರ್ಗವಾಗಿ ಬಂದಲ್ಲಿ, ಉಕ್ಕಡ ಕಣಿವೆಗಳಲ್ಲಿ ಅಟಕಾಯಿಸದೆ ಬಿಟ್ಟುಬಿಡುವುದು. ಖೈದುವಾರ್ ಜಾಗದಲ್ಲಿಳಿಸಿ ಉಳಿದ ಬಳಿಯಲ್ಲಿ ರಾತ್ರಿ ರಾತ್ರಿ ವೇಳೆ ಕಳ್ಳಕಾಕರ ಉಪದ್ರವವಾಗದಂತೆ ಖಬರು ದಾರಿ ಮಾಡಿಸಿದರ ಮಜಲಿನಲ್ಲಿಯೂ ಮರ್ಯಾದೆಯಿಂದ ನಡೆದುಕೊಂಡು ಬರುವುದು. ಇವರ ಅಮರರಹಾ ನಮೂದಿಸಿರುವ ಬಿರುದು ಬಾವಲಿಗಳಿರುತ್ತಾದ್ದರಿಂದ ನಿಮ್ಮ ನಿಮ್ಮ ಸರಹದ್ದುಗಳಲ್ಲಿ ತಡೆಯದೆ ಬಿಡುವುದು.[೨೮]

ಮಠವು ತಮ್ಮ ಕೈಬಿಟ್ಟು ಹೋಗುವಾಗ, ಬಾರಾಪಂಥದವರು ಮಹಾರಾಜರಿಗೆ ಮಾಡಿದ ಅಪೀಲು ಪತ್ರದಲ್ಲಿ "ಮೆಹರ್ಬಾನು ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ಮಠವನ್ನು ಅಭಿವೃದ್ಧಿಗೆ ತರುವುದಕ್ಕೋಸ್ಕರ ೧೯೨೨ನೇ ಇಸವಿಯಲ್ಲಿ ಶ್ರೀಮಾನ್ ಮಹಾರಾಜರವರಿಂದ ಬಿರುದಾವಳಿಗಳನ್ನು ಮಠಕ್ಕೆ ಕೊಡಿಸಿದರು. ಅಲ್ಲದೆ ತಿಂಗಳಿಗೆ ಒಂದುನೂರು ರೂಪಾಯಿಗಳನ್ನು ಮಠಕ್ಕೆ ಸರ್ಕಾರದವರು ಕೊಡುವಂತೆ ಹುಕುಂ ಮಾಡಿದರು" ಎಂಬ ಮಾತಿದೆ.[೬೦] ಮುಂದೆ ಇದು ಒಕ್ಕಲಿಗರ ವಶವಾಯಿತು.

ನಾಥಪಂಥಕ್ಕೆ ಕುಕ್ಕಲನಾಡಿನ ಪ್ರದೇಶದ ಸುತ್ತ-ಮುತ್ತಲಿನ ರಾಜರಲ್ಲದೆ, ಅವರ ಮಾಂಡಲಿಕರು, ಸಾಮಂತರು, ವ್ಯಾಪಾರಿಗಳು, ಜಮೀನುದಾರರು ಪೋಷಣೆ ಮಾಡಿಕೊಂಡು ಬಂದರು ಎಂದು ಈ ಮೇಲಿನ ವಿವರಗಳಿಂದ ತಿಳಿಯುತ್ತದೆ. ಅದೇ ರೀತಿ ಕುಕ್ಕಲನಾಡಿನ ನಾಯಕರು, ಪ್ರಭುಗಳು ಮತ್ತು ಗೌಡರುಗಳು ಸಹ ನಾಥಪಂಥವನ್ನು ಪೋತ್ಸಾಹಿಸಿದರು.

ಕರ್ನಾಟಕದಲ್ಲಿ ಬಹುಪ್ರಾಚೀನ ಕಾಲದಿಂದಲೂ ಅನೇಕ ಮತಶ್ರದ್ಧೆಗಳು ತಲೆಯೆತ್ತುತ್ತ ಬಂದಿದೆ. ಅಂತಹ ಮತಾಚಾರಗಳಲ್ಲಿ ಶೈವಧರ್ಮದ ಅಂಶಗಳನ್ನು ಪ್ರಧಾನವಾಗಿ ಪಡೆದಿರುವ 'ನಾಥಸಿದ್ಧರ' ಪಂಥವೂ ಒಂದು. ಇದನ್ನು ಸಿದ್ಧಮತ, ಸಿದ್ಧಮಾರ್ಗ, ಯೋಗಮಾರ್ಗ, ಅವಧೂತಮಾರ್ಗ, ಅವಧೂತ ಸಂಪ್ರದಾಯ ಎಂದು ಕೂಡ ಕರೆಯಲಾಗಿದೆ.

ಇಂತಹ ನಾಥಪಂಥದ ಬಗ್ಗೆ ಬೆಳಕು ಬೀರುವ ಮೌನಿನಾಥ ಮುನಿಯ ಗುರುಪರಂಪರೆಯ ವಿವರವುಳ್ಳ ಶಾಸನವೊಂದು ಕುಕ್ಕಲನಾಡಿನ ಪ್ರದೇಶದಲ್ಲಿ ಕಂಡುಬಂದಿದೆ. ಮೌನಿನಾಥ ಮುನಿಯನ್ನು 'ಪರವಾದ್ಯ ದೃಷ್ಯ: ನಿಜರು ದ್ರರೂಪ' ಎಂದು ವರ್ಣಿಸಲಾಗಿದೆ. ರಾಜೇಂದ್ರ ಚೋಳನ ಮಂತ್ರಿಮಾನ್ಯನಾಗಿದ್ದ ವಾಮನಯ್ಯನು ಆ ಮುನಿಯ ಪರಮ ಭಕ್ತನಾಗಿದ್ದ. ಆ ಮುನಿಯು ಕಾಲತೀತನಾದಾಗ, ಪರೋಕ್ಷವಿನಯವಾಗಿ 'ಶಿಲಾಮಂಚ'ವನ್ನು 'ಸಿದ್ದೇಶ್ವರ ಭವನ'ವನ್ನು ಪ್ರಾಕಾರ ಸಮನ್ವಿತವಾಗಿ ಕಟ್ಟಿಸಿ ಪೂಜಾಕೈಂಕರ್ಯಗಳಿಗೆ ದತ್ತಿಬಿಟ್ಟಿರುವ ವಿಷಯವನ್ನು ತಿಳಿಸುವ ಶಾಸನ ಕ್ರಿ.ಶ.೧೦೨೯ಕ್ಕೆ ಸೇರಿದ್ದು, ಸೋಲದೇವನಹಳ್ಳಿಯಲ್ಲಿ ದೊರೆತಿದೆ.[೬೧] ಈ ಶಾಸನದಲ್ಲಿನ ವಿವರಗಳ ಹಿನ್ನೆಲೆಯಲ್ಲಿ ನಾಥಪಂಥದ ಮುನಿಯೊಬ್ಬ ಕಾಲಾತೀತನಾದರೆ ಶಿಲಾಮಂಚ ಹಾಗೂ 'ಸಿದ್ದೇಶ್ವರ ಭವನ' ವೆಂಬ ಗುಡಿಯನ್ನು ಕಟ್ಟಿಸುತ್ತಿದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ. ಇಲ್ಲಿನ 'ಶಿಲಾಮಂಚ' ಎನ್ನುವುದು ವೀರಶೈವ ಮುಂತಾದ ಧರ್ಮಾನುಯಾಯಿಗಳಲ್ಲಿ ಕಂಡುಬರುವ ಗದ್ದುಗೆಯೇ ಆಗಿದೆಯೆಂದು ವೇದ್ಯವಾಗುತ್ತದೆ. ಬೌದ್ಧಸ್ತೂಪಗಳು, ಮುಸ್ಲಿಮರ ದರ್ಗಾ, ಹಿಂದೂಗಳ ಸಮಾಧಿ, ಬೃಂದಾವನ ಮುಂತಾದವುಗಳ ಆರಾಧನೆ.... ಒಂದು ರೀತಿಯಲ್ಲಿ ಇಂತಹದೇ ಆಚರಣೆಯ ರೀತಿಯೆಂದು ಹೇಳಬಹುದಾಗಿದೆ. ಪ್ರಸ್ತುತ ಈ ಶಾಸನದಲ್ಲಿ ಉಕ್ತವಾಗಿರುವ ಮೌನಿನಾಥಮುನಿಯ ಗುರುಪರಂಪರೆ ಈ ರೀತಿ ಇದೆ.

ಕೃತೋಧಿನಾಥ(ಆದಿನಾಥ)

|

ಛಾಯಾದಿನಾಥ

|

ಸ್ತಂಭನಾಥ/ದಹಳಾದಿನಾಥ

|

ದ್ವೀಪನಾಥ

|

ಮೌನಿನಾಥ[೩೨]

ಈ ಮೇಲಿನ ಆಧಾರದಿಂದ ಕುಕ್ಕಲನಾಡಿನಲ್ಲಿ ನಾಥಪಂಥವು ಒಂದು ಪ್ರಮುಖ ಧರ್ಮವಾಗಿದ್ದಿರಬಹುದೆಂದು ಹೇಳಬಹುದು.

೫.೫. ವೈಷ್ಣವ ಮತ

ಕ್ರಿಸ್ತಪೂರ್ವದಲ್ಲಿಯೇ ದಕ್ಷಿಣ ಭಾರತವನ್ನು ಪ್ರವೇಶಿಸಿದ ವೈಷ್ಣವಧರ್ಮ[೩೩] ಕ್ರಿ.ಶ.೪ನೆಯ ಶತಮಾನದ ವೇಳೆಗಾಗಲೇ ಕರ್ನಾಟಕದಲ್ಲಿ ಜನಪ್ರಿಯವಾಗಿದ್ದಿತು.[೩೪] ವೈಷ್ಣವ ಧರ್ಮದ ಇತಿಹಾಸ ನೋಡಿದಂತೆ ಕ್ರಿ.ಶ. ಮೊದಲ ೧೦ ಅಥವಾ ೧೧ನೆಯ ಶತಕಗಳಲ್ಲಿ ವೈದಿಕಗೊಳಿಸಲ್ಪಟ್ಟ ವೈಷ್ಣವ ಧರ್ಮವು ಕರ್ನಾಟಕದಲ್ಲಿ ಪ್ರಚುರವಾಗಿದ್ದಿರಬೇಕು.[೩೫] ಶಾಸನಗಳಲ್ಲಿ ಭಾಗವತ, ವೈಷ್ಣವ ಎಂಬ ಉಕ್ತಿಗಳು ದೊರೆಯುತ್ತವೆ. ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಶಾಸನವಾದ ಹನ್ಮಿಡಿ(ಹಲ್ಮಿಡಿ) ಶಾಸನವು(ಕ್ರಿ.ಶ.೪೫೦) ವಿಷ್ಣುವಿನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ.

ಜಯತಿ ಶ್ರೀ ಪರಿಷ್ವಂಗ ಶ್ಯಾರ್ಙ್ಗ(ಮಾನ್ಯತಿ) ರಚ್ಯುತಃ

ದಾನವಾಕ್ಷ್ಣೋೀರ್ಯುಗಾಂತಾಗ್ನಿಃ (ಶಿಷ್ಟಾನಾನ್ತು) ಸುದರ್ಶನಃ |

(ದಾನವರ ಕಣ್ಣುಗಳಿಗೆ ಪ್ರಳಯಕಾಲದ ಅಗ್ನಿಯಂತೆಯೂ, ಸತ್ಪುರುಷರಿಗೆ ಸುದರ್ಶನನಾಗಿ(ಸುದರ್ಶನ ಚಕ್ರವಾಗಿ)ಯೂ, ಲಕ್ಷ್ಮಿಯಿಂದ ಆಲಂಗಿತನಾಗಿಯೂ, ಶಾರ್ಙ್ಗವೆಂಬ ಧನಸ್ಸನ್ನು ಹಿಡಿದಿರುವವನು ಆದ ಅಚ್ಯುತನು ಜಯಿಸುತ್ತಾನೆ.)[೩೬]

ಕ್ರಿ.ಶ.೫೭೮ರ ವೇಳೆಗಾಗಲೇ ಬಾದಾಮಿಯಲ್ಲಿ ವೈಷ್ಣವ ಗುಹೆಯು ನಿರ್ಮಾಣವಾಗಿತ್ತು.[೩೭] ಬಾದಾಮಿ ಶಾಸನವು ಮಂಗಲೀಶನನ್ನು ಪರಮಭಾಗವತನೆಂದೇ ಸಂಬೋಧಿಸಿದೆ. ವೈಷ್ಣವ ಧರ್ಮವು ಶೈವಧರ್ಮದ ಜೊತೆಗೇ ಬೆಳೆದುಬಂದಿದೆ. ಶಿವಾಲಯಕ್ಕೆ ಸಂಬಂಧಿಸಿದ ಭೂಮಿಯ ಪಾಲನೆ ಜವಾಬ್ದಾರಿಯನ್ನು ವೈಷ್ಣವ ಧರ್ಮಕ್ಕೆ ಒಪ್ಪಿಸಿದ್ದನ್ನು ಮೈಲಾರದ ಒಂದು ಶಾಸನವು ದಾಖಲಿಸಿದೆ.[೩೮]

[illegible]

"ವೇದವಿದರ್ವೈಷ್ಣವಧರ್ಮ್ಮೋರ್ದೆಯರ ಕಳಂಕಚರಿತರಿನ್ನೂರ್ವರು ಮತ್ಯಾದರದಿ ಶಿವಾಲಯದೀ ಮೇದಿನಿಯ ಸರ್ವಮಾನ್ಯದಿಂ ಪಾಲಿಸುವರ್" ಎಂದು ಶಾಸನವು ದಾಖಲಿಸಿದೆ. ವೈಷ್ಣವರೂ ಶೈವರಂತೆ ಸಂಘಟಿತರಾಗಿ, ಗಣ್ಯಸ್ಥಾನ ಪಡೆದಿದ್ದರು. ಸ್ಥಾನದ ಅಧಿಕಾರವನ್ನು ಶೈವರೂ, ಭೂಮಿಯ ಜವಾಬ್ದಾರಿಯನ್ನು ವೈಷ್ಣವರೂ ಪಡೆದಿದ್ದರು. ಇದು ಶೈವ-ವೈಷ್ಣವ ಹಾರ್ಥಿಕತೆಯನ್ನು ಸೂಚಿಸುವುದಷ್ಟೇ ಅಲ್ಲದೆ ವೈಷ್ಣವರು ಗಳಿಸಿದ್ದ ಗಣ್ಯಸ್ಥಾನವನ್ನು ವ್ಯಕ್ತಪಡಿಸಿದೆ.

ಲಕ್ಕುಂಡಿಯ ಮಹಾಜನರನ್ನು ಶಾಸನಗಳು 'ವೈಷ್ಣವಗೀತಿ ಮನೋಹರ'ರೆಂದು ವರ್ಣಿಸಿವೆ.[೩೯] ವೈಷ್ಣವಗೀತಿ ಎನ್ನುವುದು ಭಾಗವತ ಅಥವಾ ಪಾಂಚರಾತ್ರ ಪಂಥದ ಪಾಂಚರಾತ್ರಾಗಮಗಳನ್ನು ಸೂಚಿಸುವುದು ಎಂದು ಡಾ.ಎಂ.ಚಿದಾನಂದಮೂರ್ತಿಯವರು ತಿಳಿಸಿದ್ದಾರೆ.[೪೦] ಒಟ್ಟಾರೆ ಅದು ವೈಷ್ಣವ ಧರ್ಮದ ಕುರುಹುಗಳಲ್ಲಿ ಒಂದಾಗಿರುವುದು ಸ್ಪಷ್ಟವಾಗಿದೆ.

ಕರ್ನಾಟಕದಲ್ಲಿ ವೈಷ್ಣವ ಧರ್ಮವು ಪ್ರಾಚೀನವಾದರೂ, ಹೊಯ್ಸಳರ ಕಾಲದಲ್ಲಿ ಶ್ರೀ ರಾಮಾನುಜಾಚಾರ್ಯರ ಪ್ರಭಾವದಿಂದಾಗಿ ದೊರೆತ ವಿಶೇಷ ಪ್ರೋತ್ಸಾಹ ಮತ್ತು ಮನ್ನಣೆಗಳಿಂದ ಶ್ರೀವೈಷ್ಣವ ಧರ್ಮವಾಗಿ ಬೆಳೆದು ಪ್ರಸಿದ್ಧವಾಯಿತು. "ಸರ್ವ ವಿಷ್ಣುಮಯ ಜಗತ್" ಎಂಬ ಸಿದ್ಧಾಂತವಿದ್ದರೂ ಮೊದಮೊದಲಿಗೆ ವೈಷ್ಣವರು ಶೈವರೊಡನೆ ಉತ್ತಮ ಸಂಬಂಧ ಹೊಂದಿದ್ದರು.[೪೧]

ಬೇಲೂರಿನ ಎರಡು ಶಾಸನಗಳು ಶ್ರೀವೈಷ್ಣವ ಬ್ರಾಹ್ಮಣರನ್ನು ಉಲ್ಲಖಿಸಿವೆ.[೪೨] ವಿಷ್ಣುವರ್ಧನನ ಕಾಲಕ್ಕೆ ಮೊದಲಬಾರಿಗೆ ಶ್ರೀವೈಷ್ಣವರ ಉಲ್ಲೇಖ ಶಾಸನಗಳ ಮೂಲಕ ಆಗಿರುವುದರಿಂದ ಇದು ಶ್ರೀ ರಾಮಾನುಜರ ಪ್ರಭಾವದಿಂದ ಎಂದು ತಿಳಿಯಬಹುದಾಗಿದೆ. ಹೊಯ್ಸಳರ ಆಳ್ವಿಕೆಯ ಪ್ರದೇಶದಲ್ಲಿ ಅದರಲ್ಲೂ ವಿಶೇಷವಾಗಿ ಬೇಲೂರಿನಲ್ಲಿ ಶ್ರೀವೈಷ್ಣವರು ಸ್ಥಾನಿಕರಾಗಿದ್ದರು.[೪೩]

ಈಗಿನ ಹಾಸನ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು, ಮಂಡ್ಯ, ರಾಮನಗರ ಜಿಲ್ಲೆಗಳಲ್ಲಿ ಶ್ರೀವೈಷ್ಣವ ಧರ್ಮವು ಹೆಚ್ಚು ಪ್ರಭಾವಶಾಲಿಯಾಗಿತ್ತು. ಮೇಲುಕೋಟೆ, ತೊಣ್ಣೂರು, ಸಾಲಿಗ್ರಾಮ, ಮಾಗಡಿ, ಬೆಂಗಳೂರು, ತುಮಕೂರು, ಬೇಲೂರುಗಳು ಶ್ರೀವೈಷ್ಣವರ ಪ್ರಮುಖ ನೆಲೆಗಳಾಗಿದ್ದವು. ಇದಕ್ಕೆ ಶ್ರೀ ರಾಮಾನುಜರ ಪ್ರಭಾವವೇ ಕಾರಣ ಎಂದು ತಿಳಿಯಬಹುದಾಗಿದೆ. ಕರ್ನಾಟಕದಲ್ಲಿ ಶೈವ, ವೈಷ್ಣವರಿಗೆ ದಾಖಲಾಗುವಂತಹ ವಿರಸಗಳೇನು ಇರಲಿಲ್ಲ. ಇದನ್ನು ಅನ್ಯಮತ ಸಹಿಷ್ಣುತೆ ಎನ್ನುವುದಕ್ಕಿಂತಲೂ ಶೈವರು ಮತ್ತು ವೈಷ್ಣವರು ತಮ್ಮನ್ನು ತಾವು ಪ್ರತ್ಯೇಕವೆಂದು ಸಿದ್ಧಾಂತ ಮತ್ತು ಅನುಷ್ಠಾನಗಳ ವಿನಹ ಮತ್ತಾವ ಸಂದರ್ಭದಲ್ಲೂ ಭಾವಿಸಿದಂತೆ ತೋರುವುದಿಲ್ಲ. ಪ್ರತ್ಯೇಕತೆಯಲ್ಲೂ ಏಕತೆಯನ್ನು ಶೈವ-ವೈಷ್ಣವರು ಸಾಧಿಸಿದ್ದರು. ಇದು ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಮಾತ್ರವಲ್ಲದೆ, ಸಾಂಸ್ಕೃತಿಕ ಇತಿಹಾಸದಲ್ಲೂ ಪ್ರಮುಖ ಪಾತ್ರವಹಿಸಿದೆ.

[illegible]

[illegible]

[illegible]

[illegible]

[illegible]

[illegible]

ಇಂತಹ ವೈಷ್ಣವ ಧರ್ಮ ಕುಕ್ಕಲನಾಡಿನಲ್ಲಿ ಜೈನ ಶೈವ ಧರ್ಮಗಳಷ್ಟು ಪ್ರಾಮುಖ್ಯತೆ ಪಡೆದಿರಲಿಲ್ಲ. ಈ ನಾಡಿನ ಅಗ್ರಹಾರ, ಬ್ರಹ್ಮಪುರಿಗಳಲ್ಲಿ ವಾಸಿಸುವ ಮಹಾಜನಗಳು ವೈಷ್ಣವ ಮತಾವಲಂಬಿಗಳಾಗಿದ್ದರು. ವೇದಾಗಮಗಳನ್ನು ಬಲ್ಲ ವಿಷ್ಣು ಭಕ್ತರಾಗಿದ್ದರು. ಯಾಗ-ಯಜ್ಞಗಳನ್ನು ಮಾಡುತ್ತ ಈ ಧರ್ಮದ ಆಚರಣೆಯನ್ನು ಮುಂದುವರಿಸಿದ್ದರು.

ಕ್ರಿ.ಶ.೧೦೬೦ರ ಕೆಂಗೇರಿಯ ವೊಳಗೆರೆಹಳ್ಳಿಯ ಶಾಸನದಲ್ಲಿ 'ಅಂಕನಾಥ' ದೇವರಿಗೆ ದಾನ ಕೊಟ ಉಲ್ಲೇಖವಿದೆ.[೪೩] ಇದು ವೈಷ್ಣವ ಧರ್ಮವು ಈ ಪ್ರದೇಶದಲ್ಲಿತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಮಾಗಡಿ ತಾಲ್ಲೂಕಿನ ಕಲ್ಯ ಗ್ರಾಮದಲ್ಲಿ ದೊರಕಿರುವ ಕ್ರಿ.ಶ.೧೩೬೮ರ ಶಾಸನದಲ್ಲಿ ಒಂದನೇ ಬುಕ್ಕರಾಯನು ಜೈನರು ಮತ್ತು ವೈಷ್ಣವರಲ್ಲಿ ರಾಜಿ ಮಾಡಿಸಿದ ಪ್ರಸ್ತಾಪವಿದೆ.[೪೪]

ವಿಜಯನಗರದ ಮೊದಲನೇ ದೇವರಾಯನ ಕಾಲದ ಕ್ರಿ.ಶ.೧೪೧೧ರ ಶಾಸನವೊಂದು ಬೆಂಗಳೂರಿನ ಕನ್ನೆಲ್ಲಿ ಗ್ರಾಮದಲ್ಲಿದ್ದು ಅಲ್ಲಿನ ತಿರುಮಲನಾಥ ದೇವರಿಗೆ ಆ ಊರಿಗೆ ಎರಡು ಮಗ್ಗಗಳನ್ನು ಸುಂಕಮಾನ್ಯವಾಗಿ ದತ್ತಿಬಿಟ್ಟ ಸಂಗತಿಯನ್ನು ತಿಳಿಸುತ್ತದೆ.[೪೫] ಈಗ ಕನ್ನೆಲ್ಲಿ ಗ್ರಾಮದಲ್ಲಿರುವ ಚೆನ್ನಿಗರಾಯನದೆಂದು ಕರೆಯಲಾಗುತ್ತಿರುವ ದೇವಾಲಯವು ೧೫ನೇ ಶತಮಾನದಲ್ಲಿ ತಿರುಮಲೆನಾಥ ದೇವರೆಂದು, ಪ್ರಸಿದ್ಧಿ ಪಡೆದಿತ್ತು. ಇದು ಕುಕ್ಕಲನಾಡಿನಲ್ಲಿ ವಿಜಯನಗರದ ಅರಸು ಒಂದನೇ ದೇವರಾಯನ ಅಧಿಕಾರಿ ಹಯಕಸ ಎಂಬುವವನು ಶೈವಧರ್ಮದ ಪ್ರಸಿದ್ಧಿಯೊಡನೆಯೂ ವೈಷ್ಣವರಿಗೆ ಪ್ರೋತ್ಸಾಹ ನೀಡಿದಕ್ಕೆ ಉದಾಹರಣೆಯಾಗಿದೆ.

ಮಾಗಡಿ ತಾಲ್ಲೂಕಿನ ಬಿಟ್ಟಸಂದ್ರ ಗ್ರಾಮದ ಶಾಸನದಲ್ಲಿ ಪ್ರಸನ್ನ ಗಂಗಾಧರ ದೇವರ ಉಲ್ಲೇಖವಿದೆ.[೪೬] ಈ ಶಾಸನವು ದೇವರಿಗೆ ದಾನ ನೀಡಿದ ಬಗ್ಗೆ ವಿವರಿಸುತ್ತದೆ.

ಇದೇ ತಾಲ್ಲೂಕಿನ ಕೆಂಪೋಹಳ್ಳಿ ಗ್ರಾಮದ ಶಾಸನದಲ್ಲಿ ತಿರುವೆಂಗಳನಾಥ ದೇವಾಲಯಕ್ಕೆ ದಾನಬಿಟ್ಟ ಗ್ರಾಮಗಳ ವಿವರವಿದೆ.[೪೭] ಇಲ್ಲಿನ ಸುತ್ತ-ಮುತ್ತಲಿನ ಹಲವಾರು ಗ್ರಾಮಗಳಲ್ಲಿ ದೊರಕಿರುವ ಶಾಸನಗಳಲ್ಲಿ ತಿರುವಂಗಳನಾಥ ದೇವರಿಗೆ ದಾನ-ದತ್ತಿಯನ್ನು ಬಿಟ್ಟ ವಿವರವಿರುವ ಅನೇಕ ಶಾಸನಗಳು ನಮಗೆ ಇಲ್ಲಿ ವೈಷ್ಣವ ಧರ್ಮ ಇತ್ತೆಂಬುದಕ್ಕೆ ಸಾಕ್ಷಿಯಾಗಿವೆ.[೪೮]

ಕೃಷ್ಣದೇವರಾಯ ಮಹಾರಾಜರ ಸಾಮಂತಾಧಿಪತಿಗಳಾದ ಕೊವಪನಾಯಕರು ತಿರುಮಲದೇವ ಮಹಾರಾಯರು ಮತ್ತು ತಿಮ್ಮಣ್ಣನಾಯಕರು ಒಂದಾಗಲಿ ಎಂದು ವರದರಾಜದೇವರಿಗೆ ಊರನ್ನು ದಾನ ಬಿಟ್ಟ ಉಲ್ಲೇಖ ಮಾಗಡಿಯ ಮಾರೇನಹಳ್ಳಿಯ ಶಾಸನದಲ್ಲಿದೆ.[೪೯]

ಮಾಗಡಿಯ ತಿರುಮಲೆ ರಂಗನಾಥದೇವಾಲಯ ಸಹ ವೈಷ್ಣವ ಧರ್ಮಕ್ಕೆ ಸಾಕ್ಷಿಯಾಗಿ ನಿಂತಿದೆ. ಕ್ರಿ.ಶ.೧೫೨೪ರಲ್ಲಿ ಕೃಷ್ಣದೇವರಾಯ ಮಹಾರಾಯರ ಸಾಮಂತಾಧಿಪತಿಗಳು ಮಾಗಡಿಯ ಈ ದೇವರಿಗೆ ತೆರಿಗೆ-ಸುಂಕ ಬಿಟ್ಟ ಬಗ್ಗೆ ಇಲ್ಲಿನ ಶಾಸನವು ವಿವರಿಸುತ್ತದೆ.[೫೦]

ಕ್ರಿ.ಶ.೧೩೧೫ರ ಮಾಗಡಿಯ ಕಲ್ಲೂರು ಗ್ರಾಮದ ಶಾಸನವು ಅಲ್ಲಾಳನಾಥ ದೇವಾಲಯದ ಸೇವೆಗೆ ಗದ್ದೆಯನ್ನು ದಾನ ಬಿಟ್ಟ ಬಗ್ಗೆ ವಿವರಿಸುತ್ತದೆ.[೫೧] ಅದೇ ರೀತಿ ಸಾವನದುರ್ಗದ ನರಸಿಂಹಸ್ವಾಮಿ ದೇವಾಲಯವು ಸಹ ವೈಷ್ಣವಧರ್ಮದ್ದಾಗಿದೆ. ೧೫೪೩ರಲ್ಲಿ ಅಚ್ಯುತ ದೇವರಾಯನು ಜೀರ್ಣೋದ್ಧಾರ ಮಾಡಿಸಿದ್ದಾನೆ. ಇವನು ಸಹ ಕುಕ್ಕಲನಾಡಿನಲ್ಲಿ ವೈಷ್ಣವ ಧರ್ಮವನ್ನು ಪ್ರೋತ್ಸಾಹಿಸಿದ್ದನು. ಜೊತೆಗೆ ಇಲ್ಲೇ ರಾಮೇಶ್ವರ ಗುಡಿಯು ಇದೆ. ಇದು ಸಹ ಪ್ರಾಚೀನ ಗುಡಿಯಾಗಿದೆ. ಇದಕ್ಕೆ ಸಹ ದಾನ-ದತ್ತಿಗಳನ್ನು ಬಿಟ್ಟಿದ್ದಿರಬಹುದು. ಈ ಮೇಲಿನ ಕುರುಹುಗಳೆಲ್ಲ ಕುಕ್ಕಲನಾಡಿನಲ್ಲಿ ವೈಷ್ಣವ ಧರ್ಮವು ಇತ್ತೆಂಬುದಕ್ಕೆ ದಾಖಲೆಗಳಾಗಿವೆ.

೫.೬. ವೀರಶೈವ ಮತ

ಶೈವ ಧರ್ಮದ ವಿವಿಧ ಶಾಖೆಗಳಲ್ಲಿ ಒಂದಾದ ವೀರಶೈವ ಧರ್ಮ ಬಹುಮಟ್ಟಿಗೆ ಕರ್ನಾಟಕದಲ್ಲಿ ರೂಪುಗೊಂಡು ಅನಂತರ ನೆರೆ ಹೊರೆಯ ಪ್ರಾಂತ್ಯಗಳಾದ ಆಂಧ್ರ, ಮಹಾರಾಷ್ಟ್ರ ಮತ್ತು ತಮಿಳುನಾಡಿನ ಗಡಿ ಪ್ರಾಂತ್ಯಗಳನ್ನು ವ್ಯಾಪಿಸಿತು. ಅನೇಕ ವಿಚಾರಗಳಲ್ಲಿ ವೈದಿಕಧರ್ಮದಿಂದ ಭಿನ್ನವಾದ ವೀರಶೈವಧರ್ಮ ಕರ್ನಾಟಕದ ಜನಜೀವನ, ಸಂಸ್ಕೃತಿ ಮತ್ತು ಸಾಹಿತ್ಯ ಇವುಗಳ ಮೇಲೆ ಪ್ರಭಾವವನ್ನು ಬೀರಿದೆ.

ಕರ್ನಾಟಕದ ಉತ್ತರ ಭಾಗದಲ್ಲಿ ಚಾಲುಕ್ಯರೂ, ಗಂಗವಾಡಿಯ ಪ್ರಾಂತ್ಯದಲ್ಲಿ ಹೊಯ್ಸಳರೂ ಆಳುತ್ತಿದ್ದರು. ಹೊಯ್ಸಳರು, ಕಲ್ಯಾಣ ಚಾಲುಕ್ಯರಿಗೂ ಮತ್ತು ಚೋಳರಿಗೂ ಆಗಾಗ್ಗೆ ಘರ್ಷಣೆಗಳಾಗುತ್ತಿದ್ದವು. ಆದರೆ ೬ನೆಯ ವಿಕ್ರಮಾದಿತ್ಯನು ಪ್ರಬಲನಾಗಿದ್ದುದರಿಂದ ಅವನ ಆಳ್ವಿಕೆಯಲ್ಲಿ ಕ್ಷೋಭೆ ಮತ್ತು ಅಂತಃಕಲಹಗಳು ಇಲ್ಲವಾದವು. ಅವನ ಅನಂತರ ಇಮ್ಮಡಿ ಜಗದೇಕ ಮಲ್ಲನು ಪ್ರಬಲನಾಗಿ ಚೋಳರನ್ನು ಸೋಲಿಸಿದನು. ಹೊಯ್ಸಳರಿಗೂ ಚಾಲುಕ್ಯರಿಗೂ ಕಲಹವಾಗುತ್ತಲೇ ಇತ್ತು. ಚಾಲುಕ್ಯರ ಸಾಮಂತನಾದ ಬಿಜ್ಜಳನು ಸ್ವತಂತ್ರನಾಗಲು ಹವಣಿಸಿ ಕಲ್ಯಾಣದಲ್ಲಿ ಸ್ವತಂತ್ರನಾದನು. ಇವನು ಚಕ್ರವರ್ತಿಯೆಂಬ ಬಿರುದನ್ನು ಧರಿಸಿ ಕ್ರಮೇಣ ಚಾಲುಕ್ಯರ ರಾಜ್ಯವನ್ನೆಲ್ಲಾ ವಶಪಡಿಸಿಕೊಂಡನು. ಕ್ರಿ.ಶ.೧೧೫೬-೫೭ರ ಕೊನೆಗೆ ಚಾಲುಕ್ಯ ವಂಶವು ಅವನತಿಯನ್ನು ಪಡೆಯುತ್ತಾ ಬಂದಿತು. ಬಿಜ್ಜಳನ ಅನಂತರ ಬಂದ ರಾಜನು ಪ್ರಬಲರಾಗದ ಕಾರಣ ಚಾಲುಕ್ಯರು ತಮ್ಮ ಸ್ಥಾನವನ್ನು ಪಡೆಯಲು ಹವಣಿಸಿದರು. ಆದರೆ ಆ ಕಾಲದಲ್ಲಿ ಪ್ರಬಲರಾದ ಹೊಯ್ಸಳರು ಮತ್ತು ಯಾದವರು ಚಾಲುಕ್ಯರನ್ನು ಮೇಲಕ್ಕೆ ಏಳಗೊಡಲಿಲ್ಲ. ಕೊನೆಗೆ ಹೊಯ್ಸಳರು ಮತ್ತು ಯಾದವರು ಕನ್ನಡ ನಾಡಿನಲ್ಲಿ ತಮ್ಮ ರಾಜಲಕ್ಷ್ಮಿ ಸ್ಥಿರವಾಗಿ ನಿಲ್ಲುವಂತೆ ಮಾಡಿದರು.

ಈ ಯುಗದ ಉತ್ತರಾರ್ಧದಲ್ಲಿ ಹೊಯ್ಸಳರು ಕ್ಷೇಮವಾಗಿ ನಿಲ್ಲದಂತೆ ರಾಜಕೀಯ ಕ್ಷೋಭೆಯುಂಟಾಯಿತು. ಈ ಕಾರಣದಿಂದ ಈ ಕಾಲದಲ್ಲಿ ಜನ-ಜೀವನಕ್ಕೆ ಮತ್ತು ಆಡಳಿತಕ್ಕೆ ಧಕ್ಕೆ ಉಂಟಾಯಿತು. ಹೊಯ್ಸಳರು, ದೇವಗಿರಿ ಯಾದವರು, ಚೋಳರು, ಪಾಂಡ್ಯರು, ತಮ್ಮ ತಮ್ಮಲ್ಲಿ ಯುದ್ಧ ಮಾಡುತ್ತಲೇ ಇದ್ದರು. ೧೩ನೆಯ ಶತಮಾನದ ಕೊನೆಯಲ್ಲಿ ಮುಸಲ್ಮಾನರ ದಾಳಿಯು ಕರ್ನಾಟಕದ ಮೇಲಾಯಿತು. ಅಲ್ಲಾವುದ್ದೀನ್‌ನ ಸೇನಾನಿ ಮಲ್ಲಿಕಾಫರ್‌ನು ದಾಳಿ ಮಾಡಿ ಯಾದವ ಮತ್ತು ಹೊಯ್ಸಳರನ್ನು ಹಣ್ಣು ಮಾಡಿ ದಿಲ್ಲಿಯ ಪ್ರಭುತ್ವಕ್ಕೆ ಸಾಮಂತರನ್ನಾಗಿ ಮಾಡಿಕೊಂಡನು. ಕ್ರೂರ ಹಿಂಸೆ, ಪವಿತ್ರ ಸ್ಥಳಗಳ ನಾಶದಿಂದ ಜನರಲ್ಲಿ ಶಾಂತಿಯಿಲ್ಲದಾಯಿತು. ಆದ್ದರಿಂದ ಜನ ಜೀವನಕ್ಕೆ, ಆಡಳಿತಕ್ಕೆ ಕಂಟಕವುಂಟಾಯಿತು.

ಈ ಕಾಲದ ರಾಜಕೀಯ ಪರಿಸ್ಥಿತಿ ತೀರ ಹದಗೆಟ್ಟಿತು. ಮುಸ್ಲಿಮರ ದಾಳಿಯಿಂದ ಹಿಂದೂ ಸಂಸ್ಕೃತಿಗೆ ಧಕ್ಕೆಯುಂಟಾಯಿತು. ಮುಸ್ಲಿಮರ ಶಕ್ತಿಯ ಮುಂದೆ ಈ ರಾಜರು ನಿಲ್ಲಲಾರದಾದರು. ಇಂಥ ಸಮಯದಲ್ಲಿ ಹಿಂದೂ ಧರ್ಮ ಮತ್ತು ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಲು ವಿದ್ಯಾರಣ್ಯರು ಮುಂದಾದರು. ಇವರ ಬುದ್ಧಿ ಚಾತುರ್ಯದಿಂದಲೂ ಮತ್ತು ಹೊಯ್ಸಳ ರಾಜರ ಸಮಯೋಚಿತ ಯುಕ್ತಿ, ಸಾಹಸಗಳಿಂದ ವಿಜಯನಗರದಲ್ಲಿ ಸಂಗಮವಂಶ ರಾಜ್ಯವು ೧೪ನೆಯ ಶತಮಾನದಲ್ಲಿ ಸ್ಥಾಪನೆಯಾಗಿ ಜನರ ವಿಲಕ್ಷವಾದ ಚೈತನ್ಯಗಳಿಂದ ಬಹುಬೇಗನೆ, ಇದು ದಕ್ಷಿಣ ಭಾರತದ ಅಭೇದ್ಯವಾದ ಶಕ್ತಿ ಕೇಂದ್ರವಾಯಿತು. ಆದ್ದರಿಂದ ಮಹಮದೀಯ ವೈರಿಗಳನ್ನು ತಡೆಗಟ್ಟಿ ಎಲ್ಲಾ ಮತಪಂಥಗಳಿಗೂ, ಕಲೆ ಮತ್ತು ವಾಙ್ಮಯಗಳಿಗೂ ಆಶ್ರಯ ಸ್ಥಾನವನ್ನು ಕೊಡುವ ಶಕ್ತಿಯನ್ನು ಈ ಸಾಮ್ರಾಜ್ಯವು ಪಡೆಯಿತು.

ಈ ಕಾಲದಲ್ಲಿ ಜೈನಮತದ ಪ್ರಾಬಲ್ಯ ಕಡಿಮೆಯಾಗಿ ವೀರಶೈವ ಮತದ ಪ್ರಾಬಲ್ಯ ಹೆಚ್ಚಾಯಿತು. ಭಾರತದ ನಾನಾ ಪ್ರಾಂತ್ಯಗಳಿಂದ ವಿವಿಧ ಮತಧರ್ಮದವರು ಕನ್ನಡನಾಡಿಗೆ ಬಂದು ನೆಲಸಿದರು. ಬಂಗಾಳದಿಂದ ಶಾಕ್ತೇಯರು, ಗುಜರಾತಿನಿಂದ ನಕುಲೀಶ ಪಾಶುಪತರು ಬಂದು ನೆಲಸಿದರು. ಈ ಕಾರಣಗಳಿಂದ ಕರ್ನಾಟಕವು ಬಗೆ ಬಗೆಯ ಶೈವಮತದ ಕುರುಕ್ಷೇತ್ರವಾಗಿತ್ತು. ಅವರಲ್ಲಿ ಘರ್ಷಣೆಗಳು ಪ್ರಾರಂಭವಾದವು. ಆಗ ಬಸವಣ್ಣನವರು ಆ ಪಂಗಡಗಳನ್ನೆಲ್ಲಾ ಸೇರಿಸಿ ವೀರಶೈವ ಮತವನ್ನು (ವೀರಶೈವಧರ್ಮ) ಸ್ಥಾಪಿಸಿದರು.

ವೀರಶೈವ ಧರ್ಮ, ಶೈವಧರ್ಮಗಳಂತೆ ಶಿವಾಗಮಗಳ ತಳಹದಿಯ ಮೇಲೆ ರಚಿತವಾದ ಒಂದು ಧರ್ಮ. ಸೂಕ್ಷ್ಮಾಗಮ, ಸುಪ್ರಭೇದ, ಸ್ವಾಯಂಭುವ, ಕಾಮಿಕ, ವಾತುಲ ಮೊದಲಾದ ಆಗಮಗಳಲ್ಲಿ ವೀರಶೈವ ಧರ್ಮದ ಮೂಲತತ್ವಗಳನ್ನು ನೋಡಬಹುದು.[೨] ವೀರಶೈವ ಧರ್ಮವನ್ನು ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಎಂದು ಕರೆಯಲಾಗಿದೆ. ಈ ಧರ್ಮದ ಪ್ರಕಾರ ಶಕ್ತಿಯುತನಾದ ಶಿವನೊಬ್ಬನೇ ಸತ್ಯ. ಈ ಧರ್ಮದಲ್ಲಿ ಸಾಧನಮಾರ್ಗ ಪ್ರಮುಖ ಸ್ಥಾನವನ್ನು ಪಡೆದಿದೆ. ಪಂಚಾಚಾರ ಮತ್ತು ಅಷ್ಟಾವರಣಗಳಿಂದ

ಪೋಷಿತವಾದ ಷಟ್‌ಸ್ಥಲ ಸಿದ್ಧಾಂತವೇ ವೀರಶೈವರ ಸಾಧನಮಾರ್ಗ. ಈ ಮಾರ್ಗದಲ್ಲಿ ಭಕ್ತಿ, ಜ್ಞಾನ, ಧ್ಯಾನ, ಕರ್ಮ ಮತ್ತು ನೀತಿಯ ಆಚರಣೆಗೆ ಸಮಾನ ಅವಕಾಶವಿದೆ. ವ್ಯಕ್ತಿಯ ಅಂತರಂಗ, ಬಹಿರಂಗ ಜೀವನದ ಪರಿಶುದ್ಧತೆ ಸತ್ಯದ ಸಾಕ್ಷಾತ್ಕಾರಕ್ಕೆ ಅತ್ಯಾವಶ್ಯಕ ಎಂಬುದು ಇದರ ನಿಲುವು.[೫೩]

ವೀರಶೈವಧರ್ಮ ೧೨ನೆಯ ಶತಮಾನದಲ್ಲಿ ಬಂದ ಶರಣ ಸಂತತಿಯಿಂದಾಗಿ ಕರ್ನಾಟಕದಲ್ಲಿ ಸುವರ್ಣಯುಗವನ್ನೇ ಕಂಡಿತು. ಸ್ಪೃಶ್ಯ, ಅಸ್ಪೃಶ್ಯ, ಬ್ರಾಹ್ಮಣ, ಶೂದ್ರ, ಸ್ತ್ರೀಪುರುಷ ಎಂಬ ಯಾವ ಭೇದವೂ ಇಲ್ಲದೆ ಅನೇಕರು ಈ ಧರ್ಮದ ಬೋಧನೆಗೆ ಕಿವಿಗೊಟ್ಟರು.[೫೪] ವರ್ಣಾಶ್ರಮ ಧರ್ಮಗಳ ಹೆಸರಿನಲ್ಲಿ ಹಿಂದೂ ಸಮಾಜದಲ್ಲಿ ರೂಢಿಯಲ್ಲಿದ್ದ ಮೇಲು-ಕೀಳು ಎಂಬ ಸಾಮಾಜಿಕ ತಾರತಮ್ಯ ಮಾಯವಾಗಿ ಶರಣ ಧರ್ಮದ ನೆರಳಿನಲ್ಲಿ ವರ್ಣರಹಿತ, ವರ್ಗರಹಿತ, ಧಾರ್ಮಿಕ ತೃಷೆಯುಳ್ಳ ಸಮಾಜವೊಂದು ರೂಪುಗೊಂಡಿತು. ಧರ್ಮದ ಹೆಸರಿನಲ್ಲಿದ್ದ ಅಂದಶ್ರದ್ಧೆ, ಶುಷ್ಕ ಆಚರಣೆಗಳು, ಆಡಂಬರದ ಪೂಜೆ, ಪಶುಬಲಿ ಮುಂತಾದ ಕುರುಡು ಆಚರಣೆಗಳನ್ನು ವೀರಶೈವಧರ್ಮ ಅತ್ಯಂತ ಕಟುವಾಗಿ ಟೀಕಿಸಿತು. 'ತನ್ನ ಬಿಟ್ಟರೆ ದೇವರಿಲ್ಲ ಮಣ್ಣ ಬಿಟ್ಟರೆ ಮಡಕೆ ಇಲ್ಲ' ಎಂಬ ಶ್ರೇಷ್ಠ ತತ್ತ್ವವು ಸುಲಭ ಸಾಧ್ಯ ಎಂದು ಜೀವಂತವಾಗಿ ಬದುಕಿ ತೋರಿಸಿದುದೇ ಈ ಧರ್ಮದ ವಿಶಿಷ್ಟತೆಯಾಗಿದೆ.

ಇಂತಹ ವೀರಶೈವ ಧರ್ಮವು ಕುಕ್ಕಲನಾಡಿನಲ್ಲಿ ಪ್ರಮುಖ ಧರ್ಮವಾಗಿತ್ತು. ಮಾಗಡಿ ತಾಲ್ಲೂಕಿನ ಬಾಣವಾಡಿ ಗ್ರಾಮದಲ್ಲಿ ದೊರಕಿರುವ ಶಾಸನದಿಂದ ವೀರಶೈವ ಧರ್ಮ ಈ ಪ್ರದೇಶದಲ್ಲಿತ್ತೆಂದು ಹೇಳಬಹುದು. ಈ ಶಾಸನದಲ್ಲಿ

"............ಬಾಣವಾಡಿಯ
ವೀರಭದ್ರದೇವರಿಗೆ ಬಾಣವಾಡಿಸ್ತಳ
ದರಾಮಾಪುರದ ಗ್ರಾಮವಂನುಮಂಗಳಾರ
ತಿನೈವೇದ್ಯಕೆಪಾಲ್ಸಿದರೂ ಯಿದಕೆ ಆವ
ನಾನೊಬ್ಬನು ಆಳುಪಿದರು"[೫೫]

ಎಂಬ ಉಲ್ಲೇಖವಿದ್ದು, ವೀರಭದ್ರದೇವರಿಗೆ ರಾಮಾಪುರ ಗ್ರಾಮವನ್ನು ಉಂಬಳಿಬಿಟ್ಟ ಬಗ್ಗೆ ತಿಳಿಸುತ್ತದೆ.

ನೆಲಮಂಗಲ ತಾಲ್ಲೂಕಿನ ಮಲ್ಲಸಂದ್ರ ಗ್ರಾಮದ ಶಾಸನದಲ್ಲಿ

.....ಪುರದಲಿ ಸುಂಡೆಕೊಪ್ಪದ ವೀರಭದ್ರ
ಕೊಟ್ಟಹೊಲ ||[೫೬]

ಎಂಬ ಉಲ್ಲೇಖವಿದೆ. ವೀರಭದ್ರದೇವರಿಗೆ ಹೊಲವನ್ನು ದತ್ತಿಬಿಟ್ಟ ಬಗ್ಗೆ ವಿವರಿಸಿದೆ.

ಕ್ರಿ.ಶ.೧೫೧೬ರ ಮಾಗಡಿ ತಾಲ್ಲೂಕಿನ ಅರಿಶಿನ ಕುಂಟೆಗ್ರಾಮದ ಶಾಸನದಲ್ಲಿ ವೀರಭದ್ರ ದೇವರಿಗೆ ಅಗ್ರಹಾರವನ್ನು ದಾನ ನೀಡಿದ ಉಲ್ಲೇಖವಿದೆ.[೫೭] ಸಾವನದುರ್ಗದಲ್ಲಿ ಪ್ರಾಚೀನವಾದ ವೀರಭದ್ರ

[illegible]

[illegible]

[illegible]

[illegible]

ದೇವಾಲಯವಿದೆ.[೫೮] ಇವುಗಳಲ್ಲದೆ ಇದೇ ತಾಲ್ಲೂಕಿನ ಕಲ್ಯಗ್ರಾಮದ ಶಾಸನಗಳಿಂದಲೂ ಸಹ ವೀರಶೈವ ಧರ್ಮ ಈ ಪ್ರದೇಶದಲ್ಲಿತ್ತೆಂದು ನಿರೂಪಿಸಬಹುದು.

ಕ್ರಿ.ಶ.೧೫೩೧ರ ಇಲ್ಲಿನ ಶಾಸನದಲ್ಲಿ ವೀರ ಅಚ್ಯುತರಾಯರು ಕಲ್ಲೇಶ್ವರ ದೇವರಿಗೆ ....ಪುರ ಎಂಬ ಗ್ರಾಮವನ್ನು ದಾನ ಬಿಟ್ಟ ಉಲ್ಲೇಖವಿದೆ.[೫೯] ಇದೇ ಗ್ರಾಮದ ಮತ್ತೊಂದು ಶಾಸನದಲ್ಲಿ 'ಕಲಿನಾಥ' ದೇವರಿಗೆ ಹೊಲವನ್ನು, ಗದ್ದೆಯನ್ನು ಮಾನ್ಯ ಮಾಡಿದ ಪ್ರಸ್ತಾಪವಿದೆ.[೬೦] ಅಲ್ಲಿನ ಮತ್ತೊಂದು ಶಾಸನವು ಸಹ ಕಲ್ಲೇಶ್ವರ ದೇವಾಲಯಕ್ಕೆ ದಾನ-ದತ್ತಿ ನೀಡಿದ ಬಗ್ಗೆ ವಿವರಿಸುತ್ತದೆ.[೬೧] ಅದೇ ಗ್ರಾಮದ ಕ್ರಿ.ಶ.೧೫೫೮ರ ಶಾಸನದಲ್ಲಿ ವೀರಭದ್ರದೇವರ ಉಲ್ಲೇಖವಿದೆ. ಜೊತೆಗೆ ಕೆಂಪಸಿದ್ದೇಶ್ವರ ದೇವಾಲಯದ ಪ್ರಸ್ತಾವನೆಯೂ ಇದೆ.[೬೨] ಇವು ವೀರಶೈವಧರ್ಮ/ಮತವು ಈ ಪ್ರದೇಶದಲ್ಲಿ ಇದ್ದಿತ್ತೆಂಬುದಕ್ಕೆ ದಾಖಲೆಗಳಾಗಿವೆ. ಈ ಪ್ರದೇಶದ ಹಲವಾರು ಊರುಗಳಲ್ಲಿ ಪ್ರಾಚೀನವಾದ ಬಸವಣ್ಣನ ಗುಡಿಗಳು, ಈಶ್ವರ ದೇವಾಲಯಗಳು ಇವೆ. ಇವು ಈ ಪ್ರದೇಶದಲ್ಲಿ ವೀರಶೈವ ಧರ್ಮವು ಪ್ರಬಲವಾಗಿತ್ತೆಂಬುದಕ್ಕೆ ನಿದರ್ಶನವಾಗಿವೆ.

ಕಲ್ಯಗ್ರಾಮದಲ್ಲಿರುವ ವೀರಶೈವ ಮಠ, ಗದ್ದುಗೆಗಳು, ಬಸವನ ವಿಗ್ರಹಗಳು. ಈ ಪ್ರದೇಶದಲ್ಲಿ ವೀರಶೈವ ಧರ್ಮವು ಹೆಚ್ಚು ಪ್ರಸಿದ್ಧ ಪಡೆದಿತ್ತು ಎಂಬುದಕ್ಕೆ ದಾಖಲೆಗಳಾಗಿವೆ. ಇಲ್ಲಿರುವ ಗದ್ದುಗೆಗಳಲ್ಲಿ ಒಂದು ಪಾಲ್ಕುರಿಕೆ ಸೋಮನಾಥನದೆಂದು ಪ್ರಸಿದ್ಧಿಯಾಗಿದೆ. ಚನ್ನಬಸವಪುರಾಣದ ಪ್ರಕಾರ ಸೋಮನಾಥ ಸತ್ತಿದ್ದು ಇಲ್ಲೇ. ವೀರಶೈವರು ವರ್ಷಕ್ಕೊಮ್ಮೆ ಇಲ್ಲಿ ಸೋಮನಾಥನ ಪರ್ವವನ್ನು ಆಚರಿಸುತ್ತಾರೆ. ೧೩ನೆಯ ಶತಮಾನದ ಕಡೆಯಲ್ಲಿ 'ಪರ್ವಶಿಲೆ ಚನ್ನಯ್ಯ' ಎಂಬ ಶರಣೆ ಇಲ್ಲಿ ಆಗಿ ಹೋಗಿದ್ದಾಳೆಂದು 'ಪಾಲ್ಕುರಿಕೆ ಸೋಮೇಶ್ವರಪುರಾಣ'ದಿಂದಲೂ, ೧೭ನೆಯ ಶತಮಾನದಲ್ಲಿದ್ದ ಜ್ಞಾನಿ ಚನ್ನಬಸವಣ್ಣನು ಇಲ್ಲಿ ಇದ್ದನೆಂದು 'ಚೆನ್ನಬಸವಪುರಾಣ'ದಿಂದಲೂ ತಿಳಿದುಬರುತ್ತದೆ.

ಗುಹಾದೇವಾಲಯ ಕಲ್ಲೇಶ್ವರ ಗುಡಿಯ ಬಳಿ ಒಂದು ಕಂಬದ ಮೇಲೆ ಕುಂಬಳ ಕಾಯಜ್ಜಿಯದು ಎನ್ನುವ ಸ್ತ್ರೀಯ ತಲೆಯೊಂದನ್ನು ಕೆತ್ತಿರುವ ಶಿಲ್ಪವಿದೆ. ಹಿಂದೆ ಈ ಊರು 'ಕಲಾವತಿ' ಎಂಬ ಪಟ್ಟಣವಾಗಿತ್ತು. ಈಕೆ ಒಮ್ಮೆ ಕುಂಬಳಕಾಯಿಗಳನ್ನು ಮಾರಲು ತಂದಾಗ ಅದನ್ನು ಕೊಳ್ಳುವ ವಿಷಯದಲ್ಲಿ ಜೈನರು ಮತ್ತು ಇತರರಲ್ಲಿ ವಿರಸ ಉಂಟಾಗಿ ಕೊನೆಗೆ ಹಾಳಾಯಿತು ಎಂಬ ಪ್ರತೀತಿ ಇದೆ.[೬೩] ಈ ಮೇಲಿನ ಎಲ್ಲಾ ಖಚಿತ ದಾಖಲೆಗಳಿಂದ ಕುಕ್ಕಲನಾಡಿನಲ್ಲಿ ವೀರಶೈವ ಮತದ ಜೊತೆಗೆ ಜೈನ, ಶೈವ, ವೈಷ್ಣವ ಮತಗಳು ಮತ್ತು ನಾಥಪಂಥವೂ ಇತ್ತೆಂದೂ ತಿಳಿಯುತ್ತದೆ. ಹಾಗೂ ಈ ಪ್ರದೇಶದ ಪ್ರತಿ ದೇವಾಲಯದ ಬಳಿಯೂ ನಾಗಶಿಲ್ಪಗಳು ಕಂಡುಬಂದಿವೆ. ಇದರಿಂದ ನಮಗೆ ಕುಕ್ಕಲನಾಡಿನಲ್ಲಿ ನಾಗಾರಾಧನೆಯು ಹೆಚ್ಚು ಪ್ರಚಲಿತದಲ್ಲಿತ್ತು ಎಂದು ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು

೧. ರಹಮತ್ ತರೀಕೆರೆ (ಸಂ), **ಧರ್ಮ ವಿಶ್ವಕೋಶ**, ಪು.೧೦೦

೨. ಅದೇ, ಪು.೧೫೨

೩. ಟಿ.ಜಿ.ಕಲಘಟಗಿ, **ಕರ್ನಾಟಕದಲ್ಲಿ ಜೈನಧರ್ಮ : ಒಂದು ಅಧ್ಯಯನ**, ೧೯೭೬

೪. ಶಾರದಾ ಕೆ, **ಕರ್ನಾಟಕದಲ್ಲಿ ಜೈನಧರ್ಮ**, ಪು.೧೫

೫. Vincent Smith, **Early History of India**, 3rd edition, Pp.193

೬. Sharma S.R., **Jainism and Karnataka culture**, Pp.6

೭. ಲಕ್ಷ್ಮೀ ನಾರಾಯಣರಾವ್ ಮತ್ತು ಪಂಚಮುಖಿ ಎಸ್.ಆರ್., **ಕರ್ನಾಟಕದ ಅರಸು ಮನೆತನಗಳು**, ಸಂ.೧, ಪು.೨೫

೮. Deo S.B., **History of Jaina Monachism**, Deccan College Research Institute, Pune, 1956

೯. EC-IX, ಮಾಗಡಿ ೪೦

೧೦. ಅದೇ, ಮಾಗಡಿ ೪೧

೧೧. ಕಪಟರಾಳ ಕೃಷ್ಣರಾಯ, **ಕರ್ನಾಟಕ ಕಲಾಕುಳ ಶೈವ ಇತಿಹಾಸ**, ಪು.೧೧೫

೧೨. ಡೇವಿಡ್ ಎನ್. ಲೊರೆನ್ ಜೆನ್, **ದ ಕಾಪಾಲಿಕಾಸ್ ಅಂಡ್ ಕಾಳಾಮುಖಾಸ್**, ೧೯೭೨

೧೩. EC-IX, Nl, ೩೮, ಕ್ರಿ.ಶ.೧೩೦೧

೧೪. ಅದೇ, Nl, ೩೯, ಕ್ರಿ.ಶ.೧೫೬೬

೧೫. ಅದೇ, Nl, ೩೭, ಕ್ರಿ.ಶ.೧೦೩೩

೧೬. ಅದೇ, Nl, ೦೩, ಕ್ರಿ.ಶ.೧೧೧೦

೧೭. ಅದೇ, Nl, ೩೧, ಕ್ರಿ.ಶ.೧೫೩೩

೧೮. ಅದೇ, ಮಾಗಡಿ, ೦೨, ಕ್ರಿ.ಶ.೧೬೬೯

೧೯. ಅದೇ, Bn, ೨೬, ಕ್ರಿ.ಶ.೧೪೩೦

೨೦. ಸೂರ್ಯನಾಥ ಕಾಮತ್ ಮತ್ತಿತರು(ಸಂ), **ಶ್ರೀ ಭೈರವಕ್ಷೇತ್ರ ಸೀತಿಬೆಟ್ಟ**, ಪು.೪೭-೮೭

೨೧. ರಹಮತ್ ತರೀಕೆರೆ, **ಕರ್ನಾಟಕ ನಾಥಪಂಥ**, ಪು.೧೮೪

೨೨. ಅದೇ, ಪು.೧೮೫

೨೩. ಅದೇ, ಪು.೧೮೫

೨೪. ಅದೇ, ಪು.೧೮೫

೨೫. ಅದೇ, ಪು.೧೮೭

೨೬. ರಾಮಚಂದ್ರರಾವ್ ಎಸ್.ಕೆ.(ಸಂ). ಶ್ರೀ ತತ್ವನಿಧಿ, ೧೯೯೨. ರಹಮತ್ ತರೀಕೆರೆ, **ಕರ್ನಾಟಕದ ನಾಥಪಂಥ**, ಪು.೧೮೮

೨೭. ಅದೇ, ಪು.೧೮೮

೨೮. ರಾಜೇಶ್ವರಿಗೌಡ ಕೆ., ಆದಿಚುಂಚನಗಿರಿ : ಒಂದು ಸಾಂಸ್ಕೃತಿಕ ಅಧ್ಯಯನ, ಪು.೧೭೫

೩೦. ಪ್ರಭಾಕರ ಜೋಗಿ, ಆದಿಚುಂಚನಗಿರಿ ಮಠದ ಸಮಸ್ಯೆ, ಪು.೧

೩೧. EC-IX, Nl, ೦೧, ಕ್ರಿ.ಶ.೧೦೨೯

೩೨. ಅದೇ,

೩೩. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧೮೨

೩೪. ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು : ಒಂದು ಅಧ್ಯಯನ, ಪು.೨೬೭

೩೫. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧೮೨

೩೬. ಅದೇ, ಪು.೧೮೩

೩೭. ಕರ್ನಾಟಕ ಇನ್‌ಕ್ರಿಪ್‌ಷನ್, ಸಂ.I, ಕ್ರಿ.ಶ.೫೭೮

೩೮. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ IX-I-೧೦೨, ಕ್ರಿ.ಶ.೧೦೪೬ ಮತ್ತು ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೧, ಹಡಗಲಿ

೩೯. ಕ.ಇನ್ಸ್-II-೧೦, ಕ್ರಿ.ಶ.೧೦೭೯ ಮತ್ತು ೧೧೮೧ ಹಾಗೂ ಸೌ.ಇಂ.ಇನ್ಸ್-XV-II-೬೭, ಕ್ರಿ.ಶ.೧೧೮೫

೪೦. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೧೮೪

೪೧. EC-VI, ಕಡೂರು, ೨, ಕ್ರಿ.ಶ.೧೧೦೦

೪೨. EC-V, ಬೇಲೂರು, ೫೮ ಮತ್ತು ೭೧, ಕ್ರಿ.ಶ.೧೧೧೭

೪೩. EC-V, ಬೇಲೂರು, ೫೯, ಕ್ರಿ.ಶ.೧೧೭೪

೪೩a. EC-IX, Bn, ೧೦೮, ಕ್ರಿ.ಶ.೧೦೬೦

೪೪. EC-IX, ಮಾಗಡಿ, ೧೮, ಕ್ರಿ.ಶ.೧೩೬೮

೪೫. ಅದೇ, Bn, ೧೨೨, ಕ್ರಿ.ಶ.೧೪೧೮

೪೬. ಅದೇ, ಮಾಗಡಿ, ೭೯, ಕ್ರಿ.ಶ.೧೫೧೧

೪೭. ಅದೇ, ಮಾಗಡಿ, ೪೫, ಕ್ರಿ.ಶ.೧೫೧೫

೪೮. ಅದೇ, ಮಾಗಡಿ, ೬೦, ಕ್ರಿ.ಶ.೧೫೪೦, ೬೧, ೬೭, ಕ್ರಿ.ಶ.೧೫೫೪

೪೯. ಅದೇ, ಮಾಗಡಿ, ೮೨, ಕ್ರಿ.ಶ.೧೫೨೪

೫೦. ಅದೇ, ಮಾಗಡಿ, ೦೬, ಕ್ರಿ.ಶ.೧೫೨೪

೫೧. ಅದೇ, ಮಾಗಡಿ, ೧೫, ಕ್ರಿ.ಶ.೧೩೧೫

೫೨. ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ, ಪು.೧೩೫೫, ೧೯೭೯

೫೩. ಅದೇ, ಪು.೧೩೫೫

೫೪. ಅದೇ, ಪು.೧೩೫೬

೫೫. EC-IX, ಮಾಗಡಿ ೭೪, ಕ್ರಿ.ಶ.೧೫೪೭

೫೬. ಅದೇ, Nl. ೧೮, ೧೮ನೇ ಶತಮಾನ

೫೭. ಅದೇ, ಮಾಗಡಿ, ೬೮, ಕ್ರಿ.ಶ.೧೫೧೬

೫೮. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಪು.೧೪೯೫

೫೯. EC-IX, ಮಾಗಡಿ, ೨೧, ಕ್ರಿ.ಶ.೧೫೩೧

೬೦. ಅದೇ, ೨೨, ಕ್ರಿ.ಶ.೧೫೧೨

೬೧. ಅದೇ ೨೩, ಕ್ರಿ.ಶ.೧೬೪೯

೬೨. ಅದೇ, ೨೮, ಕ್ರಿ.ಶ.೧೫೫೮

೬೩. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಪು.೧೪೯೫, ಗಮನಿಸಿ : ಚಿದಾನಂದ ಮೂರ್ತಿಯವರ 'ಹೊಸತು ಹೊಸತು' ಪುಸ್ತಕ, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೦೭

ಅಧ್ಯಾಯ ೬

ಕುಕ್ಕಲನಾಡಿನ ದೇವಾಲಯಗಳು ಮತ್ತು ಶಿಲ್ಪಗಳು

೬.೧. ಪೀಠಿಕೆ

೬.೨. ದೇವಾಲಯ ನಿರ್ಮಾಣ ಮತ್ತು ದಾನ

೬.೩. ದೇವಾಲಯಗಳು

೬.೪. ಶಿಲ್ಪಗಳು

೬

ಕುಕ್ಕಲನಾಡಿನ ದೇವಾಲಯಗಳು ಮತ್ತು ಶಿಲ್ಪಗಳು

೬.೧. ಪೀಠಿಕೆ

ದೇವಾಲಯಗಳು ಮಾನವನ ಬದುಕಿನಲ್ಲಿ ಮಹತ್ವದ ಪಾತ್ರವಹಿಸಿವೆ. ಮೂಲತಃ ದೇವಾಲಯ ಎಂಬುದು ಒಂದು ಕಟ್ಟಡ, ಸಾಮೂಹಿಕ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಲು ಅನುಕೂಲವಿರುವ ಒಂದು ತಾಣ. ಯಾವ ಮತ ಧರ್ಮದಲ್ಲಾದರೂ ಪೂಜಾ ಸ್ಥಳಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಮೂರ್ತಿ ಪೂಜೆಯು ಇರಲಿ ಇಲ್ಲದಿರಲಿ ಇದೊಂದು ಸಾರ್ವಜನಿಕ ಸ್ಥಳ.

ಪ್ರತಿಮೆಗೊಂದು ನೆಲೆಯಾಗಿ, ಸಾರ್ವಜನಿಕ ಸಮಾವೇಶಕ್ಕೊಂದು ಸ್ಥಳವಾದ ಕಟ್ಟಡವೇ ದೇವಾಲಯ. ದೇವಸ್ಥಾನ, ಗುಡಿ, ದೇವಮಂದಿರ, ದೇವಾಗಾರ, ದೇವಳ, ದೇಗುಲ ಇತ್ಯಾದಿ ಹೆಸರುಗಳು ಇರುವ ದೇವಾಲಯದ ವಿಕಾಸದ ವಿವಿಧ ಹಂತಗಳನ್ನು ಗುರುತಿಸುವುದು ಸಾಧ್ಯವಾದರೂ ಅದು ಉಗಮಗೊಂಡ ಬಗೆಗೆ ಖಚಿತವಾಗಿ ಹೇಳಲು ಸಾಧ್ಯವಾಗಿಲ್ಲ. ದೇವಾಲಯಗಳು ಬೌದ್ಧಸ್ತೂಪಗಳಿಂದ ಉಗಮವಾದವೆ? ವೇದಕಾಲೀನ ಯಜ್ಞವೇದಿಕೆಗಳಿಂದ ಬೆಳೆದುಬಂದುವೆ? ಸಮಾಧಿ ಮಂದಿರಗಳಾಗಿ ಆಂಭವಾದುವೆ? ಇಂತಹ ಹಲವಾರು ಪ್ರಶ್ನೆಗಳಿಗೆ ಸಮಂಜಸ ಉತ್ತರ ಇನ್ನೂ ದೊರೆತಿಲ್ಲ.[೧] ಪ್ರಸ್ತುತ ಈ ಅಧ್ಯಾಯದಲ್ಲಿ ಕುಕ್ಕಲನಾಡಿನ ದೇವಾಲಯಗಳ ಬಗ್ಗೆ ವಿವರಿಸಲಾಗಿದೆ.

ನನ್ನ ಅಧ್ಯಯನ ಕಾಲದ ಶಾಸನಗಳಲ್ಲಿ ಕಾಣಬರುವ ದೇವಾಲಯಗಳು ಅಂದಿನ ಜನಜೀವನದಲ್ಲಿ ಮಹತ್ವದ ಪಾತ್ರವಹಿಸಿವೆ. ಅವು ಕೇವಲ ಭಕ್ತಿಯ ಕೇಂದ್ರಗಳಾಗಿರದೆ ಅಂದಿನ ಸಾಮಾಜಿಕ, ಆರ್ಥಿಕ ಕಾರ್ಯಕಲಾಪಗಳನ್ನು ನಿಭಾಯಿಸುವ ಸಂಸ್ಥೆಗಳಾಗಿದ್ದವು. ಕುಕ್ಕಲನಾಡಿನಲ್ಲಿ ಸುಮಾರು (ಶಾಸನೋಕ್ತ ದೇವಾಲಯಗಳು ಮತ್ತು ಶಾಸನ ದೊರೆಯುವ ಸ್ಥಳದಲ್ಲಿನ ದೇವಾಲಯಗಳು) ೪೦ಕ್ಕೂ ಹೆಚ್ಚು ಪ್ರಾಚೀನ ದೇವಾಲಯಗಳಿದ್ದು ಅವು ವಿಭಿನ್ನ ಮತ, ಪಂಥಗಳಿಗೆ(ಶೈವ, ವೈಷ್ಣವ, ವೀರಶೈವ) ಸೇರಿದವುಗಳಾಗಿವೆ.

೬.೨. ದೇವಾಲಯಗಳ ನಿರ್ಮಾಣ ಮತ್ತು ದಾನ

ದೇವಾಲಯದ ಕಟ್ಟುವಿಕೆ ಮತ್ತು ಅವುಗಳ ಪೋಷಣೆಯಲ್ಲಿ ಅಂದಿನ ಅರಸು ಮನೆತನದ ಪಾತ್ರ ಪ್ರಧಾನವಾಗಿರುತ್ತಿತ್ತು. ಕುಕ್ಕಲನಾಡಿನ ದೇವಾಲಯಗಳ ನಿರ್ಮಾಣ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು

ದಾನದತ್ತಿಗಳ ಮೂಲಕ ಅವುಗಳಿಗೆ ಪೋಷಣೆ ಒದಗಿಸುವುದರಲ್ಲಿ ಗಂಗರು, ಹೊಯ್ಸಳರು, ಚೋಳರು, ವಿಜಯನಗರದ ಅರಸರು ಮತ್ತು ಇವರ ಮಾಂಡಲೀಕರುಗಳು ಗಮನಾರ್ಹ ಸೇವೆ ಸಲ್ಲಿಸಿದ್ದಾರೆ.

ಪ್ರಾಚೀನ ಮತ್ತು ಮಧ್ಯಕಾಲೀನ ದೇವಾಲಯಗಳು ಅಂದಿನ ಜನರಲ್ಲಿ ಬೇರೂರಿದ ಜೀವನದ ಶ್ರದ್ಧೆ ಮತ್ತು ನಿಷ್ಠೆಗಳನ್ನು ತೋರಿಸುತ್ತವೆ. ಅವು ಜನಜೀವನದ ಭಾಗವೇ ಆಗಿ ಅವರನ್ನು ತಿದ್ದುವ ಶಕ್ತಿಗಳಾಗಿರಬೇಕೆಂಬುದೇ ಅವುಗಳ ನಿರ್ಮಾಣದ ಹಿಂದಿರುವ ಮಹೋದ್ದೇಶವಾಗಿತ್ತು.[೨] ಇದರಿಂದಾಗಿ ಅಂದಿನ ಕರ್ನಾಟಕದ ಪ್ರತಿ ಊರಿಗೆ ದೇವಸ್ಥಾನವೇ ಕೇಂದ್ರಬಿಂದುವಾಗಿರುತ್ತಿತ್ತು. ಅದರ ಸುತ್ತ ಆ ಊರಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವು ರೂಪುಗೊಳ್ಳುತ್ತಿದ್ದ ಬಗೆಯನ್ನು ಡಾ.ಎಂ.ಚಿದಾನಂದ ಮೂರ್ತಿಯವರು ಹೀಗೆ ಹೇಳಿದ್ದಾರೆ. ದೇವಸ್ಥಾನವು ಜನರ ದೈವಭಕ್ತಿಯ ಕೇಂದ್ರವಾಗಿದ್ದಂತೆ ವಿದ್ಯಾಕೇಂದ್ರವೂ ಆಗಿದ್ದಿತು. ಶಿಲ್ಪ, ಚಿತ್ರ, ಸಂಗೀತ, ನರ್ತನಾದಿ ಕುಶಲ ಕಲೆಗಳು ದೇವಸ್ಥಾನದ ಆಶ್ರಯದಲ್ಲಿ ವರ್ಧಿಸಿದುವು. ದೇವಸ್ಥಾನವು ಜನರ ನ್ಯಾಯಾಲಯವೂ ಆಗಿದ್ದಿತು. ದುಃಖ ಬಂದಾಗ ಜನರು ದೇವಸ್ಥಾನಕ್ಕೆ ಹೋಗಿ ಅಲ್ಲಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ದೇವಸ್ಥಾನವನ್ನು ಅಲಂಕರಿಸಿ ಪೂಜೋತ್ಸವಗಳನ್ನು ನಡೆಯಿಸಿ ಸುಖಿಸುತ್ತಿದ್ದರು. ದೇವಸ್ಥಾನವು ಬಡವರಿಗೆ ಸತ್ರವಾಗಿದ್ದಿತು. ಶ್ರೀಮಂತರ ಐಶ್ವರ್ಯವು ಹರಿದು ಹೊರಗೆ ಬರಲು ಕಾರಣವಾಗಿದ್ದಿತು.[೩] ಹೀಗೆ ಬಹುಮುಖ ಚಟುವಟಿಕೆಗಳಿಗೆ ಆಗರವಾದ ದೇವಾಲಯದ ನಿರ್ಮಾಣದ ಕಾರ್ಯ ಮಧ್ಯಕಾಲೀನ ಯುಗದ ಕರ್ನಾಟಕದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದಿರುವುದು ತಿಳಿದುಬರುತ್ತದೆ.

ಜೀವನದಲ್ಲಿ ಒಂದಾದರೂ ಗುಡಿಯನ್ನು ಕಟ್ಟಿಸಬೇಕೆಂದು, ಇಲ್ಲವೇ ಕಟ್ಟಿಸಿದ ಗುಡಿಗಳಿಗೆ ದಾನವನ್ನು ಕೊಡಬೇಕೆಂಬುದು, ಆಗಿನವರ ಧಾರ್ಮಿಕ ಭಾವನೆಯಾಗಿತ್ತು.[೪] ಸಂಪತ್ತು ಶಾಶ್ವತವಾದುದ್ದಲ್ಲ, ಧರ್ಮವೇ ನಿಜವಾದ ಸಂಪತ್ತು. ''ಒಡಲೊಡವೆ ಹೆಂಡಿರೆಂಬವರಿಗೆ ಮಾತ್ರ, ಪುರುಷರಿಗೆ ಪುಣ್ಯ ರೂಪವೇ ಒಡವೆ, ಸಿರಿನಿಟ್ಟೆಯಲ್ತು ಧರ್ಮವೇ ಪರಮಧನಂ''[೫] ಆದುದರಿಂದ ಲಾಭಲೋಭದಿಂದ ತಾನುಣ್ಣದೆ ಪೆರರ್ಗಿಕ್ಕದೆ ಮಡುಗಿ ನೃಪರಿಗೆ ತೆತ್ತು ಬರಿದಾಗಿ ಬೆಳ್ಮೊಗದಿಂದಿರುವುದಕ್ಕಿಂತ ದೇವಾಲಯದ ನಿರ್ಮಾಣದಂತಹ ಧರ್ಮಕಾರ್ಯ ಮಾಡುವುದು ಲೇಸೆನಿಸಿತ್ತು.[೬] ಇದಕ್ಕೆ ನಿದರ್ಶವಾಗಿ ಕುಕ್ಕಲನಾಡಿನಲ್ಲಿ ರಾಜ, ಅಧಿಕಾರಿ, ವರ್ತಕ, ಸಾಮಾನ್ಯರೆನ್ನದೇ ದೇವತಾಪ್ರತಿಷ್ಠೆ ಹಾಗೂ ದೇವಾಲಯ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗಿದ್ದಾರೆ. ಹಾಗೂ ದೇವಾಲಯ ಕಟ್ಟಿಸುವುದನ್ನು ಪ್ರೋತ್ಸಾಹಿಸುತ್ತಿದ್ದ ಅಂದಿನ ಅರಸರು, ಆಡಳಿತದ ವಿವಿಧ ಅಧಿಕಾರಿಗಳು, ಸಾಮಾನ್ಯರು ಯಾವ ಭೇದ-ಭಾವವಿಲ್ಲದೆ ಸಾಮೂಹಿಕ ವಾಗಿಯೂ, ವೈಯಕ್ತಿಕವಾಗಿಯೂ ದಾನ-ದತ್ತಿಗಳನ್ನು ಬಿಟ್ಟಿದ್ದಾರೆ. ದೇವಾಲಯಗಳಿಗೆ ದಾನ ಬಿಡುವ ವಸ್ತುಗಳಲ್ಲಿ ಭೂಮಿ, ನಿವೇಶನ, ಹಣ, ಧವಸ-ಧಾನ್ಯ ಎಣ್ಣೆಗಾಣ, ದನ-ಕರುಗಳು, ತೆರಿಗೆ-ಸುಂಕ, ಒಡವೆಗಳು, ಉಡುಗೊರೆಗಳು, ಊರುಗಳು ಮತ್ತು ಅಗ್ರಹಾರಗಳು ಸೇರಿರುತ್ತಿದ್ದವು.

ಕ್ರಿ.ಶ.೧೦೩೩ರ ನೆಲಮಂಗಲ ತಾಲ್ಲೂಕಿನ ಐಗಂಡಪುರ ಗ್ರಾಮದ ತಮಿಳು ಶಾಸನವು ಕುಕ್ಕಲನಾಡಿನ ಸಿದ್ದೇಶ್ವರ ದೇವರಿಗೆ, ದೇವಾಲಯ ಕಟ್ಟಿಸಲು ಕೊನೇರಿನ್ ಮೈ-ಕೊಂಡನ್, ರಾಜಮಾಣಿಕ್ಯ-ಮುವೆಂದ-ವೇಳನ್ ಮತ್ತು ದಂಡನಾಯಕ ವಾಮನಯ್ಯನು ಎರಡು ಗದ್ದೆಗಳನ್ನು, ಚಿನ್ನವನ್ನು ದಾನ ನೀಡಿದ ವಿವರವಿದೆ.[೭]

ನೆಲಮಂಗಲ ತಾಲ್ಲೂಕಿನ, ಬಿನ್ನಮಂಗಲ ಗ್ರಾಮದ ಕ್ರಿ.ಶ.೧೧೧೦ರ ತಮಿಳು ಶಾಸನವು ಮುಕ್ತಿನಾಥ ದೇವಾಲಯದ ಅಭಿವೃದ್ಧಿಗೆ ಬಿನ್ನಮಂಗಲ ಮತ್ತು ನಕ್ಕೂರು ಗ್ರಾಮಗಳನ್ನು ದಾನ ಬಿಟ್ಟ ಬಗ್ಗೆ ಉಲ್ಲೇಖಿಸುತ್ತದೆ.[೮] ಧರ್ಮೇಶ್ವರ(ಮಹೇಶ್ವರ) ದೇವಾಲಯಕ್ಕೆ ವಿವಿಧ ತೆರಿಗೆಗಳು, ಉತ್ತಮ ಹಸುಗಳು, ಉತ್ತಮ ಎತ್ತುಗಳನ್ನು ಮತ್ತು ದೇವ-ದನಗಳನ್ನು ದಾನ ನೀಡಿದ ಉಲ್ಲೇಖವು ನೆಲಮಂಗಲ ತಾಲ್ಲೂಕಿನ ಐಗಂಡಪುರದ ತಮಿಳು ಶಾಸನದಲ್ಲಿ ಕಂಡುಬಂದಿದೆ.[೯] ಮಾಗಡಿ ತಾಲ್ಲೂಕಿನ ಕಲ್ಲೂರು ಗ್ರಾಮದ ಕ್ರಿ.ಶ.೧೩೧೫ರ ಶಾಸನವು ಅಲ್ಲಾಳನಾಥ ದೇವಾಲಯಕ್ಕೆ ದೋರಸಮುದ್ರದ ಜಗದಗುರು ವರದಾರಾಧ್ಯ ಮತ್ತು ಹಿರಿಯರು, ಕಮ್ಮಾರರು, ಅಕ್ಕಸಾಲಿಗರು, ಎಲ್ಲಾ ಗದ್ದೆಯನ್ನು ತಪ್ಪು ಮತ್ತು ತವುಡಿಯನು ಧಾರಪೂರ್ವಕವಾಗಿ ನೀಡಿದ್ದನ್ನು ದಾಖಲಿಸಿದೆ.[೧೦] ಬೆಂಗಳೂರಿನ ಕನ್ನೆಲ್ಲಿ ಗ್ರಾಮದ ಶಾಸನವು ಕುಕ್ಕಲನಾಡ ಅಧಿಕಾರಿ ಹಯಕಸ ಎಂಬುವವನು ಕನ್ನೆಲ್ಲಿಯ ತಿರುಮಲೆನಾಥ ದೇವಾಲಯದ ಅಭಿವೃದ್ಧಿಗೆ ಎರಡು ಮಗ್ಗವನ್ನು ಸುಂಕ ಮಾನ್ಯವಾಗಿ ಕೊಟ್ಟ ಬಗ್ಗೆ ಉಲ್ಲೇಖಿಸುತ್ತದೆ.[೧೧]

ಕ್ರಿ.ಶ.೧೫೩೩ರ ನೆಲಮಂಗಲ ತಾಲ್ಲೂಕಿನ, ಹೆಸರುಘಟ್ಟ ಗ್ರಾಮದ ಶಾಸನವು ಹೆಸರುಘಟ್ಟ(ಸಿವನ ಸಮುದ್ರ) ಅಗ್ರಹಾರದಲ್ಲಿ ಭಾರದ್ವಾಜಗೋತ್ರದ ಅಶ್ವಲಾಯನಸೂತ್ರದವರು ಕಾಶಿಯಿಂದ ಶಿವಲಿಂಗವನ್ನು ತಂದು ಚಂದ್ರಮೌಳೇಶ್ವರ ದೇವಾಲಯವನ್ನು ಕಟ್ಟಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಹಾಗೆಯೇ ಈ ದೇವಾಲಯದ ಅಭಿವೃದ್ಧಿಗೆ ನಾನಾಗೋತ್ರದ, ನಾನಾ ಸೂತ್ರದ, ನಾನಾ ಶಾಖೆಯ, ನಾನಾ ನಾಮಧೇಯರಾದ ಅನೇಕ ವಿದ್ವನ್ಮಹಾಜನರು ಹೊಲ, ಗದ್ದೆ, ತೋಟಗಳನ್ನು ದಾನ ಕೊಟ್ಟ ಬಗ್ಗೆ ವಿವರಿಸುತ್ತದೆ.[೧೨]

ಮಾಗಡಿ ತಾಲ್ಲೂಕಿನ ಬಾಣವಾಡಿ ಗ್ರಾಮದ ಕ್ರಿ.ಶ.೧೫೪೭ರ ಶಾಸನವು ಕುಕ್ಕಲನಾಡಿನ ಪಂಡಿತಯ್ಯನವರು ತಮ್ಮ ಅರಸು ಸದಾಶಿವರಾಯರಿಗೆ ಪುಣ್ಯವಾಗಲೆಂದು ಬಾಣವಾಡಿಯ ವೀರಭದ್ರ ದೇವಾಲಯವನ್ನು ಕಟ್ಟಿಸಲು ಮತ್ತು ಅದರ ಅಭಿವೃದ್ಧಿಗೆ ರಾಮಾಪುರ ಎಂಬ ಗ್ರಾಮವನ್ನು ದಾನ ಕೊಟ್ಟ ಬಗ್ಗೆ ತಿಳಿಸುತ್ತದೆ.[೧೩]

ಅಂದಿನ ಕಾಲದಲ್ಲಿ ದೇವಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಮಾನವನ ಉದಾತ್ತೀಕರಣದ ನೆಲೆಗಳಾಗಿದ್ದವು. ಈ ದೇವಾಲಯ, ಇವುಗಳಿಗೆ ಹೊಂದಿಕೊಂಡ ಮಠಗಳು, ಇಲ್ಲಿ ವಾಸಿಸುವ ಯತಿ ಮುನಿಗಳು, ಅವರು ಕೈಗೊಂಡ ವಿದ್ಯಾಪ್ರಸಾರ, ನೀಡಿದ ಉಪದೇಶ ಮುಂತಾದ ಚಟುವಟಿಕೆಗಳಿಂದಾಗಿ

ಇವು ಜನಜೀವನದ ಕೇಂದ್ರಬಿಂದುಗಳಾಗಿದ್ದವು. ಅವುಗಳಲ್ಲಿ ಕೆಲವು ಪ್ರಮುಖ ದೇವಾಲಯಗಳು ಈಗಲೂ ಉಳಿದು ಬಂದಿದ್ದು ಗತಕಾಲದ ಇತಿಹಾಸವನ್ನು ಸಾರುತ್ತಿವೆ. ಇನ್ನೂ ಕೆಲವು ದೇವಾಲಯಗಳ ಹೆಸರು ಶಾಸನಗಳಲ್ಲಿ ಮಾತ್ರ ಉಲ್ಲೇಖಗೊಂಡಿವೆ. ವಾಸ್ತುಶಿಲ್ಪ ರಚನಾ ದೃಷ್ಟಿಯಿಂದ ಈಗ ಅಸ್ತಿತ್ವ ದಲ್ಲಿರುವ ದೇವಾಲಯಗಳನ್ನು ಗಮನಿಸಬಹುದು.

೬.೩. ದೇವಾಲಯಗಳು

ಕುಕ್ಕಲನಾಡಿನಲ್ಲಿರುವ ವಿವಿಧ ಮತ, ಪಂಥಗಳಿಗೆ ಸೇರಿದ ಪ್ರಾಚೀನ ದೇವಾಲಯಗಳನ್ನು ಎರಡು ರೀತಿ ವಿಂಗಡಿಸಬಹುದು.

೬.೩.೧. ಶಾಸನೋಕ್ತ ದೇವಾಲಯಗಳು

ಕುಕ್ಕಲನಾಡು ಪ್ರದೇಶದಲ್ಲಿನ ಶಾಸನಗಳು ಅನೇಕ ದೇವಾಲಯಗಳನ್ನು ಅಥವಾ ದೇವರುಗಳನ್ನು ಕುರಿತು ಹೆಸರಿಸುತ್ತವೆ. ಕ್ರಿ.ಶ.೧೦೩೩ರ ನೆಲಮಂಗಲ ತಾಲ್ಲೂಕಿನ ಐಗಂಡಪುರದ ತಮಿಳು ಶಾಸನವು ಸಿದ್ದೇಶ್ವರ ದೇವರ ಬಗ್ಗೆ ತಿಳಿಸುತ್ತದೆ.[೧೪] ಅದೇ ಸ್ಥಳದ ಕುಂತೀಲಿಂಗದ ಬಳಿ ನೆಟ್ಟ ಶಾಸನವು 'ಅಯ್ವರಗಂಡದೇವರ' ಬಗ್ಗೆ[೧೫] ಹಾಗೂ ಇದೇ ಗ್ರಾಮದ ಮತ್ತೊಂದು ಶಾಸನವು ತಿರುವೆಂಗಳರಾಯನ (ದೇವರ) ಸೇವೆಗೆ ಎಂದು ಉಲ್ಲೇಖಿಸುತ್ತವೆ.[೧೬]

ಮಾಗಡಿ ತಾಲ್ಲೂಕಿನ ಕ್ರಿ.ಶ.೧೩೧೫ರ ಕಲ್ಲೂರು ಗ್ರಾಮದ ಶಾಸನವು ಅಲ್ಲಾಳನಾಥ ದೇವರನ್ನು ಕುರಿತು ಉಲ್ಲೇಖಿಸುತ್ತದೆ.[೧೭] ಹೀಗೆ ವಿವಿಧ ದೇವಾಲಯಗಳು ಮತ್ತು ದೇವರುಗಳ ಹೆಸರನ್ನು ಉಲ್ಲೇಖಿಸುವ ಪ್ರಮುಖ ಶಾಸನಗಳ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

ಕ್ರ. ಸಂ.	ದೇವಾಲಯಗಳು ಮತ್ತು ದೇವರುಗಳು	ಸ್ಥಳ	ಶಾಸನ
೧.	ಮುಕ್ತಿನಾಥ ದೇವಾಲಯ	ಬಿನ್ನಮಂಗಲ	ಬೈಲಕೊನೇನಹಳ್ಳಿ ಶಿಲಾ ಶಾಸನ, ಗೋಪಾಲರಾವ್ ಎಚ್.ಎಸ್., ಶಾಸನ ಸಂಕಲನ, ಪು.೨೧
೨.	ತಿರುಮಲೆನಾಥ ದೇವರು	ಕನ್ನೆಲ್ಲಿ,	EC-IX, ೧೨೨, ಕ್ರಿ.ಶ.೧೪೦೮
೩.	ಸೊಂಡೇಕೊಪ್ಪದ ವೀರಭದ್ರ	ಮಲ್ಲಸಂದ್ರ,	EC-.IX, XII, ೧೮, ಕ್ರಿ.ಶ.೧೪ನೇ ಶತಮಾನ
೪.	ಕಲ್ಲೇಶ್ವರ ದೇವರು	ಕಲ್ಯ	EC-IX, ಮಾಗಡಿ, ೨೧, ಕ್ರಿ.ಶ.೧೫೩೧
೫.	ಕಲಿನಾಥದೇವರು	ಕಲ್ಯ	EC-IX, ಮಾಗಡಿ, ೨೨, ಕ್ರಿ.ಶ.೧೫೧೨

೬. ಅಂಕನಾಥದೇವರು	ಕೆಂಗೇರಿ	EC-IX, Bn, ೧೦೯
೭. ವೀರಭದ್ರ ಮತ್ತು ಕೆಂಪಸಿದ್ದೇಶ್ವರ ದೇವರು	ಕಲ್ಯ	EC-IX, ಮಾಗಡಿ, ೨೮, ಕ್ರಿ.ಶ.೧೫೫೮
೮. ಚಂದ್ರಸೇನ ಸೂರಿಗಳ ನಿಸಿಧಿ	ಹೂಜಿಗೆರೆ	EC-IX, ಮಾಗಡಿ, ೪೦, ೪೧
೯. ಚಂದ್ರಮೌಳೇಶ್ವರ	ಹೆಸರುಘಟ್ಟ	EC-IX, Nl, ೩೧, ಕ್ರಿ.ಶ.೧೫೪೭

ಮುಂತಾದವುಗಳು.

ದೇವಾಲಯಗಳ ರಚನೆಯಲ್ಲಿ ರಾಜನೇ ನೇರವಾಗಿ ಪಾಲ್ಗೊಳ್ಳದಿದ್ದರೂ ಅವನ ಸಾಮಂತರೋ ಅಥವಾ ಶ್ರೀಸಾಮಾನ್ಯರೋ ನಿರ್ಮಿಸಿರುವುದು ತಿಳಿದುಬರುತ್ತದೆ. ಅನೇಕ ರಚನೆಗಳು ಇಂದಿಗೂ ಉಳಿದುಬಂದಿದ್ದು, ಶಾಸನ ವಿವರಗಳ ನೈಜತೆಯನ್ನು ಪುಷ್ಟೀಕರಿಸುತ್ತಿವೆ. ಹೊಸ ದೇವಾಲಯಗಳ ರಚನೆ ಒಂದೆಡೆಯಾಗುತ್ತಿದ್ದರೆ, ಇನ್ನೊಂದೆಡೆ ಹಳೆಯ ದೇವಾಲಯಗಳ ಜೀರ್ಣೋದ್ಧಾರ ಮುಂತಾದ ಕಾರ್ಯಗಳು ನಡೆದಿರುವುದನ್ನು ಕಾಣುತ್ತೇವೆ.

೬.೩.೨. ಶಾಸನ ದೊರೆಯುವ ಸ್ಥಳದಲ್ಲಿನ ದೇವಾಲಯಗಳು

ಇದುವರೆಗೆ ದೇವಾಲಯಗಳ ಉಲ್ಲೇಖ ಬಂದಿರುವ ಶಾಸನಗಳನ್ನು ಗಮನಿಸಲಾಯಿತು. ಇಲ್ಲಿ ಮತ್ತೆ ಆ ವಿಷಯಕ್ಕೆ ಸಂಬಂಧಿಸಿದ ಶಾಸನಗಳನ್ನು ಪುನರಾವರ್ತಿಸದೆ, ಶಾಸನ ದೊರೆತಿರುವ ಸ್ಥಳದಲ್ಲಿನ ದೇವಾಲಯಗಳ ಬಗ್ಗೆ ತಿಳಿಯೋಣ. ಈ ವಿವರವನ್ನು ತಿಳಿಯಲು ಮುಖ್ಯ ಕಾರಣವೆಂದರೆ ಸಾಮಾನ್ಯವಾಗಿ ಶಾಸನಗಳನ್ನು ದೇವಾಲಯಗಳ ಸಮೀಪ ನೆಡುತ್ತಿದ್ದರು. ಅಂದರೆ ಈ ಶಾಸನಗಳನ್ನು ನೆಡುವ ಕಾಲಕ್ಕೆ ಈಗಿರುವ ದೇವಾಲಯ ಅಂದೇ ಅಸ್ತಿತ್ವದಲ್ಲಿದ್ದಿರಬೇಕು. ಶಾಸನ ದೊರೆತಿರುವ ಸ್ಥಳದಲ್ಲಿರುವ ದೇವಾಲಯ ಇಂದಿಗೂ ಅದೇ ರೂಪದಲ್ಲಿದ್ದಿರಬಹುದು. ಇಲ್ಲವೆ ಬದಲಾದ ಕಾಲಕ್ಕೆ ತಕ್ಕ ಹಾಗೇ ಜೀರ್ಣೋದ್ಧಾರವಾಗಿರಬಹುದು. ಇಲ್ಲವೇ ನಾಮಾವಶೇಷವಾಗಿ ಅದರ ಅವಶೇಷಗಳ ಮೇಲೆ ಹೊಸ ದೇವಾಲಯ ರಚಿತವಾಗಿರಬಹುದು. ಇಂತಹ ಊಹೆಯನ್ನು ಪರೀಕ್ಷಿಸಲೋಸುಗ ಅಂತಹ ಸ್ಥಳಗಳಿಗೆ ಹೋಗಿ ಕ್ಷೇತ್ರ ಪರಿವೀಕ್ಷಣಾ ಕಾರ್ಯನಡೆಸಿದಾಗ ಅಲ್ಲಿ ದೇವಾಲಯವಿದ್ದುದು ಅಥವಾ ಅವಶೇಷಗಳು ಕಂಡುಬಂದಿರುವುದರಿಂದ, ಕೆಲವು ಕಡೆ ಈ ಊಹೆ ಖಚಿತವಾಗಿದೆ.

ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳುವುದು ಸೂಕ್ತ. ಈಗ ನಾವು ದೇವಾಲಯವನ್ನು ಕರೆಯುವ ಹೆಸರು ಒಂದಾಗಿದ್ದು, ಹಿಂದೆ ಬೇರೆಯಾಗಿದ್ದಿರಬಹುದು. ಅಥವಾ ಈಗಿನ ಹೆಸರೇ ಹಿಂದೆಯೂ ಇದ್ದಿರಬಹುದು. ಅನೇಕ ಕಡೆ ದೇವಾಲಯದ ಹಿಂದಿನ ಹೆಸರೇ ಈಗಲೂ ಉಳಿದು ಬಂದಿದೆಯೆಂದು ಭಾವಿಸಲಾಗಿದೆ.

೬.೩.೩. ಶಾಸನಗಳು ದೊರೆಯುವ ಸ್ಥಳದಲ್ಲಿನ ದೇವಾಲಯಗಳ ಪಟ್ಟಿ

ಕ್ರ.ಸಂ.	ದೇವಾಲಯಗಳು	ಸ್ಥಳ	ದೊರೆತಿರುವ ಶಾಸನ
೧.	ಅರ್ಜುನದೇವಾಲಯ	ತೋಟಗೆರೆ	EC-IX, Nl, ೩೩, ಕ್ರಿ.ಶ.೭೫೦
೨.	ವೀರಭದ್ರದೇವಾಲಯ	ಕಿತ್ತನೆಲ್ಲಿ	EC-IX, Nl, ೧೨, ಕ್ರಿ.ಶ.೧೩೩೦
೩.	ಮಹದೇವಮ್ಮನ ಗುಡಿ	ಬ್ಯಾಡರಹಳ್ಳಿ	EC-IX, Bn, ೧೧೧೦, ಕ್ರಿ.ಶ.೧೩೩೬
೪.	ಬಸವಣ್ಣನ ಗುಡಿ	ಹುರುಳಿ ಚಿಕ್ಕನಹಳ್ಳಿ	EC-IX, Nl, ೨೩, ಕ್ರಿ.ಶ.೧೩೫೯
೫.	ತಿರುಮಲೆನಾಥ(ಚನ್ನಕೇಶವ) ದೇವಾಲಯ	ಕನ್ನೆಲ್ಲಿ	EC-IX, Bn, ೧೨೨, ಕ್ರಿ.ಶ.೧೪೦೮
೬.	ಗೋಪಾಲಸ್ವಾಮಿ ದೇವಾಲಯ	ದೊಡ್ಡಬೊಮ್ಮಸಂದ್ರ	EC-IX, Bn, ೨೬, ಕ್ರಿ.ಶ.೧೪೩೦
೭.	ಹನುಮಂತನಗುಡಿ	ಹುರುಳಿಚಿಕ್ಕನಹಳ್ಳಿ	EC, IX, Bn, ೧೯, ಕ್ರಿ.ಶ.೧೫೨೪
೮.	ತಿರುಮಲೆರಂಗನಾಥ ದೇವಾಲಯ	ಮಾಗಡಿ	EC-IX, ಮಾಗಡಿ, ೬, ಕ್ರಿ.ಶ.೧೫೨೪
೯.	ಸೋಮೇಶ್ವರ ದೇವಾಲಯ	ಮಾಗಡಿ	EC-IX, ಮಾಗಡಿ, ೧, ಕ್ರಿ.ಶ.೧೬೩೦

ಈ ನಾಡಿನ ಇತರ ದೇವಾಲಯಗಳೆಂದರೆ

೧. ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ-ಹೆಸರುಘಟ್ಟ

೨. ವೀರಭದ್ರ ಮತ್ತು ಲಕ್ಷ್ಮೀನರಸಿಂಹದೇವಾಲಯಗಳು-ಸಾವನದುರ್ಗ

೩. ಈಶ್ವರ(ಕಾಶಿವಿಶ್ವನಾಥ), ಬೀರೇಶ್ವರ ಮತ್ತು ಅಡಕೆ ಆಂಜನೇಯ ದೇವಾಲಯಗಳು-ನೆಲಮಂಗಲ

೪. ಶನಿಮಹಾತ್ಮ ಮತ್ತು ಈಶ್ವರ ದೇವಾಲಯಗಳು-ಮಧುರೆ

೫. ವೆಂಕಟರಮಣ ಮತ್ತು ರಂಗನಾಥ ದೇವಾಲಯಗಳು-ಬಸವನಹಳ್ಳಿ ಮುಂತಾದವು.

ಈ ಪ್ರದೇಶದಲ್ಲಿ ಹಲವಾರು ಬಸವಣ್ಣನ ಮತ್ತು ಊರಿನ ದೇವತೆಗಳ ಗುಡಿಗಳು ಇವೆ.

೬.೩.೪. ಪ್ರಮುಖ ದೇವಾಲಯಗಳ ವಿವರ

೧. ಅರ್ಜುನ ದೇವಾಲಯ - ತೋಟಗೆರೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ತೋಟಗೆರೆಯಲ್ಲಿರುವ ಅರ್ಜುನ ದೇವಾಲಯವು ಕಲ್ಲುಚಪ್ಪಡಿಗಳಿಂದ ನಿರ್ಮಿತವಾದುದ್ದಾಗಿದೆ. ಇದರ ಗರ್ಭಗೃಹ ಪೂರ್ವಾಭಿಮುಖವಾಗಿದೆ.

ಈ ದೇವಾಲಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವ ಶಾಸನಗಳು ದೊರೆತಿಲ್ಲ. ಆದರೆ ಈ ಗುಡಿಯ ಬಲಗಡೆ ಸಮೀಪದಲ್ಲೆ ಕ್ರಿ.ಶ.ಸು.೭೫೦ರ ಗಂಗದೊರೆ ಶ್ರೀ ಪುರುಷನ ಶಾಸನ ದೊರೆತಿದೆ. ಇದರಿಂದ ಈ ದೇವಾಲಯವು ಗಂಗರ ಕಾಲದಲ್ಲಿ ಅಥವಾ ಅದಕ್ಕೂ ಮೊದಲೇ ರಚನೆಯಾಗಿರಬೇಕು.

ಗರ್ಭಗೃಹ

ಕಲ್ಲು ಚಪ್ಪಡಿಗಳಿಂದ ನಿರ್ಮಿತವಾಗಿರುವ ಈ ದೇವಾಲಯವು ಗರ್ಭಗೃಹ ಮತ್ತು ಅಂತರಾಳಗಳನ್ನು ಒಳಗೊಂಡಿದೆ. ಗರ್ಭಗೃಹವು ನಾಲ್ಕು ಚಪ್ಪಡಿಗಳಿಂದ ನಿರ್ಮಾಣವಾಗಿದೆ. ಮೂರು ಕಡೆಗಳಲ್ಲಿ ಚಪ್ಪಡಿಗಳಿದ್ದು ಮೇಲೆ ಮುಚ್ಚಲು ಒಂದೇ ಚಪ್ಪಡಿಯನ್ನು ಬಳಸಿದೆ. ಹೀಗೆ ಚಪ್ಪಡಿಗಳನ್ನು ಬಳಸುವಾಗ ಭೂಮಿಯಲ್ಲಿ ಕಾಲುವೆಯಂತೆ ಕಿರಿದಾಗಿ ಸ್ವಲ್ಪ ಆಳವಾಗಿ ತೋಡಿ ಅದರಲ್ಲಿ ಚಪ್ಪಡಿಯನ್ನು ನಿಲ್ಲಿಸಿದ್ದಾರೆ. ಈ ಗರ್ಭಗೃಹದ ಒಳಗಡೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಬಾಗಿಲ ಭಾಗಕ್ಕೆ ಯಾವುದೇ ಬಗೆಯ ಅಲಂಕಾರಗಳಿಲ್ಲ.

ಅಂತರಾಳ

ಈ ಭಾಗ ಗರ್ಭಗೃಹಕ್ಕಿಂತ ಕಿರಿದಾಗಿದ್ದು, ಅದಕ್ಕೆ ಹಾಕಿದ ಅಡ್ಡಗೋಡೆಯ ಚಪ್ಪಡಿಗೆ ಬಾಗಿದಂತೆ ಚಪ್ಪಡಿಗಳನ್ನು ನಿಲ್ಲಿಸಿ, ಮೇಲೆ ಒಂದು ಚಪ್ಪಡಿಯನ್ನು ಹಾಕಿದ್ದರೆ. ಇದು ತೆರೆದ ಅಂತರಾಳವಾಗಿದೆ. ಈ ಅಂತರಾಳದಲ್ಲಿ ಬಲಗಡೆ ವಿಷ್ಣು, ಸೂರ್ಯ ಮತ್ತು ಗಣೇಶ ವಿಗ್ರಹಗಳಿವೆ. ಇವುಗಳ ಎದುರಿಗೆ ಗರ್ಭಗೃಹಕ್ಕೆ ಎಡಗಡೆ, ಅಂತರಾಳದಲ್ಲಿ ಚಂಡಿಕೇಶ್ವರ ವಿಗ್ರಹವಿದೆ. ಮುಂದೆ ಇದ್ದಿರಬಹುದಾದ ನವರಂಗಮಂಟಪವು ಬಿದ್ದು ಹೋಗಿದೆ.

ಈ ದೇವಾಲಯದ ಆವರಣದಲ್ಲಿ ಎದುರಿಗೆ ೩ ವೀರಗಲ್ಲುಗಳಿವೆ. ಒಂದು ವೀರಗಲ್ಲಿನ ಮೇಲೆ ಒಂದು ಸಾಲಿನ ಲಿಪಿ ಇದೆ. ಆದರೆ ಸ್ಪಷ್ಟವಿಲ್ಲ. ಅಲ್ಲೇ ಸ್ವಲ್ಪ ದೂರದಲ್ಲಿ ಸಪ್ತ ಮಾತೃಕೆಯರ ವಿಗ್ರಹವು ಬಿದ್ದಿದೆ. ಈ ದೇವಾಲಯ ಈಗ ಒಂದು ಚಿಕ್ಕ ಗುಡಿಯಂತೆ ಕಂಡುಬರುತ್ತದೆ.

೨. ಧರ್ಮೇಶ್ವರ ದೇವಾಲಯ - ಐಗಂಡಪುರ

ಬೆಂಗಳೂರು ಉತ್ತರ ತಾಲ್ಲೂಕಿನ ಹೆಸರುಘಟ್ಟ ಕೆರೆಯ ಒಂದು ಅಂಚಿನಲ್ಲಿರುವ ಐವರಕಂಡಪುರ (ಐಗಂಡಪುರ)ದಲ್ಲಿ ಈ ದೇವಾಲಯವಿದೆ. ಈ ಊರಿನಲ್ಲಿ ಪಂಚ-ಪಾಂಡವರಿಂದ ಸ್ಥಾಪನೆಯಾದ ಲಿಂಗಗಳಿರುವುದರಿಂದ ಈ ಊರಿಗೆ ಐವರಕಂಡಪುರವೆಂಬ ಹೆಸರು ಬಂದಿದೆ ಎಂಬ ಐತಿಹ್ಯವಿದೆ.

ಇಲ್ಲಿನ ಧರ್ಮೇಶ್ವರ ದೇವಾಲಯದ ಆವರಣದಲ್ಲಿ ಧರ್ಮೇಶ್ವರ, ನಕುಲೇಶ್ವರ, ಅರ್ಜುನೇಶ್ವರ, ಸಹದೇವೇಶ್ವರ, ಕುಂತೀಶ್ವರ ಮತ್ತು ಕಾಲಭೈರವನ ದೇವಾಲಯಗಳಿವೆ. ಇವು ಎಲ್ಲವೂ ಪೂರ್ವಕ್ಕೆ ಮುಖಮಾಡಿವೆ.

ಧರ್ಮೇಶ್ವರ ದೇವಾಲಯವು ಫಾಂಸನಾ ಮಾದರಿಯ ಮೆಟ್ಟಿಲು ಮೆಟ್ಟಿಲಾಗಿ ಮೇಲೇರಿರುವ ಶಿಖರವನ್ನು ಒಂದಿದ್ದು, ಅದರ ಮೇಲೆ ಚೌಕಾಕಾರದ ಸ್ತೂಪಿ ಇದೆ. ದೇವಾಲಯವು ಕಾಲದಿಂದ ಕಾಲಕ್ಕೆ ಜೀರ್ಣೋದ್ಧಾರವಾಗಿದ್ದು, ಮೂಲ ಭಾಗಗಳನ್ನು ಕಿತ್ತು ತಳಕೆಳಗಾಗಿ ಹೇಗೆಂದರೆ ಹಾಗೆ ಸೇರಿಸಿ ನಿರ್ಮಿಸಿರುತ್ತಾರೆ. ನವರಂಗದ ಕಂಬವು ಚೌಕ, ಅಷ್ಟ, ಷೋಡಶ ಮೂಲೆಗಳನ್ನು ಹೊಂದಿ, ಅದರ ಮೇಲೆ ಎಡೆಕಟ್ಟು ಬಂದಿದ್ದು ಅನಂತರ ಮಾಲಾಂಕಾರ ಬರುತ್ತದೆ. ಮಾಲಾಲಂಕಾರದ ಮೇಲೆ ಮತ್ತೆ ಎಡೆಕಟ್ಟು ಬಂದಿದ್ದು ಅದರ ಮೇಲೆ ಕುಂಭ ಪ್ರಾರಂಭವಾಗುತ್ತದೆ. ಕುಂಭದ ಮೇಲೆ ಕಂಠ, ಮುಚ್ಚಳವಿದ್ದು, ಮತ್ತೆ ಕಂಠವಿದೆ. ಇದರ ಮೇಲೆ ಸರಳ ಬೋದಿಗೆ ಬರುತ್ತದೆ. ಅಂತರಾಳದ ಗೋಡೆಗೆ ವೀಣಾಧರ ಶಿವ, ಲಿಂಗೋದ್ಭವ ಮೂರ್ತಿ, ದಕ್ಷಿಣಾಮೂರ್ತಿ, ವೈಷ್ಣವಿ ಮತ್ತು ಕೌಮಾರಿ ಶಿಲ್ಪಗಳನ್ನು ಸೇರಿಸಿರುತ್ತಾರೆ. ಈ ದೇವಾಲಯದಲ್ಲಿ ಅವು ಶಿಥಿಲ ಅಥವಾ ಭಿನ್ನವಾದಾಗ ಅವುಗಳನ್ನು ಕಳೆದಿರಬೇಕು. ಹೀಗಾಗಿ ಈ ಬಿಡಿ ಶಿಲ್ಪಗಳಲ್ಲದೆ, ನವರಂಗದಲ್ಲಿ ಒಂದೇ ಕಲ್ಲಿನ ಸಪ್ತಮಾತೃಕಾ ಪಟ್ಟಿಕೆಯು ಕಂಡುಬರುತ್ತದೆ. ಈ ದೇವಾಲಯಕ್ಕೆ ಪ್ರವೇಶದ್ವಾರವು ದಕ್ಷಿಣ ಮತ್ತು ಪೂರ್ವದಲ್ಲಿದೆ.

ಧರ್ಮೇಶ್ವರ ದೇವಾಲಯದ ಮೂಲ ಲಿಂಗ ಮತ್ತು ನಕುಲೇಶ್ವರ, ಸಹದೇವೇಶ್ವರ ದೇವಾಲಯದ ಬ್ರಹ್ಮಸೂತ್ರಗಳು ಬಾಣದ ಗುರುತಿನಂತಿವೆ. ಅದರಲ್ಲೂ ನಕುಲೇಶ್ವರದ ಬ್ರಹ್ಮ ಸೂತ್ರವು ಎರಡೂ ಕಡೆಯ ಗೆರೆಗಳು ಕೂಡವಲ್ಲಿಂದ ಮಧ್ಯದ ಗೆರೆ ಪ್ರಾರಂಭವಾಗಿದೆ. ಇದು ಪ್ರಾಚೀನ ಕಾಲದ ಅಂದರೆ ಬಾದಾಮಿ ಚಾಲುಕ್ಯರ ಲಿಂಗವೆಂದು ಗುರುತಿಸುವುದರಿಂದ ಅವರ ಕಾಲಕ್ಕೆ ಅಂದರೆ ಸುಮಾರು ೮ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಕ್ರಿ.ಶ.೧೧೧೩ರ ಶಾಸನದಲ್ಲಿ ಐವರಕಂಡೀಶ್ವರಂ ಉದ್ಯೆಯ ಮಹಾದೇವ ಎಂದು ಕರೆದು, ಈ ದೇವರು ಪಿರಯಮತ್ತಕೂರಿನವನೆಂದು ಹೇಳಿದೆ. ಕ್ರಿ.ಶ.೧೨ನೇ ಶತಮಾನದಲ್ಲಿ ಅಯ್ವರಗಂಡದ ದೇವರ ಉಲ್ಲೇಖವಿದೆ.[೧೮] ಈ ದೇವಾಲಯದ ಸ್ಥಿತಿ ಮಧ್ಯಮವಾಗಿದೆ. ಈ ಊರಿಗೆ ಮೊದಲ ಪಿರಿಯ ಮತ್ತಕೂರು ಎಂಬ ಹೆಸರಿತ್ತೆಂದು ತಿಳಿಯಬಹುದು. ೧೨ನೇ ಶತಮಾನದ ನಂತರ ಈ ಊರಿಗೆ ಐವರ ಗಂಡಪುರ ಎಂಬುದೇ ರೂಢಿಯಾಗಿರಬೇಕು.[೧೮ಅ]

೩. ಮುಕ್ತಿನಾಥೇಶ್ವರ ದೇವಾಲಯ-ಬಿನ್ನಮಂಗಲ

ನೆಲಮಂಗಲ ತಾಲ್ಲೂಕಿನ, ಬಿನ್ನಮಂಗಲ ಗ್ರಾಮದ ಕೆರೆಯ ಅಂಚಿನಲ್ಲಿರುವ ಗದ್ದೆಯಲ್ಲಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಕುಕ್ಕಲನಾಡಿನ ಪ್ರದೇಶದ ಕೆಲವು ಶಾಸನಗಳಲ್ಲಿ ಉಲ್ಲೇಖವಿದೆ. ಕ್ರಿ.ಶ.೧೩೭೯ರ ನೆಲಮಂಗಲ ತಾಲ್ಲೂಕಿನ, ಬೈಲಕೋನೇನಹಳ್ಳಿ ಗ್ರಾಮದ ಶಾಸನದಲ್ಲಿ "....ನಾಡ ಒಪ್ಪ ಶ್ರೀ ಮುಕ್ತಿನಾಥ...." ಎಂಬ ಉಲ್ಲೇಖವಿದೆ.[೧೯] ಇದೇ ರೀತಿಯ ಉಲ್ಲೇಖವು ಬಿನ್ನಮಂಗಲದ ಒಂದು ಶಾಸನದಲ್ಲಿ ಹಾಗೂ ಬ್ಯಾಡರಹಳ್ಳಿಯ ಶಾಸನದಲ್ಲಿ ಕಂಡುಬಂದಿದೆ.[೨೦] ಈ ನಾಡಿನ ಕೆಲವು ಶಾಸನಗಳು

ಅಪೂರ್ಣವಾಗಿವೆ(ಒಡೆದು ಹೋಗಿವೆ), ಅವುಗಳಲ್ಲಿ ಸಹ 'ಮುಕ್ತಿನಾಥ'ನ ಹೆಸರಿರಬಹುದು, ಈ ಮುಕ್ತಿನಾಥನೇ ಕುಕ್ಕಲನಾಡಿನ ಪ್ರಮುಖ ದೇವರಾಗಿರಬೇಕೆಂದು, ಮೇಲಿನ ಶಾಸನಗಳಿಂದ ತಿಳಿಯಬಹುದು. ಈ ದೇವಾಲಯದ ಮುಂದೆ ಕ್ರಿ.ಶ.೧೧೧೦ರ ಚೋಳರ ತಮಿಳು ಶಾಸನವಿದೆ. ಈ ಶಾಸನದಲ್ಲಿ ಮುಕ್ತಿನಾಥದೇವರಿಗೆ ನಕ್ಕೂರು ಮತ್ತು ಬಿನ್ನಮಂಗಲ ಗ್ರಾಮಗಳನ್ನು ದಾನ ನೀಡಿದ ಉಲ್ಲೇಖವಿರುವುದು ತಿಳಿದುಬರುತ್ತದೆ.[೨೧] ಇದರಿಂದ ನಮಗೆ ಈ ದೇವಾಲಯವು ಚೋಳರ ಕಾಲದ್ದೇ ಎಂದು ಸ್ಪಷ್ಟವಾಗುತ್ತದೆ. ನಂತರ ಹೊಯ್ಸಳರ ಕಾಲದಲ್ಲಿ ಸಹ ಇದು ಈ ನಾಡಿನ ಪ್ರಮುಖದೇವರಾಗಿದ್ದಿರಬೇಕು. ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪದ ತಲವಿನ್ಯಾಸ ಹೊಂದಿದೆ.

ಗರ್ಭಗೃಹ

ಗರ್ಭಗೃಹವು ಪೂರ್ವಾಭಿಮುಖವಾಗಿ ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಪಾಣಿ ಪೀಠದ ಮೇಲೆ ಶಿವಲಿಂಗವಿದೆ. ನಾಲ್ಕು ಕಡೆ ಮೂಲೆಯಲ್ಲಿ ಚೌಕಾಕದರದ ಕಂಬಗಳು ಗೋಡೆಯಲ್ಲಿ ಸೇರಿವೆ. ಗರ್ಭಗೃಹದ ದ್ವಾರಬಂಧವು ನಿರಲಂಕೃತವಾಗಿದೆ.

ಅಂತರಾಳ

ಇದರ ವಾಸ್ತುಲಕ್ಷಣಗಳು ಗರ್ಭಗೃಹದಂತಿದೆ. ತೆರೆದ ಅಂತರಾಳವಿದೆ. ಅಂತಾರಳದ ಮಧ್ಯಭಾಗದಲ್ಲಿ ಗರ್ಭಗೃಹದ ಎದುರಿಗೆ ಬಸವನ ವಿಗ್ರಹವಿದೆ.

ನವರಂಗ

ಇದರಲ್ಲಿ ೪ ರುದ್ರಕಾಂತ ಶೈಲಿಯ ಕಂಬಗಳಿವೆ. ಕಂಬಗಳು ವಿವಿಧ ರೀತಿಯಲ್ಲಿ ಅಲಂಕೃತಗೊಂಡಿವೆ. ಕಂಬಗಳ ಮೇಲ ಗಣೇಶನ ವಿವಿಧ ಭಂಗಿಯ ಚಿತ್ರಗಳಿವೆ. ಕಂಬಗಳು ಮೇಲುಗಡೆ ತಾವರೆ ಹೂವಿನ ಆಕಾರದಲ್ಲಿವೆ. ಇವು ಕ್ರಮೇಣವಾಗಿ ಪೀಠ, ಕಾಂಡ, ಕಳಸ, ಕಂಠ, ಫಲಕ ಮತ್ತು ಭೋದಿಗೆಯಿಂದ ಕೂಡಿದ್ದು, ಅಲಂಕೃತಗೊಂಡಿವೆ. ನವರಂಗದ ಒಂದು ಮೂಲೆಯಲ್ಲಿ ಗಣೇಶ, ವಿಷ್ಣು, ಸೂರ್ಯ, ಚಂಡೀಕೇಶ್ವರ ಮತ್ತು ಮಹಿಷಾಸುರ ಮರ್ಧಿನಿಯರ ಶಿಲ್ಪಗಳಿವೆ. ನವರಂಗದ ಮಧ್ಯದಲ್ಲಿ ಮೇಲೊದಿಕೆಯಲ್ಲಿ ನವಗ್ರಹಗಳ ಕೆತ್ತನೆ ಇದೆ.

ಮುಖಮಂಟಪ

ಮುಖ ಮಂಟಪದಲ್ಲಿ ಚೌಕಾಕಾರದ ನಾಲ್ಕು ಕಂಬಗಳಿವೆ. ಈ ನಾಲ್ಕು ಕಂಬಗಳು ಒಂದೇ ರೀತಿಯಲ್ಲಿ ಅಲಂಕೃತಗೊಂಡಿವೆ. ಈ ಮುಖ ಮಂಟಪವು ಚಿಕ್ಕದಾಗಿದೆ. ಕಂಬಗಳ ಮೇಲೆ ದ್ವಾರಪಾಲಕರು, ಸೂರ್ಯ, ವಿಷ್ಣು, ಗಣೇಶನ ಉಬ್ಬು ಶಿಲ್ಪಗಳಿವೆ. ದ್ವಾರಬಂಧದ ಎಡ ಮತ್ತು ಬಲ ಪಟ್ಟಿಕೆಗಳಲ್ಲಿ ವಿವಿಧ ಭಂಗಿಯ ವಾದ್ಯಗಾರರ ಶಿಲ್ಪಗಳಿವೆ.

ದೇವಾಲಯದ ಬಾಹ್ಯ ವಾಸ್ತು ಲಕ್ಷಣಗಳು

ಅಧಿಷ್ಠಾನ ಕಲ್ಲಿನಿಂದ ರಚಿತವಾಗಿದೆ. ಈ ಅಧಿಷ್ಠಾನದ ಮೇಲೆ ದೇವಾಲಯದ ಗೋಡೆ ನಿರ್ಮಾಣವಾಗಿದೆ. ಗೋಡೆಯು ಕೋಷ್ಟಕಗಳ ಜೊತೆಗೆ ವಿವಿಧ ರೀತಿಯಲ್ಲಿ ಅಲಂಕೃತಗೊಂಡಿದೆ. ಕೋಷ್ಠಕಗಳಲ್ಲಿ ನಟರಾಜ, ಸೂರ್ಯ, ಗಣೇಶ, ವಿಷ್ಣು, ಕಾಳಿಂಗಮರ್ಧನ ಕೃಷ್ಣ ಮತ್ತು ಬ್ರಹ್ಮನ ಶಿಲ್ಪಗಳಿವೆ. ಹಾಗೂ ಗೋಡೆಗೆ ಹೊಂದಿಕೊಂಡಂತೆ ಕಂಬಗಳು ಇವೆ. ಈ ಕಂಬಗಳಲ್ಲಿ ಸ್ತ್ರೀಯರ ಮತ್ತು ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗುಡಿಯ ಮೇಲೆ ಶಿಖರವಿದ್ದು, ಇದು ದ್ರಾವಿಡಶೈಲಿಯಲ್ಲಿದೆ. ಈ ದೇವಾಲಯದ ಆವರಣದಲ್ಲಿ ಯತಿಯ ಶಿಲ್ಪವಿದೆ.[೨೨]

೪. ಮಹದೇವಮ್ಮನ ಗುಡಿ-ಬ್ಯಾಡರಹಳ್ಳಿ

ಈ ದೇವಾಲಯವು ಬೆಂಗಳೂರು ತಾಲ್ಲೂಕಿನ ಬ್ಯಾಡರಹಳ್ಳಿ ಗ್ರಾಮದಲ್ಲಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ಲಭ್ಯವಾಗಿಲ್ಲ. ಹೀಗಾಗಿ ಇದರ ನಿರ್ಮಾತೃರ ಕುರಿತು ಸ್ಪಷ್ಟವಿಲ್ಲ. ಆದರೆ ಈ ದೇವಾಲಯದ ಬಳಿ ಇರುವ ಶಾಸನವನ್ನು ಪರಿಶೀಲಿಸಿದಾಗ ಬ್ಯಾಡರಹಳ್ಳಿಯನ್ನು ಸರ್ವಮಾನ್ಯ ಕೊಡುಗೆಯಾಗಿ ನೀಡಿದ ಉಲ್ಲೇಖವಿದೆ. ಆದರೆ ಯಾರಿಗೆ ಎಂದು ತಿಳಿಸಿಲ್ಲ. ಈ ಊರಲ್ಲಿ ಹುಟ್ಟಿದವರಿಗೆ ಸುಂಕಮಾನ್ಯ ಎಂದು ವಿವರಿಸಿದೆ, ಏನೆಂದು ಸ್ಪಷ್ಟವಿಲ್ಲ. ಇದರ ಕಾಲವನ್ನು ಪರಿಶೀಲಿಸಿದರೆ ಇದು ಹೊಯ್ಸಳ ದೊರೆ ವೀರಬಲ್ಲಾಳನ ಕಾಲದ್ದು ಎಂದು ತಿಳಿದುಬರುತ್ತದೆ.[೨೩] ಆದ್ದರಿಂದ ಈ ದೇವಾಲಯವು ಆ ಕಾಲಕ್ಕಾಗಲೇ ಇದ್ದಿರಬೇಕು. ನಂತರ ಅದು ಹಾಳಾಗಿರಬೇಕು. ಈಗ ಅದನ್ನು ಜೀರ್ಣೋದ್ಧಾರ ಮಾಡಿದ್ದಾರೆ.

ಈ ದೇವಾಲಯ ತಲವಿನ್ಯಾಸ ಗರ್ಭಗುಡಿ ಮತ್ತು ಗರ್ಭಗುಡಿಯ ಹಿಂದೆ ಒಂದು ದೊಡ್ಡ ಪ್ರಾಂಗಣವನ್ನು ಹೊಂದಿದೆ. ಪ್ರಾಂಗಣದಲ್ಲಿ ವಿವಿಧ ಕಾರ್ಯಕ್ರಮಗಳು ಜರುಗುತ್ತವೆ. (ಭಜನೆ, ವಿವಾಹ, ದೇವಿಯ ಉತ್ಸವದ ಆರಾಧನೆ ಮುಂತಾದವು). ಈ ದೇವಾಲಯವು ಈಗ ಜೀರ್ಣೋದ್ಧಾರ ಗೊಂಡಿದ್ದು, ಸುತ್ತಲೂ ಪ್ರಾಕಾರ ಗೋಡೆಯನ್ನು ಹೊಂದಿದೆ. ಇದರ ಸ್ಥಿತಿ ಉತ್ತಮವಾಗಿದೆ.

ಗರ್ಭಗೃಹ

ಇದು ಚೌಕಾಕಾರದಲ್ಲಿದ್ದು ಪೂರ್ವಾಭಿಮುಖವಾಗಿದೆ. ಗರ್ಭಗೃಹವು ಚಿಕ್ಕದಾಗಿ ನಾಲ್ಕು ಕಡೆ ಗೋಡೆಗಳಿಂದ ಆವೃತವಾಗಿದೆ. ಗರ್ಭಗೃಹದಲ್ಲಿ ಮೂಲ ದೇವಿಯ ಮೂರ್ತಿ ಇದೆ. ಗರ್ಭಗೃಹದ ಮೇಲೆ ಆಧುನಿಕವಾದ ತಾರಸಿ ಇದೆ. ಈ ಗುಡಿಯ ಮುಂದೆ ಬಲಗಡೆ ಗಣೇಶ ಮೂರ್ತಿಗೆ ಒಂದು ಚಿಕ್ಕ ಗುಡಿಕಟ್ಟಲಾಗಿದೆ. ಈ ದೇವಾಲಯದ ಆವರಣದಲ್ಲಿ ಗಣೇಶ, ದ್ವಾರಪಾಲಕರ ವಿಗ್ರಹಗಳಿವೆ.

೫. ಬಸವಣ್ಣನ ಗುಡಿ-ಹುರುಳಿಚಿಕ್ಕನಹಳ್ಳಿ

ನೆಲಮಂಗಲ ತಾಲ್ಲೂಕಿನ, ಹುರುಳಿ ಚಿಕ್ಕನಹಳ್ಳಿಯ ಗ್ರಾಮದಲ್ಲಿ ಮುಂದೆ ಈ ದೇವಾಲಯವಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ದೊರೆತಿಲ್ಲ. ಹೀಗಾಗಿ ಇದರ ನಿರ್ಮಾತೃರ ಕುರಿತು ಸ್ಪಷ್ಟವಿಲ್ಲ. ಈ ದೇವಾಲಯದ ಬಳಿ ಇದ್ದ ಕ್ರಿ.ಶ.೧೩೫೫ರ ಶಾಸನದಿಂದ ವಿಜಯನಗರ ಕಾಲದ ದೇವಾಲಯ ಇದಾಗಿರಬೇಕು ಎಂದು ತಿಳಿಯುತ್ತದೆ. ಈಗ ಇದು ಜೀರ್ಣೋದ್ಧಾರವಾಗಿದೆ. ಇದರ ಸ್ಥಿತಿ ಉತ್ತಮವಾಗಿದೆ.

ಗರ್ಭಗೃಹ

ಇದು ಚೌಕಾಕಾರವಾಗಿದೆ. ಇಲ್ಲಿ ಬಸವಣ್ಣನ ವಿಗ್ರಹವಿದೆ. ಇದಕ್ಕೆ ಪೂಜೆ ನಡೆಯುತ್ತದೆ. ದ್ವಾರಬಂಧವು ನಿರಲಂಕೃತವಾಗಿದೆ. ಗರ್ಭಗೃಹವು ದಕ್ಷಿಣಾಭಿಮುಖವಾಗಿದೆ.

ನವರಂಗ

ಇದು ಸುತ್ತಲೂ ಕಲ್ಲಿನ ಗೋಡೆಯಿಂದ ಆವೃತವಾಗಿದೆ. ಮಧ್ಯದಲ್ಲಿ ಚೌಕಾಕಾರದ ೪ ಕಂಬಗಳಿವೆ. ಇವು ನಿರಾಂಲಕೃತವಾಗಿವೆ. ದ್ವಾರಬಂಧಸಹ ನಿರಲಂಕೃತವಾಗಿದೆ. ಈ ದೇವಾಲಯದ ಮುಂದೇ ಮೇಲ್ಭಾಗದ ಗೋಡೆಯಲ್ಲಿ ಬಸವನ ವಿಗ್ರಹಗಳಿವೆ.

೬. ಚನ್ನಿಗರಾಯ ದೇವಾಲಯ-ಕನ್ನೆಲ್ಲಿ

ಬೆಂಗಳೂರಿನ ಕನ್ನೆಲ್ಲಿ ಗ್ರಾಮದ ಕೆರೆಯ ಬಳಿ ಇರುವ ಚನ್ನಿಗರಾಯ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ದೊರೆತಿಲ್ಲ. ಹೀಗಾಗಿ ಇದರ ನಿರ್ಮಾತೃವನ್ನು ಕುರಿತು ಸ್ಪಷ್ಟವಿಲ್ಲ. ಆದರೆ ಇದರ ವಾಸ್ತುಲಕ್ಷಣಗಳನ್ನು ಗಮನಿಸಿದರೆ, ಇದು ವಿಜಯನಗರದ ಅರಸರ ಕಾಲದ ದೇವಾಲಯವೆಂದು ಗುರುತಿಸಬಹುದು. ಈಗ ಇದು ಸಂಪೂರ್ಣ ಜೀರ್ಣೋದ್ಧಾರವಾಗಿದೆ. ಇದರ ಸ್ಥಿತಿ ಉತ್ತಮವಾಗಿದೆ. ಈ ದೇವಾಲಯದ ತಲವಿನ್ಯಾಸ ಈ ರೀತಿ ಇದೆ. ಗರ್ಭಗುಡಿ, ಅಂತರಾಳ, ನವರಂಗ ಇದನ್ನು ಈಗ ಚೆನ್ನಕೇಶವ ದೇವಾಲಯವೆಂದೂ ಕರೆಯುತ್ತಾರೆ.

ಗರ್ಭಗುಡಿ

ಇದು ಚೌಕಾಕಾರವಾಗಿದೆ. ನಾಲ್ಕು ಮೂಲೆಗಳಲ್ಲು ಗೋಡೆಗಳಿಗೆ ಹೊಂದಿಕೊಂಡಂತೆ ಕಂಬಗಳಿವೆ. ಗರ್ಭಗುಡಿಯ ಮಧ್ಯದಲ್ಲಿ ಮೂಲ ವಿಗ್ರಹವಿದೆ. ದ್ವಾರಬಂಧವು ನಿರಂಲಕೃತವಾಗಿದೆ.

ಅಂತರಾಳ

ಇದು ಸಹ ಚೌಕಾಕಾರವಾಗಿದೆ. ದ್ವಾರ ಬಂಧವು ನಿರಲಂಕೃತವಾಗಿದೆ. ಈಗ ಇದು ಜೀರ್ಣೋದ್ಧಾರವಾಗಿದೆ. ಇದರಲ್ಲಿ ಎರಡು ಕಡೆ ಒಂದೊಂದು ಆಧುನಿಕ ಕಿಟಕಿಗಳಿವೆ.

ನವರಂಗ

ಇದರ ಮಧ್ಯದಲ್ಲಿ ೪ ಚೌಕಾಕಾರದ ಕಂಬಗಳಿವೆ. ಎಡಭಾಗದ ಒಂದು ಕಂಬದ ಮೇಲೆ ಷಣ್ಮುಖನ ಶಿಲ್ಪವಿದೆ. ಇನ್ನೊಂದು ಕಂಬದ ಮೇಲೆ ಆದಿಶೇಷನ ಶಿಲ್ಪವಿದೆ. ಬಲಭಾಗದ ಒಂದು ಕಂಬದ ಮೇಲೆ ವಿವಿಧ ಶಿಲ್ಪಗಳಿವೆ. ಆದರೆ ಅವುಗಳು ಸ್ಪಷ್ಟವಿಲ್ಲ. ಇನ್ನೊಂದು ಕಂಬವು ಯಾವುದೇ ಶಿಲ್ಪವನ್ನು ಹೊಂದಿಲ್ಲ.

ದೇವಾಲಯದ ಬಾಹ್ಯ ವಾಸ್ತು ಲಕ್ಷಣಗಳು

ಈ ದೇವಾಲಯದ ಗೋಡೆಯು ಯಾವುದೇ ರೀತಿಯ ಅಲಂಕಾರವನ್ನು ಹೊಂದಿಲ್ಲ. ಗೋಡೆಗಳಿಗೆ ಎಡ ಮತ್ತು ಬಲಭಾಗದಲ್ಲಿ ಐದೈದು ಕಂಬಗಳಿವೆ. ಕಂಬಗಳು ಯಾವುದೇ ರೀತಿಯ ಅಲಂಕಾರ ಹೊಂದಿಲ್ಲ. ಈ ದೇವಾಲಯದ ಶಿಖರವು ದ್ರಾವಿಡ ಶೈಲಿಯ ಶಿಖರವಾಗಿದೆ. ಇದು ಇತ್ತೀಚಿಗೆ ಜೀರ್ಣೋದ್ಧಾರವಾಗಿದೆ. ಈ ಶಿಖರವು ಕೆಳಗಿನಿಂದ ಮೇಲಕ್ಕೆ ಹೋದಂತೆಲ್ಲಾ ಚಿಕ್ಕದಾಗುತ್ತಾ ಹೋಗುತ್ತದೆ. ಶಿಖರವು ಕಳಸವನ್ನು ಹೊಂದಿದೆ. ದೇವಾಲಯದ ಮುಂದೆ ವಿಜಯನಗರ ಅರಸರ ಕಾಲದ ಕ್ರಿ.ಶ.೧೪೦೮ರ ಶಾಸನವಿದೆ. ಇದರಲ್ಲಿ ಈ ದೇವಾಲಯವನ್ನು 'ತಿರುಮಲೆನಾಥ ದೇವರು' ಎಂದು ಕರೆದಿದೆ. ಈ ದೇವಾಲಯಕ್ಕೆ ಎರಡು ಮಗ್ಗವನ್ನು ಸುಂಕಮಾನ್ಯ ಮಾಡಿದ ಉಲ್ಲೇಖವಿದೆ.

"ಕುಕ್ಕುಲನಾಡ ಕಂನ್ನೆಲ್ಲಿಯ ತಿರು
ಮಲೆನಾಥದೇವರಿಗೆ ನಂಮ
ದೇವರಿಗೆ ಆ ಕಂನ್ನೆಲ್ಲಿಯಲುಯೆರ
ಡು ಮಗ್ಗವನುಸುಂಕಮಾನ್ಯ
ವಾಗಿ"....[೨೪]

೭. ಗೋಪಾಲಸ್ವಾಮಿ (ವೇಣುಗೋಪಾಲ ಸ್ವಾಮಿ)ದೇವಾಲಯ-ದೊಡ್ಡಬೊಮ್ಮಸಂದ್ರ

ಬೆಂಗಳೂರಿನ ದೊಡ್ಡಬೊಮ್ಮಸಂದ್ರಗ್ರಾಮದ ಮಧ್ಯದಲ್ಲಿ ಗೋಪಾಲಸ್ವಾಮಿ ದೇವಾಲಯವಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ದೊರೆತಿಲ್ಲ. ಹೀಗಾಗಿ ಇದರ ನಿರ್ಮಾಣದ ಕುರಿತು ಸ್ಪಷ್ಟನೆ ಇಲ್ಲ. ಆದರೆ ಈ ದೇವಾಲಯ ಮುಂದೆ ಇರುವ ಶಾಸನವನ್ನು[೨೫] ಹಾಗೂ ಇದರ ವಾಸ್ತುಲಕ್ಷಣಗಳನ್ನು ಗಮನಿಸಿದರೆ. ಇದು ವಿಜಯನಗರದ ಅರಸು ಪ್ರೌಢದೇವರಾಯನ ಕಾಲದ್ದು ಎಂದು ಗುರುತಿಸಬಹುದು. ಈ ದೇವಾಲಯವು ಸಂಪೂರ್ಣ ಜೀರ್ಣೋದ್ಧಾರವಾಗಿದೆ. ಇದರ ಸ್ಥಿತಿ

ಉತ್ತಮವಾಗಿದೆ. ಈ ದೇವಾಲಯದ ಹೊರಬಾಗಿಲು ಪೂರ್ವಾಭಿಮುಖವಾಗಿದೆ. ಗರ್ಭಗುಡಿಯು ಉತ್ತರಾಭಿಮುಖವಾಗಿದೆ. ಈ ದೇವಾಲಯಕ್ಕೆ ಅಂತರಾಳ ಮಂಟಪವಿಲ್ಲ.

ಗರ್ಭಗುಡಿ

ಈ ದೇವಾಲಯದ ಗರ್ಭಗುಡಿ ಚೌಕಾಕಾರವಾಗಿದೆ. ಗೋಡೆಗೆ ಹೊಂದಿಕೊಂಡಂತೆ ಎರಡು ಕಂಬಗಳಿವೆ. ಇವು ಚೌಕಾರವಾಗಿದ್ದು, ಯಾವುದೇ ಅಲಂಕಾರವಿಲ್ಲ. ಗರ್ಭಗುಡಿಯ ಮಧ್ಯದಲ್ಲಿ ಮೂಲವಿಗ್ರಹವಿದೆ. ದ್ವಾರಬಂಧವು ನಿರಂಲಕೃತವಾಗಿದೆ. ಗೋಡೆಯು ಕಲ್ಲುಗಳಿಂದ ಸುತ್ತುವರಿದಿದೆ. ಇತ್ತೀಚಿಗೆ ಇದು ಜೀರ್ಣೋದ್ಧಾರವಾಗಿದೆ. ಈ ಗರ್ಭಗುಡಿಯ ಎದುರಿಗೆ ನವರಂಗಮಂಟಪದ ಇನ್ನೊಂದು ತುದಿಗೆ ಮತ್ತೊಂದು ಗರ್ಭಗುಡಿ ಇದೆ. ಈ ಗರ್ಭಗುಡಿಯಲ್ಲಿ ಗಣೇಶನ ಮೂರ್ತಿ ಇದೆ. ಇದರ ದ್ವಾರಬಂಧವು ನಿರಲಂಕೃತವಾಗಿದೆ.

ನವರಂಗ

ನವರಂಗದಲ್ಲಿ ಎಂಟು ಚೌಕಾಕಾರದ ಕಂಬಗಳಿವೆ. ಈ ಕಂಬಗಳಲ್ಲಿ ಯಾವುದೇ ಅಲಂಕಾರಗಳಿಲ್ಲ. ನವರಂಗವು ವಿಶಾಲವಾಗಿದೆ. ಎರಡು ಗರ್ಭಗುಡಿಗೆ ಸೇರಿಕೊಂಡಂತೆ ದೇವಾಲಯದ ಸುತ್ತಲೂ ಪ್ರಾಕಾರ ಗೋಡೆಯಿಂದ ಆವೃತವಾಗಿದೆ.

ದೇವಾಲಯದ ಬಾಹ್ಯ ವಾಸ್ತುಲಕ್ಷಣಗಳು

ದೇವಾಲಯದ ಹೊರ ಗೋಡೆಯು ಜೀರ್ಣೋದ್ಧಾರವಾಗಿದೆ. ಯಾವುದೇ ಅಲಂಕಾರಗಳನ್ನು ಒಳಗೊಂಡಿಲ್ಲ. ಮೂಲ ಗರ್ಭಗೃಹದ ಮೇಲೆ ಗೋಪುರವು ಗೊಮ್ಮಟದ ಆಕೃತಿಯಲ್ಲಿದೆ. ತುದಿಯಲ್ಲಿ ಕಳಸವನ್ನು ಹೊಂದಿದೆ. ಗೋಪುರದ ಮೇಲೆ ರಾಮ, ಲಕ್ಷ್ಮಣ, ಕೃಷ್ಣನ ಮೂರ್ತಿಗಳಿವೆ. ಹಾಗೂ ವಿವಿಧ ಋಷಿ ಮುನಿಗಳ ಶಿಲ್ಪಗಳಿವೆ. ಹೊರಭಾಗದಲ್ಲಿ ಗರ್ಭಗುಡಿ ಮತ್ತು ನವರಂಗಕ್ಕೆ ಹೊಂದಿಕೊಂಡಂತೆ ದೇವಾಲಯದ ಸುತ್ತಲೂ ಎಂಟು ಆಧುನಿಕ ಕಿಟಕಿಗಳಿವೆ. ದೇವಾಲಯದ ಮುಂದಿನ ಬಾಗಿಲ ಮೇಲೆ ಗೋಪಾಲಕೃಷ್ಣನ ಮೂರ್ತಿ ಶಿಲ್ಪವಿದೆ. ಈ ದೇವಾಲಯದ ಆವರಣದಲ್ಲಿ ವರಸಿದ್ಧಿ ವಿನಾಯಕ ಎಂದು ಮತ್ತೊಂದು ದೇವಾಲಯವು ಇದೆ. ಇದು ಇತ್ತೀಚಿಗೆ ರಚನೆಯಾಗಿರುವಂತೆ ತೋರುತ್ತದೆ.

೮. ವೀರಭದ್ರದೇವಾಲಯ-ಕಿತ್ತನೆಲ್ಲಿ

ನೆಲಮಂಗಲ ತಾಲ್ಲೂಕಿನ ಕಿತ್ತನೆಲ್ಲಿಗ್ರಾಮದ ಮುಂದೆ ಈ ದೇವಾಲಯವಿದೆ. ಈಗ ಇದು ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ದೊರೆತಿಲ್ಲ. ಈ ಊರಿನಲ್ಲಿರುವ ಎರಡು ಶಾಸನಗಳು ಹೊಯ್ಸಳರ ಕಾಲದ್ದಾಗಿವೆ. ಇವುಗಳಲ್ಲಿ ಈ ದೇವಾಲಯದ

ಯಾವುದೇ ಪ್ರಸ್ತಾಪವಿಲ್ಲ. ಆದರೆ ಈ ದೇವಾಲಯದ ವಾಸ್ತುವನ್ನು ಗಮನಿಸಿದರೆ, ಇದು ವಿಜಯನಗರದ ಕಾಲದ ವೀರಭದ್ರದೇವಾಲಯವೆಂದು ತಿಳಿದುಬರುತ್ತದೆ. ಈ ದೇವಾಲಯದ ತಲವಿನ್ಯಾಸ ಈ ರೀತಿ ಇದೆ. ಗರ್ಭಗುಡಿ ಮತ್ತು ವಿಶಾಲವಾದ ನವರಂಗವನ್ನು ಹೊಂದಿ ಪೂರ್ವಾಭಿಮುಖವಾಗಿದೆ.

ಗರ್ಭಗುಡಿ

ಇದು ಪೂರ್ವಾಭಿಮುಖವಾಗಿದೆ. ಗರ್ಭಗುಡಿ ಚಿಕ್ಕದಾಗಿ ಚೌಕಾಕಾರವಾಗಿದೆ. ಮಧ್ಯದಲ್ಲಿ ವೀರಭದ್ರನ ವಿಗ್ರಹವಿದೆ. ದ್ವಾರಬಂಧವು ನಿರಂಲಕೃತವಾಗಿದೆ.

ನವರಂಗ

ಈ ದೇವಾಲಯದ ನವರಂಗವು ವಿಶಾಲವಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಇವು ಸಹ ನಿರಂಲಕೃತವಾಗಿದೆ. ನವರಂಗದಲ್ಲಿ ನೆಲಹಾಸು ಚಪ್ಪಡಿಗಳಿಂದ ಕೂಡಿದೆ. ಈ ನವರಂಗಕ್ಕೆ ಹೊಂದಿಕೊಂಡಂತೆ ಮುಂದಕ್ಕೆ ಎರಡು ಆಧುನಿಕ ಕಿಟಕಿಗಳಿವೆ. ಈ ದೇವಾಲಯದ ಸ್ಥಿತಿ ಉತ್ತಮವಾಗಿದೆ.

೯. ಸೋಮೇಶ್ವರ ದೇವಾಲಯ-ಕಿತ್ತನೆಲ್ಲಿ

ನೆಲಮಂಗಲ ತಾಲ್ಲೂಕಿನ ಕಿತ್ತನೆಲ್ಲಿಯ ಊರ ಹೊರಗೆ ಹೊಲದಲ್ಲಿದೆ. ಇದರ ಬಗ್ಗೆಯೂ ಯಾವುದೇ ಶಾಸನಗಳು ದೊರೆತಿಲ್ಲ. ಇದು ಈಗ ಹಾಳಾಗಿದೆ. ಕನಿಷ್ಠ ಸ್ಥಿತಿಯನ್ನು ಹೊಂದಿದೆ. ಇದು ಈಗ ಗರ್ಭಗುಡಿಯನ್ನು ಮಾತ್ರ ಹೊಂದಿದೆ. ಇಲ್ಲಿನ ಕುರುಹುಗಳಿಂದ ಈ ದೇವಾಲಯ ಹಿಂದೆ ವಿಶಾಲವಾಗಿದ್ದಿರಬಹುದು ಎಂದು ತಿಳಿಯಬಹುದು.

ಗರ್ಭಗುಡಿ

ಈ ದೇವಾಲಯದ ಗರ್ಭಗುಡಿಯು ಚೌಕಾಕಾರವಾಗಿದ್ದು, ಕಲ್ಲುಚಪ್ಪಡಿಗಳಿಂದ ಸುತ್ತವರಿದಿದೆ. ಆದರೆ ಗರ್ಭಗುಡಿಯಲ್ಲಿ ಯಾವುದೇ ವಿಗ್ರಹವಿಲ್ಲ. ಲಿಂಗವನ್ನು ಅಪಹರಿಸಿರಬಹುದು. ಈಗ ಇದು ಹಾಳಾಗಿದೆ. ಸುತ್ತಲೂ ಮುಳ್ಳುಗಿಡಗಳು ಬೆಳದಿವೆ. ಗರ್ಭಗೃಹವು ಯಾವುದೇ ಅಲಂಕಾರಗಳಿಂದ ಕೂಡಿಲ್ಲ.

ದೇವಾಲಯದ ವಾಸ್ತು ಲಕ್ಷಣಗಳು

ಈ ದೇವಾಲಯವು ಹಿಂದೆ ವಿಶಾಲವಾಗಿದ್ದಿರಬೇಕು ಎಂದು ಇದರ ಜಾಗವನ್ನು ಪರಿಶೀಲಿಸಿದಾಗ ತಿಳಿಯುತ್ತದೆ. ಈ ದೇವಾಲಯವು ಹೊಯ್ಸಳರ ಕಾಲದಲ್ಲಿ ರಚನೆಯಾಗಿರಬೇಕು. ಇದರ ವಾಸ್ತುವನ್ನು ಪರಿಶೀಲಿಸಿ ಹೇಳಬಹುದು. ಆದರೆ ಈಗ ಇದು ನಾಶವಾಗಿದೆ. ಕೇವಲ ಗರ್ಭಗುಡಿಯನ್ನು ಮಾತ್ರ ಹೊಂದಿದೆ. ಇದು ಸಹ ನಶಿಸುವ ಸ್ಥಿತಿಯಲ್ಲಿದೆ.

೧೦. ವೀರಭದ್ರದೇವಾಲಯ - ಸಾವನದುರ್ಗ

ಮಾಗಡಿ ತಾಲ್ಲೂಕಿನ ಸಾವನದುರ್ಗ ಒಂದು ಇತಿಹಾಸ ಪ್ರಸಿದ್ಧ ಬೆಟ್ಟ. ಈ ಬೆಟ್ಟದ ತಪ್ಪಲಿನಲ್ಲಿ ವೀರಭದ್ರ ದೇವಾಲಯವಿದೆ. ಇದು ಪೂರ್ವಾಭಿಮುಖವಾಗಿದೆ. ಈ ದೇವಾಲಯವು ಗರ್ಭಗೃಹ ಮತ್ತು ವಿಶಾಲವಾದ ನವರಂಗವನ್ನು ಹೊಂದಿರುವ ತಲವಿನ್ಯಾಸವನ್ನು ಹೊಂದಿದೆ.

ಗರ್ಭಗೃಹ

ಇದು ಚೌಕಾಕಾರವಾಗಿದೆ. ಇಲ್ಲಿ ಮೂರು ಗರ್ಭಗುಡಿಗಳಿವೆ. ಮಧ್ಯದಲ್ಲಿ ಮೂಲ ವಿಗ್ರಹವಿದೆ. ಗರ್ಭಗೃಹ ಗ್ರಾನೈಟ್ ಶಿಲೆಯಿಂದ ಆಧುನಿಕವಾಗಿ ಜೀರ್ಣೋದ್ಧಾರ ಗೊಂಡಿದೆ. ಗರ್ಭಗುಡಿಯ ಎಡ-ಬಲ ಪಕ್ಕದಲ್ಲಿ ಎರಡು ಪ್ರತ್ಯೇಕ ಗರ್ಭಗುಡಿಗಳಿವೆ. ಎಡ ಭಾಗದ ಗರ್ಭಗುಡಿಯಲ್ಲಿ ಭದ್ರಕಾಳಮ್ಮ ದೇವಿಯ ವಿಗ್ರಹವಿದೆ. ಬಲಭಾಗದ ಗರ್ಭಗುಡಿಯಲ್ಲಿ ಗಣೇಶನ ಮೂರ್ತಿ ಇದೆ. ಇವುಗಳು ಸಹ ಇತ್ತೀಚಿಗೆ ಜೀರ್ಣೋದ್ಧಾರಗೊಂಡಿವೆ. ಈ ಗರ್ಭಗುಡಿಯ ಮುಖಮಂಟಪವು ನಿರಂಲಕೃತವಾಗಿದೆ.

ನವರಂಗ

ಈ ದೇವಾಲಯದ ನವರಂಗವು ವಿಶಾಲವಾಗಿದೆ. ಆಧುನಿಕವಾಗಿ ಗ್ರಾನೈಟ್ ಶಿಲೆಗಳಿಂದ ಜೀರ್ಣೋದ್ಧಾರಗೊಂಡಿದೆ. ಇದರಲ್ಲಿ ಗರ್ಭಗೃಹದ ಎಡಕ್ಕೆ ಒಂದು ಬಾಗಿಲಿದೆ. ಬಾಗಿಲ ಅಕ್ಕ-ಪಕ್ಕದ ಗೋಡೆಗೆ ಹೊಂದಿಕೊಂಡಂತೆ ಎರಡು ಚೌಕಾರದ ಕಂಬಗಳಿವೆ. ಇವು ನಿರಂಲಕೃತವಾಗಿದೆ. ಬಾಗಿಲು ಸಹ ನಿರಲಂಕೃತವಾಗಿದೆ. ಎಡ ಮತ್ತು ಬಲ ಭಾಗದ ಗೋಡೆಯಲ್ಲಿ ಎರಡು ಆಧುನಿಕ ಕಿಟಕಿಗಳಿವೆ. ನವರಂಗದ ದ್ವಾರಬಂಧ ಸಹ ನಿರಲಂಕೃತವಾಗಿದೆ. ಈ ದ್ವಾರಬಂಧದ ಎಡಭಾಗದಲ್ಲಿ ಮತ್ತು ಬಲಭಾಗದಲ್ಲಿ ಸಹ ಆಧುನಿಕವಾದ ಒಂದೊಂದು ಕಿಟಕಿಗಳಿವೆ. ಮುಂದೆ ಎಡ ಮತ್ತು ಬಲಭಾಗದಲ್ಲಿ ವೀರಭದ್ರ, ಗಣೇಶ, ಬಸವ, ವೀರಶೈವ ಯತಿಯ ವಿಗ್ರಹಗಳಿವೆ.

ದೇವಾಲಯದ ಬಾಹ್ಯ ವಾಸ್ತು ಲಕ್ಷಣಗಳು

ಈ ದೇವಾಲಯವು ಸುತ್ತಲು ನಿರಲಂಕೃತವಾದ ಗೋಡೆಯಿಂದ ಕೂಡಿದೆ. ಪ್ರಾರಂಭದಲ್ಲಿ ಮೇಲೆ ಬಸವನ ವಿಗ್ರಹವಿದೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿಯ ಗೋಪುರಗಳಿವೆ. ಈ ದೇವಾಲಯದ ಲಕ್ಷಣದಿಂದ ಇದು ವಿಜಯನಗರೋತ್ತರ ಶೈಲಿಯ ದೇವಾಲಯ ಎಂದು ಹೇಳಬಹುದು.

೧೧. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ-ಸಾವನದುರ್ಗ

ಈ ದೇವಾಲಯವು ಸಾವನದುರ್ಗದ ಬೆಟ್ಟದ ತಪ್ಪಲಿನಲ್ಲಿದೆ. ಇದು ಪೂರ್ವಾಭಿಮುಖವಾಗಿದೆ. ಗರ್ಭಗುಡಿ, ನವರಂಗ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಹೊಯ್ಸಳರ ಕಾಲದಲ್ಲೇ

ರಚಿತವಾಗಿರಬೇಕೆಂದು ಇದರ ವಾಸ್ತುಲಕ್ಷಣಗಳಿಂದ ತಿಳಿಯುತ್ತದೆ. ನಂತರ ವಿಜಯನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರವಾಗಿರುವಂತೆ ತಿಳಿಯುತ್ತದೆ. ಇದರ ಸ್ಥಿತಿಯೂ ಉತ್ತಮವಾಗಿದೆ.

ಗರ್ಭಗೃಹ

ಈ ದೇವಾಲಯದ ಗರ್ಭಗೃಹವು ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಮೂಲವಿಗ್ರಹವಿದ್ದು, ಈ ವಿಗ್ರಹವನ್ನು ಹುಟ್ಟು ಬಂಡೆಯಲ್ಲಿ ಕೆತ್ತಲಾಗಿದೆ. ಇತ್ತೀಚಿಗೆ ಗರ್ಭಗೃಹವು ಒಳಗೆ ಗ್ರಾನೈಟ್ ಶಿಲೆಯಿಂದ ಜೀರ್ಣೋದ್ಧಾರವಾಗಿದೆ. ಯಾವುದೇ ಅಲಂಕಾರಗಳಿಲ್ಲ. ದ್ವಾರ ಬಂಧವು ಸಹ ನಿರಲಂಕೃತವಾಗಿದೆ.

ನವರಂಗ

ನವರಂಗವು ವಿಶಾಲವಾಗಿದೆ. ಇದರಲ್ಲಿ ಎಡ ಮತ್ತು ಬಲಭಾಗದಲ್ಲಿ ಎರಡು ಕಂಬಗಳಿವೆ. ಇವು ಚೌಕಾಕಾರವಾಗಿದ್ದು, ಯಾವುದೇ ಅಲಂಕಾರಗಳಿಲ್ಲ. ಮುಂದೆ ದ್ವಾರಬಂಧವು ನಿರಲಂಕೃತವಾಗಿದೆ. ಎಡ-ಬಲ ಭಾಗದಲ್ಲಿ ಒಂದೊಂದು ಆಧುನಿಕ ಕಿಟಕಿಗಳಿವೆ.

ಮುಖಮಂಟಪ

ಇದು ಕಿರಿದಾಗಿದೆ. ಇಲ್ಲಿ ಯಾವುದೇ ಅಲಂಕಾರಗಳಿಲ್ಲ. ಈ ಭಾಗವು ಇತ್ತೀಚೆಗೆ ಜೀರ್ಣೋದ್ಧಾರ ವಾಗಿದೆ.

ದೇವಾಲಯದ ಬಾಹ್ಯ ವಾಸ್ತುಲಕ್ಷಣಗಳು

ಈ ದೇವಾಲಯದ ಪ್ರವೇಶದ ದ್ವಾರಬಂಧದ ಅಕ್ಕ-ಪಕ್ಕದಲ್ಲಿ ಎರಡೆರಡು ಕಂಬಗಳಿಂದ ಕೂಡಿದೆ. ಇವು ಚೌಕಾಕಾರವಾಗಿದ್ದು, ನಿರಲಂಕೃತವಾಗಿದೆ. ಮುಂದೆ ಗೋಡೆಗೆ ಕಬ್ಬಿಣದ ಸರಳುಗಳನ್ನು ಹಾಕಲಾಗಿದೆ. ಸುತ್ತಲು ಗೋಡೆಯಲ್ಲಿ ಯಾವುದೇ ಅಲಂಕಾರಗಳಿಲ್ಲ. ಮುಂದೆ ಗೋಪುರವಿದ್ದು, ಅದರಲ್ಲಿ ಲಕ್ಷ್ಮೀನರಸಿಂಹನ ಮೂರ್ತಿ ಇದೆ. ಎಡ ಮತ್ತು ಬಲದಲ್ಲಿ ಕೃಷ್ಣ ಮತ್ತು ರಾಮರ ಮೂರ್ತಿಗಳಿವೆ.

೧೨. ಕಲ್ಲೇಶ್ವರ ದೇವಾಲಯ-ಕಲ್ಯ

ಕಲ್ಲೇಶ್ವರ ದೇವಾಲಯವು ತಾಲೂಕು ಕೇಂದ್ರ ಮಾಗಡಿಯಿಂದ ವಾಯವ್ಯಕ್ಕೆ ೫ ಕಿ.ಮೀ. ದೂರದಲ್ಲಿರುವ ಕಲ್ಯದಲ್ಲಿದೆ. ಕಲ್ಲೇಶ್ವರ ದೇವಾಲಯವು ಒಂದು ಗುಹಾ ದೇವಾಲಯ. ಒಂದು ದೊಡ್ಡ ಬಂಡೆಯ ಕೆಳಗೆ ಇದೆ. ಇದು ಗರ್ಭಗುಡಿ ಮುಂದೆ ನವರಂಗ ಮಂಟಪವನ್ನು ಹೊಂದಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದೆ.

ಗರ್ಭಗುಡಿ

ಇದು ನಿರಲಂಕೃತವಾಗಿದೆ. ಮಧ್ಯದಲ್ಲಿ ಮೂರ್ತಿ ಇದೆ. ಇದಕ್ಕೆ ಪೂಜೆ ನೆಡಯುತ್ತದೆ. ದ್ವಾರ ಬಂಧವು ನಿರಲಂಕೃತವಾಗಿದೆ. ಇದು ಒಂದು ದೊಡ್ಡ ಬಂಡೆಯ ಕೆಳಗೆ ಇದೆ. ಗರ್ಭಗುಡಿಯ ಮುಂದೆ ಎಡ ಮತ್ತು ಬಲಭಾಗದಲ್ಲಿ ಬಂಡೆಯ ಮೇಲೆ ಶಾಸನಗಳಿವೆ. ಇವುಗಳಲ್ಲಿ ಒಂದನೇ ಬುಕ್ಕರಾಯನು ಜೈನರು ಮತ್ತು ವೈಷ್ಣವರಲ್ಲಿ ರಾಜಿ ಮಾಡಿಸಿದ ಪ್ರಸ್ತಾಪವಿದೆ.

ನವರಂಗ

ನವರಂಗ ಮಂಟಪವು ಗರ್ಭಗುಡಿಯ ಬಂಡೆಯಿಂದ ಬೇರ್ಪಟ್ಟಿದ್ದು, ಕಲ್ಲು ಚಪ್ಪಡಿಗಳಿಂದ ತಾರಸಿಯಿಂದ ಕೂಡಿದೆ. ಈ ಮಂಟಪದ ಗೋಡೆಯನ್ನು ಕಲ್ಲು ಚಪ್ಪಡಿಗಳಿಂದ ಕಟ್ಟಲಾಗಿದೆ. ಮಂಟಪದ ಒಳಗೆ ೪ ಕಂಬಗಳಿವೆ. ಇವುಗಳು ನಿರಲಂಕೃತವಾಗಿವೆ. ಈ ದೇವಾಲಯದ ವಾಸ್ತುವನ್ನು ಗಮನಿಸಿದರೆ ಇದು ವಿಜಯನಗರದ ಕಾಲದ ದೇವಾಲಯ ಎಂದು ಗುರುತಿಸಬಹುದು.

ಕಲ್ಲೇಶ್ವರ ದೇವಾಲಯದ ಮುಂದೆ ಕೆಳಗಡೆ ಒಂದು ಕಂಬದ ಮೇಲೆ ಕುಂಬಗಳ ಕಾಯಿಜ್ಜಿಯದು ಎನ್ನುವ ಸ್ತ್ರಿಯ ತಲೆಯೊಂದು ಕೆತ್ತಿರುವ ಶಿಲ್ಪವಿದೆ. ಹಿಂದೆ ಕಲ್ಯವು 'ಕಲಾವತಿ' ಎಂಬ ಪಟ್ಟಣವವಾಗಿತ್ತು. ಈಕೆ ಒಮ್ಮೆ ಕುಂಬಳಕಾಯಿಗಳನ್ನು ಮಾರಲು ತಂದಾಗ ಅವನ್ನು ಕೊಳ್ಳುವ ವಿಷಯದಲ್ಲಿ ಜೈನರು ಮತ್ತು ಇತರರಲ್ಲಿ ವಿರಸ ಉಂಟಾಗಿ ಕೊನೆಗೆ ಹಾಳಾಯಿತು ಎಂಬ ಪ್ರತೀತಿಯಿದೆ.

ಈ ದೇವಾಲಯದ ಪಕ್ಕದಲ್ಲಿರುವ ಸಣ್ಣ ಬೆಟ್ಟದ ಮೇಲೆ ವೀರಶೈವರ ಒಂದು ಮಠ ಇದೆ. ಇದು ವಿಶಾಲವಾದ ಪ್ರಾಂಗಣ ಮತ್ತು ಒಂದು ಗುಹಾ ಕೋಣೆ ಇರುವ ಕಟ್ಟಡ. ಮಠದ ಹೊರಗೆ ಗದ್ದುಗೆಗಳಿರುವ ನಾಲ್ಕು ಮಂಟಪಗಳಿವೆ. ಒಂದರ ಮೇಲೆ ಬಸವನ ಪ್ರತಿಮೆಯಿದ್ದು ಅದು ಪಾಲ್ಕುರಿಕೆ ಸೋಮನಾಥನದೆಂದು ಪ್ರಸಿದ್ಧವಾಗಿದೆ. ಚೆನ್ನಬಸವ ಪುರಾಣದ ಪ್ರಕಾರ ಸೋಮನಾಥ ಸತ್ತಿದ್ದು ಇಲ್ಲೇ ಎಂದು ತಿಳಿದುಬರುತ್ತದೆ. ವೀರಶೈವರು ಇಲ್ಲಿ ವರ್ಷಕ್ಕೊಮ್ಮೆ ಸೋಮನಾಥನ ಸರ್ವವನ್ನು ಆಚರಿಸುತ್ತಾರೆ. ೧೩ನೆಯ ಶತಮಾನದ ಕಡೆಯಲ್ಲಿ ಪರ್ವಶಿಲೆ ಚನ್ನಮ್ಮ ಎಂಬ ಶರಣೆ ಇಲ್ಲಿ ಆಗಿ ಹೋಗಿದ್ದಾಳೆಂದು ಪಾಲ್ಕುರಿಕೆ ಸೋಮನಾಥ ಪುರಾಣದಿಂದಲೂ, ೧೭ನೆಯ ಶತಮಾನದಲ್ಲಿದ್ದ ಜ್ಞಾನಿ ಚನ್ನಬಸವಣ್ಣ ಇಲ್ಲಿ ಐಕ್ಯ ಹೊಂದಿದನೆಂದು ಚೆನ್ನ ಬಸವ ಪುರಾಣದಿಂದ ತಿಳಿಯುತ್ತದೆ.

೧೩. ಈಶ್ವರ ದೇವಾಲಯ(ಕಾಶೀವಿಶ್ವನಾಥ ದೇವಾಲಯ)-ನೆಲಮಂಗಲ

ಈಶ್ವರ ದೇವಾಲಯವು ನೆಲಮಂಗಲದಲ್ಲಿ ಪೇಟೆ ಬೀದಿಯಲ್ಲಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವ ಶಾಸನಗಳು ದೊರೆತಿಲ್ಲ. ಇದರಿಂದಾಗಿ ಇದರ ನಿರ್ಮಾತೃರ ಬಗ್ಗೆ ಸ್ಪಷ್ಟವಿಲ್ಲ.

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳ ತಲವಿನ್ಯಾಸವನ್ನು ಹೊಂದಿದೆ. ಇದರ ಲಕ್ಷಣವನ್ನು ಗಮನಿಸಿದರೆ ಇದು ಹೊಯ್ಸಳರ ಕಾಲದೆಂದು ಹೇಳಬಹುದು.

ಗರ್ಭಗೃಹ

ಇದು ಚೌಕಾಕಾರವಾಗಿದೆ. ಮಧ್ಯದಲ್ಲಿ ಶಿವಲಿಂಗವಿದೆ. ದ್ವಾರಬಂಧವು ನಿರಲಂಕೃತವಾಗಿದೆ. ಗ್ರಾನೈಟ್ ನಿಂದ ಜೋರ್ಣೋದ್ಧಾರವಾಗಿದೆ. ಗರ್ಭಗುಡಿಯು ಪೂರ್ವಾಭಿಮುಖವಾಗಿದೆ.

ಅಂತರಾಳ

ಇದು ಸಹ ಜೀರ್ಣೋದ್ಧಾರವಾಗಿದೆ. ಶಿವಲಿಂಗದ ಎದುರಿಗೆ ಬಸವನ ಶಿಲ್ಪವಿದೆ. ದ್ವಾರಬಂಧದ ಎಡ ಮತ್ತು ಬಲ ಪಟ್ಟಿಕೆಗಳ ಮೇಲೆ ದ್ವಾರಪಾಲಕರ ಚಿತ್ರಗಳಿವೆ. ದ್ವಾರಬಂಧದ ಮೇಲೆ ಶಿವಲಿಂಗದ ಚಿತ್ರವಿದೆ.

ನವರಂಗ

ಇದು ವಿಶಾಲವಾಗಿದೆ. ಹಾಗೂ ಗ್ರಾನೈಟನಿಂದ ಜೀರ್ಣೋದ್ಧಾರವಾಗಿದೆ. ಇದರಲ್ಲಿ ೪ ಕಂಬಗಳಿವೆ. ಇವು ಚೌಕಾಕಾರವಾಗಿದೆ. ಪ್ರತಿ ಕಂಬಗಳು ಅಲಂಕೃತಗೊಂಡಿವೆ. ಎಡಭಾಗದ ಒಂದು ಕಂಬದ ಮೇಲೆ ಪಕ್ಷಿಗಳು, ಪ್ರಾಣಿಗಳ ಚಿತ್ರಗಳಿವೆ. ನವಿಲು, ಗಂಡು ಬೇರುಂಡನ ಚಿತ್ರಗಳೂ ಗಣೇಶನ ಶಿಲ್ಪ, ಜಿಂಕೆಯ ಶಿಲ್ಪ, ಹಾವುಗಳು ಮೊದಲಾದ ಶಿಲ್ಪಗಳನ್ನು ಕೆತ್ತಲಾಗಿದೆ. ಮತ್ತೊಂದು ಕಂಬದ ಮೇಲೆ ಜಟಾಧಾರಿ ಶಿವ, ಹಾವುಗಳು, ದ್ವಾರಪಾಲಕರ ಚಿತ್ರಗಳಿವೆ. ಬಲಭಾಗದ ಒಂದು ಕಂಬದ ಮೇಲೆ ಗಣೇಶನ ಶಿಲ್ಪ, ಹೂವುಗಳ ಚಿತ್ರ, ಹಾವುಗಳ ಉಬ್ಬುಚಿತ್ರಗಳಿವೆ. ಮತ್ತೊಂದು ಕಂಬದ ಮೇಲೆ ಹೂವುಗಳು, ಲಕ್ಷ್ಮಿ, ವೀರರು ಮಹಿಷಾಸುರ ಮರ್ದಿನಿಯರ ಶಿಲ್ಪಗಳಿವೆ.

ಮುಖಮಂಟಪ

ಈ ದೇವಾಲಯಕ್ಕೆ ತೆರೆದ ಮುಖಮಂಟಪವಿದೆ. ಇದು ಜೀರ್ಣೋದ್ಧಾರವಾಗಿದೆ. ಇದರಲ್ಲಿ ಚೌಕಾಕಾರದ ನಾಲ್ಕು ಕಂಬಗಳಿವೆ. ಇವು ಅಲಂಕೃತಗೊಂಡಿವೆ. ನವರಂಗದ ದ್ವಾರಬಂಧದ ಎಡಕ್ಕೆ ಎರಡು ಕಂಬಗಳು ಮತ್ತು ಬಲಕ್ಕೆ ಎರಡು ಕಂಬಗಳು ಎಡಭಾಗದ ಒಂದು ಕಂಬದ ಮೇಲೆ ಷಣ್ಮುಖ ಶಿವಲಿಂಗ, ಕಳಸ, ಗಣೇಶ ಮುಂತಾದ ಚಿತ್ರಗಳನ್ನು ಕೆತ್ತಲಾಗಿದೆ. ಮತ್ತೊಂದು ಕಂಬದ ಮೇಲೆ ನವಿಲು, ವೀರ, ದ್ವಾರಪಾಲಕ, ಗಣೇಶನ ಉಬ್ಬು ಶಿಲ್ಪಗಳಿವೆ. ಬಲಭಾಗದ ಒಂದು ಕಂಬದ ಮೇಲೆ ಶಿವಲಿಂಗ, ಹಾವುಗಳು, ಋಷಿ (ತಪಸ್ಸು ಮಾಡುತ್ತಿರುವ ಭಂಗಿ), ಗಣೇಶನ ಚಿತ್ರಗಳಿವೆ. ಮತ್ತೊಂದು ಕಂಬದ ಮೇಲೆ ನವಿಲು, ಬಾತುಕೋಳಿ, ಶಿವಲಿಂಗ, ಷಣ್ಮುಖ, ಗಣೇಶನ ಶಿಲ್ಪಗಳಿವೆ.

ದೇವಾಲಯದ ಬಾಹ್ಯ ವಾಸ್ತು ಲಕ್ಷಣಗಳು

ಈ ದೇವಾಲಯದ ವಾಸ್ತು ಲಕ್ಷಣಗಳನ್ನು ಗಮನಿಸಿದರೆ ಈ ದೇವಾಲಯವು ಹೊಯ್ಸಳರ ಕಾಲದೆಂದು ಹೇಳಬಹುದು. ವಿಜಯನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರವಾಗಿರಬೇಕು. ಇತ್ತೀಚಿಗೆ ಸಹ ಈ ದೇವಾಲಯವು ಜೀಣೋರದ್ಧಾರವಾಗಿದೆ. ಈ ದೇವಾಲಯದ ಅಧಿಷ್ಠಾನ ಕಲ್ಲಿನಿಂದ ರಚಿತವಾಗಿದೆ. ಇದು ನಿರಂಲಕೃತವಾಗಿದೆ. ಗರ್ಭಗುಡಿಯ ಮೇಲ್ಭಾಗದಲ್ಲಿ ಗೋಪುರವಿದೆ. ಇದು ದ್ರಾವಿಡ ಶೈಲಿಯಲ್ಲಿದೆ. ಶೀಖರದಲ್ಲಿ ಕಳಸವಿದೆ. ದೇವಾಲಯದ ಮುಂದೆ ಮಂಟಪವಿದೆ. ಈ ಮಂಟಪಕ್ಕೆ ಚಿಕ್ಕ ಗೋಪುರವಿದೆ. ಈ ಮಂಟಪದಲ್ಲಿ ಬಸವನ ವಿಗ್ರಹವಿದೆ. ಈ ದೇವಾಲಯಕ್ಕೆ ಪ್ರಾಕಾರ ಗೋಡೆಯಿದೆ. ದೇವಾಲಯದ ಆವರಣದಲ್ಲಿ ಹಿಂದೆ ನಾಗಶಿಲ್ಪಗಳಿವೆ.

೧೪. ಚಂದ್ರಮೌಳೇಶ್ವರ ದೇವಾಲಯ-ಹೆಸರುಘಟ್ಟ

ಈಗಿನ ಬೆಂಗಳೂರು ಉತ್ತರ ತಾಲ್ಲೂಕಿನ ನಗರೀಕರಣ ಹೊಂದುತ್ತಿರುವ ಒಂದು ಗ್ರಾಮವೇ ಹೆಸರುಘಟ್ಟ. ಇಲ್ಲಿ ಊರ ಮಧ್ಯದಲ್ಲಿ ಚಂದ್ರಮೌಳೇಶ್ವರ ದೇವಾಲಯವಿದೆ. ಇದು ವಿಜಯನಗರದ ಕಾಲದ್ದು. ಇಲ್ಲಿ ಒಂದು ದೊಡ್ಡ ಕೆರೆ ಇದೆ. ಹಿಂದೆ ಈ ಕೆರೆಯಿಂದ ಬೆಂಗಳೂರಿಗೆ ನೀರು ಸರಬರಾಜಾಗುತ್ತಿತ್ತು. ಈ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಇದರ ಸ್ಥಿತಿ ಉತ್ತಮವಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಕ್ರಿ.ಶ.೧೫೩೩ರ ಶಾಸನದಲ್ಲಿ

> "...ಹೆಸರುಘಟ್ಟಕೆ ಪ್ರತಿನಾಮವಾದ ಸಿವನಸಮುದ್ರವೆಂಬ ಸರ್ವ್ವಮಾನ್ಯದ ಅಗ್ರಹಾರದಲೂ ಭಾರದ್ವಾಜಗೋತ್ರದ ಅಶ್ವಲಾಯ
>
> ನಸೂತ್ರದರುಕ್ಕಾಬೆಯ ....ಯಿ ಗುಡಿಯನು ಕಟ್ಟಿಸಿ ಕಾಶೀಲಿಂಗವ ತಂದು ಚಂದ್ರಮೌಳೇಶ್ವರ ದೇವರು ವಿಘ್ನೇಶ್ವರನಂ
>
> ದೇವಾ........ದೇವರಪ್ರತಿಷ್ಠೆಯನು ಮಾಡಿ"[೨೬] ಎಂಬ ಉಲ್ಲೇಖವಿದೆ.

ಅಂದರೆ ಈ ದೇವಾಲಯಕ್ಕೆ ಕಾಶಿಯಿಂದ ಶಿವಲಿಂಗವನ್ನು ತಂದು ಪ್ರತಿಷ್ಠಾಪಿಸಲಾಗಿದೆ ಎಂದರ್ಥ. ಈ ದೇವರಿಗೆ ಊರಿನ ಜನರೆಲ್ಲ ತೋಟ, ಗದ್ದೆಗಳನ್ನು, ದಾನ ಬಿಟ್ಟ ಬಗ್ಗೆಯೂ ತಿಳಿಸುತ್ತದೆ. ಈ ದೇವಾಲಯದ ಲಕ್ಷಣವನ್ನು ಗಮನಿಸಿದೆ. ಇದು ವಿಜಯನಗರ ಅರಸರ ಕಾಲದ್ದು ಎಂದು ಹೇಳಬಹುದು. ಈ ದೇವಾಲಯವು ಗರ್ಭಗುಡಿ ಹಾಗೂ ವಿಶಾಲವಾದ ಅಂತರಾಳದಿಂದ ಕೂಡಿದೆ.

ಗರ್ಭಗುಡಿ

ಗರ್ಭಗುಡಿಯು ಚೌಕಾಕಾರವಾಗಿದೆ. ಮೂಲ ಶಿವಲಿಂಗವಿದೆ. ಇಲ್ಲಿ ಯಾವುದೇ ಅಲಂಕಾರಗಳಿಲ್ಲ. ಗರ್ಭಗುಡಿಯ ದ್ವಾರಬಂಧವು ನಿರಲಂಕೃತವಾಗಿದೆ.

ಅಂತರಾಳ

ಇಲ್ಲಿನ ತೆರೆದ ಅಂತರಾಳವು ವಿಶಾಲವಾಗಿದೆ. ಯಾವುದೇ ಕಂಬಗಳಿಲ್ಲ. ಬಸವನ ವಿಗ್ರಹವು ಗರ್ಭಗುಡಿಗೆ ಎದುರಾಗಿದೆ. ಇಲ್ಲಿ ಷಣ್ಮುಖ, ಗಣೇಶನ ವಿಗ್ರಹಗಳು ಒಂದು ಮೂಲೆಯಲ್ಲಿವೆ. ಎಡ ಮತ್ತು ಬಲಭಾಗದಲ್ಲಿ ಒಂದೊಂದು ಆಧುನಿಕ ಕಿಟಕಿಗಳಿವೆ. ಈಗ ಈ ದೇವಾಲಯವು ಆಧುನಿಕ ರೀತಿಯಲ್ಲಿ ಜೀರ್ಣೋದ್ಧಾರವಾಗಿದೆ.

ದೇವಾಲಯದ ಬಾಹ್ಯ ವಾಸ್ತು ಲಕ್ಷಣಗಳು

ದೇವಾಲಯವು ಕಲ್ಲಿನ ಅಧಿಷ್ಠಾನದ ಮೇಲಿದೆ. ಆದರೆ ಇದು ಹಾಳಾಗಿ, ಈಗ ಮತ್ತೆ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಗೋಡೆಯನ್ನು ಕಲ್ಲುಗಳಿಂದ ಕಟ್ಟಿದ್ದಾರೆ. ದೇವಾಲಯದ ಹಿಂದೆ ಈ ದೇವಾಲಯಕ್ಕೆ ಸಂಬಂಧಿಸಿದ ಒಂದು ದೊಡ್ಡ ಶಾಸನವಿದೆ. ಇದನ್ನು ದೇವಾಲಯದ ಪ್ರಾಕಾರ ಗೋಡೆಯಲ್ಲಿದೆ. ಈ ದೇವಾಲಯದ ಎಡಭಾಗಕ್ಕೆ ನವಗ್ರಹಗಳ ಗುಡಿಯಿದೆ. ಚಂದ್ರಮೌಳೇಶ್ವರ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಈ ದೇವಾಲಯದ ಬಾಗಿಲು ನಿರಲಂಕೃತವಾಗಿದೆ. ಈ ದೇವಾಲಯದ ಆವರಣದಲ್ಲಿ ಪೂರ್ವಾಭಿಮುಖವಾಗಿ ಆಂಜನೇಯ ದೇವಾಲಯವಿದೆ.

೧೫. ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯ-ಹೆಸರುಘಟ್ಟ

ಈ ದೇವಾಲಯವು ಹೆಸರುಘಟ್ಟ ಊರಿನ ಮಧ್ಯದಲ್ಲಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ದೊರೆತಿಲ್ಲ. ಆದ್ದರಿಂದ ಇದರ ನಿರ್ಮಾತೃಗಳ ಬಗ್ಗೆ ಸ್ಪಷ್ಟವಿಲ್ಲ. ಈ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಇದರ ಲಕ್ಷಣವನ್ನು ಪರಿಶೀಲಿಸಿದರೆ, ಇದು ವಿಜಯನಗರ ಕಾಲದ್ದು ಎಂದು ಸ್ಪಷ್ಟವಾಗುತ್ತದೆ. ಈ ದೇವಾಲಯದ ತಲವಿನ್ಯಾಸ ಈ ರೀತಿ ಇದೆ. ಗರ್ಭಗುಡಿ, ಅಂತರಾಳ, ನವರಂಗ, ಮತ್ತು ಮುಖಮಂಟಪ, ಇದರ ಸ್ಥಿತಿ ಉತ್ತಮವಿದೆ.

ಗರ್ಭಗುಡಿ

ಗರ್ಭಗುಡಿಯು ಚೌಕಾಕಾರವಾಗಿದೆ. ಮಧ್ಯದಲ್ಲಿ ಮೂಲ ವಿಗ್ರಹವಿದೆ. ಆಧುನಿಕವಾಗಿ ಜೀರ್ಣೋದ್ಧಾರಗೊಂಡಿದೆ. ಗರ್ಭಗುಡಿಯ ದ್ವಾರಬಂಧವು ಯಾವುದೇ ಅಲಂಕಾರಗಳನ್ನು ಒಳಗೊಂಡಿಲ್ಲ.

ಅಂತರಾಳ

ಇಲ್ಲಿನ ತೆರೆದ ಅಂತರಾಳವು ಚೌಕಾಕಾರವಾಗಿದೆ. ಇದರ ದ್ವಾರಬಂಧವು ನಿರಲಂಕೃತವಾಗಿದೆ. ದ್ವಾರಬಂಧದ ಎರಡು ಕಡೆ ಅಂದರೆ ಎಡ ಮತ್ತು ಬಲಭಾಗದಲ್ಲಿ ಆದಿಶೇಷ ಮತ್ತು ನಟರಾಜನ ವಿಗ್ರಹಗಳಿವೆ.

ನವರಂಗ

ಈ ದೇವಾಲಯದ ನವರಂಗ ಸಹ ಚೌಕಾಕಾರವಾಗಿದೆ. ಇದು ದಾರಬಂಧದಲ್ಲಿ ಎರಡು ಕಂಬಗಳಿಂದ(ಗೋಡೆಗೆ ಹೊಂದಿಕೊಂಡಂತೆ) ಕೂಡಿದೆ. ಇದರ ದ್ವಾರಬಂಧವು ನಿರಲಂಕೃತವಾಗಿದೆ.

ಮುಖಮಂಟಪ

ಮುಖಮಂಟಪವು ವಿಶಾಲವಾಗಿದೆ. ಇದರಲ್ಲಿ ಚೌಕಾಕಾರದ ನಾಲ್ಕು ಕಂಬಗಳಿವೆ. ಇವು ವಿವಿಧ ಉಬ್ಬುಶಿಲ್ಪಗಳಿಂದ ಅಲಂಕೃತಗೊಂಡಿವೆ. ಎಡ ಭಾಗದ ಒಂದು ಕಂಬದ ಮೇಲೆ, ಶ್ರೀರಾಮ, ಗಣೇಶ ಮತ್ತು ಬಿಲ್ಲನ್ನು ಹಿಡಿದಿರುವ ವೀರರ ಚಿತ್ರಗಳಿವೆ. ಮತ್ತೊಂದು ಕಂಬದ ಮೇಲೆ ಗಣೇಶ ಮತ್ತು ದ್ವಾರಪಾಲಕರ ಶಿಲ್ಪಗಳಿವೆ. ಬಲಭಾಗದ ಒಂದು ಕಂಬದ ಮೇಲೆ ಚಕ್ರ, ವೀರರು, ಹನುಮಂತನ ಶಿಲ್ಪಗಳು ಮತ್ತೊಂದು ಕಂಬಗಳ ಮೇಲೆ ಆಂಜನೇಯ, ವೀರರು, ಶ್ರೀರಾಮನ ಶಿಲ್ಪಗಳಿವೆ. ಈಗ ಈ ದೇವಾಲಯವು ಜೀರ್ಣೋದ್ಧಾರವಾಗಿದೆ. ಮುಖಮಂಟಪದ ದ್ವಾರಬಂಧವು ಮೇಲೆ ಗಜಲಕ್ಷ್ಮಿಯಿಂದ (ವಿಗ್ರಹ) ಕೂಡಿದೆ. ಎಡ ಮತ್ತು ಬಲಭಾಗದಲ್ಲಿ ದ್ವಾರಪಾಲಕರ ವಿಗ್ರಹಗಳಿವೆ.

ದೇವಾಲಯದ ಹೊರಗಿನ ವಾಸ್ತುಲಕ್ಷಣಗಳು

ದೇವಾಲಯವು ಕಲ್ಲಿನ ಅಧಿಷ್ಠಾನದ ಮೇಲಿದೆ. ದೇವಾಲಯದ ಗೋಡೆಗಳು ಕಲ್ಲಿನ ಗೋಡೆಗಳಾಗಿವೆ. ಯಾವುದೇ ಅಲಂಕಾರಗಳಿಲ್ಲ. ದೇವಾಲಯದ ಮುಂದೆ ಎಡಭಾಗದಲ್ಲಿ ದೇವಾಲಯಕ್ಕೆ ಹೊಂದಿಕೊಂಡಂತೆ ಭಜನೆ ಮಂದಿರವಿದೆ. ದೇವಾಲಯದ ಗೋಪುರ ದ್ರಾವಿಡ ಶೈಲಿಗೆ ಸೇರಿದೆ. ಈ ದೇವಾಲಯವು ಪ್ರಾಕಾರ ಗೋಡೆಯನ್ನು ಹೊಂದಿದೆ. ಪ್ರಾಕಾರ ಗೋಡೆಯ ಮುಂದೆ ನಾಗಶಿಲ್ಪಗಳಿವೆ. ಈ ದೇವಾಲಯದ ಲಕ್ಷಣಗಳನ್ನು ಪರಿಶೀಲಿಸಿದರೆ, ಇದು ವಿಜಯನಗರದ ಕಾಲದ ದೇವಾಲಯ ಎಂಬುದು ಸ್ಪಷ್ಟವಾಗುತ್ತದೆ.

೧೬. ಈಶ್ವರ ದೇವಾಲಯ-ಮಧುರೆ ಗ್ರಾಮ

ಈ ದೇವಾಲಯವು ಮಧುರೆ ಗ್ರಾಮದ ಮುಂದೆ ಹೊಲದಲ್ಲಿದೆ. ಇದರ ಸ್ಥಿತಿ ಕನಿಷ್ಠವಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ತಮಗೆ ದೊರಕಿಲ್ಲ. ಆದ್ದರಿಂದ ಈ ದೇವಾಲಯದ ನಿರ್ಮಾಣದ ಬಗ್ಗೆ ಖಚಿತ ಮಾಹಿತಿ ಇಲ್ಲ. ಆದರೆ ಇದರ ವಾಸ್ತುಲಕ್ಷಣಗಳನ್ನು ಗಮನಿಸಿದರೆ ಇದು ವಿಜಯನಗರ ಅರಸರ ಕಾಲದ್ದು ಎಂದು ಹೇಳಬಹುದು. ಈ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ ತಲವಿನ್ಯಾಸವನ್ನು ಹೊಂದಿದೆ.

ಗರ್ಭಗುಡಿ

ಗರ್ಭಗುಡಿಯು ಚೌಕಾಕಾರವಾಗಿದೆ. ಮಧ್ಯದಲ್ಲಿ ಪಾಣಿಪೀಠದ ಮೇಲೆ ಶಿವಲಿಂಗವಿದೆ. ದ್ವಾರಬಂಧವು ನಿರಲಂಕೃತವಾಗಿದೆ. ಗರ್ಭಗುಡಿಯ ಎಡ ಮತ್ತು ಬಲಭಾಗದಲ್ಲಿ ಷಣ್ಮುಖ ಮತ್ತು ಗಣೇಶನ ವಿಗ್ರಹಗಳ ಪ್ರತ್ಯೇಕ ಗರ್ಭಗುಡಿಗಳಿವೆ. ಈ ಗರ್ಭಗುಡಿಗಳು ಸಹ ಎರಡೆರಡು ಚೌಕಾಕಾರದ ನಿರಲಂಕೃತ ಕಂಬಗಳನ್ನು ಒಳಗೊಂಡಿವೆ.

ಅಂತರಾಳ

ಅಂತರಾಳ ಸಹ ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಬಸವನ ವಿಗ್ರಹವಿದೆ. ದ್ವಾರಬಂಧವು ನಿರಲಂಕೃತವಾಗಿದೆ. ಇದರಲ್ಲಿ ನಾಲ್ಕು ಚೌಕಾಕಾರದ ಕಂಬಗಳಿವೆ. ಇದಕ್ಕೆ ಯಾವುದೇ ಅಲಂಕಾರಗಳಿಲ್ಲ.

ನವರಂಗ

ಈ ದೇವಾಲಯದ ನವರಂಗವು ವಿಶಾಲವಾಗಿದೆ. ಇದರಲ್ಲಿ ೪ ಕಂಬಗಳಿವೆ. ಎಡ ಮತ್ತು ಬಲಭಾಗದ ಮೊದಲ ಒಂದೊಂದು ಕಂಬಗಳು ದುಂಡನೆಯ ಆಕಾರದಲ್ಲಿವೆ. ಇನ್ನುಳಿದ ಎರಡು ಕಂಬಗಳು ಚೌಕಾಕಾರದಲ್ಲಿವೆ. ಕಂಬದಲ್ಲಿ ಯಾವುದೇ ಅಲಂಕಾರಗಳಿಲ್ಲ. ದ್ವಾರಬಂಧವು ನಿರಲಂಕೃತವಾಗಿದೆ.

ದೇವಾಲಯದ ಬಾಹ್ಯ ವಾಸ್ತುಲಕ್ಷಣಗಳು

ಈ ದೇವಾಲಯವು ಕಲ್ಲುಗಳಿಂದ ಕಟ್ಟಿದ ಗೋಡೆಯಿಂದ ಕೂಡಿದೆ. ಗೋಡೆಗೆ ಯಾವುದೇ ಅಲಂಕಾರಗಳಿಲ್ಲ. ಗೋಪುರ ಹಿಂದೆ ಇದ್ದಿರಬಹುದು. ಈಗ ಬಿದ್ದುಹೋಗಿದೆ. ಈ ದೇವಾಲಯವು ದೊಡ್ಡದಿದ್ದಿರಬೇಕು. ತಳಪಾಯದ ಅವಶೇಷಗಳು ಇನ್ನು ಇವೆ. ದೇವಾಲದ ಮುಂದೆ ಬಸವನ ವಿಗ್ರಹಗಳು ಹಾಗೂ ಅವುಗಳ ಮಧ್ಯೆ ನಾಗಶಿಲ್ಪಗಳು ಇವೆ. ಅವುಗಳ ಹಿಂದೆ ಇಟ್ಟಿಗೆಗಳಿಂದ ಕಟ್ಟಿದ ಗೋಡೆ ಇದೆ. ಇಲ್ಲಿ ಸಹ ದೇವಾಲಯಕ್ಕೆ ಸಂಬಂಧಿಸಿದಂತೆ ಆಲಯಗಳಿದ್ದಿರಬೇಕು. ಈಗ ಅದರ ಕುರುಹುಗಳು ಮಾತ್ರ ಉಳಿದಿದೆ.

೧೭. ಬೀರೇಶ್ವರ ಸ್ವಾಮಿ ದೇವಾಲಯ-ನೆಲಮಂಗಲ

ಬೀರೇಶ್ವರಸ್ವಾಮಿ ದೇವಾಲಯವು ನೆಲಮಂಗಲದಲ್ಲಿ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಹತ್ತಿರವಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ದೊರೆಯದ ಕಾರಣ ಇದರ ನಿರ್ಮಾಣದ ಬಗ್ಗೆ ಖಚಿತ ದಾಖಲೆಗಳಿಲ್ಲ. ಆದರೆ ಇದರ ವಾಸ್ತು ಲಕ್ಷಣಗಳನ್ನು ಗಮನಿಸಿದರೆ ಇದು ವಿಜಯನಗರ ಕಾಲದ ದೇವಾಲಯ ಎಂದು ಗುರುತಿಸಬಹುದು. ಈ ದೇವಾಲಯವು ಗರ್ಭಗುಡಿ ಹಾಗೂ ನವರಂಗಗಳನ್ನು

ಒಳಗೊಂಡ ತಲವಿನ್ಯಾಸವನ್ನು ಹೊಂದಿದೆ. ಇದು ಇತ್ತೀಚಿಗೆ ಜೀರ್ಣೋದ್ಧಾರವಾಗಿದೆ. ಇದರ ಸ್ಥಿತಿ ಉತ್ತಮವಾಗಿದೆ. ಇದು ಪೂರ್ವಾಭಿಮುಖವಾಗಿದೆ.

ಗರ್ಭಗುಡಿ

ಇದು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಪಾಣಿಪೀಠದ ಮೇಲೆ ಶಿವಲಿಂಗವಿದೆ. ಇದರ ದ್ವಾರಬಂಧವು ನಿರಲಂಕೃತವಾಗಿದೆ. ಈ ಗರ್ಭಗುಡಿಯ ಅಕ್ಕಪಕ್ಕದಲ್ಲಿ ಪ್ರತ್ಯೇಕವಾಗಿ ಷಣ್ಮುಖ ಮತ್ತು ಗಣೇಶನ ಮೂರ್ತಿಗಳಿರುವ ಗರ್ಭಗುಡಿಗಳಿವೆ.

ನವರಂಗ

ಬೀರೇಶ್ವರ ದೇವಾಲಯದ ನವರಂಗವು ವಿಶಾಲವಾಗಿದೆ. ಈ ದೇವಾಲಯದ ನವರಂಗವು ಚೌಕಾಕಾರವಾದ ೪ ಕಂಬಗಳನ್ನು ಒಳಗೊಂಡಿವೆ. ಇವು ಯಾವುದೇ ಅಲಂಕಾರಗಳಿಂದ ಕೂಡಿಲ್ಲ. ಇಲ್ಲಿ ಗರ್ಭಗುಡಿಯ ಎದುರಿಗೆ ಬಸವನ ವಿಗ್ರಹವಿದೆ. ಇದರ ದ್ವಾರಬಂಧದಲ್ಲಿ ಯಾವುದೇ ಅಲಂಕಾರಗಳಿಲ್ಲ. ನವರಂಗದ ಮುಂದಿನ ಗೋಡೆಯಲ್ಲಿ ಎಡ ಮತ್ತು ಬಲದಲ್ಲಿ ಒಂದೊಂದು ಆಧುನಿಕ ಕಿಟಕಿಗಳಿವೆ.

ದೇವಾಲಯದ ಬಾಹ್ಯ ವಾಸ್ತು ಲಕ್ಷಣಗಳು

ದೇವಾಲಯದ ಗೋಡೆಯು ಕಲ್ಲಿನಿಂದ ರಚಿತವಾಗಿದೆ. ಗೋಡೆಯಲ್ಲಿ ಯಾವುದೇ ಅಲಂಕಾರಗಳಿಲ್ಲ. ದೇವಾಲಯದ ಸುತ್ತಲೂ ಹಲವಾರು ವೀರಗಲ್ಲುಗಳನ್ನು ಪ್ರಾಕಾರ ಗೋಡೆಗೆ ಜೋಡಿಸಿದ್ದಾರೆ.

೧೮. ಅಡಕೆ ಆಂಜನೇಯ ದೇವಾಲಯ-ನೆಲಮಂಗಲ

ಅಡಕೆ ಆಂಜನೇಯ ದೇವಾಲಯವು ನೆಲಮಂಗಲದ ಅಡೇಪೇಟೆಯಲ್ಲಿದೆ. ಈ ದೇವಾಲಯದ ಬಗ್ಗೆಯೂ ಸಹ ಯಾವುದೇ ಶಾಸನಗಳು ದೊರೆಯದ ಕಾರಣ, ಇದರ ರಚನೆಯ ಬಗ್ಗೆ ನಮಗೆ ಖಚಿತ ಮಾಹಿತಿಗಳಿಲ್ಲ. ಈ ದೇವಾಲಯದ ವಾಸ್ತು ಲಕ್ಷಣಗಳನ್ನು ಪರಿಶೀಲಿಸಿದರೆ, ಇದು ವಿಜಯನಗರ ಅರಸರ ಕಾಲದ ದೇವಾಲಯ ಎಂದು ತಿಳಿಯಬಹುದು. ಇದಕ್ಕೆ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿರುವ ತಲವಿನ್ಯಾಸವಿದೆ. ಈ ದೇವಾಲಯವು ಜೀರ್ಣೋದ್ಧಾರವಾಗಿದೆ. ಇದರ ಸ್ಥಿತಿ ಉತ್ತಮವಾಗಿದೆ. ಇದು ದಕ್ಷಿಣಾಭಿಮುಖವಾಗಿದೆ.

ಗರ್ಭಗುಡಿ

ಗರ್ಭಗೃಹವು ಚಿಕ್ಕದಾಗಿದೆ. ಒಳಗಡೆ ಆಂಜನೇಯನ ವಿಗ್ರಹವಿದೆ. ಇದರ ದ್ವಾರಬಂಧದ ಗೋಡೆಗೆ ಹೊಂದಿಕೊಂಡಂತೆ ಎರಡು ಚೌಕಾಕಾರದ ಕಂಬಗಳಿವೆ. ಇವು ಯಾವುದೇ ಅಲಂಕಾರಗಳಿಂದ ಕೂಡಿಲ್ಲ.

ಅಂತರಾಳ

ತೆರೆದ ಅಂತರಾಳವು ಚೌಕಾಕಾರವಾಗಿದೆ. ಯಾವುದೇ ಅಲಂಕಾರಗಳಿಲ್ಲ. ದ್ವಾರಬಂಧ ಸಹ ನಿರಲಂಕೃತವಾಗಿದೆ.

ನವರಂಗ

ನವರಂಗವು ವಿಶಾಲವಾಗಿದೆ. ಇದು ಚೌಕಾಕಾರದ ೪ ಕಂಬಗಳನ್ನು ಒಳಗೊಂಡಿದೆ. ಈ ಕಂಬಗಳು ಅಲಂಕೃತಗೊಂಡಿವೆ. ಶಿವಲಿಂಗ, ಹೂವು, ಸೈನಿಕರು, ಕುದುರೆ, ಆಂಜನೇಯ, ಹಾವು ಮುಂಗುಸಿ, ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಎಲ್ಲಾ ಕಂಬಗಳು ಒಳಗೊಂಡಿವೆ. ದ್ವಾರಬಂಧದಲ್ಲೂ ಯಾವುದೇ ಅಲಂಕಾರಗಳಿಲ್ಲ.

ಬಾಹ್ಯ ವಾಸ್ತು ಲಕ್ಷಣಗಳು

ಈ ದೇವಾಲಯದ ಗೋಡೆಯು ಇಟ್ಟಿಗೆಯಿಂದ ರಚಿಸಿದ್ದಾಗಿದೆ. ಇದರಲ್ಲಿ ಯಾವುದೇ ಅಲಂಕಾರಗಳಿಲ್ಲ. ದೇವಾಲಯದ ಆವರಣದಲ್ಲಿ ಮುಂದೆ ಎಡಭಾಗದಲ್ಲಿ ನವಗ್ರಹ ಗುಡಿ ಇದೆ. ಅದರ ಮುಂದೆ ತುಳಸಿ ಕಟ್ಟೆ ಇದೆ. ಇಲ್ಲಿ ಅಡಿಕೆ ಮಾರುಕಟ್ಟೆ ಇದ್ದುದರಿಂದ ಅಡಕೆ ಆಂಜನೇಯ ಎಂದು ಹೆಸರು ಬಂತೆಂದು ಐತಿಹ್ಯವಿದೆ.

೧೯. ಉದ್ಭವ ಗಣೇಶನ ದೇವಾಲಯ-ನೆಲಮಂಗಲ

ಈ ದೇವಾಲಯು ನೆಲಮಂಗಲದಿಂದ ಸೊಂಡೆಕೊಪ್ಪ-ತಾವರೇಕೆರೆಯ ಕಡೆಗೆ ಹೋಗುವ ಮಾರ್ಗದಲ್ಲಿ ೨ ಕಿ.ಮೀ. ದೂರದಲ್ಲಿದೆ. ಇದರ ಬಗ್ಗೆಯು ಯಾವುದೇ ಶಾಸನ ದಾಖಲೆಗಳಿಲ್ಲ. ಇದು ಈಗ ಜೀರ್ಣೋದ್ದಾರಗೊಂಡು, ಉತ್ತಮ ಸ್ಥಿತಿಯಲ್ಲಿದೆ. ಇದು ಸಹ ವಿಜಯನಗರ ಅರಸರ ಕಾಲದ ನಂತರ ಪ್ರಸಿದ್ಧಿಗೆ ಬಂತೆಂದು ಹೇಳಬಹುದು. ಇದರ ವಿಶೇಷವೆಂದರೆ ಗಣಪತಿ ಹುಟ್ಟು ಬಂಡೆಯಲ್ಲಿ ಮೂಡಿರುವುದು. ಇದು ಬೆಳೆಯುತ್ತಿದೆ ಎಂಬ ಪ್ರತೀತಿ ಇದೆ. ಈ ದೇವಾಲಯಕ್ಕೆ ಉದ್ಭವ ಗಣೇಶ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯ ಗರ್ಭಗುಡಿ ಮತ್ತು ಅಂತರಾಳಗಳನ್ನು ಮಾತ್ರ ಹೊಂದಿದೆ. ಇದು ಪೂರ್ವಾಭಿಮುಖವಾಗಿದೆ. ಇತ್ತೀಚೆಗೆ ಜೀರ್ಣೋದ್ಧಾರಗೊಂಡು, ಉತ್ತಮ ಸ್ಥಿತಿಯಲ್ಲಿದೆ.

ಗರ್ಭಗುಡಿ

ಗರ್ಭಗುಡಿ ಚಿಕ್ಕದಾಗಿದೆ. ಇಲ್ಲಿ ಹುಟ್ಟುಬಂಡೆಯಲ್ಲಿ ಗಣೇಶನ ಮೂರ್ತಿ ಇದೆ. ಇಲ್ಲಿನ ಬಂಡೆಗೆ ದೇವಾಲಯ ಕಟ್ಟಿದ್ದಾರೆ. ಗ್ರಾನೈಟ್ ನಿಂದ ಜೀರ್ಣೋದ್ಧಾರ ಮಾಡಿದ್ದಾರೆ. ಯಾವುದೇ ಅಲಂಕಾರಗಳಿಲ್ಲ.

ಅಂತರಾಳ

ಅಂತರಾಳವು ಗರ್ಭಗುಡಿಗಿಂತ ವಿಶಾಲವಾಗಿದೆ. ಇದರಲ್ಲಿ ಎರಡು ಚೌಕಾಕಾರದ ಕಂಬಗಳಿವೆ. ಇವೂ ಸಹ ನಿರಲಂಕೃತವಾಗಿದೆ. ದ್ವಾರಬಂಧದಲ್ಲಿ ಅಲಂಕಾರವಿಲ್ಲ.

ದೇವಾಲಯದ ಬಾಹ್ಯ ವಾಸ್ತು ಲಕ್ಷಣಗಳು

ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಗೋಡೆಯನ್ನು ಸುತ್ತಲೂ ಕಲ್ಲಿನಿಂದ ಕಟ್ಟಿದ್ದಾರೆ. ಮುಂದೆ ಎಡ ಮತ್ತು ಬಲ ಭಾಗದಲ್ಲಿ ಒಂದೊಂದು ಕಿಟಕಿಗಳಿವೆ. ಗೋಡೆಯಲ್ಲಿ ಯಾವುದೇ ಅಲಂಕಾರವಿಲ್ಲ.

೬.೪. ಕುಕ್ಕಲನಾಡಿನ ಶಿಲ್ಪಗಳು

ಕುಕ್ಕಲನಾಡಿನಲ್ಲೂ ಅಪಾರ ಸಂಖ್ಯೆಯಲ್ಲಿ ವಿವಿಧ ರೀತಿಯ ಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಪ್ರಮುಖವಾದವು ಹೀಗಿವೆ.

೧. ಸೂರ್ಯಶಿಲ್ಪ

ನೆಲಮಂಗಲ ತಾಲ್ಲೂಕಿನ ತೋಟಗೆರೆಯ ಅರ್ಜುನ ದೇವಾಲಯದಲ್ಲಿ ಸೂರ್ಯಶಿಲ್ಪವಿದೆ. ಈ ಶಿಲ್ಪದ ಎಡಗಡೆ ಗಣಪತಿ ಮತ್ತು ಬಲಗಡೆ ವಿಷ್ಣುವಿನ ಶಿಲ್ಪಗಳಿವೆ. ಎದುರಿಗೆ ಚಂಡೇಶನ ಆಸೀನ ಶಿಲ್ಪವಿದೆ.

ಈ ಸೂರ್ಯಶಿಲ್ಪವು ಸಮಪಾದದಲ್ಲಿ ನಿಂತ ಭಂಗಿಯಲ್ಲಿದ್ದು, ಎರಡು ಕೈಗಳಲ್ಲಿ ಕಮಲದ ಮೊಗ್ಗುಗಳನ್ನು ಹಿಡಿದಿರುವಂತೆ ಬಿಡಿಸಿದೆ. ಕಿವಿಗಳ ಮೇಲೆ ಕರ್ಣಕುಂಡಲ, ತಲೆಯ ಮೇಲೆ ಕಿರೀಟವಿದೆ. ಈ ಶಿಲ್ಪದಲ್ಲಿ, ಕಮಲವನ್ನು ಹಿಡಿದಿರುವ ರೀತಿಯನ್ನು ಗಮನಿಸಿದರೆ, ಅದರಲ್ಲಿ ಇತರೆಡೆಯ ಸೂರ್ಯಶಿಲ್ಪಗಳಿಗಿಂತ ಭಿನ್ನತೆಯನ್ನು ಕಾಣಬಹುದು. ಅದೆಂದರೆ ಸಾಮಾನ್ಯ ಸೂರ್ಯಶಿಲ್ಪಗಳೆಲ್ಲವು ಎರಡು ಕೈಗಳನ್ನು ಎದೆಗೆ ಅವುಚಿಕೊಂಡು ಕಮಲದ ಮೊಗ್ಗುಗಳನ್ನು ಹಿಡಿದಿರುವಂತೆ ಬಿಡಿಸಿದ್ದರೆ. ಈ ಶಿಲ್ಪದಲ್ಲಿ ಬಲಗೈ ಇಳಿಬಿಟ್ಟು, ತಾವರೆಯ ದಂಟನ್ನು ಹಿಡಿದಿರುವಂತೆ, ಎಡಗೈಯನ್ನು ಎದೆಗೆ ಅವುಚಿಕೊಂಡು ತಾವರೆದಂಟನ್ನು ಬಿಡಿಸಿರುವಂತೆ ಶಿಲ್ಪಿಸಲಾಗಿದೆ. ವಸ್ತ್ರವನ್ನು ಧರಿಸಿರುವ ರೀತಿಯಿಂದ ಹಾಗೂ ಇಲ್ಲಿ ದೊರೆತಿರುವ ಶಾಸನದ ಆಧಾರದ ಮೇಲೆ ಈ ಶಿಲ್ಪದ ಕಾಲವನ್ನು ಕ್ರಿ.ಶ.೮ನೇ ಶತಮಾನಕ್ಕೆ(ಗಂಗದೊರೆ ಶ್ರೀಪುರುಷನ ಕಾಲಕ್ಕೆ ಕ್ರಿ.ಶ.ಸು.೭೫೦) ಸೇರಿಸಬಹುದಾಗಿದೆ. ಮತ್ತೊಂದು ಸೂರ್ಯಶಿಲ್ಪವು ನೆಲಮಂಗಲ ತಾಲ್ಲೂಕಿನ, ಬಿನ್ನಮಂಗಲದ ಮುಕ್ತಿನಾಥೇಶ್ವರ ದೇವಾಲಯದಲ್ಲಿದೆ.

ಇದು ಮೇಲಿನಂತೆ ಎಲ್ಲ ಲಕ್ಷಣಗಳನ್ನು ಹೊಂದಿದ್ದರು. ಕೈಗಳು ಬೇರೆ ಇದೆ. ಅಲಂಕಾರಿಕವಾಗಿಲ್ಲ. ಇದರ ಕಾಲ ಕ್ರಿ.ಶ.ಸು.೧೨ನೇ ಶತಮಾನ.

೨. ವಿಷ್ಣುಶಿಲ್ಪ

ತೋಟಗೆರೆಯ ಅರ್ಜುನ ದೇವಾಲಯದಲ್ಲಿ ಸೂರ್ಯಶಿಲ್ಪದ ಬಲಗಡೆ ಇದೆ. ಇದು ಸೂರ್ಯಬಿಂಬದಂತೆಯೇ ವಸ್ತ್ರಲಂಕಾರವನ್ನು ಹೊಂದಿರುವ ಕಿರೀಟಧಾರಿ ವಿಷ್ಣುವಿನ ಶಿಲ್ಪ. ಈ ಶಿಲ್ಪದ ಹಿಂದಿನ ಎರಡು ಕೈಗಳಲ್ಲಿ ಶಂಖ ಚಕ್ರಗಳಿದ್ದು, ಬಲಗೈ ಅಭಯ, ಎಡಗೈ ಗದೆಯನ್ನು ಹಿಡಿದಿರುವಂತೆ ಬಿಡಿಸಲಾಗಿದೆ. ಇದರ ಕಾಲವು ಕ್ರಿ.ಶ.ಸು.೭೫೦.

೩. ಗಣಪತಿ

ಇದು ಸಹ ತೋಟಗೆರೆಯ ಅರ್ಜುನ ದೇವಾಲಯದಲ್ಲಿ ಸೂರ್ಯಶಿಲ್ಪದ ಎಡಗಡೆ ಇದೆ. ಸುಖಾಸೀನವಾಗಿದೆ. ಎರಡು ಕೈಗಳಲ್ಲಿ ಪಾಶ ಅಂಕುಶಗಳಿವೆ. ಗಜಮುಖದ ಈ ಗಣಪನಿಗೆ ಏಕದಂತವಿದೆ. ಎಡಭಾಗಕ್ಕೆ ಬಾಗಿರುವ ಸೊಂಡಿಲ ವಿನ್ಯಾಸವಿದೆ. ಕರಂದ-ಮಕುಟವಿದೆ. ಈ ಗಣಪನ ಕಾಲ ಕ್ರಿ.ಶ.ಸು.೭೫೦ ಎಂದು ಇಲ್ಲಿ ದೊರಕಿರುವ ಶಾಸನದಿಂದ ಗುರುತಿಸಬಹುದು.

ನೆಲಮಂಗಲ ತಾಲ್ಲೂಕಿನ ಹುರುಳಿ ಚಿಕ್ಕನಹಳ್ಳಿಯಲ್ಲಿ ಬಸವಣ್ಣನ ದೇವಾಲಯದ ಎದುರಿಗೆ ಗಂಗರ ಕಾಲದ ಕಂಬವೊಂದಿದೆ. ಈ ಕಂಬವನ್ನು ಅರ್ಧಕ್ಕೆ ನಿಲ್ಲಿಸಲಾಗಿದೆ. ಉಳಿದರ್ಧಭಾಗ ಭೂಮಿಯಲ್ಲಿ ಹೂತು ಹೋಗಿದೆ. ಇದರ ಕಾಲ ಕ್ರಿ.ಶ.೭೫೦ ಎಂದು ಈ ಕಂಬದ ಲಕ್ಷಣದಿಂದ ಗುರುತಿಸಬಹುದಾಗಿದೆ.

೪. ಚಂಡಿಕೇಶ್ವರ

ಚಂಡಕೇಶ್ವನ ಶಿಲ್ಪವು ತೋಟಗೆರೆಯ ಅರ್ಜುನ ದೇವಾಲಯದಲ್ಲಿದೆ. ಇದು ಆಸೀನವಾಗಿದೆ. ಬಲಗೈಲಿ ಪರಶು(ಕೊಡಲಿ)ವನ್ನು ಹಿಡಿದಿದೆ. ಎಡಗೈಯನ್ನು ತೊಡೆಯ ಮೇಲಿಟ್ಟಂತೆ ಬಿಡಿಸಿದೆ. ಈ ಶಿಲ್ಪವು ಕೂಡ ಗಂಗರ ಕಾಲಕ್ಕೆ ಸೇರಬಹುದಾದ ಶಿಲ್ಪವಾಗಿದೆ.

ನೆಲಮಂಗಲ ತಾಲ್ಲೂಕಿನ, ಬಿನ್ನಮಂಗಲದಲ್ಲಿರುವ ಮುಕ್ತಿನಾಥೇಶ್ವರ ದೇವಾಲಯದ ನವರಂಗದಲ್ಲಿ ಚಂಡಿಕೇಶ್ವರ ಶಿಲ್ಪವೊಂದಿದೆ. ಈ ವಿಗ್ರಹದಲ್ಲಿ ಸಹ ಬಲಗೈಲಿ ಪರಶು ಹಿಡಿದಿದ್ದು, ಎಡಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡಂತೆ ಬಿಡಿಸಿದೆ. ಆರಾಮಾಸನದಲ್ಲಿರುವ ಇದರ ಜಟೆಯು ಕೆದರಿದಂತೆ ಬಿಡಿಸಲಾಗಿದೆ. ಇದರ ಕಾಲ(ಇಲ್ಲಿ ದೊರೆತಿರುವ ಶಾಸನದಿಂದ) ಕ್ರಿ.ಶ.೧೨ನೇ ಶತಮಾನ ಇರಬಹುದು ಎಂದು ನಿರ್ಣಯಿಸಬಹುದು.

೫. ಸಪ್ತಮಾತೃಕೆಯರು

ತೋಟಗೆರೆಯ ಅರ್ಜುನ ದೇವಾಲಯದ ಆವರಣದಲ್ಲಿ ಸಪ್ತಮಾತೃಕೆಯ ಶಿಲ್ಪವೊಂದಿದೆ. ಒಂದೇ ಕಲ್ಲಿನಲ್ಲಿ ಪಕ್ಕ ಪಕ್ಕದಲ್ಲೆ ಸಪ್ತಮಾತೃಕೆಯರ ಮೂರ್ತಿಗಳಿವೆ. (ಸಪ್ತಮಾತೃಕೆಯರು : ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಾ) ಇವು ಎಲ್ಲವು ಲಲಿತಾಸನದಲ್ಲಿ ಕುಳಿತ ಭಂಗಿಯಲ್ಲಿವೆ. ಇವರ ಕೈಗಳಲ್ಲಿ ಕಪಾಲ, ಅಭಯ, ಪ್ರಯೋಗ ಚಕ್ರ, ಶಂಖ, ಆರಾಮ ಹಸ್ತಗಳಿವೆ. ತಲೆಯಲ್ಲಿ ಕಿರೀಟವಿದೆ. ಹೆಚ್ಚಿನ ವಿವರ ಹೇಳಲು ಈ ಶಿಲ್ಪವು ಪ್ರಮಾಣಬದ್ಧವಾಗಿಲ್ಲ.

೬. ಭೈರವ

ನೆಲಮಂಗಲ ತಾಲ್ಲೂಕಿನ ಐಗಂಡಪುರದಲ್ಲಿ ಧರ್ಮೇಶ್ವರ ದೇವಾಲಯದ ಆವರಣದಲ್ಲಿ ಭೈರವಮೂರ್ತಿ ಇದೆ. ಈ ಮೂರ್ತಿಯಲ್ಲಿ ರುಂಡಮಾಲೆ ಇದೆ. ಈ ಶಿಲ್ಪ ನಗ್ನವಾಗಿದೆ. ಸರ್ಪಗಳ ನಡುದಾರ, ಕಟಗ, ನಾಲ್ಕು ಕೈಗಳನ್ನು ಹೊಂದಿರುವ ಈ ಶಿಲ್ಪದಲ್ಲಿ ಖಡ್ಗ, ಕಪಾಲಗಳಿವೆ. ತೋಳಬಂದಿಯಾಗಿ ಸರ್ಪಗಳನ್ನು ಬಿಡಿಸಲಾಗಿದೆ. ರುದ್ರಾಕ್ಷಿಹಾರವಲ್ಲದೆ ರುಂಡಮಾಲೆಯನ್ನು ಬಿಡಿಸಲಾಗಿದೆ. ಜಟಾಮಕುಟ ಕಿರೀಟವಿದೆ. ತಲೆಯ ಹಿಂಬದಿಯಲ್ಲಿ ಜ್ವಾಲೆಗಳನ್ನು ಬಿಡಿಸಲಾಗಿದೆ. ಕಪಾಲವನ್ನು ಆಭರಣವಾಗಿ ಬಿಡಿಸಿದೆ. ಮೂರನೆಯ ಕಣ್ಣನ್ನು ಪ್ರಧಾನವಾಗಿ ಬಿಡಿಸಿದೆ. ಇಲ್ಲಿ ದೊರೆತಿರುವ ಶಾಸನಗಳಿಂದ ಇದರ ಕಾಲವನ್ನು ಕ್ರಿ.ಶ.ಸು.೧೧ನೇ ಶತಮಾನ(ಕ್ರಿ.ಶ.೧೦೩೩)ಕ್ಕೆ ಸೇರಿಸಬಹುದಾಗಿದೆ.

೭. ತಾಂಡವಶಿವ

ಇದು ನೆಲಮಂಗಲ ತಾಲ್ಲೂಕಿನ ಬಿನ್ನಮಂಗಲ ಗ್ರಾಮದ ಮುಕ್ತನಾಥೇಶ್ವರ ದೇವಾಲಯದ ಹೊರ ಗೋಡೆಯ ಮೇಲಿರುವ ಶಿಲ್ಪ. ಶಿವ ಇಲ್ಲಿ ಬಲಗಾಲಿನಲ್ಲಿ ರಾಕ್ಷಸನನ್ನು ತುಳಿಯುತ್ತಿದ್ದಾನೆ. ಎಡಗಾಲನ್ನು ಮೇಲಕ್ಕೆತ್ತಿದ್ದಾನೆ. ಕೈಗಳಲ್ಲಿ ಢಮರು, ಸೂಚಿ, ಅಭಯಗಳಿವೆ. ದಂಡಹಸ್ತವನ್ನು ಉಳ್ಳವನಾಗಿದ್ದಾನೆ. ಜಟಾಮಕುಟವಿದೆ. ಜಟೆಗಳು ಚದುರಿದಂತೆ ಬಿಡಿಸಲಾಗಿದೆ. ಇದರ ಕಾಲ ಕ್ರಿ.ಶ.ಸು.೧೨ನೇ ಶತಮಾನ.

೮. ಬ್ರಹ್ಮ

ಇದು ಮುಕ್ತನಾಥೇಶ್ವರ ದೇವಾಲಯದ ಬಲಗೋಡೆಯಲ್ಲಿರುವ ಉಬ್ಬುಶಿಲ್ಪ. ಈ ಶಿಲ್ಪದ ಬಲಗೈಲಿ ಅಕ್ಷಮಾಲೆ, ಎಡಗೈಲಿ ಸ್ರುವ, ಅಭಯಹಸ್ತದಲ್ಲಿದೆ. ಮೂರು ಮುಖಗಳನ್ನು ಕಾಣುವಂತೆ, ೪ನೇ ಮುಖವು ಹಿಂಬದಿಯಲ್ಲಿರುವಂತೆ ಬಿಡಿಸಲಾಗಿದೆ. ಕರಂಡ ಮಕುಟವಿದೆ. ಇದರ ಕಾಲ ಕ್ರಿ.ಶ.ಸು. ೧೨ನೇ ಶತಮಾನ.

೯. ಕಾಳಿಂಗಮರ್ದನ ಕೃಷ್ಣ

ಇದು ಕೃಷ್ಣನ ಅಪರೂಪದ ಶಿಲ್ಪವಾಗಿದೆ. ಈ ಶಿಲ್ಪಕ್ಕೆ ನಾಲ್ಕು ಕೈಗಳಿದ್ದು, ಎರಡು ಕೈಗಳಲ್ಲಿ ಶಂಕ ಚಕ್ರವನ್ನಿಡಿದಿದ್ದಾನೆ. ಇನ್ನೆರಡು ಕೈಗಳಲ್ಲಿ ಬಲಗೈಲಿ ಕಾಳಿಂಗ ಸರ್ಪದ ಬಾಲವನ್ನಿಡಿದು, ದಂಡ ಹಸ್ತದೊಂದಿಗೆ ನೃತ್ಯವನ್ನು ಮಾಡುತ್ತಿರುವಂತೆ ಬಿಡಿಸಲಾಗಿದೆ. ಕಾಲಕೆಳಗೆ ಅನೇಕ ಎಡೆಗಳುಳ್ಳ ಕಾಳಿಂಗ ಸರ್ಪವನ್ನು ಬಿಡಿಸಲಾಗಿದೆ. ಮಂದಸ್ಮಿತ, ಮುಖಭಾವ ಹಿಂದಿರುವ ಈ ಶಿಲ್ಪವು ಈ ಪ್ರದೇಶದಲ್ಲಿ ದೊರೆಯುವ ಶಿಲ್ಪಗಳಲ್ಲಿ ಅಪರೂಪವಾಗಿದೆ. ಇದರ ಕಾಲವನ್ನು ಇಲ್ಲಿ ದೊರೆತಿರುವ ಶಾಸನದ ಆಧಾರದಿಂದ ಕ್ರಿ.ಶ.೧೨ನೇ ಶತಮಾನಕ್ಕೆ ಸೇರಿಸಬಹುದಾಗಿದೆ.

೧೦. ಮಹಿಷ ಮರ್ಧಿನಿ

ಶಕ್ತಿ ದೇವತೆಗಳಲ್ಲಿ ಬಹುಜನ ಪರಿಚಿತವಾದ ದೇವತೆ ಎಂದರೆ ಮಹಿಷಾಸುರ ಮರ್ದಿನಿಯೂ ಒಬ್ಬಳು. ಇವಳದ್ದು ಉಗ್ರರೂಪವಾಗಿದ್ದು, ಕ್ರಿಯೆಯಲ್ಲಿಯೂ ಕೊಲ್ಲುತ್ತಿರುವುದೇ ಪ್ರಾಮುಖ್ಯವಾಗಿದೆ. ಶಾಸ್ತ್ರಗ್ರಂಥಗಳಲ್ಲಿ ಈಕೆಯು ಕೋಪಗೊಂಡ ಯುವತಿಯಂತಿದ್ದು, ಒಂದು ಮುಖ ಹಾಗೂ ಅನೇಕ ಕೈಗಳನ್ನು ಹೊಂದಿರುತ್ತಾಳೆಂದು ವರ್ಣಿಸಿವೆ. ಶಿಲ್ಪಗಳಲ್ಲಿಯೂ ಇದೇ ಭಾವನೆ ಬರುವಂತೆ ಶಿಲ್ಪಿ ಶಿಲ್ಪಿಸಿರುತ್ತಾನೆ. ಮಹಿಷ ಮರ್ದಿನಿಯ ಮುಖವು ಶಿವನ ಬೆಳಕಿನಿಂದಲೂ, ಯಮನ ಶಕ್ತಿಯಿಂದ ಕೂದಲು, ವಿಷ್ಣುವಿನ ಶಕ್ತಿಯಿಂದ ಕೈಗಳು, ಚಂದ್ರನ ಬೆಳಕಿನಿಂದ ಸ್ತನಗಳು, ಇಂದ್ರನಿಂದ ನಡುವು ಹೀಗೆ ಒಂದೊಂದು ದೇವತೆಯ ಬೆಳಕಿನಿಂದ ರೂಪಿತಳಾಗುತ್ತಾಳೆ.[೨೬] ಮಹಿಷನು ಕೋಣದ ರೂಪವನ್ನು ಧರಿಸಿ ಬಂದಾಗ, ಮಹಿಷ ಮರ್ದಿನಿಯು ಕೋಣದ ತಲೆಯನ್ನು ಕತ್ತರಿಸಿ ಕಾಲಿನಿಂದ ಅದನ್ನು ತುಳಿದಾಗ, ಅಸುರನು ಕತ್ತಿನಿಂದ ಹೊರಬರುತ್ತಾನೆ. ಅನಂತರ ಅವನ ಮೇಲೆ ಯುದ್ಧ ಮಾಡಿ ಸಂಹರಿಸುತ್ತಾಳೆ. ಮಹಿಷ ಮರ್ದಿನಿಯ ಶಿಲ್ಪವನ್ನು ಕಡೆದ ಶಿಲ್ಪಿ ಅನೇಖ ಶಿಲ್ಪಗಳಲ್ಲಿ ಈ ವಿವರಣೆಯಂತೆಯೇ ಬಿಡಿಸಿರುತ್ತಾನೆ. ಮಹಿಷಮರ್ಧಿನಿಯ ಇನ್ನೊಂದು ಶಿಲ್ಪವು ಮುಕ್ತಿನಾಥೇಶ್ವರ ದೇವಾಲಯದ ಒಳಗಡೆ ನವರಂಗದ ಎಡಮೂಲೆಯಲ್ಲಿದೆ. ಇದು ಈ ದೇವಾಲಯದ ಇನ್ನೊಂದು ಗಮನಾರ್ಹ ಶಿಲ್ಪವಾಗಿದೆ. ಆದರೆ ಇದು ಅಷ್ಟೇನು ಸುಂದರವಲ್ಲದ, ಪ್ರಮಾಣಬದ್ಧವಲ್ಲದ ಶಿಲ್ಪ ಇದಾಗಿದೆ. ಇದರ ಕಾಲವನ್ನು ಇಲ್ಲಿನ ಶಾಸನದಿಂದ ಕ್ರಿ.ಶ.೧೨ನೇ ಶತಮಾನ ಎಂದು ನಿರ್ಣಯಿಸಬಹುದಾಗಿದೆ.

೧೧. ದ್ವಾರಪಾಲಕರು

ನೆಲಮಂಗಲದ ಬೀರೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ದ್ವಾರಪಾಲಕರು ನಾಲ್ಕು ಕೈಗಳನ್ನು ಒಳಗೊಂಡಿದ್ದಾರೆ. ನಾಲ್ಕು ಕೈಗಳನ್ನು ಒಳಗೊಂಡಿದ್ದಾರೆ. ನಾಲ್ಕು ಕೈಗಳಲ್ಲಿ ಶೂಲ, ಡಮರು, ಗದೆ ಮತ್ತು ಕಟಹಸ್ತವಿದೆ. ಕತ್ತರಿ ಕಾಲುಹಾಕಿ ನಿಂತಿದ್ದಾರೆ. ಕೋಪಾಕಾರದ

ಕಿರೀಟ ಧರಿಸಿದ್ದಾರೆ. ದಪ್ಪ ಕಣ್ಣು ಗುಡ್ಡೆಗಳಿವೆ. ಇವುಗಳ ಲಕ್ಷಣಗಳಿಂದ ವಿಜಯನಗರದ ಅಂತ್ಯ ಕಾಲಕ್ಕೆ ಇದನ್ನು ಸೇರಿಸಬಹುದು. ಮಾಗಡಿ ಕಂಪೇಗೌಡನ ಕಾಲದ ದ್ವಾರಪಾಲಕರ ಶಿಲ್ಪಗಳು ಸಾವನ ದುರ್ಗದ ವೀರಭದ್ರ ದೇವಾಲಯದ ಮುಂದೆ ಇವೆ. ಇವು ಸಹ ಮೇಲಿನ ದ್ವಾರಪಾಲಕರ ಲಕ್ಷಣಗಳನ್ನೇ ಹೊಂದಿವೆ. ಆದರೆ ಆಕಾರದಲ್ಲಿ ದೊಡ್ಡದಾಗಿವೆ.

ಈ ದ್ವಾರಪಾಲಕರ ಪಕ್ಕದಲ್ಲಿ ಭಕ್ತನ ಶಿಲ್ಪವಿದೆ. ಸಮಪಾದದಲ್ಲಿ ನಿಂತು, ಕೈ ಮುಗಿದಿರುವುದು, ಬಿಗಿಯಾದ ವಸ್ತ್ರ ಧರಿಸಿದ್ದಾನೆ. ಶಿಲ್ಪ ಸವೆದಿದೆ. ಪಕ್ಕದಲ್ಲಿ ಚಾಮರದಾರಿಯ ಶಿಲ್ಪವಿದೆ. ಯಾರೆಂದು ಸ್ಪಷ್ಟವಿಲ್ಲ. ಕೈಮುಗಿಯುತ್ತಿರುವ ಭಕ್ತನ ಶಿಲ್ಪವೊಂದು ಮುಕ್ತಿನಾಥೇಶ್ವರ ದೇವಾಲಯದಲ್ಲಿ ಇದೆ ಇದು ಮೇಲೆ ಒಡೆದಿದೆ.

೧೨. ವೀರಗಲ್ಲುಗಳು

ನೆಲಮಂಗಲದ ಬೀರೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಅನೇಕ ವೀರಗಲ್ಲುಗಳನ್ನು, ದೇವಾಲಯದ ರಕ್ಷಣಾ ಗೋಡೆಗೆ ಅಂಟಿಸಿದ್ದಾರೆ. ಇಲ್ಲಿನ ದೇವಾಲಯದ ಮುಂದಿರುವ ವೀರಗಲ್ಲಿನ ಶಿಲ್ಪದಲ್ಲಿ - ಕೈಯಲ್ಲಿ ದಂಡದಂತಹ ವಸ್ತುವನ್ನು ಹಿಡಿದಿದ್ದಾನೆ. ಎಡಗೈ ಮುಷ್ಠಿ ಹಿಡಿದಿದೆ. ಶಿಲ್ಪಿಯು ಬಲದಿಂದ ಎಡಕ್ಕೆ ಹೋಗುವಂತೆ ಇದನ್ನು ಬಿಡಿಸಿದ್ದಾನೆ. ವೀರನ ಹಿಂಬದಿಯಲ್ಲಿ ಸ್ತ್ರೀ ಶಿಲ್ಪವಿದ್ದು, ನಿರಿಗೆಯ ವಸ್ತ್ರವನ್ನು ಧರಿಸಿರುವಂತಿದೆ. ಕೈ ಮುಗಿದಿರುವ ಶಿಲ್ಪದ ತುಂಡು ಬಲಕ್ಕಿದೆ. ಇದನ್ನು ವೀರ ಮಾಸ್ತಿ ಕಲ್ಲು ಎಂದು ಹೇಳಬಹುದೇನೋ. ವಸ್ತ್ರ ವಿನ್ಯಾಸದ ಕಾರಣದಿಂದ ಇದರ ಕಾಲವನ್ನು ವಿಜಯನಗರದ ಅಂತ್ಯಕಾಲಕ್ಕೆ ಸೇರಿಸಬಹುದಾಗಿದೆ.

ಅದೇ ಕಾಲದ, ಅದೇ ದೇವಾಲಯದ ಎಡಗಡೆ ರಕ್ಷಣಾಗೋಡೆಯಲ್ಲಿ ಅಂಟಿಸಿರುವ ಒಂದು ವೀರಗಲ್ಲಿನ ಶಿಲ್ಪದಲ್ಲಿ ಹೆಂಗಸು ವೀರನ ಮುಂಭಾಗದಲ್ಲಿ ಕೈಮುಗಿದು ನಿಂತಿರುವಂತೆ ಇದೆ. ಹಿಂದಿನ ಶಿಲ್ಪದಂತೆ ಲಕ್ಷಣವನ್ನು ಹೊಂದಿದೆ. ವೀರ ಬಲಗೈಯಲ್ಲಿ ಬಾಕನ್ನು ಹಿಡಿದಿದ್ದಾನೆ. ಉಳಿದ ವಿವರಗಳು ಹಿಂದಿನ ವೀರಗಲ್ಲಿನಂತೆ ಇವೆ.

ಈ ವೀರಗಲ್ಲುಗಳ ಸಾಲಿನಲ್ಲಿ ದಂಪತಿ ಶಿಲ್ಪಗಳು ಇವೆ. ಹಾಗೂ ಮಾಸ್ತಿ ವೀರಗಲ್ಲು ಸಹ ಇವೆ. ಇಲ್ಲಿನ ಒಂದು ಮಾಸ್ತಿ ವೀರಗಲ್ಲಿನಲ್ಲಿ ೩ ಜನ ಸ್ತ್ರೀಯರು ಕೈ ಎತ್ತಿದ್ದಾರೆ. ಬಲಗೈ ಮೇಲಕ್ಕೆ ಎತ್ತಿ, ಎಡಗೈ ಇಳಿ ಬಿಟ್ಟಿದ್ದಾರೆ. ಮಧ್ಯದಲ್ಲಿ ವೀರ ಕತ್ತಿ ಹಿಡಿದಂತೆ ಬಿಡಿಸಿದೆ. ಈ ಶಿಲ್ಪಗಳನ್ನೆಲ್ಲ ಗಮನಿಸಿದರೆ, ಇವು ವಿಜಯನಗರ ಮತ್ತು ವಿಜಯನಗರದ ಅಂತ್ಯ ಕಾಲಕ್ಕೆ ಸೇರುತ್ತವೆ.

ಇಲ್ಲಿನ ಒಂದು ಶಿಲ್ಪದಲ್ಲಿ ಎರಡು ಕೈಯಲ್ಲಿ ದಂಡ ಹಿಡಿದಿರುವಂತೆ ಇದೆ. ಪಕ್ಕದಲ್ಲಿ ಇಬ್ಬರು ಸ್ತ್ರೀಯರು ಚಾಮರ ಹಿಡಿದಿರುವಂತೆ ಭಾಸವಾಗುತ್ತದೆ. ಶಾಸನ ಇಲ್ಲದಿರುವುದರಿಂದ ಅರ್ಥೈಸಲು ಸ್ಪಷ್ಟವಾಗುತ್ತಿಲ್ಲ.

೧೩. ವೀರಶೈವ ಯತಿ

ಸಾವನದುರ್ಗದ ವೀರಭದ್ರ ದೇವಾಲಯದ ಮುಂದೆ ವೀರಶೈವ ಯತಿಯ ಶಿಲ್ಪವಿದೆ. ಈ ಶಿಲ್ಪದಲ್ಲಿ ಯತಿ ಕೈಯಲ್ಲಿ ಏಕತಾರಿ ಹಿಡಿದಿದ್ದಾನೆ. ಹಣೆಯ ಮೇಲೆ ವಿಭೂತಿ ಹಾಕಿದ್ದಾನೆ. ನೀಳವಾದ ಗಡ್ಡ ಇದೆ. ತ್ರಿಕೋನಾಕಾರವಾದ ನಿಲುವಂಗಿ ಧರಿಸಿದ್ದಾನೆ. ತಲೆಯ ಮೇಲೆ ಬಟ್ಟೆ ಇದೆ. ಎಡಗೈ ಜೋಳಿಗೆ ನೇತು ಹಾಕಿಕೊಂಡಿದ್ದಾನೆ. ಕತ್ತಿನಲ್ಲಿ ರುದ್ರಾಕ್ಷಿ ಮಾಲೆ ಇದೆ. ಕೈಗಳಲ್ಲೂ ರುದ್ರಾಕ್ಷಿ ಕಟ್ಟಿದ್ದಾನೆ.

ಇದೇ ಲಕ್ಷಣವನ್ನು ಹೊಂದಿರುವ ಮತ್ತೊಂದು ಯತಿಯ ಶಿಲ್ಪ ಬಿನ್ನಮಂಗಲದ ಮುಕ್ತಿನಾಥೇಶ್ವರ ದೇವಾಲಯದ ಆವರಣದಲ್ಲಿದೆ. ಇದರಲ್ಲಿನ ವಿಶೇಷವೆಂದರೆ ತಲೆಯ ಮೇಲೆ ಜಟೆ ಮತ್ತು ಕಿವಿಯಲ್ಲಿ ಕರ್ಣಕುಂಡಲಗಳಿವೆ. ಇದರ ಕಾಲ ಕ್ರಿ.ಶ.೧೨ನೇ ಶತಮಾನ

೧೪. ಶೂಲ ಬ್ರಹ್ಮ ಶಿಲ್ಪ

ಈ ಶಿಲ್ಪ ಸಹ ಸಾವನದುರ್ಗದ ವೀರಭದ್ರ ದೇವಾಲಯದ ಮುಂದೆ ಇದೆ. ಇದರ ಮಧ್ಯದಲ್ಲಿ ಎರಡು ಶೂಲಗಳಿದ್ದು, ಶೂಲಗಳ ಎರಡೂ ಕಡೆಗಳಲ್ಲಿ ಶೂಲಬ್ರಹ್ಮನ್ನನು ಬಿಡಿಸಿದ್ದಾರೆ.

೧೫. ನಂದಿ ಅಥವಾ ಬಸವ

ಸಾಮಾನ್ಯವಾಗಿ ಶಿವ ದೇವಾಲಯಗಳ ಎದುರಿಗೆ ನಂದಿ ವಿಗ್ರಹವಿರುತ್ತದೆ. ಈ ಪ್ರದೇಶದಲ್ಲಿ ಇಂಥ ಹಲವು ದೇವಾಲಯಗಳ ಮುಂದೆ ಮತ್ತು ಪ್ರತ್ಯೇಕವಾಗಿ ನಂದಿ ವಿಗ್ರಹಗಳಿವೆ. ಮಾಗಡಿ ತಾಲ್ಲೂಕಿನ ಕಲ್ಯದಲ್ಲಿ ವೀರಶೈವ ಮಠದ ಬಳಿ ಇರುವ ಒಂದು ಗದ್ದುಗೆಯಲ್ಲಿ ರಾಕ್ಷಸನ ತಲೆಯ ಮೇಲೆ ಕಾಲಿಟ್ಟು ನಿಂತಿರುವ ನಂದಿಯ ಶಿಲ್ಪವಿದೆ. ಇದಕ್ಕೆ ಕಿರಿದಾದ ಕೋಡುಗಳಿವೆ. ಇವುಗಳ ಮಧ್ಯದ ಹಣೆ ಪಟ್ಟಿ, ಕೊರಳ ಗೆಜ್ಜೆಸರಗಳು, ಗಂಟೆ, ಇವುಗಳಿಂದಾಗಿ ಇದರ ಮುಖಮುದ್ರೆ ಎದ್ದು ಕಾಣುತ್ತದೆ. ಇದು ಅತ್ಯಂತ ಸುಂದರವಾಗಿದೆ.

ಹೆಸರಘಟ್ಟದ ಚಂದ್ರಮೌಳೇಶ್ವರ ದೇವಾಲಯದ ಬಸವ ಶಿಲ್ಪವು ಶಾಸನೋಕ್ತ ಕಾಲ ಕ್ರಿ.ಶ.೧೫೩೩ಕ್ಕೆ ಸೇರಿದ್ದು, ಈ ಶಿಲ್ಪದ ಕತ್ತಿನಲ್ಲಿ ಹಗ್ಗದ ತಾಡು, ಗಗ್ಗರಕಗಳ ಸರವನ್ನು ಹೊಂದಿದೆ. ಕುಳಿತಂತಿರುವ ಈ ಶಿಲ್ಪವು ವಿಜಯನಗರದ ಅಂತ್ಯಕಾಲಕ್ಕೆ ಸೇರಿಸುವಂತಹದ್ದಾಗಿದೆ.

ಈ ದೇವಾಲಯದ ಎಡಕ್ಕೆ ನವಗ್ರಹದ ಗುಡಿಯ ಗೋಡೆಗೆ ಸೇರಿಸಿರುವ ಗಣಪತಿಯ ಉಬ್ಬುಶಿಲ್ಪವು ತ್ರಿಕೋನಾಕಾರದ ಕಲ್ಲಿನಲ್ಲಿ ಬಿಡಿಸಿದ್ದು, ತಲೆಯು ಗಜಮುಖದಂತಿದೆ. ಇದು ಸಹ ವಿಜಯನಗರದ ಕಾಲಕ್ಕೆ ಸೇರುತ್ತದೆ.

೧೬ ಕಲಾವತಿ ಶಿಲ್ಪ

ಕಲ್ಯದ ಕಲ್ಲೇಶ್ವರ ಗುಡಿ ಬಳಿಯ, ರಸ್ತೆಯ ಪಕ್ಕದಲ್ಲಿ ಒಂದು ಕಂಬದ ಮೇಲೆ ಕುಂಬಳ ಕಾಯಜ್ಜಿಯದು ಎನ್ನುವ ಸ್ತ್ರೀಯ ತಲೆಯೊಂದನ್ನು ಕೆತ್ತಿರುವ ಶಿಲ್ಪವಿದೆ. ಹಿಂದೆ ಈ ಊರು ಕಲಾವತಿ ಎಂಬ ಪಟ್ಟಣವಾಗಿತ್ತು. ಈಕೆ ಒಮ್ಮೆ ಕುಂಬಳಕಾಯಿಗಳನ್ನು ಮಾರಲು ತಂದಾಗ ಅದನ್ನು ಕೊಳ್ಳುವ ವಿಷಯದಲ್ಲಿ ಜೈನರು ಮತ್ತು ಇತರರಲ್ಲಿ ವಿರಸ ಉಂಟಾಗಿ ಕೊನೆಗೆ ಹಾಳಾಯಿತು ಎಂಬ ಪ್ರತೀತಿ ಇದೆ. ಈ ಕಲಾವತಿಯ ಶಿಲ್ಪ ಇದೆಂದು ಗುರ್ತಿಸುತ್ತಾರೆ. ಕಂಬದ ಮೇಲೆ ಸ್ತ್ರಿ ತಲೆಯ ಚಿತ್ರ ಮಾತ್ರ ಇದೆ. ಕಂಬವು ಚಿಕ್ಕದಾಗಿದೆ. ಭೂಮಿಯಲ್ಲಿ ಹೂತು ಹೋಗಿರಬಹುದು. ಕಂಬವು ಚೌಕಾಕಾರವಾಗಿದೆ. ಮೇಲೆ ತ್ರಿಭೂಜಾಕೃತಿಯಲ್ಲಿದೆ. ಇದರ ಕಾಲ ಕ್ರಿ.ಶ.೧೫೩೩ ಎಂದು ಇಲ್ಲಿನ ಶಾಸನದಿಂದ ತಿಳಿಯಬಹುದಾಗಿದೆ.

೧೭. ಶೇಷಶಯನ (ರಂಗನಾಥ)

ಬೆಂಗಳೂರು ಬಳಿಯ ಕನ್ನೆಲ್ಲಿಯ ಚನ್ನಕೇಶವ ದೇವಾಲಯದ ಕಂಬಗಳ ಮೇಲೆ ಶೇಷಶಯನ (ರಂಗನಾಥ), [illegible] ಶಿಲ್ಪವಿದೆ. ಇದರಲ್ಲಿ ಕಾಲಿನ ಬಳಿ ಲಕ್ಷ್ಮಿ ಕುಳಿತಿದ್ದಾಳೆ. ಹೊಕ್ಕುಳದಿಂದ ಬಂದ ತಾವರೆಯಲ್ಲಿ ಬ್ರಹ್ಮನಿದ್ದಾನೆ. ಸರ್ಪವನ್ನು ಹಾಸಿಗೆಯನ್ನಾಗಿಸಿಕೊಂಡು ರಂಗನಾಥನು ಮಲಗಿದ್ದಾನೆ. ತಲೆಯಲ್ಲಿ ಕಿರೀಟವಿದೆ. ಇಲ್ಲಿನ ಶಾಸನದಿಂದ ಇದರ ಕಾಲವನ್ನು ಕ್ರಿ.ಶ.೧೪೦೮ ಎಂದು ನಿರ್ಣಯಿಸಬಹುದು.

೧೮. ನಾಗಶಿಲ್ಪಗಳು

ಈ ಪ್ರದೇಶದಲ್ಲಿ ಹಲವು ವಿವಿಧ ನಾಗಶಿಲ್ಪಗಳು ದೊರಕಿವೆ. ಇದರಿಂದ ಈ ನಾಡಿನಲ್ಲೂ ನಾಗಾರಾಧನೆ ಪ್ರಚಲಿತವಿತ್ತೆಂದು ತಿಳಿಯುತ್ತದೆ. ತೋಟಗೆರೆ, ಐಗಂಡಪುರ, ನೆಲಮಂಗಲ, ಕನ್ನೆಲ್ಲಿ, ಬ್ಯಾಡರಹಳ್ಳಿ, ಬಾಣವಾಡಿ, ಕಿತ್ತನೆಲ್ಲಿ ಮುಂತಾದ ಊರುಗಳಲ್ಲೆಲ್ಲಾ ಹಲವಾರು ನಾಗಶಿಲ್ಪಗಳು ಸಿಕ್ಕಿವೆ. ಇವುಗಳ ರಚನಾ ವಿನ್ಯಾಸ ಕ್ರಿ.ಶ.೮ನೇ ಶತಮಾನದಿಂದ ಇತ್ತೀಚಿನವರೆಗೆ ಸೇರಿದವುಗಳಾಗಿವೆ. ಒಂದೇ ಕಲ್ಲಿನಲ್ಲಿ ಕೆತ್ತಿರುವ ನಾಗಶಿಲ್ಪಗಳು. ಒಂದು ಎಡೆ, ಹಲವಾರು ಎಡೆಗಳಿರುವ ನಾಗ ಶಿಲ್ಪಗಳಿವೆ.

೧೯. ತಾವರೆಕೆರೆ ವೀರಗಲ್ಲುಗಳು

ಮಾಗಡಿ ತಾಲ್ಲೂಕಿನ ತಾವರೆಕೆರೆಯಲ್ಲಿ ತಾವರೆಕೆರೆ ಮತ್ತು ಮಾಗಡಿ ರಾಜ್ಯ ಹೆದ್ದಾರಿಯ ಪಕ್ಕದಲ್ಲಿರುವ ಹೊಲದ ಬದಿಯಲ್ಲಿ ನಾಲ್ಕು ವೀರಗಲ್ಲುಗಳು ನಿಂತಿವೆ. ಇವುಗಳು ತುಱುಗೋಳ್ ವೀರಗಲ್ಲುಗಳು. ಮೊದಲ ವೀರಗಲ್ಲಿನಲ್ಲಿ ತುಱುಗಳನ್ನು ಅಟ್ಟಿಸಿಕೊಂಡು ಹೋಗಲು ಬಂದ ಶತ್ರುವನ್ನು ವೀರನು ಕುದುರೆಯಿಂದ ಬೀಳಿಸಿ ಕುದುರೆಯನ್ನು ಕತ್ತಿಯಿಂದ ಹೊಡೆಯಲು ಕೈಯೆತ್ತಿರುವ ಚಿತ್ರವಿದೆ.

ಶತ್ರು ಕುದುರೆಯ ಮುಂದೆ ಕೆಳಗೆ ಬಿದ್ದಿದ್ದಾನೆ. ವೀರನ ಹಿಂದೆ ಕುರುಗಳ ಶಿಲ್ಪಗಳಿವೆ. ಈ ವೀರಗಲ್ಲಿನ ೨ನೇ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಹೊತ್ತೊಯ್ಯುತ್ತಿರುವ ಚಿತ್ರವಿದೆ. ಮೂರನೇ ಹಂತದಲ್ಲಿ ಸ್ವರ್ಗದಲ್ಲಿ ವೀರ ಪೀಠದ ಮೇಲೆ ಕುಳಿತಿದ್ದಾನೆ. ಅವನ ಅಕ್ಕ-ಪಕ್ಕ ಸಖಿಯರು(ಚಾಮರಧಾರಿ ಸ್ತ್ರೀಯರು) ಇರುವ ಚಿತ್ರವನ್ನು ಬಿಡಿಸಿದ್ದಾರೆ.

೨ನೇ ವೀರಗಲ್ಲು ಸಹ ಮೇಲಿನ ಲಕ್ಷಣವನ್ನೇ ಹೊಂದಿದೆ. ಆದರೆ ವೀರಗಲ್ಲಿನ ಮೊದಲನೇ ಹಂತ ಭೂಮಿಯಲ್ಲಿ ಹೂತು ಹೋಗಿದೆ. ೨ನೇ ವೀರಗಲ್ಲು ಸಹ ತುಱುಗೋಳ್ ವೀರಗಲ್ಲು, ವೀರನು ಶತ್ರುಗಳಿಂದ ಹಸುಗಳನ್ನು ರಕ್ಷಿಸಲು ಬಿಲ್ಲು-ಬಾಣಗಳನ್ನು ಬಳಸಿರುವುದು ಚಿತ್ರದಲ್ಲಿ ಕಾಣುತ್ತದೆ. ವೀರ ಹಿಂದೆ ಹಸುಗಳ ಚಿತ್ರವಿದೆ. ಮುಂದೆ ಶತ್ರುಗಳು ನೆಲಕ್ಕೆ ಬಿದ್ದಿರುವ ಚಿತ್ರವಿದೆ. ಶತ್ರುಗಳಿಗೆ ಬಾಣಗಳು ನೆಟ್ಟಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ವೀರನ ಕೈಯಲ್ಲಿ ಬಾಣ, ಕತ್ತಿ ಇರುವುದನ್ನು ಕಾಣಬಹುದು. ಬಾಣದ ಬತ್ತಳಿಕೆಯನ್ನು, ಬಾಣಗಳನ್ನು ಚಿತ್ರಿಸಿದ್ದಾರೆ. ಉಳಿದ ಹಂತಗಳು ಮೇಲಿನ ವೀರಗಲ್ಲಿನ ಲಕ್ಷಣಗಳನ್ನೇ ಹೊಂದಿದೆ.

೪ನೇ ವೀರಗಲ್ಲು ಸಹ ತುಱುಗೋಳ್ ವೀರಗಲ್ಲಾಗಿದೆ. ಇದರ ಮೊದಲ ಹಂತದಲ್ಲಿ ವೀರನು ಶತ್ರುವಿನ ತಲೆಯಜುಟ್ಟನ್ನು ಎಡಗೈಲಿ ಹಿಡಿದು, ಬಲಗೈಲಿ ಕತ್ತಿ ಹಿಡಿದು ಶತ್ರುವಿಗೆ ಹೊಡೆಯಲು ಕೈ ಮೇಲಕ್ಕೆ ಎತ್ತಿರುವ ಚಿತ್ರವಿದೆ. ವೀರ ಹಿಂದೆ ತುಱುವಿದೆ. ಉಳಿದ ಹಂತದ ಲಕ್ಷಣಗಳು ಮೊದಲ ವೀರಗಲ್ಲಿನ ಲಕ್ಷಣಗಳನ್ನೇ ಹೋಲುತ್ತದೆ. ಈ ಎಲ್ಲ ವೀರಗಲ್ಲುಗಳಲ್ಲಿ ಸ್ವರ್ಗದ ಹಂತದ ಮೇಲೆ (ತುದಿಯಲ್ಲಿ) ಶಿವಲಿಂಗದ ಶಿಲ್ಪವಿದೆ. ಮೂರನೇ ವೀರಗಲ್ಲಿನಲ್ಲಿ ವಾಮಚಾರಿ (ವಮ್ಮಚರಿ) ಎಂಬುವವನು ಇದನ್ನು ರಚನೆ ಮಾಡಿದ್ದಾನೆ ಎಂದಿದೆ.

.....

ಶ್ರೀ ಆ....

ವಮ್ಮಚ

ರಿಯ-

ಸಂ.ಯು

ಕಲು[೨೬]

ಇಲ್ಲಿನ ಶಾಸನ ಮತ್ತು ವೀರಗಲ್ಲುಗಳ ಲಕ್ಷಣಗಳನ್ನು ಗಮನಿಸಿದರೆ ಇದನ್ನು ಹೊಯ್ಸಳರ ಕಾಲದ ವೀರಗಲ್ಲುಗಳೆಂದು ಹೇಳಬಹುದು. ಹೀಗೆ ಕುಕ್ಕಲನಾಡಿನಲ್ಲಿರುವ ಪ್ರಮುಖವಾದ ದೇವಾಲಯಗಳು ಮತ್ತು ಶಿಲ್ಪಗಳನ್ನು ಕುರಿತು ತಿಳಿಯಬಹುದು.

ನಮ್ಮ ನಾಡಿನ ದೇವಾಲಯಗಳು, ಶಿಲ್ಪಗಳು ಮತ್ತು ವೀರ ಗಲ್ಲುಗಳು, ಉತ್ತಮ ಕಲಾಕೃತಿಗಳೂ, ಐತಿಹಾಸಿಕ ದಾಖಲೆಗಳೂ ಆಗಿವೆ. ಇಂದು ಇವು ಪ್ರಕೃತಿಯ ವಿಕೋಪ, ಜನರ ಮೂಢನಂಬಿಕೆ, ಅಜ್ಞಾನಗಳಿಂದ ನಾಶವಾಗುತ್ತಿವೆ. ಇವುಗಳನ್ನು ಸಾಧ್ಯವಾದಷ್ಟು ಮಟ್ಟಿಗಾದರೂ, ಸಂರಕ್ಷಿಸುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಅಡಿಟಿಪ್ಪಣಿಗಳು

೧. ಗೋಪಾಲರಾವ್ ಎಚ್.ಎಸ್., **ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳ - ಒಂದು ಸಾಂಸ್ಕೃತಿಕ ಅಧ್ಯಯನ**, ಪು.೨೭.

೨. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪು.೨೮೯

೩. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು.೨೨೪

೪. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಪು.೨೭೦

೫. ಕೊಪ್ಪಾ ಎಸ್.ಕೆ., **ತರ್ದವಾಡಿನಾಡು : ಒಂದು ಅಧ್ಯಯನ**, ಪು.೩೦೪

೬. ಅದೇ, ಪು.೩೦೪

೭. EC-IX, Nl, ೩೭, ಕ್ರಿ.ಶ.೧೦೩೩

೮. ಅದೇ, Nl, ೦೩, ಕ್ರಿ.ಶ.೧೧೧೦

೯. ಅದೇ, Nl, ೩೮, ಕ್ರಿ.ಶ.೧೩೦೧

೧೦. ಅದೇ, ಮಾಗಡಿ, ೧೫, ಕ್ರಿ.ಶ.೧೩೧೫

೧೧. ಅದೇ, Bn, ೧೨೨, ಕ್ರಿ.ಶ.೧೪೦೮

೧೨. ಅದೇ, Nl, ೩೧, ಕ್ರಿ.ಶ.೧೫೩೩

೧೩. ಅದೇ, ಮಾಗಡಿ, ೭೪, ಕ್ರಿ.ಶ.೧೫೪೭

೧೪. ಅದೇ, Nl, ೩೭, ಕ್ರಿ.ಶ.೧೦೩೩

೧೫. ಅದೇ, Nl, ೩೯, ಕ್ರಿ.ಶ.೧೫೬೬

೧೬. ಅದೇ, Nl, ೪೦

೧೭. ಅದೇ, ಮಾಗಡಿ, ೧೫, ಪು.೧೩೧೫

೧೮. ಅದೇ, Nl, ೩೮a, ಕ್ರಿ.ಶ.೧೧೧೩ ಮತ್ತು ಅದೇ, Nl, ೩೯, ಕ್ರಿ.ಶ.೧೫೬೬

೧೮a. ದೇವರಕೊಂಡಾರೆಡ್ಡಿ, **ತಲಕಾಡಿನ ಗಂಗರ ದೇವಾಲಯಗಳು : ಒಂದು ಅಧ್ಯಯನ**, ಪು.೧೩೩

೧೯. ಗೋಪಾಲ್‌ರಾವ್ ಎಚ್.ಎಸ್., ಶಾಸನ ಸಂಕಲನ, ಪು.೨೧

೨೦. EC-IX, Bs, ೧೦೩, ಕ್ರಿ.ಶ.೧೩೩೧ ಮತ್ತು EC-IX. Bn, ೧೧೦, ಕ್ರಿ.ಶ.೧೩೩೬

೨೧. ಅದೇ,, Nl, ೦೩, ಕ್ರಿ.ಶ.೧೧೧೦

೨೨. ಈ ವಿಷಯವನ್ನು ನನ್ನ ಗುರುಗಳಾದ ಡಾ. ದೇವರಕೊಂಡಾರೆಡ್ಡಿಯವರು ತಿಳಿಸಿದರು.

೨೩. EC-IX, Bn, ೧೧೦, ಕ್ರಿ.ಶ.೧೩೩೬

೨೪. ಅದೇ, Bn, ೧೨೨, ಕ್ರಿ.ಶ.೧೪೦೮

೨೫. ಅದೇ, Bn, ೨೬, ಕ್ರಿ.ಶ.೧೪೩೦

೨೬. ಅದೇ, Nl, ೩೧, ಕ್ರಿ.ಶ.೧೫೩೩

೨೭. ದೇವರಕೊಂಡಾರೆಡ್ಡಿ, ತಲಕಾಡಿನ ಗಂಗರ ದೇವಾಲಯಗಳು : ಒಂದು ಅಧ್ಯಯನ, ಪು.೯೮

೨೮. EC-IX, ಮಾಗಡಿ, ೮೦, ಕ್ರಿ.ಶ.೧೧೦೦

ಅಧ್ಯಾಯ ೭

ಸಮಾರೋಪ

ಸಮಾರೋಪ

ಕರ್ನಾಟಕದ ಇತಿಹಾಸವನ್ನು ಗಮನಿಸಿದಾಗ ಇಲ್ಲಿ ಅನೇಕ ಅರಸು ಮನೆತನಗಳು ಆಡಳಿತ ನಡೆಸಿರುವುದು ಕಂಡುಬರುತ್ತದೆ. ಈ ಅರಸುಮನೆತನಗಳ ಯಶಸ್ಸಿನಲ್ಲಿ ಬಹುಪಾಲು ಅಲ್ಲಿನ ಉಪವಿಭಾಗಗಳ ಪಾತ್ರವು (ಚಿಕ್ಕಪುಟ್ಟ ಅರಸರು, ಪಾಳೆಪಟ್ಟುಗಳು, ಸ್ಥಳೀಯ ಮುಖಂಡರ ಆಡಳಿತ) ಹಿರಿದಾದುದಾಗಿದೆ ಎಂಬುದು ತಿಳಿದುಬರುತ್ತದೆ. ಇಂತಹ ಒಂದು ಚಿಕ್ಕ ಉಪ ಆಡಳಿತ ವಿಭಾಗವೇ 'ಕುಕ್ಕಲನಾಡು'.

ಕುಕ್ಕಲನಾಡು ಹಿಂದಿನ ಹೆಸರಿನಲ್ಲಿ ಇಂದು ಅಸ್ತಿತ್ವದಲ್ಲಿಲ್ಲದಿದ್ದರೂ ಇದು ಕ್ರಿ.ಶ.೮ನೇ ಶತಮಾನದಿಂದ ಕ್ರಿ.ಶ.೧೮ನೇ ಶತಮಾನದ ವರೆಗಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಕೆಲ ಪ್ರದೇಶಗಳನ್ನು ಒಳಗೊಂಡು ವಿವಿಧ ಅರಸು ಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತು. ಈ ಕುಕ್ಕಲನಾಡಿನ ಸಾಂಸ್ಕೃತಿಕ ಅಂಶಗಳ ಮಹತ್ವವನ್ನು ಕುರಿತು ಇಲ್ಲಿನ ಶಾಸನಗಳು ಮತ್ತು ದೇವಾಲಯಗಳನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಪ್ರಬಂಧದಲ್ಲಿ ವಿವರಿಸಲಾಗಿದೆ.

ಮೊದಲಿಗೆ ಈ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪವನ್ನು ಕುರಿತು ಹಾಗೂ ಆಕರ ಸಾಮಗ್ರಿ ಮತ್ತು ಅಧ್ಯಯನದ ಕ್ರಮವನ್ನು ವಿಶ್ಲೇಷಿಸಲಾಗಿದೆ. ಎರಡನೆಯದಾಗಿ ಕುಕ್ಕಲನಾಡಿನ ಪದನಿಷ್ಪತ್ತಿ, ಭೌಗೋಳಿಕ ಲಕ್ಷಣಗಳು ಹಾಗೂ ಐತಿಹಾಸಕತೆ (ಪ್ರಾಗೈತಿಹಾಸ) ಮತ್ತು ಈ ಪ್ರದೇಶದ ಸ್ಥಳನಾಮಗಳ ಬಗ್ಗೆ ವಿವರಿಸಲಾಗಿದೆ.

ಈ ನಾಡಿನ ರಾಜಕೀಯ ಚರಿತ್ರೆಯೂ ಕುತೂಹಲಕಾರಿಯಾಗಿದೆ. ಈ ನಾಡನ್ನು ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಇವರ ಸಾಮಂತರಾದ ಯಲಂಹಕನಾಡ ಪ್ರಭುಗಳು ಇವರೆಲ್ಲರ ಆಳ್ವಿಕೆಗೆ ಒಳಪಟ್ಟ ಕುಕ್ಕಲನಾಡಿನ ನಾಯಕರು, ಗೌಡರುಗಳು ಮತ್ತು ಪ್ರಭುಗಳು ಇದನ್ನು ಒಂದು ಸ್ವತಂತ್ರ ರಾಜ್ಯವೆಂಬಂತೆ ಆಡಳಿತ ನಡೆಸಿದ್ದಾರೆ. ಚೋಳರು, ಹೊಯ್ಸಳರು ಮತ್ತು ವಿಜಯನಗರದ ಅರಸರ ಪ್ರಾರಂಭದ ಕಾಲದಲ್ಲಿ ಈ ನಾಡು ಉನ್ನತ ಸ್ಥಾನಮಾನ ಹೊಂದಿತ್ತು ಎಂಬುದು ತಿಳಿಯುತ್ತದೆ. ಇವರು ರಾಜ್ಯಭಾರ ಮಾಡಿದ ಆಡಳಿತದ ವೈಖರಿ ಹಾಗೂ ಕುಕ್ಕಲನಾಡಿನ ನಾಯಕರು, ಗೌಡರುಗಳು

ಮತ್ತು ಪ್ರಭುಗಳು (ಮಯಿಲೆಯನಾಯಕ ಚಂನೆಯನಾಯಕ, ಉಪ್ಪೂರ ಬೊಮ್ಮನಾಯಕ) ಮುಂತಾದವರುಗಳ ಬಗ್ಗೆ ವಿವರವಿದೆ.

ಕರ್ನಾಟಕದ ಇತರೆಡೆಯಲ್ಲಿದ್ದಂತೆ ಕುಕ್ಕಲನಾಡಿನ ಸಾಮಾಜಿಕ ವ್ಯವಸ್ಥೆಯಲ್ಲಿ ಚಾತುರ್ವರ್ಣ ಪದ್ಧತಿಯಿದ್ದು, ಬ್ರಾಹ್ಮಣರಿಗೆ ಉನ್ನತ ಸ್ಥಾನವಿತ್ತು. ಈ ನಾಡಿನ ಅತ್ತಿಗುಂಟೂರು, ಗೊಂಗಡಿಪುರ (ತಿಮ್ಮಣ್ಣರಾಜಪುರ), ಮುದುಗೆರೆ, ಬೊಮ್ಮನಹಳ್ಳಿ, ಬಾಣವಾಡಿ, ರಾಮಾಪುರ ಮತ್ತು ದೊಡ್ಡಬೊಮ್ಮಸಂದ್ರ ಮುಂತಾದ ಗ್ರಾಮಗಳು ಪ್ರಮುಖ ಅಗ್ರಹಾರಗಳು, ವಿದ್ಯಾಕೇಂದ್ರಗಳೂ ಆಗಿದ್ದವು ಎಂಬುದನ್ನು ವಿವರಿಸಲಾಗಿದೆ. ಇಲ್ಲಿನ ಸಂಪ್ರದಾಯ ನಂಬಿಕೆಗಳ ಬಗ್ಗೆಯೂ ತಿಳಿಸಲಾಗಿದೆ. ಜೊತೆಗೆ ಕುಕ್ಕಲನಾಡು ಸಾಹಿತ್ಯಿಕವಾಗಿಯೂ ಮುಂದುವರಿದಿತ್ತು ಎಂಬುದಕ್ಕೆ ಇಲ್ಲಿನ ಶಾಸನ ಕವಿಗಳು ಮತ್ತು ಲಿಪಿಕಾರರ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ಕಂಡುಬಂದಿರುವುದು ಸಾಕ್ಷಿಯಾಗಿದೆ. ಈ ಪ್ರದೇಶದಲ್ಲಿನ ಜನರಿಗೆ ದೇವರ ಬಗ್ಗೆ ಇದ್ದ ಭಯ, ಭಕ್ತಿ, ತಂದೆ-ತಾಯಿ ಮತ್ತು ಗುರುಹಿರಿಯರಲ್ಲಿನ ಗೌರವಾಧಾರಗಳನ್ನು ಇಲ್ಲಿನ ಶಾಪಾಶಯಗಳಿಂದ ತಿಳಿಯಬಹುದಾಗಿದೆ. ಇವರ ಉಡುಗೆ ತೊಡುಗೆಗಳ ಬಗ್ಗೆಯೂ ಇಲ್ಲಿ ವಿವರಿಸಲಾಗಿದೆ. ಈ ನಾಡಿನಲ್ಲಿನ ವ್ಯಕ್ತಿನಾಮಗಳನ್ನು ಕುರಿತು ಹಾಗೂ ಸಾರ್ವಜನಿಕ ಕಾರ್ಯಗಳ ಬಗ್ಗೆ ಮತ್ತು ಈ ಪ್ರದೇಶದಲ್ಲಿನ ಸ್ತ್ರೀಯರ ಸ್ಥಾನಮಾನದ ಬಗ್ಗೆಯೂ ವಿವೇಚಿಸಲಾಗಿದೆ.

ಕುಕ್ಕಲನಾಡಿನ ಆರ್ಥಿಕ ವ್ಯವಸ್ಥೆಯ ಬಗ್ಗೆ ಸಹ ಇದೇ ಭಾಗದಲ್ಲಿ ವಿವರಿಸಲಾಗಿದೆ. ಈ ನಾಡು ಫಲವತ್ತಾದ ಭೂ ಪ್ರದೇಶದಿಂದ ಕೂಡಿದ್ದು, ಪ್ರಧಾನವಾಗಿ ಕೃಷಿಯನ್ನು ಅವಲಂಬಿಸಿದ್ದಿತು. ಅಲ್ಲದೆ ವಿವಿಧ ಕೈಗಾರಿಕೆಗಳೂ ಇದ್ದವು. ವ್ಯಾಪಾರಸ್ಥರಾದ ಸೆಟ್ಟಿಯರು, ಹಲರು ಮುಂತಾದವರ ಬಗ್ಗೆ ಇವರ ವರ್ತಕ ಸಂಘಗಳ ಬಗ್ಗೆಯೂ ವಿವರಿಸಲಾಗಿದೆ. ಈ ಪ್ರದೇಶದಲ್ಲಿ ವಿವಿಧ ರೀತಿಯ ಅಳತೆಮಾಪನಗಳನ್ನು ಬಳಸುತ್ತಿದ್ದರು(ಧಾನ್ಯ, ಎಣ್ಣೆ ಇತ್ಯಾದಿಗಳನ್ನು ಅಳೆಯಲು). ನೈಸರ್ಗಿಕವಾಗಿ ಸಂಪದ್ಭರಿತವಾದ ಈ ನಾಡಿನಲ್ಲಿ ವಿವಿಧ ರೀತಿಯ ತೆರಿಗೆಗಳಿದ್ದವು. ರಾಜ್ಯದ ಬೊಕ್ಕಸಕ್ಕೆ ಎಲ್ಲಾ ಮೂಲಗಳಿಂದ ಬಂದ ಆದಾಯವನ್ನು ಅಧಿಕಾರಿಗಳ ಮತ್ತು ಸೈನಿಕರ ವೇತನ ಕೊಡಲು, ರಕ್ಷಣಾವ್ಯವಸ್ಥೆ ಬಲಪಡಿಸಲು (ಆಯುಧಗಳಿಗೆ) ಮತ್ತು ಜನಕಲ್ಯಾಣ ಕಾರ್ಯಗಳಿಗೆ ಹೇಗೆ ವಿನಿಯೋಗಿಸುತ್ತಿದ್ದರು ಎಂಬುದನ್ನು ತಿಳಿಸಲು ಪ್ರಯತ್ನಿಸಿದ್ದೇನೆ.

ಈ ನಾಡು ಜೈನಮತ, ಶೈವಮತ, ವೈಷ್ಣವಮತ, ವೀರಶೈವಮತ ಮತ್ತು ನಾಥಪಂಥಗಳ ನೆಲೆವೀಡಾಗಿತ್ತು. ಬೌದ್ಧಧರ್ಮದ ಕುರುಹುಗಳು(ರಾಜಘಟ್ಟ) ಇಲ್ಲಿ ಕಂಡುಬಂದರೂ ಈ ಧರ್ಮದ ಬಗೆಗೆ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ. ಜೈನ, ಶೈವ, ವೈಷ್ಣವ ಮತ್ತು ವೀರಶೈವ ಮತಗಳು ಹೆಚ್ಚು ಪ್ರಚಲಿತದಲ್ಲಿದ್ದವು ಎಂಬುದಕ್ಕೆ ಇಲ್ಲಿನ ವಿವಿಧ ಮತಗಳ ದೇವಾಲಯಗಳೇ ಸಾಕ್ಷಿಯಾಗಿವೆ. ಇಲ್ಲಿ

ನಾಥಪಂಥ ಇತ್ತು ಎಂಬುದಕ್ಕೆ ನಾಥಮುನೀ ಪರಂಪರೆ ಬಗ್ಗೆ ಈ ಪ್ರದೇಶದಲ್ಲಿ ದೊರಕಿರುವ ಯತಿಗಳ ಶಿಲ್ಪಗಳೇ ಸಾಕ್ಷಿಯಾಗಿವೆ. ಒಟ್ಟಿನಲ್ಲಿ ಧಾರ್ಮಿಕ ಸಹಿಷ್ಣುತೆಗೆ ಈ ನಾಡು ಪಾತ್ರವಾಗಿತ್ತು ಎಂಬುದನ್ನು ವಿಶದಪಡಿಸಲಾಗಿದೆ.

ಧಾರ್ಮಿಕ ಜೀವನದ ಪ್ರತೀಕವಾಗಿರುವ ದೇವಾಲಯಗಳು ಮತ್ತು ಶಿಲ್ಪಗಳು ಈ ನಾಡಿನಲ್ಲಿವೆ. ಈಗ ಇಲ್ಲಿ ಸುಮಾರು ೧೮ಕ್ಕೂ ಹೆಚ್ಚು ಶಾಸನೋಕ್ತ ದೇವಾಲಯಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಈಗ ಕೆಲವು ಕಣ್ಮರೆಯಾಗಿದ್ದರೂ ಇನ್ನೂ ಕೆಲವು ದೇವಾಲಯಗಳ ವಾಸ್ತುಶಿಲ್ಪ ದೃಷ್ಟಿಯಿಂದ ಮಹತ್ವದ್ದಾಗಿವೆ. ಬಿನ್ನಮಂಗಲದ ಮುಕ್ತಿನಾಥೇಶ್ವರ ದೇವಾಲಯ, ತೋಟಗೆರೆಯ ಅರ್ಜುನದೇವಾಲಯ, ಕನ್ನೆಲ್ಲಿಯ ಚನ್ನಕೇಶವ ಅಥವಾ ಚೆನ್ನಿಗರಾಯ ದೇವಾಲಯ, ದೊಡ್ಡಬೊಮ್ಮಸಂದ್ರದ ಗೋಪಾಲಸ್ವಾಮಿ ದೇವಾಲಯ, ಸಾವನದುರ್ಗದ ವೀರಭದ್ರ ಮತ್ತು ಲಕ್ಷ್ಮೀನರಸಿಂಹ ದೇವಾಲಯಗಳು ಕಿತ್ತನಲ್ಲಿಯ ಸೋಮೇಶ್ವರ ಮತ್ತು ವೀರಭದ್ರ ದೇವಾಲಯಗಳು, ಐಗಂಡಪುರದ ಧರ್ಮೇಶ್ವರ ದೇವಾಲಯ, ಮಧುರೆ ಗ್ರಾಮದ ಈಶ್ವರ ದೇವಾಲಯ, .ಹೆಸರುಘಟ್ಟದ ಚಂದ್ರಮೌಳೇಶ್ವರ ದೇವಾಲಯ, ನೆಲಮಂಗಲದ ಈಶ್ವರ ಮತ್ತು ಬೀರೇಶ್ವರ ದೇವಾಲಯಗಳು ವಾಸ್ತು ರಚನೆಯ ವಿವರಕ್ಕೆ ಪ್ರಮುಖ ಆಕರಗಳಾಗಿವೆ.

ಶಿಲ್ಪಕಲಾ ದೃಷ್ಟಿಯಿಂದ ಮಹತ್ವದ್ದಾಗಿರುವ ಮೂರ್ತಿಶಿಲ್ಪಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಶಿಲ್ಪಗಳಾದ ಕಾಳಿಂಗಮರ್ಧನ ಕೃಷ್ಣ, ಬ್ರಹ್ಮ, ಶಿವ, ಸಪ್ತಮಾತೃಕೆಯರು, ಸೂರ್ಯ, ವಿಷ್ಣು, ಚಂಡಿಕೇಶ್ವರ, ಗಣೇಶ, ವೀರಭದ್ರ, ಯತಿಯಶಿಲ್ಪ ಶೂಲಬ್ರಹ್ಮನ ಶಿಲ್ಪ, ಭಕ್ತರ ಶಿಲ್ಪಗಳು ಮತ್ತು ವೀರಗಲ್ಲುಗಳ ಕಲಾ ನೈಪುಣ್ಯತೆಯನ್ನು ಎತ್ತಿ ಹೇಳಲಾಗಿದೆ.

ಒಟ್ಟಿನಲ್ಲಿ ಶಾಸನಗಳು ಮತ್ತು ದೇವಾಲಯಗಳ ಹಿನ್ನೆಲೆಯಲ್ಲಿ ಮಾಡಿದ ಈ ಅಧ್ಯಯನದಿಂದ

೧. ಕುಕ್ಕಲನಾಡಿನ ಇತಿಹಾಸ ಮತ್ತು ಪುರಾತನ ಸಂಸ್ಕೃತಿಯನ್ನು ತಿಳಿಯಲು ಸಹಾಯಕವಾಗಿದೆ.

೨. ಈ ನಾಡನ್ನು ಆಳ್ವಿಕೆ ಮಾಡಿದ ವಿವಿಧ ರಾಜಮನೆತನಗಳ ಬಗ್ಗೆ ಹಾಗೂ ಅವರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳನ್ನು ಅರಿಯಬಹುದಾಗಿದೆ.

೩. ಈ ನಾಡಿನಲ್ಲಿದ್ದ ಧರ್ಮಗಳ ಬಗ್ಗೆ, ವಿಶೇಷವಾಗಿ 'ನಾಥಪಂಥ'ದ ಬಗ್ಗೆ ತಿಳಿದುಬರುತ್ತದೆ.

೪. ಕುಕ್ಕಲನಾಡಿನ ಅಧ್ಯಯನದಿಂದ ಇಲ್ಲಿನ ಪ್ರಾಚೀನ ದೇವಾಲಯಗಳ ಬಗ್ಗೆ ಮತ್ತು ವಿಶೇಷ ಶಿಲ್ಪಗಳ ಬಗ್ಗೆ ತಿಳಿದುಬರುತ್ತದೆ. ದೇವಾಲಯಗಳು, ಧಾರ್ಮಿಕ ಜೀವನದಲ್ಲಿ ವಹಿಸಿದ ಪಾತ್ರದ ಬಗ್ಗೆಯೂ ಅರಿಯಬಹುದಾಗಿದೆ.

೫. ಈ ಅಧ್ಯಯನವು ಕುಕ್ಕಲನಾಡಿನ ಅಂದಿನ ಆದರ್ಶಗಳು, ಮೌಲ್ಯಗಳು, ಜನಜೀವನ, ನಂಬಿಕೆ, ಆಚಾರ-ವಿಚಾರಗಳು ಮೊದಲಾದವುಗಳನ್ನು ತಿಳಿಯಲು ಸಹಕಾರಿಯಾದೆ.

೬. ಕುಕ್ಕಲನಾಡಿನ ಅಧ್ಯಯನದಿಂದ ಈ ಪ್ರದೇಶದ ಶಾಸನಗಳು, ದೇವಾಲಯಗಳು ಮತ್ತು ಶಿಲ್ಪಗಳನ್ನು ಒಂದೆಡೆ ಸಮಗ್ರವಾಗಿ ದಾಖಲಿಸಲಾಗಿದೆ.

೭. ಕುಕ್ಕಲನಾಡಿನ ಅಧ್ಯಯನದಿಂದ ಒಂದು ನಿರ್ದಿಷ್ಟವಾದ ಪ್ರದೇಶದ ಆಳ್ವಿಕೆ ಹಾಗೂ ಅಭಿವೃದ್ಧಿಯ ಇತಿಹಾಸಕ್ಕೆ ಚಿಕ್ಕಪುಟ್ಟ ಅರಸರು ಮನೆತನಗಳ, ನಾಡುಗಳ, ಪಾಳೆಪಟ್ಟುಗಳ ಮತ್ತು ಸ್ಥಳೀಯ ಮುಖಂಡರ ಆಳ್ವಿಕೆಯು, ಸಾಮ್ರಾಟ ಮನೆತನಗಳ ಆಳ್ವಿಕೆಗಿಂತ ಹೆಚ್ಚು ನಿರ್ಣಾಯಕವಾಗಿವೆ ಎಂಬುದು ತಿಳಿಯುತ್ತದೆ. ಹೀಗೆ ಈ ನಾಡಿನ ಅಧ್ಯಯನದಿಂದ ಇಲ್ಲಿನ ಸಾಂಸ್ಕೃತಿಕ ಅಂಶಗಳ ಮಹತ್ವವು ತಿಳಿದು ಬರುತ್ತದೆ.

ಒಟ್ಟಿನಲ್ಲಿ ಈ ಅಧ್ಯಯನವು ಈ ನಾಡಿನ ಸಾಂಸ್ಕೃತಿಕ ಅಧ್ಯಯನವಾಗಿದ್ದರೂ ಕೂಡ ಇಲ್ಲಿ ಸಂಶೋಧನೆಗೆ ಇನ್ನೂ ಅವಕಾಶಗಳಿವೆ. ೧. ಕುಕ್ಕಲನಾಡಿನ ಪುರಾತತ್ವ ನೆಲೆಗಳನ್ನು ಕುರಿತು ಅಧ್ಯಯನ ಮಾಡಬಹುದು, ೨. ಕುಕ್ಕಲನಾಡಿನ ಸ್ಥಳನಾಮಗಳ ಬಗ್ಗೆಯೂ ಅಧ್ಯಯನ ಮಾಡಬಹುದು. ೩. ಈ ನಾಡಿನಲ್ಲಿದ್ದ 'ನಾಥಪಂಥ'ದ ಬಗ್ಗೆಯೇ ಪ್ರತ್ಯೇಕ ಅಧ್ಯಯನ ಕೈಗೊಳ್ಳಬಹುದಾಗಿದೆ. ೪. ಈ ಪ್ರದೇಶ ದಲ್ಲಿರುವ ಕೆರೆ-ಕಟ್ಟೆ ಬಾವಿಗಳ ಬಗೆಗೆ ವಿಶೇಷ ಅಧ್ಯಯನ ಕೈಗೊಳ್ಳಬಹುದು. ೫. ಕುಕ್ಕಲನಾಡಿನ ಜಾನಪದ ಅಂಶಗಳನ್ನು ಕುರಿತು ಅಧ್ಯಯನ ಮಾಡಬಹುದು. ೬. ಈ ನಾಡಿನ ದೇವಾಲಯ ಮತ್ತು ಮೂರ್ತಿಶಿಲ್ಪಗಳು ಸಂಶೋಧನೆಗೆ ಅಮೂಲ್ಯ ಆಕರಗಳಾಗಿವೆ. ಇವುಗಳನ್ನು ಒಂದು ಪ್ರತ್ಯೇಕವಾದ ಮಹಾಪ್ರಬಂಧದ ವ್ಯಾಪ್ತಿಗೆ ತರಬಹುದು.

ಹೀಗೆ ಕುಕ್ಕಲನಾಡಿನ ವಿವಿಧ ರೀತಿಯ ವಿಷಯಗಳ ಬಗ್ಗೆ ಸಂಶೋಧನೆ ಮಾಡಲು ಅವಕಾಶಗಳಿವೆ. ಕುಕ್ಕಲನಾಡಿನ ಅಧ್ಯಯನದಂತೆಯೇ ಉಳಿದ ಚಿಕ್ಕ, ಚಿಕ್ಕ ನಾಡುಗಳ ಬಗ್ಗೆಯೂ ಹೆಚ್ಚಿನ ಅಧ್ಯಯನಗಳು ಆಗಲಿ ಎಂಬುದು ನನ್ನ ಆಶಯವಾಗಿದೆ. ಈ ನಿಟ್ಟಿನಲ್ಲಿ ಅಧ್ಯಯನ ಮಾಡುವವರಿಗೆ ಈ ನಮ್ಮ ಅಧ್ಯಯನವು ಆಕರವಾಗಲಿದೆ ಎಂದು ಆಶಿಸಲಾಗಿದೆ.

ಅನುಬಂಧಗಳು

೧. ಸಂಕ್ಷೇಪಗಳು

೨. ನಕ್ಷೆಗಳು

೩. ತಲನಕ್ಷೆಗಳು

೪. ದೇವಾಲಯಗಳ ಪಟ್ಟಿ

೫. ಶಾಸನಕವಿಗಳು ಮತ್ತು ಲಿಪಿಕಾರರ ಪಟ್ಟಿ

೬. ಆಕರ ಗ್ರಂಥಗಳು

೭. ಛಾಯಾಚಿತ್ರಗಳು

೧. ಸಂಕ್ಷೇಪಗಳು

೧. ಕ.ವಿ.ವಿ.	ಕನ್ನಡ ವಿಶ್ವವಿದ್ಯಾಲಯ
೨. ಕ.ಸಾ.ಪ.	ಕನ್ನಡ ಸಾಹಿತ್ಯ ಪರಿಷತ್ತು
೩. ಕ.ಇನ್ಸ್	ಕರ್ನಾಟಕ ಇನ್ಸ್‌ಕ್ರಿಪ್ಷನ್
೪. ದ್ರಾ.ಎ.ಡಿ.	ದ್ರಾವಿಡಿಯನ್ ಎಟಿಮೊಲಾಜಿಕಲ್ ಡಿಕ್ಷನರಿ
೫. ಸೌ.ಇ.ಇನ್ಸ್	ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್
೬. ಪ್ರಾ.ಕ.ಆ.ವಿ.	ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು
೭. SII	South Indian Inscriptions
೮. MAR	Mysore Archeological Report
೯. EC-IX	Epigraphia Carnatica-IX(Bangalore District)
೧೦. Bs	Bangalore District Supliment
೧೧. Nl	ನೆಲಮಂಗಲ
೧೨. Bn	ಬೆಂಗಳೂರು
೧೩. Cp	ಚನ್ನಪಟ್ಟಣ




ಕರ್ನಾಟಕ
ಸ್ಕೇಲ್ 1: 2,200,000 (1 ಸೆಂ. ಮೀ = 22 ಕಿ.ಮೀ)
ಮಹಾರಾಷ್ಟ್ರ
ಆಂಧ್ರ ಪ್ರದೇಶ
ತಮಿಳುನಾಡು
ಅರಬ್ಬೀ ಸಮುದ್ರ
ಗೋವಾ
ಸೊಲಾಪುರ
ಹೈದರಾಬಾದ್
ಗುಲಬರ್ಗಾ
ಬಿಜಾಪುರ
ಬಾಗಲಕೋಟೆ
ರಾಯಚೂರು
ಬೆಳಗಾವಿ
ಧಾರವಾಡ
ಗದಗ
ಕೊಪ್ಪಳ
ಬಳ್ಳಾರಿ
ಕರ್ನೂಲ್
ಅನಂತಪುರ
ಕಾರವಾರ
ಹಾವೇರಿ
ದಾವಣಗೆರೆ
ಚಿತ್ರದುರ್ಗ
ಶಿವಮೊಗ್ಗ
ತುಮಕೂರು
ಚಿಕ್ಕಮಗಳೂರು
ಬೆಂಗಳೂರು
ಮಂಗಳೂರು
ಮಡಿಕೇರಿ
ಮೈಸೂರು


ಬೆಂಗಳೂರು ನಗರ ಜಿಲ್ಲೆ.
ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು
ರಾಮನಗರ ಜಿಲ್ಲೆ
ತುಮಕೂರು
ಕೋಲಾರ
ಬೆಂಗಳೂರು ಗ್ರಾಮಾಂತರ ಜಿಲ್ಲೆ
ಬೆಂಗಳೂರು
ರಾಮನಗರ ಜಿಲ್ಲೆ
ತಮಿಳುನಾಡು
ಚಾಮರಾಜನಗರ
ಬೆಂಗಳೂರು
ನಗರ

೨. ನಕ್ಷೆಗಳು

ಕುಕ್ಕಲನಾಡಿನ ನಕ್ಷೆ

(ಕ್ರಿ.ಶ.೮ನೇ ಶತಮಾನದಿಂದ ಕ್ರಿ.ಶ.೧೮ನೇ ಶತಮಾನದವರೆಗೆ)




೧. ಮಧುರೆ	೮. ಸೋಲದೇವನಹಳ್ಳಿ	೧೫. ದಾಸರಹಳ್ಳಿ	೨೨. ಕನ್ನೆಲ್ಲಿ	೨೯. ಸಾವನದುರ್ಗ
೨. ಕುಕ್ಕನಹಳ್ಳಿ	೯. ಬಿನ್ನಮಂಗಲ	೧೬. ಬಾಣಸವಾಡಿ	೨೩. ತಿಪ್ಪಗೊಂಡನಹಳ್ಳಿ	೩೦. ಮಂಚನಬೆಲೆ
೩. ಕುಕ್ಕಲಹಳ್ಳಿ	೧೦. ನೆಲಮಂಗಲ	೧೭. ಕಿತ್ತನೆಲ್ಲಿ	೨೪. ತಾವರೆಗೆರೆ	೩೧. ಹಾಗಲಹಳ್ಳಿ
೪. ತೋಟಗೆರೆ	೧೧. ದಾಸನಪುರ	೧೮. ಬೈಲಕೋನೇನಹಳ್ಳಿ	೨೫. ರಾಮಸಂದ್ರ	೩೨. ವಸಂತನಹಳ್ಳಿ
೫. ಐಗಂಡಪುರ	೧೨. ರಾಜಘಟ್ಟ	೧೯. ಯಶವಂತಪುರ	೨೬. ಹಲಿಗೆವಡೇರಹಳ್ಳಿ	೩೩. ಮಾಗಡಿ
೬. ಹೆಸರುಘಟ್ಟ	೧೩. ಚಿಕ್ಕಬಾಣಾವರ	೨೦. ನಾಗಸಂದ್ರ	೨೭. ಕೆಂಗೇರಿ	೩೪. ಕಲ್ಯ
೭ ಹುಲಿಚಿಕ್ಕನಹಳ್ಳಿ	೧೪. ದೊಡ್ಡಬೊಮ್ಮಸಂದ್ರ	೨೧. ಬೈಚಕುಪ್ಪೆ	೨೮. ಉತ್ತರಹಳ್ಳಿ	೩೫. ಹೂಜಿಗೆರೆ



೩. ತಲನಕ್ಷೆಗಳು

೧. ಮುಕ್ತಿನಾಥೇಶ್ವರ ದೇವಾಲಯದ ತಲನಕ್ಷೆ, ಬಿನ್ನಮಂಗಲ



೧. ಮುಖಮಂಟಪ


೨. ನವರಂಗ

೩. ಅಂತರಾಳ

೪. ಗರ್ಭಗೃಹ



೨. ಚನ್ನಕೇಶ್ವರ ದೇವಾಲಯದ ತಲನಕ್ಷೆ, ಕನ್ನೆಲ್ಲಿ




೧. ನವರಂಗ

೨. ಅಂತರಾಳ

೩. ಗರ್ಭಗೃಹ


೩. ಕಾಶಿವಿಶ್ವನಾಥ(ಈಶ್ವರ), ದೇವಾಲಯದ ತಲನಕ್ಷೆ, ನೆಲಮಂಗಲ



೧. ಮುಖಮಂಟಪ
೨. ನವರಂಗ
೩. ಅಂತರಾಳ
೪. ಗರ್ಭಗೃಹ



೪. ಚಂದ್ರಮೌಳೀಶ್ವರ ದೇವಾಲಯದ ತಲನಕ್ಷೆ, ಹೆಸರುಘಟ್ಟ




೧. ನವರಂಗ

೨. ಗರ್ಭಗೃಹ



೫. ಈಶ್ವರ ದೇವಾಲಯದ ತಲನಕ್ಷೆ, ಮಧುರೆಗ್ರಾಮ




೧. ನವರಂಗ

೨. ಅಂತರಾಳ

೩. ಗರ್ಭಗೃಹ



೬. ವೀರಭದ್ರ ದೇವಾಲಯದ ತಲನಕ್ಷೆ, ಕಿತ್ತನೆಲ್ಲಿ



೧. ನವರಂಗ

೨. ಗರ್ಭಗೃಹ



೪. ಕುಕ್ಕಲನಾಡಿನ ದೇವಾಲಯಗಳ ಪಟ್ಟಿ

ಕ್ರ.ಸಂ.	ದೇವಾಲಯದ ಹೆಸರು	ಸ್ಥಳ	ಕಾಲ	ಈಗಿನ ಸ್ಥಿತಿ	ಆಕರ
೦೧	ಅರ್ಜುನ ದೇವಾಲಯ	ತೋಟಗೆರೆ	ಕ್ರಿ.ಶ.ಸು.೭೫೦	ಮಧ್ಯಮ	EC-IX, Nl, 33
೦೨	ಸಿದ್ದೇಶ್ವರ ದೇವಾಲಯ	ಐಗಂಡಪುರ	ಕ್ರಿ.ಶ.೧೦೩೩	--	EC-IX, Nl, 37
೦೩	ಮುಕ್ತಿನಾಥೇಶ್ವರ ದೇವಾಲಯ	ಬಿನ್ನಮಂಗಲ	ಕ್ರಿ.ಶ.೧೧೧೦	ಉತ್ತಮ	EC-IX, Nl, 03
೦೪	ಪಾಂಡವರಗುಡಿ	ವಸಂತನಹಳ್ಳಿ	ಕ್ರಿ.ಶ.೧೧೫೬	--	EC-IX, Bn, 112
೦೫	ಧರ್ಮೇಶ್ವರ ದೇವಾಲಯ	ಐಗಂಡಪುರ	ಕ್ರಿ.ಶ.೧೩೦೧	ಉತ್ತಮ	EC-IX, Nl, 38
೦೬	ಅಲ್ಲಾಳನಾಥ(ವರದರಾಜ) ದೇವಾಲಯ	ಕಲ್ಲೂರು	ಕ್ರಿ.ಶ.೧೩೧೫	--	EC-IX, ಮಾಗಡಿ, 15
೦೭	ವೀರಭದ್ರ ದೇವಾಲಯ	ಕಿತ್ತನೆಲ್ಲಿ	ಕ್ರಿ.ಶ.೧೩೩೦	ಉತ್ತಮ	EC-IX, Nl, 12
೦೮	ಮಹದೇವಮ್ಮನ ಗುಡಿ	ಬ್ಯಾಡರಹಳ್ಳಿ	ಕ್ರಿ.ಶ.೧೩೩೬	ಉತ್ತಮ	EC-IX, Bn, 110
೦೯	ಬಸವಣ್ಣನ ಗುಡಿ	ಹುರುಳಿಚಿಕ್ಕನಹಳ್ಳಿ	ಕ್ರಿ.ಶ.೧೩೫೯	ಉತ್ತಮ	EC-IX, Nl, 23
೧೦	ಚೆನ್ನಿಗರಾಯ ಅಥವಾ ಚೆನ್ನಕೇಶವ ದೇವಾಲಯ	ಕನ್ನೆಲ್ಲಿ	ಕ್ರಿ.ಶ.೧೪೦೮	ಉತ್ತಮ	EC-IX, Nl, 22
೧೧	ಬಸವಣ್ಣನ ಗುಡಿ	ಬೆತ್ನಿಗೆರೆ	ಕ್ರಿ.ಶ.೧೪೧೯	ಉತ್ತಮ	EC-IX, Nl, 35

ಕ್ರ.ಸಂ.	ದೇವಾಲಯದ ಹೆಸರು	ಸ್ಥಳ	ಕಾಲ	ಈಗಿನ ಸ್ಥಿತಿ	ಆಕರ
೧೨	ಗೋಪಾಲಸ್ವಾಮಿ ದೇವಾಲಯ	ದೊಡ್ಡಬೊಮ್ಮಸಂದ್ರ	ಕ್ರಿ.ಶ.೧೪೩೦	ಉತ್ತಮ	EC-IX, Bn, 26
೧೩	ತಿರುಮಲೆರಂಗನಾಥ ದೇವಾಲಯ	ಮಾಗಡಿ	ಕ್ರಿ.ಶ.೧೫೨೪	ಉತ್ತಮ	EC-IX, ಮಾಗಡಿ, 06
೧೪	ಕಲ್ಲೇಶ್ವರ ದೇವಾಲಯ	ಕಲ್ಯ	ಕ್ರಿ.ಶ.೧೫೩೧	ಮಧ್ಯಮ	EC-IX, ಮಾಗಡಿ, 21
೧೫	ಚಂದ್ರಮೌಳೇಶ್ವರ ದೇವಾಲಯ	ಹೆಸರುಘಟ್ಟ	ಕ್ರಿ.ಶ.೧೫೩೩	ಉತ್ತಮ	EC-IX, Nl, 31
೧೬	ವೀರಭದ್ರ ದೇವಾಲಯ	ಬಾಣಾವಾಡಿ	ಕ್ರಿ.ಶ.೧೫೪೭	--	EC-IX, ಮಾಗಡಿ, 74
೧೭	ವೀರಭದ್ರ ಮತ್ತು ಕೆಂಪಸಿದ್ದೇಶ್ವರ ದೇವಾಲಯ	ಕಲ್ಯ	ಕ್ರಿ.ಶ.೧೫೫೮	ಮಧ್ಯಮ	EC-IX, ಮಾಗಡಿ, 28
೧೮	ಸೋಮೇಶ್ವರ ದೇವಾಲಯ	ಮಾಗಡಿ	ಕ್ರಿ.ಶ.೧೭೩೦	ಮಧ್ಯಮ	EC-IX, ಮಾಗಡಿ, 01
೧೯	ಅಂಕನಾಥ ದೇವರು	ಕೆಂಗೇರಿ	ಉಲ್ಲೇಖವಿಲ್ಲ	--	EC-IX, Bn, 109
೨೦	ಚಂದ್ರಸೇನಸೂರಿಗಳಗುಡ್ಡನಿಸದ್ಧಿ	ಹೂಜಿಗೆರೆ	ಉಲ್ಲೇಖವಿಲ್ಲ	--	EC-IX, ಮಾಗಡಿ, 40, 41
೨೧	ಈಶ್ವರ(ಕಾಶಿವಿಶ್ವನಾಥ) ದೇವಾಲಯ	ನೆಲಮಗಲ		ಉತ್ತಮ	---
೨೨	ಬೀರೇಶ್ವರಸ್ವಾಮಿ ದೇವಾಲಯ	ನೆಲಮಂಗಲ	ವಿಜಯನಗರ	ಉತ್ತಮ	---

ಕ್ರ.ಸಂ.	ದೇವಾಲಯದ ಹೆಸರು	ಸ್ಥಳ	ಕಾಲ	ಈಗಿನ ಸ್ಥಿತಿ	ಆಕರ
೨೩	ಅಡಕೆ ಆಂಜನೇಯ ದೇವಾಲಯ	ನೆಲಮಂಗಲ	ವಿಜಯನಗರ	ಉತ್ತಮ	--
೨೪	ರಂಗನಾಥ ದೇವಾಲಯ	ಬಸವನಹಳ್ಳಿ	--	ಉತ್ತಮ	--
೨೫	ವೆಂಕಟರಮಣಸ್ವಾಮಿ ದೇವಾಲಯ	ಬಸವನಹಳ್ಳಿ	--	ಉತ್ತಮ	--
೨೬	ಈಶ್ವರ ದೇವಾಲಯ	ಮಧುರೆ	--	ಕನಿಷ್ಠ	--
೨೭	ಸೊಂಡೆಕೊಪ್ಪದ ವೀರಭದ್ರ ದೇವಾಲಯ	ಮಲ್ಲಸಂದ್ರ	ಉಲ್ಲೇಖವಿಲ್ಲ	--	EC-IX, Nl, 18
೨೮	ಲಕ್ಷ್ಮೀನರಸಿಂಹ ದೇವಾಲಯ	ಹೆಸರುಘಟ್ಟ	--	ಉತ್ತಮ	--
೨೯	ಸೋಮೇಶ್ವರ ದೇವಾಲಯ	ಕಿತ್ತನೆಲ್ಲಿ	--	ಕನಿಷ್ಠ	--
೩೦	ಶನಿಮಹಾತ್ಮ ದೇವಾಲಯ	ಮಧುರೆ	--	ಉತ್ತಮ	--

೫. ಕುಕ್ಕಲನಾಡಿನ ಶಾಸನ ಕವಿಗಳು ಮತ್ತು ಲಿಪಿಕಾರರು

ಶಾಸನ ಕವಿಗಳು

ಕ್ರ.ಸಂ.	ಹೆಸರು	ಕಾಲ	ಸ್ಥಳ	ಬರೆದ ಶಾಸನ	ಆಕರ
೧	ಪುಣ್ಯಸರ್ಮ್ಮ	ಕ್ರಿ.ಶ.೧೦೨೯	ಸೋಲದೇವನಹಳ್ಳಿ	ಸೋಲದೇವನಹಳ್ಳಿ ಶಾಸನ	EC-IX, Nl, 01
೨	ಸೇನಬೋವ ಕೇಶವ	ಕ್ರಿ.ಶ.೧೩೨೯	ಬೈಲಕೋನೇನಹಳ್ಳಿ	ಬೈಲಕೋನೇನಹಳ್ಳಿ ಶಿಲಾಶಾಸನ	ಗೋಪಾಲರಾವ್ ಎಚ್.ಎಸ್. ಶಾಸನಸಂಕಲನ, ಪು.೨೧
೩	ಕೇಶವ	ಕ್ರಿ.ಶ.೧೩೪೦	ಬೈಚಗುಪ್ಪೆ	ಬೈಚಗುಪ್ಪೆ ಶಾಸನ	EC-IX, ಮಾಗಡಿ, 81
೪	ಜಕ್ಕಣ್ಣ	ಕ್ರಿ.ಶ.೧೩೩೬	ಬ್ಯಾಡರಹಳ್ಳಿ	ಬ್ಯಾಡರಹಳ್ಳಿ ಶಾಸನ	EC-IX, Bn, 110
೫	ಜ...ಮೆಯಣ	ಕ್ರಿ.ಶ.೧೩೩೩	ಮಂಠಾಳು	ಮಂಠಾಳು ಶಾಸನ	EC-IX, Nl, 9
೬	ಲಿಂಗಣ್ಣ	ಕ್ರಿ.ಶ.೧೩೩೦	ಕಿತ್ತನೆಲ್ಲಿ	ಕಿತ್ತನೆಲ್ಲಿ ಶಾಸನ	EC-IX, Nl, 12
೭	ಅನಂತಣ್ಣ ಅನಂತಣ್ಣಾ	ಕ್ರಿ.ಶ.೧೩೪೦	ರಾಮಸಂದ್ರ	ರಾಮಸಂದ್ರದ ಶಾಸನ	EC-IX, Bn, 111

ಶಾಸನ ಲಿಪಿಕಾರರು

ಕ್ರ.ಸಂ.	ಹೆಸರು	ಕಾಲ	ಸ್ಥಳ	ಆಕರ
೧	ಅಪ್ಪಿ ಆಚಾರಿ ಮಗನ್ನಾಗನ್	ಕ್ರಿ.ಶ.೭೫೦	ದಾಸರಹಳ್ಳಿ	EC-IX, Bn, 36
೨	ಸಿದ್ದೇಶ್ವರಾಚಾರಿ	ಕ್ರಿ.ಶ.೧೦೨೯	ಸೋಲದೇವನಹಳ್ಳಿ	EC-IX, Nl, 01
೩	ವಾಮಚಾರಿ (ಮಮ್ಮಚರಿ)	ಕ್ರಿ.ಶ.೧೧೦೦	ತಾವರೆಕೆರೆ	EC-IX, ಮಾಗಡಿ, 80
೪	ಚಿನೋಜ	ಕ್ರಿ.ಶ.೧೩೨೯	ಬೈಲಕೋನೇನಹಳ್ಳಿ	ಗೋಪಾಲರಾವ್ ಎಚ್.ಎಸ್., ಶಾಸನಸಂಕಲನ, ಪು.೨೧
೫	ಮಾರೋಜ	ಕ್ರಿ.ಶ.೧೩೩೦	ಕಿತ್ತನೆಲ್ಲಿ	EC-IX, Nl, 12

೬. ಆಕರ ಗ್ರಂಥಗಳು

೧. ಅನಂತರಾಮರಾವ್ ಕೆ.(ಸಂ), ಸುವರ್ಣ ಕರ್ನಾಟಕ ದರ್ಶನ(೫೦ ಸಂವತ್ಸರಗಳು), ವಿದ್ಯಾ ಪಬ್ಲಿಷಿಂಗ್ ಹೌಸ್, ಮಂಗಳೂರು, ೨೦೦೬

೨. ಅಪರ್ಣ ಕೆ.ಎಸ್., ದೇವಾಲಯಗಳ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩. ಕಪಟರಾಳ ಕೃಷ್ಣರಾಯ, ಕರ್ನಾಟಕದ ಲಾಕುಳಶೈವ ಇತಿಹಾಸ, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೫೫

೪. ಕಮಲಾಹಂಪನ(ಸಂ), ಜೈನ ಧರ್ಮ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೭

೫. ಕಲಘಟಗಿ ಟಿ.ಜಿ., ಕರ್ನಾಟಕದಲ್ಲಿ ಜೈನಧರ್ಮ, ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೬

೬. ಕಲಬುರ್ಗಿ ಎಂ.ಎಂ.(ಸಂ), ಮಹಾನಾಡು ಪ್ರಭುಗಳು, ನೊಳಂಬ ವೀರಶೈವ ಸಂಘ, ಬೆಂಗಳೂರು, ೧೯೯೫

೭. ಕಲಬುರ್ಗಿ ಎಂ.ಎಂ., ಮಾರ್ಗ(ಸಂಪುಟ-೨), ನರೇಶ್ ಅಂಡ್ ಕಂ, ಹನುಮಂತನಗರ, ಬೆಂಗಳೂರು, ೧೯೮೮

೮. ಕಲಬುರ್ಗಿ ಎಂ.ಎಂ.(ಸಂ), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೯. ಕಾಕೋಳು ರಾಘವೇಂದ್ರ, ಕಾಕೋಳುಕ್ಷೇತ್ರ, ಮುರುಳಿ ಪ್ರಕಾಶನ, ಬೆಂಗಳೂರು, ೧೯೯೮

೧೦. ಕುರುಗುಂದ ಟಿ. ಪಂಕಜಾಕ್ಷ, ಶಿಲ್ಪ ಸೌಂದರ್ಯ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ೨೦೦೬

೧೧. ಕೃಷ್ಣರಾವ್ ಎಂ.ವಿ. ಮತ್ತು ಕೇಶವ ಭಟ್ಟ ಎಂ., ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦

೧೨. ಕೃಷ್ಣಯ್ಯ ಎಂ.ಎಚ್. ಮತ್ತು ದೇವರಕೊಂಡಾರೆಡ್ಡಿ(ಸಂ), ಬೆಂಗಳೂರು ಕೆಂಪೇಗೌಡ ವಂಶಸ್ಥರು, ವಿವೇಕಾನಂದ ಕಾಲೇಜು, ಬೆಂಗಳೂರು

೧೩. ಕೆಮ್ತೂರು ರಘುಪತಿ ಭಟ್ಟ, ತುಳುನಾಡಿನ ಸ್ಥಳನಾಮಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೯

೧೪. ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು : ಒಂದು ಅಧ್ಯಯನ, ಪ್ರತಿಭಾ ಪ್ರಕಾಶನ, ಇಂಡಿ, ೧೯೯೦

೧೫. ಗಣೇಶ ಕೆ.ಆರ್., ಆಂಧ್ರ ಪ್ರದೇಶದ ಕನ್ನಡ ಶಾಸನಗಳು : ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬

೧೬. ಗುರುವ ಆರ್.ಎನ್., ತರ್ದವಾಡಿ ನಾಡು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೯

೧೭. ಗೋಪಾಲಕೃಷ್ಣ ವಿ., ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ, ದಾದಿನಾಯಕನ ಪಾಳ್ಯ, ಕೋಲಾರಜಿಲ್ಲೆ, ೧೯೮೭

೧೮. ಗೋಪಾಲರಾವ್ ಎಚ್.ಎಸ್., ಶಾಸನ ಸಂಕಲನ, ಅಳಿಲು ಸೇವಾ ಸಂಸ್ಥೆ, ಬೆಂಗಳೂರು, ೨೦೦೧

೧೯. ಗೋಪಾಲರಾವ್ ಎಚ್.ಎಸ್., ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೩

೨೦. ಗೋಪಾಲ್ ಬಾ.ರಾ., ಕರ್ನಾಟಕದ ಕಲೆಗಳು, (ವಾಸ್ತು) ಸಂಪುಟ-೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

೨೧. ಗೋಪಾಲ್ ರಾವ್ ಎಚ್.ಎಸ್. ಮತ್ತು ಅಬ್ದುಲ್ ಬಷೀರ್ ಜಿ.(ಸಂ), ಕನಕಸಿರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೨೨. ಗೋಪಾಲರಾವ್ ಎಚ್.ಎಸ್.(ಸಂ), ನಾಗಾಭಿನಂದನ (ಎಂ.ಜಿ.ನಾಗರಾಜ್ ಅಭಿನಂದನ ಗ್ರಂಥ), ಬೆಂಗಳೂರು, ೧೯೯೪

೨೩. ಗೋಪಾಲರಾವ್ ಹೆಚ್.ಎಸ್., ನಮ್ಮ ನಾಡು ಕರ್ನಾಟಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೭

೨೪. ಚನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

೨೫. ಚನ್ನಕ್ಕ ಪಾವಟೆ, **ಹಾನಗಲ್ಲ ಕದಂಬರು**, ಚನ್ನಗಂಗಾ ಪ್ರಕಾಶನ, ಧಾರವಾಡ, ೧೯೯೮

೨೬. ಚನ್ನಬಸವಹಿರೇಮಠ, **ಎಡದೊರೆನಾಡು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨೭. ಚನ್ನಬಸವಯ್ಯ ಹಿರೇಮಠ, **ಕುರುಗೋಡು ಸಿಂಧರು**, ಕೊಪ್ಪಳ, ೧೯೯೫

೨೮. ಚಂದ್ರಶೇಖರಯ್ಯ ಬಿ.ಎಂ., **ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ**, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫

೨೯. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೨

೩೦. ಚಿದಾನಂದಮೂರ್ತಿ ಎಂ., ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೪

೩೦. ಚಿದಾನಂದಮೂರ್ತಿ, **ಹೊಸತು ಹೊಸತು**, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು, ೨೦೦೭

೩೧. ಚಿದಾನಂದಮೂರ್ತಿ ಎಂ., **ಬೃಹತ್ ಕರ್ನಾಟಕ : ಭಾಷಿಕ ಸಾಂಸ್ಕೃತಿಕ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೩೨. ಚಿದಾನಂದಮೂರ್ತಿ ಎಂ., **ವಾಗಾರ್ಥ**, ಬಾಸ್ಕೋ ಪ್ರಕಾಶನ, ಬೆಂಗಳೂರು, ೧೯೮೧

೩೩. ಚಿದಾನಂದಮೂರ್ತಿ ಎಂ., **ಕರ್ನಾಟಕ ಸಂಸ್ಕೃತಿ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೭

೩೪. ಚಿನ್ನಸ್ವಾಮಿ ಸೋಸಲೆ, **ಸಾಮ್ರಾಜ್ಯ ಮತ್ತು ಸಂಸ್ಥಾನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೩೫. ಚಿನ್ನಸ್ವಾಮಿ ಸೋಸಲೆ, **ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧

೩೬. ಜಮುನಾ ಎಂ., **ಬೆಂಗಳೂರಿನ ಬಖೈರುಗಳು**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೬

೩೭. ಜವರೇಗೌಡ ಡಿ., **ಸ್ಥಳನಾಮ ವ್ಯಾಸಾಂಗ**, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೦

೩೮. ಡೆವಿಡ್ ಎಸ್., ಲಾರೆಂಜೆನ್(ಇಂಗ್ಲೀಷ್), ವಿರೂಪಾಕ್ಷ ಕುಲಕರ್ಣಿ(ಕನ್ನಡ ಅನುವಾದ), **ಕಾಪಾಲಿಕರು ಮತ್ತು ಕಾಳಮುಖರು (ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು)**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೫

೩೯. ತಾರಾನಾಥ್ ಎನ್.ಎಸ್.(ಸಂ), ಶತಮಾನದ ಸಂಶೋಧನೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

೪೦. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಮೈಸೂರು, ೨೦೦೭

೪೧. ತಿಪ್ಪೇಸ್ವಾಮಿ ಪಿ.ಆರ್.(ಮು.ಸಂ), ಶಿಲ್ಪಕಲಾ ಪ್ರಪಂಚ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೧೯೯೪

೪೨. ದಿವಾಕರ್ ಆರ್.ಆರ್.(ಸಂ), ಕರ್ನಾಟಕ ಪರಂಪರೆ, ಸಂಪುಟ, ೧ ಮತ್ತು ೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೪೩. ದೇವರಕೊಂಡಾರೆಡ್ಡಿ, ತಲಕಾಡಿನ ಗಂಗರ ದೇವಾಲಯಗಳು : ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೪

೪೪. ದೇವರಕೊಂಡಾರೆಡ್ಡಿ, ಭಾರತೀಯ ವಾಸ್ತುವಿದ್ಯೆ, ರೆಡ್ಡಿ ಪ್ರಕಾಶನ, ಬೆಂಗಳೂರು, ೧೯೯೪

೪೫. ದೇವರಕೊಂಡಾರೆಡ್ಡಿ, ಕರ್ನಾಟಕ ಶಾಸನಗಳಲ್ಲಿ ಶಾಪಾಶಯಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮

೪೬. ದೇವರಕೊಂಡಾರೆಡ್ಡಿ, ಗಂಗಶಿಲ್ಪಕಲೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೮

೪೭. ನಾಗರಾಜು ಎಂ.ಜಿ., ಶಾಸನ ಶಿಲ್ಪಗಳು, ಶ್ರೀ ಗೌರಿಗಂಗ ಪ್ರಕಾಶನ, ಬೆಂಗಳೂರು, ೧೯೯೦

೪೮. ನಾಯಕ ಹಾ.ಮಾ(ಸಂ), ಕರ್ನಾಟಕ ವಿಷಯ ಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು, ೧೯೭೯

೪೯. ನಂಜುಂಡಸ್ವಾಮಿ ಎ.ಎಸ್., ಕರ್ನಾಟಕದ ಪಾಳೆಯಗಾರರು ಮತ್ತು ಒಡೆಯರ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೬

೫೦. ಪರಮಶಿವಮೂರ್ತಿ ಡಿ.ವಿ., ಶಾಸನ ಸಂಶೋಧನೆ, ಗುಣನಿಧಿ ಪ್ರಕಾಶನ, ಬೆಂಗಳೂರು, ೧೯೯೪

೫೧. ಪರಮಶಿವಮೂರ್ತಿ ಡಿ.ವಿ., ಸಂಶೋಧನೆಯ ಸಿರಿ, ಗುಣನಿಧಿ ಪ್ರಕಾಶನ, ಬೆಂಗಳೂರು, ೧೯೯೬

೫೨. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೫೩. ಪರಮಶಿವಮೂರ್ತಿ ಡಿ.ವಿ.(ಸಂ), ಪ್ರೌಢದೇವರಾಯನ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೫೪. ಪ್ರಭಾಕರ ಎಂ.ಎಸ್., ದೇವಾಲಯ ವಾಸ್ತು ಚಂದ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೫೫. ಬಸವರಾಜು ಎಸ್.ಅಕ್ಕಿ, ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ, ಸೋಮೇಶ್ವರ ಪ್ರಕಾಶನ, ಧಾರವಾಡ, ೨೦೦೪

೫೬. ಬೆಟಗೇರಿ ಕೃಷ್ಣಶರ್ಮ, ಕರ್ನಾಟಕ ಜನಜೀವನ, ಸಾಗರ್ ಪ್ರಕಾಶನ, ಬೆಂಗಳೂರು, ೨೦೦೫

೫೭. ಭೈರೇಗೌಡ ಎಂ., ತಿಮ್ಮಯ್ಯ ತಾ.ಸಿ.(ಸಂ), ಅರ್ಕಾವತಿ, ೬೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ೧೯೯೯

೫೮. ಮಲ್ಲೇಪುರಂ ಜಿ. ವೆಂಕಟೇಶ (ಸಂ), ಶಂಬಾಜೋಶಿ, ಎಡೆಗಳು ಹೇಳುವ ಕಂನಾಡ ಕತೆ, (ಸಂಪುಟ ೨), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೫೮. ಮುನಿರಾಜಪ್ಪ, ಮಾಗಡಿ ಸೀಮೆ ಇತಿಹಾಸ, ಸಂಸ್ಕೃತಿ(ಕ್ರಿ.ಶ.೧೭೨೮ರವರೆಗೆ), ಸ್ಫೂರ್ತಿ ಪ್ರಕಾಶನ, ಮಾಗಡಿ, ೨೦೦೫

೫೯. ಮೋಹನ ಕೃಷ್ಣರೈ, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೬೦. ಯೋಗಾನರಸಿಂಹ(ಸಂ), ಕೆಂಪೇಗೌಡನ ಇತಿಹಾಸ ಮತ್ತು ಜಾನಪದ ಪುಟಗಳಲ್ಲಿ, ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು, ೨೦೦೨

೬೧. ಯೋಗೀಶ್ವರಪ್ಪ ಡಿ.ಎನ್., ಹಾಗಲವಾಡಿ ನಾಯಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೬೨. ರಮೇಶ ಕೆ.ವಿ., ಕರ್ನಾಟಕದ ಶಾಸನದ ಸಮೀಕ್ಷೆ, ಪ್ರಾಕ್ತನ ಮತ್ತು ಪ್ರಾಚಾರೊಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೧

೬೩. ರಘುನಾಥಭಟ್ ಮತ್ತು ಎಂ.ಎಂ.ಕಲಬುರ್ಗಿ(ಸಂ); ಬಿಳಗಿ ಅರಸು ಮನೆತನ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿ ಮಠ, ಬೆಳಗಾವಿ, ೧೯೯೫

೬೪. ರಹಮತ್ ತರೀಕೆರೆ(ಸಂ), ಧರ್ಮವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೬೫. ರಹಮತ್ ತರೀಕೆರೆ, ಕರ್ನಾಟಕ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೬೬. ರಾಜೇಗೌಡ ಹ.ಕ., ಬೆಂಗಳೂರು ಕೆಂಪೇಗೌಡ ಮತ್ತು ಅವನ ವಂಶಸ್ಥರು, ಕೆಂಪೇಗೌಡ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೨೦೦೫

೬೭. ರಾಜಶೇಖರ ಬಡಿಗೇರ, ವೀರಗಲ್ಲಿನ ವೀರರು ಒಂದು ಪುನರವಲೋಕನ, ಪ್ರಭಾಸ ಪ್ರಕಟಣೆ, ಅಕ್ಕಲಕೋಟೆ

೬೮. ರಾಜಶೇಖರ ಸಿಂಧಗಿ, ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತಾ ಪಬ್ಲಿಕೇಶನ್ , ಧಾರವಾಡ, ೧೯೮೮

೬೯. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ-ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫

೭೦. ರಿತ್ತಿ ಶ್ರೀನಿವಾಸ(ಸಂ), ಕರ್ನಾಟಕ ಗ್ರಾಮಸೂಚಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫

೭೧. ರಿತ್ತಿ ಶ್ರೀನಿವಾಸ, ಮುಳುಗುಂದ ನಾಡು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೯

೭೨. ರಂಗಸ್ವಾಮಿ ಎಸ್., ಕರ್ನಾಟಕದ ದೇವಾಲಯಗಳು, ಬೆಂಗಳೂರು, ೧೯೯೪

೭೩. ಲಕ್ಷ್ಮಣ ತೆಲಗಾವಿ(ಸಂ), ಹರತಿಸಿರಿ, ಹೆಚ್ .ವಿ. ವೀರನಾಯಕ ಹರತಿ, ನೆನಪಿನ ಸಂಪುಟ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಚಿತ್ರದುರ್ಗ ಜಿಲ್ಲೆ, ೧೯೮೭

೭೪. ಲಕ್ಷ್ಮಣ್ ತೆಲಗಾವಿ(ಸಂ), ಸಂಶೋಧನಾ, ಡಾ.ಎಂ.ಚಿದಾನಂದಮೂರ್ತಿಯವರ ಅಂಭಿನಂದನಾ ಸಮಿತಿ, ಬೆಂಗಳೂರು, ೧೯೯೧

೭೫. ಲಕ್ಷ್ಮೀನಾರಾಯಣ ಭಟ್, ತುಳುನಾಡು, ಭವ್ಯವಾಣಿ ಪ್ರಕಾಶನ, ಉಡುಪಿ, ೧೯೮೯

೭೬. ವಸು ಎಮ್ .ವಿ.(ಸಂ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೭೭. ವಸಂತಕುಮಾರ ತಾಳ್ತಜೆ, ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ, ವಿನಯ ಪ್ರಕಾಶನ, ಬೆಂಗಳೂರು, ೧೯೮೮

೭೮. ವಿಶ್ವನಾಥ, ಸ್ಥಳನಾಮಗಳು, ಸಂವಹನ ಪ್ರಕಾಶನ, ಮೈಸೂರು, ೧೯೯೬

೭೯. ವೆಂಕಟೇಶ ಜೋಯಿಸ್, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೬೬

೮೦. ಶರ್ಮ ತಿ.ತಾ., ಚಾರಿತ್ರಿಕ ದಾಖಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೮೧. ಶಾರದಾ ಕೆ., ಕರ್ನಾಟಕದಲ್ಲಿ ಜೈನಧರ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೮೨. ಶಾಮಶಾಸ್ತ್ರಿ ಆರ್.(ಸಂ), ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧

೮೩. ಶಿರೂರ ಬಿ.ವಿ., ಸಂಶೋಧನಾ ವ್ಯಾಸಂಗ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೨೦೦೦

೮೪. ಶಿವಮೂರ್ತಿ ಶಾಸ್ತ್ರಿ ಬಿ., ವೀರಶೈವ ಧರ್ಮ ಮತ್ತು ಸಾಹಿತ್ಯ, ಶರಣ ಸಾಹಿತ್ಯ ಗ್ರಂಥಮಾಲೆ, ಬೆಂಗಳೂರು, ೧೯೭೦

೮೫. ಶಿವತಾರಕ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೮೬. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನ ಜೀವನ, ಗೀತಾ ಬುಕ್‌ಹೌಸ್, ಮೈಸೂರು ೧೯೮೩

೮೭. ಶ್ರೀಕಂಠಶಾಸ್ತ್ರಿ ಎಸ್., ಪುರಾತತ್ವ ಶೋಧನೆ, ಪ್ರಸಾರಾಂಗ, ಪಠ್ಯ ಪುಸ್ತಕ, ಮಾಲೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೦

೮೮. ಶ್ರೀಧರ ಅಡಿಗ, ಕರ್ನಾಟಕದ ಪ್ರೇಕ್ಷಣಿಯ ಸ್ಥಳಗಳು, ಕೃಷಿ ವಿಕಾಸ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೬

೮೯. ಶ್ರೀನಿವಾಸನ್ ಪಿ.ಆರ್., ದಕ್ಷಿಣ ಭಾರತದ ದೇವಾಲಯಗಳು, ಗೀತಾ ಬುಕ್ ಹೌಸ್ , ಮೈಸೂರು, ೧೯೫೯

೯೦. ಶೇಠೆ ಎನ್., ಕರ್ನಾಟಕದಲ್ಲಿ ಸತಿಪದ್ಧತಿ, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೧

೯೧. ಶೇಷಗಿರಿರಾವ್ ಎಲ್.ಎಸ್.(ಮು.ಸಂ), ಬೆಂಗಳೂರು ದರ್ಶನ, ಸಂಪುಟ ೧, ಉದಯಭಾನು ಕಲಾ ಸಂಘ, ಬೆಂಗಳೂರು, ೨೦೦೫

೯೨. ಶೇಷಾಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೯೩. ಶೈಲಾ ಟಿ.ವರ್ಮ, ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಜ್ಞಾನೋದಯ ಪ್ರಕಾಶನ, ಬೆಂಗಳೂರು, ೨೦೦೨

೯೪. ಸೂರ್ಯನಾಥ ಕಾಮತ್ (ಸಂ), **ಕರ್ನಾಟಕ ರಾಜ್ಯ ಗೆಜೆಟಿಯರ್**, ಭಾಗ ೧, ೨, ಮತ್ತು ೩, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೮೪

೯೫. ಸೂರ್ಯನಾಥ ಕಾಮತ್(ಮು.ಸಂ), **ಕರ್ನಾಟಕ ರಾಜ್ಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ಯಾಸೆಟಿಯರ್**, ಗೆಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೮೯

೯೬. ಸೂರ್ಯನಾಥ ಕಾಮತ್ ಮತ್ತು ಇತರರು(ಸಂ), **ಶ್ರೀ ಭೈರವ ಕ್ಷೇತ್ರದ ಸೀತಿಬೆಟ್ಟ**, ಶ್ರೀ ಭೈರವೇಶ್ವರ ಮತ್ತು ಶ್ರೀಪತೇಶ್ವರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಸೀತಿಗ್ರಾಮ, ೧೯೯೬

೯೭. ಸೂರ್ಯನಾಥ ಕಾಮತ್, **ಕರ್ನಾಟಕ ಕೈಗನ್ನಡಿ**, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೦೭

೯೮. ಹಿರೇಮಠ ಬಿ.ಆರ್., **ಶಾಸನಗಳಲ್ಲಿ ಕರ್ನಾಟಕದ ವರ್ತಕರು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,. ೧೯೮೬

೯೯. Basavaraj K.R., **History and culture of Karnataka,** Dharwad, 1984

೧೦೦. Desai P.B.(Ed), **A History of Karnataka** (from Pre-History to unification), Dharwad, 1981

೧೦೧. Diwakar R.R., **Karnataka through the ages,** Mysore, 1968

೧೦೨. Dhaky M.A, **Indian Temple froms in Karnataka Inscripation and Architecture,** New Delhi, 1977

೧೦೩. Gururajachar S., **Some aspects of the Economic and Social life in Karnataka,** Mysore, 1974

೧೦೪. Ismile K., **Karnataka Temples : Thrir role in Soci-Economic life,** New Delhi, 1984

೧೦೫. Kuppaswamy G.R., **Economics Conditions in Karnataka,** Dharwad, 1975

೧೦೬. Mahalinnam T.V., **Economic life in the vijayanagar Empire,** Madras, 1951

೧೦೭. Mastivenkatesha, **Aiyonger, Populer Culture of Karnataka,** Bangelore, 1987

೧೦೮. Muthanna M., **Karnataka Administration and Culuture,** New Delhi, 1980

೧೦೯. Neelakantashastri K.A., **A History of South India, from Pre-Historic times to the fall of Vijayanagar Empire**, Madras, 1958

೧೧೦. Robert Couldwel, **A Comparative Grammer of Dravidian Languages,** 1961

೧೧೧. Ramachandramurthy F.S., **A Study of Telgu Place Names**

೧೧೨. Saletore B.A, **Political and Social life in the Vijayanagara Empire,** Vol-1 and 2, B.G.Paul and C, Publishers, Madras, 1934

೧೧೩. ShanthaKumari S.L., **History of the Agraharas,** Karnatak-Madras, 1986

೧೧೪. Sreenivasay P.R., **The Indian Temple Art and Architecture,** Prasaranga, Mysore university, Mysore, 1982

೧೧೫. Veerappa K., **Studies in Karnataka History and Culture,** Bharathi Prakashana, Mysore, 1987

೧೧೬. South Indian Inscriptions

೧೧೭. Annual Report of the South Indian Epigraphy

೧೧೮. Annual Reprot of the Archeological Survey of India, Southern circle, Madras

೧೧೯. Annual Report of the Mysore Archeological Deportment(MAR)

೧೨೦. Epigraphia Carnatica, B.L.Raise Volumes, EC-IX, and EC-IX, Supliment

೧೨೧. ಚರಿತ್ರೆ ಅಧ್ಯಯನ ಪತ್ರಿಕೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨೨. ಸುಧಾ ಪತ್ರಿಕೆಗಳು

೧೨೩. ಸಾಧನೆ ಪತ್ರಿಕೆಗಳು

೧೨೪. ಜಾನಪದ ಜಗತ್ತು ಪತ್ರಿಕೆಗಳು

೧೨೫. ಪ್ರಜಾವಾಣಿ ಪತ್ರಿಕೆಗಳು

೧೨೬. ಕನ್ನಡ ನುಡಿ ಪತ್ರಿಕೆಗಳು, ಕನ್ನಡ ಸಾಹಿತ್ಯ ಪರಿಷತ್ , ಬೆಂಗಳೂರು

೧೨೭. **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೨೮. **ಇತಿಹಾಸ ದರ್ಶನ**, ಸಂಪುಟ-೧ ರಿಂದ ೨೨, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

೧೨೯. **ನಾಥಸಂದೇಶ** ಪತ್ರಿಕೆ, (ಸಂ) ಡಾ.ನೀಲಕಂಠಸ್ವಾಮಿಜಿ, ಬೆಂಗಳೂರು

೧೩೦. **ಶಾಸನ ಅಧ್ಯಯನ** ಪತ್ರಿಕೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩೧. **ಕನ್ನಡ ನಿಘಂಟು**, ಸಂಪುಟ ೧ ಮತ್ತು ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೩೨. **ಸಿರಿಗನ್ನಡ ಅರ್ಥಕೋಶ**

೧೩೩. **ತುಳುನಿಘಂಟು**, ಸಂಪುಟ ೧ ಮತ್ತು ೪, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ, ೧೯೮೮

೧೩೪. ಶ್ರೀನಿವಾಸ ಪಾ.ಶ.(ಪ್ರ.ಸಂ), ತಮಿಳು-ಕನ್ನಡ ದ್ವಿಭಾಷಾ ನಿಘಂಟು, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೬

೧೩೫. Burrow T., Emenean M.B., A Dravidian Etimological Deictionary, Munshiram Manoharlal Publishers(P) Ltd., New Delhi, 1998

೧೩೬. Kittel F., A Kannada-English Dictionary, Asian Educational Services, New Delhi and Chennai, 2007

೧೩೭. Tamil Lexicon- Vo-I & II, University of Madras, 1982

೭. ಛಾಯಾಚಿತ್ರಗಳು



ಅರ್ಜುನ ದೇವಾಲಯ - ತೋಟಗೆರೆ



ಅರ್ಜುನ ದೇವಾಲಯದ ಬಳಿ ಇರುವ ಶಾಸನ



ಧರ್ಮೇಶ್ವರ ದೇವಾಲಯ - ಐಗಂಡಪುರ



ಐಗಂಡಪುರದ ಶಾಸನ



ಐಗಂಡಪುರದ ಶಾಸನ



ಕಂಬಗಳು, ಮುಕ್ತಿನಾಧೇಶ್ವರ ದೇವಾಲಯ - ಬಿನ್ನಮಂಗಲ



ಮುಕ್ತಿನಾಥೇಶ್ವರ ದೇವಾಲಯ - ಬಿನ್ನಮಂಗಲ



ಮುಕ್ತಿನಾಥೇಶ್ವರ ದೇವಾಲಯದ ಬಳಿ ಇರುವ ಶಾಸನ



ಮಹದೇವಮ್ಮನ ಗುಡಿ - ಬ್ಯಾಡರಹಳ್ಳಿ



ಬಸವಣ್ಣನ ಗುಡಿ - ಹುರುಳಿ ಚಿಕ್ಕನಹಳ್ಳಿ



ಚನ್ನಕೇಶವ ದೇವಾಲಯ - ಕನ್ನಳ್ಳಿ



ಚನ್ನಕೇಶವ ದೇವಾಲಯದ ಬಳಿ ಇರುವ ಶಾಸನ



ಗೋಪಾಲಸ್ವಾಮಿ ದೇವಾಲಯ - ದೊಡ್ಡಬೊಮ್ಮಸಂದ್ರ



ವೀರಭದ್ರ ದೇವಾಲಯ - ಸಾವನದುರ್ಗ



ಲಕ್ಷ್ಮೀನರಸಿಂಹ ದೇವಾಲಯ - ಸಾವನದುರ್ಗ



ವೀರಭದ್ರ ದೇವಾಲಯ - ಕಿತ್ತನೆಲ್ಲಿ



ಸೋಮೇಶ್ವರ ದೇವಾಲಯ - ಕಿತ್ತನೆಲ್ಲಿ



ಕಲ್ಲೇಶ್ವರ ದೇವಾಲಯ - [illegible]



ಈಶ್ವರ ದೇವಾಲಯ - ನೆಲಮಂಗಲ



ಚಂದ್ರಮೌಳೀಶ್ವರ ದೇವಾಲಯ - ಹೆಸರುಘಟ್ಟ



ಚಂದ್ರಮೌಳೀಶ್ವರ ದೇವಾಲಯದ ಗರ್ಭಗುಡಿ - ಹೆಸರುಘಟ್ಟ



ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯ - ಹೆಸರುಘಟ್ಟ



ಈಶ್ವರ ದೇವಾಲಯ - ಮಧುರೆಗ್ರಾಮ




ಈಶ್ವರ ದೇವಾಲಯದ ಅಂತರಾಳ - ಮಧುರೆಗ್ರಾಮ



ಬೀರೇಶ್ವರ ಸ್ವಾಮಿ ದೇವಾಲಯ - ನೆಲಮಂಗಲ



ಉದ್ಭವ ಗಣೇಶ ದೇವಾಲಯ - ನೆಲಮಂಗಲ



ಲಕ್ಷ್ಮೀ ವೆಂಕಟರಮಣ ದೇವಾಲಯ - ಬಸವನ ಹಳ್ಳಿ



ರಂಗನಾಥ ದೇವಾಲಯ - ಮಾಗಡಿ



ಗರುಡಗಂಭ - ಕಲ್ಯ



ಕೋಟೆ - ಮಾಗಡಿ





ಬೀರೇಶ್ವರ ಸ್ವಾಮಿ ದೇವಾಲಯದ ಎದುರಿಗೆ ಇರುವ ವೀರಗಲ್ಲುಗಳು - ನೆಲಮಂಗಲ



ಬೀರೇಶ್ವರ ಸ್ವಾಮಿ ದೇವಾಲಯದ ಬಳಿ ಇರುವ ವೀರಗಲ್ಲುಗಳು - ನೆಲಮಂಗಲ



ವೀರಭದ್ರ ಶಿಲ್ಪ - ಸಾವನದುರ್ಗ



ವೀರಶೈವಯತಿ - ಸಾವನದುರ್ಗ



ಶೂಲಬ್ರಹ್ಮ, ವೀರಭದ್ರ ದೇವಾಲಯ - ಸಾವನದುರ್ಗ



ಗದ್ದುಗೆಯಲ್ಲಿರುವ ನಂದಿ ವಿಗ್ರಹ - ಕಲ್ಯ



ವೀರಶೈವಯತಿ, ಮುಕ್ತಿನಾಥೇಶ್ವರ ದೇವಾಲಯ - ಬಿನ್ನಮಂಗಲ



ಕಂಬಗಳು, ಈಶ್ವರ ದೇವಾಲಯ - ನೆಲಮಂಗಲ



ತಾಂಡವ ಶಿವ, ಮುಕ್ತಿನಾಥೇಶ್ವರ ದೇವಾಲಯ- ಬಿನ್ನಮಂಗಲ



ಸೂರ್ಯ ಶಿಲ್ಪ, ಮುಕ್ತಿನಾಥೇಶ್ವರ ದೇವಾಲಯ - ಬಿನ್ನಮಂಗಲ



ಬ್ರಹ್ಮ, ಮುಕ್ತಿನಾಥೇಶ್ವರ ದೇವಾಲಯ - ಬಿನ್ನಮಂಗಲ



ಮಹಿಷ ಮರ್ದಿನಿ, ಮುಕ್ತಿನಾಥೇಶ್ವರ ದೇವಾಲಯ - ಬಿನ್ನಮಂಗಲ



ಶಾಸನ, ಚಂದ್ರಮೌಳೇಶ್ವರ ದೇವಾಲಯ - ಹೆಸರಘಟ್ಟ



ಚಂಡಿಕೇಶ್ವರ, ಅರ್ಜುನ ದೇವಾಲಯ - ತೋಟಗೆರೆ




ಚಂಡಿಕೇಶ್ವರ, ಮುಕ್ತಿನಾಥೇಶ್ವರ ದೇವಾಲಯ- ಬಿನ್ನಮಂಗಲ



ಗಣೇಶ, ಚಂದ್ರಮೌಳೇಶ್ವರ ದೇವಾಲಯ - ಹೆಸರಘಟ್ಟ



ಸೂರ್ಯ, ವಿಷ್ಣು ಮತ್ತು ಗಣಪತಿ, ಅರ್ಜುನ ದೇವಾಲಯ - ತೋಟಗೆರೆ



ಹಿರಣ್ಯ ಕಶಿಪು ನನ್ನು ಕೊಲ್ಲುತ್ತಿರುವ ನರಸಿಂಹ,
ಚನ್ನಕೇಶವ ದೇವಾಲಯ, ಕನ್ನೆಲ್ಲಿ



ಗಣಪತಿ, ಮುಕ್ತಿನಾಥೇಶ್ವರ ದೇವಾಲಯ - ಬಿನ್ನಮಂಗಲ



ಭೈರವ, ಧರ್ಮೇಶ್ವರ ದೇವಾಲಯ - ಐಗಂಡಪುರ



ಶಾಸನ, ಮಹದೇವಮ್ಮನ ಗುಡಿ - ಬ್ಯಾಡರ ಹಳ್ಳಿ



ಶೇಷಶಯನ (ರಂಗನಾಥ), ಚನ್ನಕೇಶವ ದೇವಾಲಯ - ಕನ್ನೆಲ್ಲಿ



ಸಪ್ತ ಮಾತೃಕೆಯರು, ಅರ್ಜುನ ದೇವಾಲಯ - ತೋಟಗೆರೆ



ನಾಗಶಿಲ್ಪಗಳು - ನೆಲಮಂಗಲ



ನಾಗಶಿಲ್ಪ - ನೆಲಮಂಗಲ



ವೀರಗಲ್ಲುಗಳು - ತಾವರೆಕೆರೆ



ಕಂಬಗಳು, ಲಕ್ಷ್ಮೀನರಸಿಂಹ ದೇವಾಲಯ - ಹೆಸರುಘಟ್ಟ



ಶಾಸನ - ಬೈಲಕೋನೇನಹಳ್ಳಿ



ಮಂಚನಬೆಲೆ ಡ್ಯಾಂ - ಮಂಚನಬೆಲೆ



ತಿಪ್ಪಗೊಂಡನಹಳ್ಳಿ ಜಲಾಶಯ - ತಿಪ್ಪಗೊಂಡನಹಳ್ಳಿ



ಅರ್ಕಾವತಿ ನದಿ - ತಿಪ್ಪಗೊಂಡನಹಳ್ಳಿ



ತಿಪ್ಪಗೊಂಡನಹಳ್ಳಿ ಜಲಾಶಯದ ಒಳನೋಟ,
ತಿಪ್ಪಗೊಂಡನಹಳ್ಳಿ



ಬಾಣವಾಡಿ ಕೆರೆ - ಬಾಣವಾಡಿ



ಹೆಸರುಘಟ್ಟ ಕೆರೆ - ಹೆಸರುಘಟ್ಟ



ಮಧುರೆ ಕೆರೆ - ಮಧುರೆ



ಕಂಬಗಳು, ಚೆನ್ನಕೇಶವ ದೇವಾಲಯ - ಕನ್ನೆಲ್ಲಿ



ಕಿತ್ತನೆಲ್ಲಿ ಕೆರೆ - ಕಿತ್ತನೆಲ್ಲಿ



ನೆಲಮಂಗಲ ಕೆರೆ - ನೆಲಮಂಗಲ



ಕನ್ನೆಲ್ಲಿ ಕೆರೆ - ಕನ್ನೆಲ್ಲಿ



ಬೈಲಕೋನೇನಹಳ್ಳಿ ಕೆರೆ



ಕಲ್ಯಾಣಿ - ಮಾಗಡಿ



ಶಿವಲಿಂಗ, ಮುಕ್ತಿನಾಥೇಶ್ವರ ದೇವಾಲಯ - ಬಿನ್ನಮಂಗಲ



ವೀರಗಲ್ಲು, ಅರ್ಜುನ ದೇವಾಲಯ - ತೋಟಗೆರೆ



ಅರ್ಕಾವತಿನದಿಗೆ ಸೇರುವ ಹಳ್ಳ - ತಾವರೆಕೆರೆ



ಕಾಳಿಂಗ ಮರ್ದನ ಕೃಷ್ಣ, ಮುಕ್ತಿನಾಥೇಶ್ವರ ದೇವಾಲಯ
ಬಿನ್ನಮಂಗಲ



ಭಕ್ತನ ಶಿಲ್ಪ, ಮುಕ್ತಿನಾಥೇಶ್ವರ ದೇವಾಲಯ
ಬಿನ್ನಮಂಗಲ



ತಾವರೆಕೆರೆ ಯಿಂದ ಮಾಗಡಿಗೆ ಹೋಗುವ ಮಾರ್ಗದಲ್ಲಿ
ಕಂಡುಬರುವ ಅರ್ಕಾವತಿನದಿಯ ನೋಟ